ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಸೋಮವಾರ, 1 ಜೂನ್ 2026
ಸಂಪುಟ 16, ಸಂಚಿಕೆ 68, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ರಾಯಲ್ ಚಾಂಪಿಯನ್ಸ್ ಬೆಂಗಳೂರು!

ಸತತ 2ನೇ ಕಪ್ ಗೆದ್ದ ಆರ್‌ಸಿಬಿ

- 155 ರನ್‌ಗಳಿಗೆ ಟೈಟಾನ್ಸ್ ಕಟ್ಟಿಹಾಕಿದ ಚಾಲೆಂಜರ್ಸ್
- ಭುವನೇಶ್ವರ್ 2, ಹ್ಯಾಜಲ್‌ವುಡ್ 2, ರಸಿಕ್ 3 ವಿಕೆಟ್
- ಆಪದ್ಬಾಂಧವನಾಗಿ ಕ್ರೀಸ್ ಕಾಯ್ದುಕೊಂಡ ವಿರಾಟ್
- ಅಬ್ಬರದ ಆರಂಭ ನೀಡಿದ ವೆಂಕಟೇಶ್ ಅಯ್ಯರ್-ಕೊಹ್ಲಿ
- ಮೊದಲ ವಿಕೆಟ್‌ಗೆ ಅಯ್ಯರ್-ಕೊಹ್ಲಿ 62 ರನ್ ಜತೆಯಾಟ
- ಜಿಟಿ ಪರ ವಾಷಿಂಗ್ಟನ್ ಸುಂದರ್ ಅಜೇಯ 50 ರನ್

◆ ವಿವರ ಕ್ರೀಡಾಪುಟ



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಜ್ಯೇಷ್ಠೆ

ದಿನದ ಮಾತು

ಒಬ್ಬನು ಪ್ರಿಯನಾಗಬೇಕಾದರೆ ಆತನ ಗುಣಗಳು ಅಧಿಕೃತವೇ ಹೊರತು ಹೊಗಳಿಕೆಯಲ್ಲ.
▲ ಶಿಶುಪಾಲ ವಧೆ

ಸಮರ್ಪಿತ ಬದುಕಿನ ಒಂದೇ ಬಳ್ಳಿಯ ಹೂಗಳು

ನೇರ ನೋಟ
◆ ದು.ಗು.ಲಕ್ಷ್ಮಣ

◆ ಪುಟ ೬

ಕಿರುಸುದ್ದಿ

ಉಷ್ಣ ಅಲೆಯಿಂದ ಜಾಗರೂಕರಾಗಿರಿ: ಮೋದಿ

◆ ಪುಟ ೭

ಬಾಗೇಪಲ್ಲಿ ಬಳಿ ಭೀಕರ ರಸ್ತೆ ಅಪಘಾತ: 6 ಮಂದಿ ಸಾವು

◆ ಪುಟ ೩

ಬಕ್ರೀದ್‌ಗೆ ಕರೆದು ಹಿಂದು ಹತ್ಯೆಗೈದ ಆರೋಪಿ ವಧೆ

◆ ಪುಟ ೭

ಇಂದು ಸಿದ್ದರಾಮಯ್ಯ, ಡಿಕೆಶಿ ದಿಲ್ಲಿಗೆ | ವರಿಷ್ಠರ ಜತೆ ಸರಣಿ ಸಭೆ

ಸಂಪುಟ ರಚನೆ ಕಸರತ್ತು



- ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಬಗ್ಗೆ ಚರ್ಚೆ
- ಹೈಕಮಾಂಡ್ ತೀರ್ಮಾನವೇ ಅಂತಿಮ

ಸಚಿವ ಸಂಪುಟಕ್ಕೆ ಯಾರ್ಯಾರು?

ಸಚಿವ ಸಂಪುಟದಲ್ಲಿ ಯಾರಿಗೆ ಸ್ಥಾನ ನೀಡಬೇಕು ಎಂಬ ಬಗ್ಗೆ ಸಿದ್ದರಾಮಯ್ಯ ಮತ್ತು ನಿಯೋಜಿತ ಸಿಎಂ ಡಿ.ಕೆ. ಶಿವಕುಮಾರ್ ಈಗಾಗಲೇ ತಮ್ಮ ಬೆಂಬಲಿಗರ ಪ್ರತ್ಯೇಕ ಪಟ್ಟಿಯನ್ನು ಹೈಕಮಾಂಡ್ ಮುಂದಿಟ್ಟಿದ್ದಾರೆ. ಜಾತಿ ಮತ್ತು ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳುವುದು ಹೈಕಮಾಂಡ್ ಮುಂದಿರುವ ದೊಡ್ಡ ಸವಾಲು. ಡಿ.ಕೆ. ಶಿವಕುಮಾರ್ ಅವರು ಹೊಸ ಮುಖಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪ್ರತಿಪಾದಿಸುತ್ತಿದ್ದರೆ, ಸಿದ್ದರಾಮಯ್ಯ ಅವರು ಅನುಭವಿಗಳಿಗೆ ಸಂಪುಟದಲ್ಲಿ ಸ್ಥಾನ ನೀಡುವ ಪರವಾಗಿದ್ದಾರೆ ಎನ್ನಲಾಗಿದೆ.

◆ **ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಪ್ರಕ್ರಿಯೆ ಬೆನ್ನಲ್ಲೇ ಈಗ ಸಚಿವ ಸಂಪುಟ ರಚನೆಯ ಕಸರತ್ತು ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಹಂಗಾಮಿ ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೋಮವಾರ (ಜೂನ್ 1) ದೆಹಲಿಗೆ ಪ್ರಯಾಣ ಬೆಳೆಸಲಿದ್ದು, ಹೈಕಮಾಂಡ್ ನಾಯಕರೊಂದಿಗೆ ಸರಣಿ ಸಭೆಗಳನ್ನು ನಡೆಸಲಿದ್ದಾರೆ.

ಮುಂದಿನ ಎರಡು ವರ್ಷಗಳ ಅವಧಿಯನ್ನು ಗಮನದಲ್ಲಿಟ್ಟುಕೊಂಡು ಉಪಮುಖ್ಯಮಂತ್ರಿ ಹುದ್ದೆ ಗಳನ್ನು ಸೃಷ್ಟಿಸಬೇಕೇ ಅಥವಾ ಬೇಡವೇ ಎಂಬ ಚರ್ಚೆ ದೆಹಲಿಯಲ್ಲಿ ನಡೆಯಲಿದೆ. ಒಂದು ವೇಳೆ ಡಿಸಿಎಂ ಹುದ್ದೆ ಸೃಷ್ಟಿಸುವುದಾದರೆ ಎರಡು ಅಥವಾ ನಾಲ್ಕು ಸ್ಥಾನಗಳನ್ನು ನೀಡಬೇಕೇ ಎಂಬ ಬಗ್ಗೆಯೂ ಗೊಂದಲವಿದೆ. ಸದ್ಯ ಒಕ್ಕಲಿಗ ಸಮುದಾಯಕ್ಕೆ ಸಿಎಂ ಸ್ಥಾನ ಸಿಗುತ್ತಿರುವ ಹಿನ್ನೆಲೆಯಲ್ಲಿ ಉಳಿದ ಪ್ರಮುಖ ಸಮುದಾಯಗಳಿಗೆ ಡಿಸಿಎಂ ಸ್ಥಾನ ನೀಡುವ ಸಾಧ್ಯತೆ ಇದೆ.

ನಾಯಕತ್ವ ಬದಲಾವಣೆ ಪ್ರಕ್ರಿಯೆಯನ್ನು ಯಾವುದೇ ಗೊಂದಲವಿಲ್ಲದೆ ಪರಿಹರಿಸಿದ ಕಾಂಗ್ರೆಸ್ ಹೈಕಮಾಂಡ್, ಸಂಪುಟ ನೇಮಕದಲ್ಲೂ ಹಿರಿಯ- ಕಿರಿಯರಿಗೆ ಪ್ರಾತಿನಿಧ್ಯ ಕಲ್ಪಿಸುವ ಮೂಲಕ ಎಲ್ಲರನ್ನೂ ಸಮಾಧಾನಗೊಳಿಸಲು ನಿರ್ಧರಿಸಿದೆ. ಈಗಾಗಲೇ ಸಚಿವಾಕಾಂಕ್ಷಿಗಳು ದಿಲ್ಲಿಗೆ ತೆರಳಿದ್ದು, ರಾಜ್ಯದಿಂದ ಯಾವುದೇ ಹೆಸರು ದಿಲ್ಲಿಗೆ ಹೋದರೂ ಹೈಕಮಾಂಡ್ ತೀರ್ಮಾನವೇ ಅಂತಿಮವಾಗಿದೆ.

ಸಂಪುಟ ಚರ್ಚೆ ಮಾತ್ರ: ಸೋಮವಾರ ದಿಲ್ಲಿಯಲ್ಲಿ ನಡೆಯುವ ಸಭೆಯಲ್ಲಿ ಸಂಪುಟ ಸೇರ್ಪಡೆಯ ಬಗ್ಗೆ ಮಾತ್ರ ಚರ್ಚೆಯಾಗಲಿದೆ. ➡ ಪುಟ ೪



15 ದಿನ ಬಳಿಕ ಸಂಪುಟ ವಿಸ್ತರಣೆ: ಖರ್ಗೆ

◆ **ಕಲಬುರಗಿ/ಬೆಂಗಳೂರು:** ಜೂನ್ 3ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ್ ಅವರೊಂದಿಗೆ ಮೊದಲ ಹಂತದಲ್ಲಿ ಕೆಲವೇ ಶಾಸಕರು ಸಚಿವರಾಗಲಿದ್ದಾರೆ. 15 ದಿನಗಳ ಬಳಿಕ ಸಚಿವ ಸಂಪುಟ ವಿಸ್ತರಣೆ ನಡೆಯಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.



ಕಲಬುರಗಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹೊಸ ಸಚಿವ ಸಂಪುಟದಲ್ಲಿ ಎಷ್ಟು ಜನ ಡಿಸಿಎಂಗಳನ್ನು ಮಾಡಬೇಕು ಎಂಬುದರ ಬಗೆಗೆ ಇನ್ನೂ ಯಾವುದೇ ಪ್ರಸ್ತಾವಗಳು ಬಂದಿಲ್ಲ. ➡ ಪುಟ ೪

> ಸಚಿವರಾಗಿ ಯಾರು ಪ್ರಮಾಣವಚನ ಸ್ವೀಕರಿಸುತ್ತಾರೆ ಎಂಬುದರ ಬಗ್ಗೆ ಗೊತ್ತಿಲ್ಲ. ಪಕ್ಷದ ಹೈಕಮಾಂಡ್ ತೀರ್ಮಾನ ಮಾಡಲಿದೆ. ಈ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ.
> ■ ಡಿ.ಕೆ.ಶಿವಕುಮಾರ್, ನಿಯೋಜಿತ ಮುಖ್ಯಮಂತ್ರಿ

> ಜೂನ್ 3ರಂದು ಯಾರೆಲ್ಲಾ ಸಂಪುಟ ಸೇರುತ್ತಾರೆ ಎಂಬ ಕುತೂಹಲ ಎಲ್ಲರಿಗೂ ಇದೆ. ಹೈಕಮಾಂಡ್ ಈ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳಲಿದೆ. ಸಿದ್ದರಾಮಯ್ಯ ಅವರು ಅಧಿಕಾರದಲ್ಲಿದ್ದಾಗ ಉತ್ತಮ ಕೆಲಸ ಮಾಡಿದ್ದಾರೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸುಸೂತ್ರವಾಗಿ ಆಡಳಿತ ನಡೆಸಿದರು.
> ■ ಕೆ.ಎಚ್.ಮುನಿಯಪ್ಪ, ಮಾಜಿ ಸಚಿವ

ಸಿರಿ ಮಾತೃಶ್ರೀ ಪಾರ್ಕ್ ಉದ್ಘಾಟನೆ | ಶ್ರೀ ಕ್ಷೇತ್ರದ ಕೊಡುಗೆ ಕೊಂಡಾಡಿದ ಸಿಪಿಆರ್

ಮಹಿಳಾ ಸಬಲೀಕರಣ ಧರ್ಮಸ್ಥಳವೇ ಮಾದರಿ



◆ **ಮಂಗಳೂರು:** ಗ್ರಾಮೀಣ ಪ್ರದೇಶದ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಗಳು ನೀಡುತ್ತಿರುವ ಕೊಡುಗೆ ಮಹತ್ತರವಾದುದು ಎಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ಅಮೃತ ವರ್ಷಿಣಿ ಸಭಾಂಗಣದಲ್ಲಿ ಭಾನುವಾರ ನಡೆದ ಬೆಳ್ತಂಗಡಿಯಲ್ಲಿ ನಿರ್ಮಾಣಗೊಂಡಿರುವ ಸುಸಜ್ಜಿತ ಸಿರಿ ಮಾತೃಶ್ರೀ ಪಾರ್ಕ್ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಇದೇ ಮೊದಲ ಬಾರಿಗೆ ಧರ್ಮಸ್ಥಳಕ್ಕೆ ಆಗಮಿಸಿದ್ದೇನೆ. ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದು ಕೃತಾರ್ಥನಾಗಿದ್ದೇನೆ ಎಂದರು.

ಧಾರ್ಮಿಕ, ಶಿಕ್ಷಣ, ಆರೋಗ್ಯ, ಕಲೆ-ಸಾಹಿತ್ಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಮಾಡಿರುವ ಕೆಲಸ ಅಪಾರವಾದುದು. ಕ್ಷೇತ್ರದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಮತ್ತು ಹೇಮಾವತಿ ವೀ. ಹೆಗ್ಗಡೆಯವರ ಸರ್ವಧರ್ಮೀಯರನ್ನೂ, ಎಲ್ಲಾ ಜಾತಿಯವರನ್ನೂ ಸಮಾನತೆ ಮತ್ತು ಗೌರವಭಾವದಿಂದ ಪರಿಗಣಿಸಿ ಸಾಮಾಜಿಕ ಸಾಮರಸ್ಯದೊಂದಿಗೆ ಅವರು ಮಾಡುತ್ತಿರುವ ಸೇವೆ ಆದರ್ಶ ಹಾಗೂ ಅನುಕರಣೀಯ ಎಂದರು. ➡ ಪುಟ ೪

ಗ್ರಾಮಾಭಿವೃದ್ಧಿ ಯೋಜನೆಗಳು ಪ್ರಗತಿಗೆ ಪೂರಕ

ಧರ್ಮಾಧಿಕಾರಿ ದೂರದೃಷ್ಟಿ ಹಾಗೂ ನೇತೃತ್ವದಲ್ಲಿ ಪ್ರಾರಂಭಿಸಿದ ಗ್ರಾಮಾಭಿವೃದ್ಧಿ ಯೋಜನೆ, 'ಸಿರಿ' ಗ್ರಾಮೋದ್ಯೋಗ ಸಂಸ್ಥೆ, ರುಡ್‌ಸೆಟ್ ಮೊದಲಾದ ಯೋಜನೆಗಳು ನಿರುದ್ಯೋಗ ನಿವಾರಣೆಯೊಂದಿಗೆ ರಾಷ್ಟ್ರದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ಉಪ ರಾಷ್ಟ್ರಪತಿ ರಾಧಾಕೃಷ್ಣನ್ ಹೇಳಿದರು. ಸೇವಾ ಮನೋಭಾವದೊಂದಿಗೆ 'ಸಿರಿ'ಯ ಮೂಲಕ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಪೂರೈಸುತ್ತಿರುವುದು ಸುತ್ಯರ್ಹವಾಗಿದೆ ಎಂದರು.

ದೇಶದ ಪ್ರತಿಷ್ಠಿತ ಹುದ್ದೆಗೇರಿದ ಕನ್ನಡಿಗ

◆ **ಹೊಸದಿಲ್ಲಿ:** ಭಾರತೀಯ ಸಶಸ್ತ್ರ ಪಡೆಯಲ್ಲಿ ಕನ್ನಡಿಗರು ಮತ್ತೊಮ್ಮೆ ಅತ್ಯುನ್ನತ ಸ್ಥಾನಕ್ಕೇರುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.




ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ಭಾನುವಾರ ಅಧಿಕಾರ ಸ್ವೀಕರಿಸಿದರು.

ಸಿಡಿಎಸ್ ಆಗಿ ಜನರಲ್ ಸುಬ್ರಮಣಿ ಅಧಿಕಾರ ಸ್ವೀಕಾರ

◆ ಪುಟ ೭







ಕಿರುಸುದ್ದಿ

ಹೈಕೋರ್ಟ್ ನ್ಯಾಯಾಧೀಶರಾಗಿ ನೇಮಕ

ಸಿದ್ದಾಪುರ: ಗ್ರಾಮಾಂತರ ಭಾಗದಲ್ಲಿ ಜನಿಸಿ ನ್ಯಾಯಾಂಗ ಕ್ಷೇತ್ರದಲ್ಲಿ ವಿಶೇಷ ಸಾಧನೆ ತೋರಿದ ಮಹಿಳೆಯೋರ್ವರು ಬೆಂಗಳೂರ ಹೈಕೋರ್ಟಿನ ನ್ಯಾಯಾಧೀಶರಾಗಿ ನಿಯುಕ್ತಿಗೊಂಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಹಲಗೇರಿ ಗ್ರಾಮದ ರಾಜೇಶ್ವರಿ ನಾರಾಯಣ ಹೆಗಡೆ ಈ ಸಾಧನೆಗೆ ಪಾತ್ರರಾದವರು.



ಹಲಗೇರಿಯ ನಾರಾಯಣ ಹೆಗಡೆ ಹಾಗೂ ಬಾಗೀರಥಿ ಹೆಗಡೆ ದಂಪತಿಗಳ ಮಗಳಾದ ಇವರು 1998 ರಲ್ಲಿ ಸಿವಿಲ್ ನ್ಯಾಯಾಧೀಶರಾಗಿ ನೇಮಕಗೊಂಡ ರಾಜೇಶ್ವರಿ ಹೆಗಡೆಯವರು ಇದೀಗ ರಾಜೇಶ್ವರಿ ಹೆಗಡೆಯವರು ಬೆಂಗಳೂರ ಹೈಕೋರ್ಟಿನ ನ್ಯಾಯಾಧೀಶರಾಗಿ ನಿಯುಕ್ತಿಗೊಂಡಿದ್ದು ಭಾನುವಾರ ಉಚ್ಚ ನ್ಯಾಯಾಲಯದ ಮುಖ್ಯನ್ಯಾಯಮೂರ್ತಿಗಳಿಂದ ಪ್ರಮಾಣವಚನ ಸ್ವೀಕರಿಸುತ್ತಿದ್ದಾರೆ. ತಾಲೂಕಿನ ಮಹಿಳೆಯೋರ್ವರು ಇಂತಹ ಉನ್ನತ ಸ್ಥಾನಕ್ಕೆ ಏರಿದ ಕುರಿತು ವ್ಯಾಪಕವಾಗಿ ಮೆಚ್ಚುಗೆ ವ್ಯಕ್ತವಾಗಿದೆ.

ವರದಕ್ಷಿಣೆ ಕಿರುಕುಳ: ಪ್ರಕರಣ ದಾಖಲು

ದಾಂಡೇಲಿ : ಭಾಗವತಿಯಲ್ಲಿ ವಿವಾಹಿತ ಮಹಿಳೆಯೋರ್ವಳ ಮೇಲೆ ವರದಕ್ಷಿಣೆ ಕಿರುಕುಳ ಮತ್ತು ಹಲ್ಲೆ ನಡೆಸಿದ ಬಗ್ಗೆ ನೊಂದ ಮಹಿಳೆ ಹಳಿಯಾಳ ಪೊಲೀಸ್ ಠಾಣೆಯಲ್ಲಿ ಪತಿ, ಮಾವ, ಅತ್ತೆ ವಿರುದ್ಧ ದೂರು ದಾಖಲಿಸಿದ ಘಟನೆ ನಡೆದಿದ್ದು, ಈ ಬಗ್ಗೆ ನೊಂದ ಮಹಿಳೆ ಗೀತಾ ಹೂವಪ್ಪ ಕಟ್ಟಿಮನಿ ಅವರು ನಗರದಲ್ಲಿ ನ್ಯಾಯಕ್ಕಾಗಿ ಮನವಿ ಮಾಡಿದ್ದಾರೆ.ದಾಂಡೇಲಿಯ ಹಳಿಯಾಳ ರಸ್ತೆಯ ನಿವಾಸಿಯಾಗಿದ್ದು, ಭಾಗವತಿಯ ಗಣೇಶ ಚಂದ್ರು ರಾವ್ ಎಂಬವರನ್ನು ಕಳೆದ ಒಂದು ವರ್ಷದ ಹಿಂದೆ ವಿವಾಹವಾಗಿದ್ದ ಗೀತಾ ಹೂವಪ್ಪ ಕಟ್ಟಿಮನಿ ಅವರಿಗೆ ಪತಿ ಗಣೇಶ ಚಂದ್ರು ರಾವ್, ಮಾವ ಚಂದ್ರು ರಾವ್ ಮತ್ತು ಅತ್ತೆ ಯಶೋಧ ಚಂದ್ರು ರಾವ್ ಅವರು ನಿರಂತರವಾಗಿ ವರದಕ್ಷಿಣೆ ಕಿರುಕುಳ ನೀಡುತ್ತಿದ್ದ ಹಿನ್ನಲೆಯಲ್ಲಿ ಹಿಂಸೆ ತಾಳಲಾರದೆ ಗೀತಾ ಅವರು ಕಳೆದ ಆರೇಳು ತಿಂಗಳಿನಿಂದ ಗಂಡನ ಮನೆ ಬಿಟ್ಟು ತಾಯಿ ಮನೆ ಹಳಿಯಾಳ ರಸ್ತೆಯಲ್ಲಿ ವಾಸವಿದ್ದರು. ಮೇ 27ರಂದು ತವರು ಮನೆಯಿಂದ ಅಣ್ಣನ ಜೊತೆ ಭಾಗವತಿಗೆ ಹೋಗಿದ್ದ ಸಂದರ್ಭದಲ್ಲಿ ಗೀತಾ ಅವರಿಗೆ ಪತಿ ಗಣೇಶ ಚಂದ್ರು ರಾವ್ ಇಲ್ಲಿಂದ ಹೊರಗೆ ಹೋಗು, ಮನೆಯಲ್ಲಿರುವ ಯಾವುದೇ ವಸ್ತುಗಳನ್ನು ಮುಟ್ಟಬೇಡ ಎಂದು ಗದರಿಸಿ, ಹಲ್ಲೆ ಮಾಡಿರುತ್ತಾನೆ ಮತ್ತು ಪೆಟ್ರೋಲ್ ತಂದು ಮೈಮೇಲೆ ಹಾಕಲು ಮುಂದಾಗಿದ್ದಲ್ಲದೇ, ಜೀವ ಬೆದರಿಕೆಯನ್ನು ಹಾಕಿದ್ದಾನೆ. ಮಾವ ಚಂದ್ರು ರಾವ್ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಹಳಿಯಾಳ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ವಿವರಿಸಲಾಗಿದೆ.

ಪತಿ ಗಣೇಶ ಚಂದ್ರು ರಾವ್ ಈ ಹಿಂದೆ ಒಂದು ಮದುವೆಯಾಗಿದ್ದು, ಈ ಬಗ್ಗೆ ಮಾಹಿತಿಯನ್ನು ನೀಡದೇ ತನ್ನನ್ನು ಮದುವೆಯಾಗಿರುತ್ತಾನೆ ಎಂದು ಗೀತಾ ತಿಳಿಸಿದ್ದಾರೆ. ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಹಿಳೆ ಗೀತಾ ಅವರು ಇದೀಗ ಸೂಕ್ತ ನ್ಯಾಯಕ್ಕಾಗಿ ಮನವಿ ಮಾಡುತ್ತಿದ್ದಾರೆ. ಡಿವೈಎಸ್ಪಿ ಶಿವಾನಂದ ಮದರಕಂಡಿ ಅವರ ಮಾರ್ಗದರ್ಶನದಲ್ಲಿ ಸಿಪಿಐ ಜೈಪಾಲ್ ಪಾಟೀಲ್ ಅವರ ನೇತೃತ್ವದಲ್ಲಿ ಪಿಎಸ್ಐಗಳಾದ ಬಸವರಾಜ ಮಬನೂರು ಮತ್ತು ಕೃಷ್ಣಾ ಅರಕೇರಿ ಅವರ ಸಹಕಾರದಲ್ಲಿ ಸೂಕ್ತ ನ್ಯಾಯ ಸಿಗುವ ವಿಶ್ವಾಸದಲ್ಲಿದ್ದಾರೆ.

ಬಾವಿಗೆ ಬಿದ್ದು ಮಹಿಳೆ ಸಾವು

ಭಟ್ಕಳ: ತಾಲೂಕಿನ ಉತ್ತರ ಕೊಪ್ಪದ ಗೋಳಿಕುಂಬ್ರಿ ಗ್ರಾಮದಲ್ಲಿ ಬಾವಿಗೆ ಬಿದ್ದು ಮಹಿಳೆಯೊಬ್ಬಳು ಮೃತಪಟ್ಟ ಘಟನೆ ನಡೆದಿದೆ.ಮೃತರನ್ನು ಲತಾ ವಿಷ್ಣು ನಾಯ್ಕ (44) ಎಂದು ಗುರುತಿಸಲಾಗಿದೆ. ಅವರು ಕೆಲ ವರ್ಷಗಳಿಂದ ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದು ಚಿಕಿತ್ಸೆ ಪಡೆಯುತ್ತಿದ್ದರು ಎನ್ನಲಾಗಿದೆ. ಮನೆಯಿಂದ ಹೊರಗೆ ಹೋದ ಲತಾ ಅವರು, ಮನೆಯ ಸಮೀಪದ ಜಮೀನಿನಲ್ಲಿರುವ ಕುಡಿಯುವ ನೀರಿನ ಬಾವಿಗೆ ಕಾಲು ಜಾರಿ ಬಿದ್ದಿದ್ದಾರೆ. ಪರಿಣಾಮ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಈ ಕುರಿತು ಆಕೆಯ ಪತಿ ವಿಷ್ಣು ನಾಯ್ಕಮುರುಡೇಶ್ವರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು ದೂರನ್ನು ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಿಧನ ಸುದ್ದಿ

ಯಮುನಾ ತುಳಸಿದಾಸ್ ಭಟ್

ಹೊನ್ನಾವರ: ತಾಲೂಕಿನ ಮಾವಿನಕುರ್ವಾ ಗ್ರಾಮದ ಮಂಡಲಕುರ್ವಾ ನಿವಾಸಿ ಯಮುನಾ ತುಳಸಿದಾಸ್ ಭಟ್ (79) ನಿಧನರಾದರು.ಮೃತರಿಗೆ ಪತಿ, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವಿದೆ.





ಕುಮಟಾ: ದೈವಜ್ಞ ಬ್ರಾಹ್ಮಣರಲ್ಲಿ ಧಾರ್ಮಿಕತೆಯ ಭಾವ ಬಿತ್ತಿದವರು ವಾದಿರಾಜ ಗುರುಗಳು ಎಂದು ಸೋದೆ ವಾದಿರಾಜ ಮಠದ ಶ್ರೀ 1008 ವಿಶ್ವವಲ್ಲಬ ತೀರ್ಥರು ನುಡಿದರು. ಕುಮಟಾದ ಸೋದೆ ವಾದಿರಾಜರ ದೈವಜ್ಞ ಬ್ರಾಹ್ಮಣ ಭಕ್ತ ವೃಂದದಿಂದ ಹವ್ಯಕ ಸಭಾಭವನದಲ್ಲಿ ಹಮ್ಮಿಕೊಂಡ ಗುರು ವಂದನಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸೂಕ್ತ ಗುರುವನ್ನು ಆಯ್ಕೆ ಮಾಡಿಕೊಳ್ಳಿ: ಶ್ರೀಗಳು

ಕುಮಟಾ: ದೈವಜ್ಞ ಬ್ರಾಹ್ಮಣರಲ್ಲಿ ಧಾರ್ಮಿಕತೆಯ ಭಾವ ಬಿತ್ತಿದವರು ವಾದಿರಾಜ ಗುರುಗಳು ಎಂದು ಸೋದೆ ವಾದಿರಾಜ ಮಠದ ಶ್ರೀ 1008 ವಿಶ್ವವಲ್ಲಬ ತೀರ್ಥರು ನುಡಿದರು. ಕುಮಟಾದ ಸೋದೆ ವಾದಿರಾಜರ ದೈವಜ್ಞ ಬ್ರಾಹ್ಮಣ ಭಕ್ತ ವೃಂದದಿಂದ ಹವ್ಯಕ ಸಭಾಭವನದಲ್ಲಿ ಹಮ್ಮಿಕೊಂಡ ಗುರು ವಂದನಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ, ನಾವು ಈಗ ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ. ಕುಳಿತಲ್ಲೆ ಕೆಲಸಗಳು ನಡೆಯುತ್ತಿದೆ. ಇದರಿಂದ ಮನುಷ್ಯ ಜಡತ್ವಕ್ಕೆ ಒಳಗಾಗಿದ್ದಾನೆ. ಸಾಧನೆ ಮಾಡಬೇಕೆಂದರೆ ಕಷ್ಟಪಡಬೇಕು. ಮೊದಲು ಗುರಿ ನಿಶ್ಚಯಿಸಿಕೊಂಡು ಸೂಕ್ತ ಗುರುವನ್ನು ಆಯ್ಕೆ ಮಾಡಿಕೊಳ್ಳಬೇಕು. ಎಲ್ಲರು ವಾದಿರಾಜ ಗುರುಗಳ ನಾಮ ಸ್ಮರಿಸಿ ಪುನಿತರಾಗೋಣ ಎಂದು ನುಡಿದರು. ಕಾರ್ಯಕ್ರಮದ ಆರಂಭದಲ್ಲಿ ಶ್ರೀಗಳನ್ನು ಪೂರ್ಣಕುಂಭ ಸ್ವಾಗತದೊಂದಿಗೆ ಮೂರೂರು ಕ್ರಾಸ್‌ನಿಂದ ಅದ್ದೂರಿ ಮೆರವಣಿಗೆ ಮೂಲಕ ಹವ್ಯಕ ಸಭಾಭವನಕ್ಕೆ ಕರೆತರಲಾಯಿತು. ಬಳಿಕ ಶ್ರೀಗಳಿಗೆ ಭಕ್ತರಿಂದ ಪುಷ್ಪಾರ್ಚನೆ, ಕನಕಾಭಿಷೇಕ, ಪಾದ ಪೂಜೆ ನಡೆಯಿತು. ಶ್ರೀಗಳ ಪಾದ ಪೂಜೆಯನ್ನು ಸತ್ಯನಾರಾಯಣ ಭಟ್ ದಂಪತಿ ನೆರವೇರಿಸಿದರು. ತಾಲೂಕು ಸೇರಿದಂತೆ ಹೊರ ಜಿಲ್ಲೆ ರಾಜ್ಯಗಳಿಂದಲೂ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀಗಳಿಂದ ಫಲಮಂತ್ರಾಕ್ಷತೆ ಪಡೆದು ಧನ್ಯತೆ ಮರೆದರು ರಾತ್ರಿ ಅನ್ನ ಸಂತರ್ಪಣೆ ಕೂಡ ನಡೆಯಿತು. ಕುಮಟಾ ಸೋದೆ ವಾದಿರಾಜರ ದೈವಜ್ಞ ಬ್ರಾಹ್ಮಣ ಭಕ್ತ ವೃಂದದ ಪದಾಧಿಕಾರಿಗಳು, ಭಕ್ತರು ಪಾಲ್ಗೊಂಡಿದರು.



ಸಿದ್ದಾಪುರ: ತಾಲೂಕಿನ ಹಾರ್ಸಿಕಟ್ಟಾ ಕರ್ನಾಟಕ ಗ್ರಾಮೀಣ ಬ್ಯಾಂಕ್ ಶಾಖೆಯಲ್ಲಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿ ಕೋಲಾರಕ್ಕೆ ವರ್ಗಾವಣೆಗೊಂಡ ರವಿಶಂಕರ ಅವರನ್ನು ಶನಿವಾರ ಬ್ಯಾಂಕಿನಲ್ಲಿ ಸನ್ಮಾನಿಸಿ ಬೀಳ್ಕೊಡಲಾಯಿತು. ಬ್ಯಾಂಕಿನ ಅಧಿಕಾರಿಗಳಾದ ಸುಧೀಂದ್ರ, ಬಾಲಚಂದ್ರ ಹೆಗಡೆ, ರಾಜೇಂದ್ರ ಹೆಗಡೆ ಹೊನ್ನೆಹದ್ದ, ಮಂಜುನಾಥ ಶೇಟ್, ಶ್ರೀಕಾಂತ ಶಾನಭಾಗ, ರಮೇಶ ಹೆಗಡೆ, ದರ್ಶನ ಹೆಗಡೆ, ಮಹೇಶ ಹೆಗಡೆ, ಪ್ರಕಾಶ ಹೆಗಡೆ ಇತರರಿದ್ದರು.

ಮೀನುಗಾರಿಕಾ ಬೋಟ್ ಮುಳುಗಡೆ: ಅಪಾಯದಲ್ಲಿದ್ದ ಏಳು ಜನರ ರಕ್ಷಣೆ

ಹೊನ್ನಾವರ: ತಾಲೂಕಿನ ಕಾಸರಕೋಡ ಬಂದರು ಸಮೀಪ ಆಳಸಮುದ್ರದಲ್ಲಿ ಮೀನುಗಾರಿಕಾ ಬೋಟ್ ಒಂದು ಆಕಸ್ಮಿಕವಾಗಿ ಮುಳುಗಡೆಯಾಗಿರುವ ಘಟನೆ ಸಂಭವಿಸಿದೆ. ಬೋಟ್‌ನಲ್ಲಿದ್ದ ಎಲ್ಲಾ 7 ಜನ ಮೀನುಗಾರರನ್ನು ಸಕಾಲದಲ್ಲಿ ಸುರಕ್ಷಿತವಾಗಿ ರಕ್ಷಿಸಲಾಗಿದ್ದು, ಭೀಕರ ಜಲಗಂಡಾಂತರದಿಂದ ಪಾರಾಗಿದ್ದಾರೆ.

ಮುಳುಗಡೆಯಾದ ಈ ಬೋಟ್ ಅಂಕೋಲಾ ತಾಲೂಕಿನ ಬೆಳಂಬಾರ ಗ್ರಾಮದ ನಿವಾಸಿ ಅಭಿನಂದನ ಖಾರ್ವಿ ಅವರ ಮಾಲಿಕತ್ವದ 'ಶ್ರೀ ನವರತ್ನ' ಎಂಬ ಹೆಸರಿನ ಬೋಟ್ ಕಾಸರಕೋಡ ಬಂದರಿನಿಂದ ಮೀನುಗಾರಿಕೆಗೆ ತೆರಳಿದ್ದ ವೇಳೆ ತಾಂತ್ರಿಕ ದೋಷ ಅಥವಾ ಸಮುದ್ರದ ಅಲೆಗಳ ಅಬ್ಬರಕ್ಕೆ ಸಿಲುಕಿ ಬೋಟ್ ಮುಳುಗಲು ಪ್ರಾರಂಭಿಸಿದೆ. ಈ ಆಪತ್ತಿನ ಸಮಯದಲ್ಲಿ ಸಮೀಪದಲ್ಲೇ ಇದ್ದ ಬೇರೆ ಮೀನುಗಾರಿಕಾ ಬೋಟ್‌ನ ಸಿಬ್ಬಂದಿ ತಕ್ಷಣವೇ ಧಾವಿಸಿ ಬಂದು, ಮುಳುಗುತ್ತಿದ್ದ ಬೋಟ್‌ನಲ್ಲಿದ್ದ ಏಳೂ ಜನ ಮೀನುಗಾರರನ್ನು ಸುರಕ್ಷಿತವಾಗಿ ತಮ್ಮ ಬೋಟ್‌ಗೆ ಹತ್ತಿಸಿಕೊಂಡು ರಕ್ಷಿಸಿದ್ದಾರೆ.

ಬೋಟ್, ಚಲಿಸುತ್ತಿದ್ದಾಗ ಬೋಟ್‌ನ ಹೊರಭಾಗಕ್ಕೆ ಹಾನಿಯಾದ ಹಿನ್ನಲೆ ಸಮುದ್ರದಲ್ಲಿ ಮುಳುಗಲು ಆರಂಭಿಸಿದೆ. ಈ ವೇಳೆ ಬೋಟ್‌ನಲ್ಲಿದ್ದ ವೆಂಕಟೇಶ್ ಖಾರ್ವಿ, ನಾಗಪ್ಪ ಖಾರ್ವಿ, ಸಂದೀಪ್ ಖಾರ್ವಿ, ವಿಕಾಸ್ ಖಾರ್ವಿ, ವಿಘ್ನೇಶ್ ಖಾರ್ವಿ, ರಜತ್ ಬಾಣಾವಳಿಕರ್ ಹಾಗೂ ಲತೇಶ್ ಖಾರ್ವಿ ಎಂಬ ಏಳು ಜನ ಮೀನುಗಾರರು ನೀರುಪಾಲಾಗುವ ಭೀತಿಯಲ್ಲಿದ್ದರು.



» ಬೋಟ್‌ನಲ್ಲಿನ ಮೀನುಗಾರಿಕಾ ಬಲೆಗಳು ಉಪಕರಣ ಸೇರಿ 80 ಲಕ್ಷ ರೂಪಾಯಿಗಳಷ್ಟು ಭಾರಿ ಆರ್ಥಿಕ ಹಾನಿ

ಈ ದುರಂತದಲ್ಲಿ ಮೀನುಗಾರರು ಪ್ರಾಣಾಪಾಯದಿಂದ ಪಾರಾಗಿದ್ದಾರಾದರೂ, ಬೋಟ್ ಸಂಪೂರ್ಣವಾಗಿ ಸಮುದ್ರದ ಪಾಲಾಗಿದೆ. ಬೋಟ್ ನಲ್ಲಿದ್ದ ಬೆಲೆಬಾಳುವ ಮೀನುಗಾರಿಕಾ ಬಲೆಗಳು ಉಪಕರಣಗಳು ಹಾಗೂ ಇಂಜಿನ್ ಸೇರಿದಂತೆ ಒಟ್ಟಾರೆಯಾಗಿ ಸುಮಾರು 80 ಲಕ್ಷ ರೂಪಾಯಿಗಳಷ್ಟು ಭಾರಿ ಆರ್ಥಿಕ ಹಾನಿ ಸಂಭವಿಸಿದೆ ಎಂದು ಬೋಟ್ ಮಾಲೀಕರು ಅಳಲು ತೋಡಿಕೊಂಡಿದ್ದಾರೆ. ಕರಾವಳಿ ಭಾಗದಲ್ಲಿ ಮುಂಗಾರು ಆರಂಭದ ಮುನ್ಸೂಚನೆ ಇರುವುದರಿಂದ ಸಮುದ್ರದಲ್ಲಿ ಇಂತಹ ಆಕಸ್ಮಿಕಗಳು ಹೆಚ್ಚುತ್ತಿದ್ದು, ಮೀನುಗಾರರು ಹೆಚ್ಚಿನ ಜಾಗ್ರತೆ ವಹಿಸುವಂತೆ ಸೂಚಿಸಲಾಗಿದೆ. ಇಕ್ಬಾಲ್, ಅಬ್ದುಲ್ ಹಾಗೂ ಗಫೂರ್ ಎಂಬುವರು ಸಕಾಲದಲ್ಲಿ ಕಾರ್ಯಾಚರಣೆ ಮಾಡಿ 7 ಜನರ ರಕ್ಷಣೆ ಮಾಡಿದ್ದಾರೆ. ಹೊನ್ನಾವರ ಸಿಎಸ್‌ಪಿ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಸರ್ವರ್ ಸಮಸ್ಯೆ: ನ್ಯಾಯ ಬೆಲೆ ಅಂಗಡಿ ಎದುರು ಪಡಿತರದಾರರ ಪರದಾಟ



ಸಂದೇಶ್ ಎಸ್.ಜೈನ್

ದಾಂಡೇಲಿ: ನಗರದ ನ್ಯಾಯಬೆಲೆ ಅಂಗಡಿಗಳಲ್ಲಿ ಸರ್ವರ್ ಸಮಸ್ಯೆ ಎದುರಾಗಿರುವುದರಿಂದ ಪಡಿತರದಾರರು ಪ್ರತಿದಿನ ನ್ಯಾಯಬೆಲೆ ಅಂಗಡಿಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ದಾಂಡೇಲಿ ನಗರದ ಹಳೆ ದಾಂಡೆಯಲ್ಲಿರುವ ನ್ಯಾಯಬೆಲೆ ಅಂಗಡಿಯಲ್ಲಿ ಮೇ ತಿಂಗಳ ಪಡಿತರವನ್ನು ಪಡೆದುಕೊಳ್ಳಲು ಸರತಿಯ ಸಾಲಿನಲ್ಲಿ ಪಡಿತರದಾರರು ನಿಂತುಕೊಂಡಿದ್ದು, ಸರ್ವರ್ ಸಮಸ್ಯೆ ಎದುರಾಗಿದೆ. ಇದು ಕೇವಲ ಹಳೆ ದಾಂಡೇಲಿಯಲ್ಲಿ ಮಾತ್ರವಲ್ಲದೆ ದಾಂಡೇಲಿಯ ಬಹುತೇಕ ನ್ಯಾಯಬೆಲೆ ಅಂಗಡಿಗಳಲ್ಲಿ ಇದೇ ಸಮಸ್ಯೆ ಮುಂದುವರಿದಿದೆ. ಈ ತಿಂಗಳ ಪಡಿತರವನ್ನು ಪಡೆಯಲು ಸರ್ವರ್ ಸಮಸ್ಯೆಯಿಂದ ಪಡಿತರ ವಿತರಣೆಗೆ ಸಂಕಷ್ಟ ಎದುರಾಗಿದೆ.ಈ ತಿಂಗಳ ಪಡಿತರವನ್ನು ಪಡೆದುಕೊಳ್ಳಲು ಸರ್ವರ್ ಸಮಸ್ಯೆ ಎದುರಾಗಿರುವ ಹಿನ್ನಲೆಯಲ್ಲಿ ಪಡಿತರವನ್ನು ಪಡೆಯಲು ಐದಾರು ದಿನಗಳವರೆಗೆ ಅವಕಾಶ ನೀಡಿದ್ದಲ್ಲಿ ಮಾತ್ರ ಪಡಿತರದಾರರಿಗೆ ಪಡಿತರವನ್ನು ಪಡೆಯಲು ಸಾಧ್ಯವಿದೆ. ಇಲ್ಲವಾದಲ್ಲಿ ಮೇ ತಿಂಗಳ ಪಡಿತರ ಹಾಗೆ ಬಂದು ಹಾಗೆ ಹೋಯ್ತು ಎಂಬಂತಾಗಲಿದ್ದು, ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗಿದೆ.

ಕವಿಗಳಿಗೆ ಮುಕ್ತ ಅವಕಾಶ

ಕುಮಟಾ : ಕುಮಟಾ ತಾಲೂಕಾ ಮಟ್ಟದ 5ನೇ ಚುಟುಕು ಸಾಹಿತ್ಯ ಸಮ್ಮೇಳನವು ಜೂನ್ 14ರಂದು ಕುಮಟಾದ ಲಕ್ಷ್ಮೀಬಾಯಿ ಬುರ್ಡೇಕರ್ ಸಭಾಭವನದಲ್ಲಿ ನಡೆಯಲಿದ್ದು, ಸಾಹಿತ್ಯಾಸಕ್ತರು ಹಾಗೂ ಚುಟುಕು ಕವಿಗಳಿಗಾಗಿ ವಿಶೇಷ ವೇದಿಕೆಯಾಗಲಿದೆ.

ಕ್ರಿಶಾ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕರಾದ ಮುಕುಂದ ನಾಯ್ಕ ಅವರ ಸಹಯೋಗದಲ್ಲಿ ನಡೆಯಲಿರುವ ಈ ಸಾಹಿತ್ಯ ಸಮ್ಮೇಳನದಲ್ಲಿ ''ಕುಮಟಾ ಮುಕುಟ'' ಸಂಸ್ಮರಣ ಸಂಚಿಕೆಯನ್ನು ಹೊರತರುವ ಯೋಜನೆ ರೂಪಿಸಲಾಗಿದೆ. ಜಿಲ್ಲೆಯ ಚುಟುಕು ಕವಿಗಳ ಆಯ್ದ ಚುಟುಕುಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಸಿದ್ದಾಪುರ: ತಾಲೂಕಿನ ಕಾನಸೂರ ಸಮೀಪದ ಮಾದ್ನಕಳ್‌ನಲ್ಲಿ ದೇವತಾ ಕಾರ್ಯಕ್ರಮ, ಯಕ್ಷಗಾನ ತಾಳಮದ್ದಳೆ, ಯಕ್ಷ ನೃತ್ಯ ಹಾಗೂ ಬಾಣಸಿಗ ದಂಪತಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಪ್ರತಿಭೆ ಪ್ರೋತ್ಸಾಹಿಸುವ ಕಾರ್ಯವಾಗಲಿ: ನಾಯ್ಕ

ಸಿದ್ದಾಪುರ: ಸಮಾಜ ಸಂಘಟನೆಯಲ್ಲಿ ಸಂಕುಚಿತ ಮನೋಭಾವನೆ ಹೊಂದಬಾರದು. ವಿಶಾಲ ಮನೋಭಾವದಿಂದ ಸಮಾಜದ ಅಭಿವೃದ್ಧಿಯ ದಿಸೆಯಲ್ಲಿ ಕಾರ್ಯಮಾಡಬೇಕು. ಸಮಾಜದ ಆಂತರಿಕ ಸಮಸ್ಯೆಗಳ ಬಗೆ ಹರಿಸುವಿಕೆಗೆ ಹಾಗೂ ಪ್ರತಿಭೆ ಗುರುತಿಸಲು ಸಂಘಟನೆ ವೇದಿಕೆಯಾಗಬೇಕು ಎಂದು ಸಾಮಾಜಿಕ ಹೋರಾಟಗಾರ ರವೀಂದ್ರ ನಾಯ್ಕ ಹೇಳಿದರು.

ಅವರು ಸಿದ್ದಾಪುರ ತಾಲೂಕಿನ ತಂಡಾಗುಂಡಿ ಗ್ರಾಪಂ ವ್ಯಾಪ್ತಿಯ ಓಂಕಾರ ಗ್ರಾಮದಲ್ಲಿ ಭಾನುವಾರ ವೆಂಕಟನಾರಾಯಣ ಆರ್ಯ ಈಡಿಗ, ಬಿಲ್ಲವ, ಪೂಜಾರಿ, ನಾಮಧಾರಿ ಸಮಾಜ ಸಂಘದ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ವಂಚಿತರಾದ ಸದಸ್ಯರಿಗೆ ಧ್ವನಿಯಾಗುತ್ತಾ ಹಕ್ಕುಗಳ ರಕ್ಷಣೆ ಮತ್ತು ಸಾಮಾಜಿಕವಾಗಿ ಸಮುದಾಯ ಬಲಪಡಿಸಲು ಸಂಘಟನೆಯು ಕಾರ್ಯ ಪ್ರವೃತ್ತವಾಗಬೇಕು. ತಲೆತಲಾಂತರದಿಂದ ಕಾಯ್ದುಕೊಂಡು ಬಂದ ಸಂಸ್ಕೃತಿಯನ್ನು ರಕ್ಷಿಸುವ ಕಾರ್ಯ ಸಂಘಟನೆಯಿಂದ ಆಗಬೇಕು ಎಂದು ಅವರು ಹೇಳಿದರು.

ಉಪನ್ಯಾಸಕರಾಗಿದ್ದ ಮುಖ್ಯಾಧ್ಯಾಪಕ ಕೆ.ಜಿ.ನಾಯ್ಕ ಮಾತನಾಡಿ, ಮಕ್ಕಳಿಗೆ ಟಿವಿ ಮತ್ತು ಮೊಬೈಲ್‌ಗಳನ್ನ ಶಿಕ್ಷಣಕ್ಕೆ ಪೂರಕವಾದ ಚಟುವಟಿಕೆಗಳಿಗೆ ಮಾತ್ರ ಒದಗಿಸಬೇಕು. ಸಮಾಜದಲ್ಲಿನ ದುಶ್ಚಟದ ವಿರುದ್ಧ ಜಾಗೃತಿ ಮೂಡಿಸುವುದು ಸಂಘಟನೆಯ ಪ್ರಮುಖ ಕಾರ್ಯವಾಗಬೇಕು. ಬದುಕಿನ ಯಶಸ್ಸಿನ ಗುಟ್ಟು ಶಿಕ್ಷಣವಾಗಿದ್ದು ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವಾಗಬೇಕು ಎಂದರು.

ವಲಯ ಅರಣ್ಯಾಧಿಕಾರಿ ಎಂ.ಎಚ್.ನಾಯ್ಕ, ದೈಹಿಕ ಶಿಕ್ಷಕ ಎಮ್.ವಿ.ನಾಯ್ಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಂಘಟನೆಯ ಪ್ರಧಾನ ಕಾರ್ಯದರ್ಶಿ ಸೂರಜ ನಾಯ್ಕ, ಪ್ರಮೋದ ನಾಯ್ಕ ಬೀರನಜಡ್ಡಿ, ಸಮರ್ಥ ಟ್ರಸ್ಟ ಅಧ್ಯಕ್ಷೆ ಪ್ರತಿಭಾ ಮಂಜುನಾಥ ನಾಯ್ಕ, ಮಂಜುನಾಥ ಎಮ್.ನಾಯ್ಕ, ವಿದ್ಯುತ್ ಗುತ್ತಿಗೆದಾರ ಸುಬ್ರಾಯ ನಾಯ್ಕ, ಮೋಹನ ನಾಯ್ಕ, ಮಂಜುನಾಥ ಪೂಜಾರಿ ದ್ಯಾವಕಾರ ಇದ್ದರು. ಗ್ರಾಮೀಣ ಭಾಗದ ಹತ್ತು ಪ್ರತಿಭಾವಂತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಧನ ಸಹಾಯದೊಂದಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಂಘಟನೆಯ ಗೌರವಾಧ್ಯಕ್ಷ ಮಂಜುನಾಥ ನಾಯ್ಕ ಸ್ವಾಗತಿಸಿದರು. ಅಧ್ಯಕ್ಷ ಹರಿಹರ ನಾಯ್ಕ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕಿ ಮಮತಾ ನಾಯ್ಕ ನಿರೂಪಿಸಿದರು, ಶಿಕ್ಷಕ ನಾಗರಾಜ ನಾಯ್ಕ ಕರ್ಲಮನೆ ವಂದಿಸಿದರು.



ಭೂಮಿಯ ತೇವಾಂಶದ ಕೊರತೆ: ಗದ್ದೆಗಳಿಗೆ ಸ್ಪ್ರಿಂಕ್ಲರ್ ನೀರು

ಸಂತೋಷ ರಾಯ್ಕರ

ದಿಗಂತ ವಿಶೇಷ

ಮುಂಡಗೋಡ: ತಾಲೂಕಿನಲ್ಲಿ ಕೆಲವು ರೈತರು ಭತ್ತ ಹಾಗೂ ಗೋವಿನ ಜೋಳದ ಬೀಜಗಳ ಒಣ ಬಿತ್ತನೆ ಮಾಡಿ ಬೀಜಗಳು ಮೊಳಕೆಯೊಡೆದಿದ್ದು, ಭೂಮಿಯ ತೇವಾಂಶದ ಕೊರತೆಯಿಂದ ಕೆಲ ರೈತರು ಗದ್ದೆಗಳಿಗೆ ಸ್ಪ್ರಿಂಕ್ಲರ್ ಮೂಲಕ ನೀರುಣಿಸುತ್ತಿದ್ದರೆ ಮಳೆಯಾಶ್ರಿತ ರೈತರು ಮಳೆ ಬೀಳುವ ನಿರೀಕ್ಷೆಯಲ್ಲಿದ್ದಾರೆ.

ಈ ಹಿಂದೆ ಮೂರ್ನಾಲ್ಕು ಬಾರಿ ಆದ ಮಳೆಯಿಂದ ತಕ್ಕಮಟ್ಟಿಗೆ ಹದ ಸಿಕ್ಕು ರೈತರು ಒಣಬಿತ್ತನೆ ಮಾಡಿದ್ದರು.

ಬೀಜ ಬಿತ್ತನೆ ನಂತರ ರೈತರು ಮಳೆ ಬಾರದೆ ಆಗಾಗ ಮೋಡ ಕವಿದ ವಾತಾವರಣ ನಿರ್ಮಾಣವಾಗಿ ಮಳೆ ಬೀಳುತ್ತಿಲ್ಲ. ಬಿತ್ತನೆ ಮಾಡಿದ ನಂತರ ಮಳೆಯಾಗದ ಕಾರಣ ತೇವಾಂಶದ ಕೊರತೆಯಿಂದ ಮೊಳಕೆಯೊಡೆದ ಬೀಜಗಳು ಬಿಸಿಲಿನ ತಾಪಕ್ಕೆ ಒಣಗುತ್ತಿವೆ.



ನೀರಿನ ಅನುಕೂಲ ಇದ್ದ ರೈತರು ಬೋರ್ ವೆಲ್ ಹಾಗೂ ಕೆರೆ ಕಟ್ಟೆಗಳಿಂದ ಗದ್ದೆಗಳಿಗೆ ಹಗಲು ರಾತ್ರಿ ಎನ್ನದೇ ನೀರುಣಿಸುತ್ತಿದ್ದಾರೆ. ಇನ್ನು ನೀರಿನ ಅನುಕೂಲತೆ ಇಲ್ಲದ ಮಳೆಯಾಶ್ರಿತ ರೈತರು ಈಗಾಗಲೇ ಬಿತ್ತನೆ ಮಾಡಿರುವ ಬೀಜಗಳು ಹುಸಿಯಾಗಿ ಮತ್ತೊಮ್ಮೆ ಬಿತ್ತನೆ ಮಾಡುವ ಪರಿಸ್ಥಿತಿ ಬಂದೊದಗಿದೆ. ಸದ್ಯಕ್ಕೆ ಉತ್ತಮ ಮಳೆ ಸುರಿದರೆ ಸಾಕು ಮೊಳಕೆಯೊಡೆದ ಬೀಜಗಳಿಗೆ ಆಸರೆಯಾಗುತ್ತದೆ ಎಂಬ ಮಾತು ತಾಲೂಕಿನ ರೈತರದಾಗಿದೆ.

ಈ ಹಿಂದೆ ಆದ ಉತ್ತಮ ಮಳೆಯಿಂದ ಗದ್ದೆ ಹಸನು ಮಾಡಿ ಭತ್ತದ ಬೀಜಗಳನ್ನು ಬಿತ್ತನೆ ಮಾಡಿದ್ದೆ. ಈಗಾಗಲೇ ಬೀಜಗಳು ಮೊಳಕೆಯೊಡೆದಿದ್ದು ಮಳೆಯಾಶ್ರಿತ ಬೆಳೆ ಆಗಿರುವುದರಿಂದ ಮಳೆಯ ತೀರಾ ಅವಶ್ಯಕತೆ ಇದೆ. ಪರ್ಯಾಯ ವ್ಯವಸ್ಥೆ ಏನೂ ಇಲ್ಲ. ಮಳೆ ಆಗದೇ ಹೋದರೆ ಬೀಜಗಳು ಒಣಗಿ ಮತ್ತೊಮ್ಮೆ ಬಿತ್ತನೆ ಮಾಡಬೇಕಾಗುತ್ತದೆ ಎಂದು ಸ್ಥಳೀಯ ರೈತ ವಿನೋದ ನಾಯರ ತಮ್ಮ ಅಳಲು ತೋಡಿಕೊಂಡರು.

> ಗೋವಿನ ಜೋಳ ಬಿತ್ತನೆ ಮಾಡಿ ಈಗಾಗಲೇ ಬೀಜಗಳು ಮೊಳಕೆಯೊಡೆದಿದ್ದು, ಮಳೆ ಬಾರದ ಕಾರಣ ಬೇರೆಯವರ ಕೊಳವೆಬಾಯಿ ಬಾಡಿಗೆ ಪಡೆದು ಸ್ಪ್ರಿಂಕ್ಲರ್ ಮೂಲಕ ಸಸಿಗಳಿಗೆ ನೀರು ಉಣಿಸುತ್ತಿದ್ದೇನೆ.
>
> ■ ರಾಜು ಗುಬ್ಬಕ್ಕನವರ, ಸನವಳ್ಳಿ ಗ್ರಾಮದ ರೈತ

ಸಂಪನ್ನಗೊಂಡ ತಾಳಮದ್ದಲೆ, ಯಕ್ಷ ನೃತ್ಯ

ಸಿದ್ದಾಪುರ: ತಾಲೂಕಿನ ಕಾನಸೂರ ಸಮೀಪದ ಮಾದ್ನಕಳ್‌ನಲ್ಲಿ ದೇವತಾ ಕಾರ್ಯಕ್ರಮ, ಯಕ್ಷಗಾನ ತಾಳಮದ್ದಳೆ, ಯಕ್ಷ ನೃತ್ಯ ಹಾಗೂ ಬಾಣಸಿಗ ದಂಪತಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಬೆಳಗ್ಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ನಂತರ ಮಧ್ಯಾಹ್ನ ಸುಧನ್ವ ಮೋಕ್ಷ ಯಕ್ಷಗಾನ ತಾಳಮದ್ದಳೆ ನಡೆಯಿತು. ಹಿಮ್ಮೇಳದಲ್ಲಿ ಗಜಾನನ ಭಟ್ಟ ತುಳಗೇರಿ, ಶ್ರೀಪಾದ ಹೆಗಡೆ ಬಾಳೆಗದ್ದೆ, ಶ್ರೀಪತಿ ಹೆಗಡೆ ಕಂಚಿಮನೆ, ಮಂಜುನಾಥ ಹೆಗಡೆ ಕಂಚಿಮನೆ, ಗಂಗಾಧರ ಹೆಗಡೆ ಕಂಚಿಮನೆ ಸಹಕರಿಸಿದರು.ಮುಮ್ಮೇಳದಲ್ಲಿ ಆನಂದ ಭಟ್ಟ ಕೆಕ್ಕಾರ, ನಿರ್ಮಲ ಹೆಗಡೆ ಗೋಳಿಕೊಪ್ಪ, ಪ್ರಣವ ಭಟ್ಟ ಸಿದ್ದಾಪುರ, ನಿರಂಜನ ಜಾಗನಳ್ಳಿ, ದೀಪಕ ಕುಂಕಿ ಪಾತ್ರನಿರ್ವಹಿಸಿದರು. ಕು.ಮೇಘನಾ ಕೋಡ್ಸರ ಮತ್ತು ಕು.ಕುಶ ಹೆಗಡೆ ಇವರಿಂದ ಯಕ್ಷನೃತ್ಯ ನಡೆಯಿತು.

ನಂತರ ಹಲವು ವರ್ಷಗಳಿಂದ ಬಾಣಸಿಗ ವೃತ್ತಿ ನಡೆಸಿಕೊಂಡು ಬರುತ್ತಿರುವ ಆಲಳ್ಳಿ ಭವಂತಿಮನೆಯ ಸುಬ್ರಾಯ ಹೆಗಡೆ ಹಾಗೂ ಸುಲೋಚನಾ ಹೆಗಡೆ ದಂಪತಿಯನ್ನು ಕಾರ್ಯಕ್ರಮ ಸಂಘಟಕ ಹಾಗೂ ಯಕ್ಷಗಾನ ಕಲಾವಿದ ವೆಂಕಟರಮಣ ಹೆಗಡೆ ಹಾಗೂ ಪದ್ಮಾ ದಂಪತಿಗಳು ಸನ್ಮಾನಿಸಿ ಗೌರವಿಸಿದರು. ನಿರಂಜನ ಜಾಗ್ನಳ್ಳಿ ಕಾರ್ಯಕ್ರಮ ನಿರ್ವಹಿಸಿದರು.

ಮನಗೆದ್ದ ಭಸ್ಮಾಸುರ ಮೋಹಿನಿ ಯಕ್ಷಗಾನ



ಸಿದ್ದಾಪುರ: ತಾಲೂಕಿನ ಹೊಸಳ್ಳಿಯ ಮುರುಗೇಶ್ವರ ದೇವಾಲಯದ ವಾರ್ಷಿಕೋತ್ಸವದ ಪ್ರಯುಕ್ತ ಆಯ್ದ ಕಲಾವಿದರಿಂದ ಏರ್ಪಡಿಸಲಾಗಿದ್ದ 'ಭಸ್ಮಾಸುರ ಮೋಹಿನಿ' ಯಕ್ಷಗಾನ ಆಖ್ಯಾನ ಬಹುಸಂಖ್ಯೆಯಲ್ಲಿ ಸೇರಿದ್ದ ಪ್ರೇಕ್ಷಕರ ಮನಗೆದ್ದಿತು.

ನಾಟ್ಯಾಚಾರ್ಯ ಶಂಕರ ಭಟ್ಟರ ಈಶ್ವರ, ನಾಗಭೂಷಣ ಹೆಗ್ಗೋಡ್‌ರವರ ಭಸ್ಮಾಸುರ, ಗಣಪತಿ ಆನಗಲ್‌ರವರ ಮೋಹಿನಿ, ಚೆನ್ನಕೇಶವ ಹೆಗ್ಗೋಡ್‌ರವರ ವಿಷ್ಣು, ಅಶೋಕ ಭಟ್ಟ ಸಿದ್ದಾಪುರ ಅವರ ಬ್ರಾಹ್ಮಣ, ಗಿರಿ ಬೇಡ್ಕಣಿಯವರ ಬ್ರಾಹ್ಮಣತಿ, ವೀರಭದ್ರ ಹಾರೆಕೊಪ್ಪರವರ ಪಾರ್ವತಿ, ಎಂ.ಆರ್.ಭಟ್ಟ ಗೊಂಟನಾಳ ಅವರ ದೇವೇಂದ್ರ ಈ ಎಲ್ಲಾ ಪಾತ್ರಗಳು ರಂಗದಲ್ಲಿ ವಿಜೃಂಭಿಸಿದವು. ಹಿಮ್ಮೇಳದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರಾವಳಿ ಕೋಗಿಲೆ ಕೊಳಗಿ ಕೇಶವ ಹೆಗಡೆಯವರ ಗಾಯನ ವಿಶೇಷ ಮೆರಗು ನೀಡಿತು. ಕುಶ ಹೆಗ್ಗೋಡ ಅವರ ಮದ್ದಲೆ, ವಿನಾಯಕ ಕತಗಾಲ ಅವರ ಚೆಂಡೆವಾದನ ಕಾರ್ಯಕ್ರಮದ ಕಳೆಯೇರಿಸಿದವು. ದೇವಾಲಯ ಮುಖ್ಯಸ್ಥರಾದ ಗಣಪತಿ ಮಡಿವಾಳರು ಕಲಾವಿದರನ್ನು ಗೌರವಿಸಿದರು.

ಸತ್ಯಾನ್ವೇಷಣೆ ನ್ಯಾಯಾಧೀಶರ ಜವಾಬ್ದಾರಿ

ಹೊನ್ನಾವರ: ನ್ಯಾಯಾನ್ವೇಷಣೆ, ಸತ್ಯಾನ್ವೇಷಣೆ ನ್ಯಾಯಾಧೀಶರ ಗುರುತರ ಜವಾಬ್ದಾರಿ ಆಗಿರುತ್ತದೆ. ಅದಕ್ಕೆ ವಕೀಲರ ಸಮೂಹ ಸಹಕರಿಸಿದರೆ ಉತ್ತಮ ನ್ಯಾಯದಾನ ನೀಡಲು ಸಾಧ್ಯವಾಗುತ್ತದೆ, ಸಮಾಜಕ್ಕೆ ಒಳಿತಾಗುತ್ತದೆ ಎಂದು ಹಿರಿಯ ಸಿವಿಲ್ ಜಡ್ಜ ನ್ಯಾಯಾಧೀಶ ಬಿ.ಸಿ ಚಂದ್ರಶೇಖರ ಅಭಿಪ್ರಾಯಪಟ್ಟರು. ಅವರು ಬೆಂಗಳೂರಿಗೆ ವರ್ಗಾವಣೆ ಆದ ಪ್ರಯುಕ್ತ ವಕೀಲರ ಸಂಘ ಹೊನ್ನಾವರ ತಮಗೆ ಏರ್ಪಡಿಸಿದ ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಕೇವಲ ಪ್ರಕರಣ ಇತ್ಯರ್ಥ ಮಾತ್ರ ನ್ಯಾಯದಾನದ ಉದ್ದೇಶವಲ್ಲ. ನೋವಿಗೆ ಒಳಗಾದವರಿಗೆ, ಹಾನಿಗೆ ಒಳಗಾದವರಿಗೆ ನ್ಯಾಯ ಒದಗಿಸುವುದೇ ನ್ಯಾಯದಾನದ ಉದ್ದೇಶವಾಗಿರುತ್ತದೆ. ಸ್ಥಳೀಯ ವಕೀಲರ ಸಂಘದ ಸದಸ್ಯರೆಲ್ಲರೂ ನ್ಯಾಯದಾನ ಪ್ರಕ್ರಿಯೆಯಲ್ಲಿ ತನಗೆ ಸಹಕರಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬಿ.ಸಿ ಚಂದ್ರಶೇಖರ ದಂಪತಿಗಳನ್ನು ಸನ್ಮಾನಿಸಲಾಯಿತು. ಜೆ.ಎಮ್.ಎಫ್.ಸಿ ನ್ಯಾಯಾಧೀಶ ಈರಣ್ಣ ಹುಣಸಿಕಟ್ಟಿ, ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಅನೀಲ್ ಜೋನ್ ಸಿಕ್ವೇರಾ ಹಾಗೂ ವಕೀಲರ ಸಂಘದ ಸದಸ್ಯರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ವಕೀಲರ ಸಂಘದ ಅಧ್ಯಕ್ಷ ವಿ.ಎಮ್.ಭಂಡಾರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯದರ್ಶಿ ಉದಯ ನಾಯ್ಕ ಚಿತ್ತಾರ ಕಾರ್ಯಕ್ರಮ ನಿರೂಪಿಸಿದರು. ಸರಕಾರಿ ಅಭಿಯೋಜಕರಾದ ಸಂಪದ ಗುನಗಾ, ಪೂರ್ಣಿಮಾ ನಾಯ್ಕ ಹಾಗೂ ಸೀತರಾಮ ಹರಿಕಾಂತ ಉಪಸ್ಥಿತರಿದ್ದರು.



ಕಸ ವಿಲೇವಾರಿಗೆ ಸಾರ್ವಜನಿಕರ ಆಗ್ರಹ

ಗೋಕರ್ಣ: ಬೇಸಿಗೆ ರಜೆ ಮುಕ್ತಾಯದ ಹಂತ, ವಾರಾಂತ್ಯದ ರಜೆ ಹೀಗೆ ಪ್ರವಾಸಿ ತಾಣಕ್ಕೆ ಕಳೆದ ಹಲವು ದಿನಗಳಿಂದ ನಿತ್ಯ ಇಪ್ಪತ್ತು ಸಾವಿರಕ್ಕೂ ಹೆಚ್ಚು ಜನರು ಭೇಟಿ ನೀಡಿ ತೆರಳುತ್ತಾರೆ ಎನ್ನಲಾಗುತ್ತಿದ್ದು, ಈ ಪ್ರಮಾಣದಲ್ಲಿ ಬರುವ ಜನ ಪ್ರವಾಹ ಹಲವು ಉದ್ಯೋಗಕ್ಕೆ ಆದಾಯದ ತಂದರೆ, ಪವಿತ್ರ ಸ್ಥಳಕ್ಕೆ ಕಸ ರಾಶಿಯನ್ನ ಕೊಡುಗೆಯಾಗಿ ನೀಡುತ್ತಿದೆ.

ನ್ಯಾಯಾಲಯದ ಆದೇಶ ಎಂಬ ಕಾರಣ ನೀಡಿ ಗ್ರಾಪಂ ಪ್ರಮುಖ ಸ್ಥಳದಲ್ಲಿ ಕಸದ ಬುಟ್ಟಿ ಇಡುವುದನ್ನ ನಿಲ್ಲಿಸಿದೆ.ಇದರಿಂದ ಜನರು ಯಾವುದೇ ತಿಂಡಿ ಮತ್ತಿತರ ವಸ್ತು ತೆಗೆದುಕೊಂಡರೆ ಅದಕ್ಕೆ ಸುತ್ತಿಕೊಂಡ ಪ್ಲಾಸ್ಟಿಕ್ ಕವರ್ ಮತ್ತಿತರ ವಸ್ತುಗಳನ್ನ ರಸ್ತೆಯಲ್ಲೇ ಎಸೆದು ಹೋಗುತ್ತಾರೆ. ಇನ್ನೂ ಹಲವು ಅಂಗಡಿ, ಹೊಟೇಲ್ ಮಾಲಕರು ಕಸದ ತೊಟ್ಟಿ ಇಟ್ಟುಕೊಂಡಿದ್ದಾರೆ, ಆದರೆ ಜನರು ಮಾತ್ರ ಇದನ್ನ ಪರಿಗಣಿಸದೇ ರಸ್ತೆಗೆ ಚಲ್ಲುತ್ತಾರೆ. ಹೀಗೆ ಸ್ಥಳೀಯ ಆಡಳಿತ ನಿರ್ಲಕ್ಷ್ಯ, ಜನರ ಅಲಕ್ಷ ಪ್ರವಾಸಿ ತಾಣ ಕಸ ತಾಣವಾಗುತ್ತಿದೆ.

ಸ್ವಯಂ ಸೇವಾ ಸಂಸ್ಥೆಗಳು ವಾರದಲ್ಲಿ ಒಂದೆರಡು ಬಾರಿ ಕಡಲತೀರದ ಸ್ವಚ್ಛತಾ ಕಾರ್ಯ ಮಾಡಿ ಕಸ ಸಂಗ್ರಹಿಸುತ್ತಿದೆ. ಆದರೆ ಇದನ್ನ ಗ್ರಾಪಂ ವಿಲೇವಾರಿ ಮಾಡುತ್ತಿಲ್ಲ ಎಂದು ಹೇಳಲಾಗುತ್ತಿದೆ.



ಅಲ್ಲದೇ ಪೇಟೆ ಪ್ರಮುಖ ಸ್ಥಳಗಳಲ್ಲಿ ಜನರು ಕಸ ಎಸಯದಂತೆ ಸಿಬ್ಬಂದಿ ನಿಯೋಜಿಸಿ ನಿಗಾವಹಿಸಿವುದು, ಕಸ ಎಸೆದರೆ ಅಂಥವರಿಗೆ ದಂಡ ವಿಧಿಸಿ ಎಚ್ಚರಿಸುವ ಕ್ರಮ ತೆಗೆದುಕೊಳ್ಳಬಹುದಿತ್ತು. ಕಡಲತೀರದಲ್ಲಿ ವಾಹನ ನಿಲುಗಡೆಗೆ ಅವಕಾಶ ನೀಡಿ ಸ್ವಚ್ಛತಾ ಶುಲ್ಕವನ್ನ ಸಹ ಆಕರಿಸಲಾಗುತ್ತಿದೆ.

ಹಿಂದೆಲ್ಲ ಕಸ, ನೈರ್ಮಲ್ಯ ಬಗ್ಗೆ ವಿವಿಧ ಹಾಡು ಹಾಕಿಕೊಂಡು ವಾಹನ ಬರುತ್ತಿದ್ದ ಪದ್ದತಿ ಇತ್ತು. ಆದರೆ ತಿಂಗಳಿಂದ ಹಾಡು ನಾಪತ್ತೆಯಾಗಿದೆ. ಸ್ವಚ್ಛತಾ ಸಿಬ್ಬಂದಿ ಮುಖ್ಯ ರಸ್ತೆ ಮೇಲಿನಕೇರಿಯಿಂದ ರಥಬೀದಿ, ಅಕ್ಕಪಕ್ಕದ ಬೀದಿಗೆ ಕಾಯಕ ಮುಗಿಸುತ್ತಾರೆ. ತದಡಿ ಕಡೆ ಅಂತೂ ತಿಂಗಳಿಂದ ಹೋಗದೆ ಕಸದ ಗುಡ್ಡ ರಾಶಿ ಬಿದ್ದಿದೆ.ಬಿಜ್ಜೂರ, ತಾರಮಕ್ಕಿ, ಬೆಲೆಹಿತ್ತಲ ಮುಂತಾದೆಡೆಯಿಂದ ಪ್ರವಾಸಿ ವಾಹನಗಳು ಸಂಚರಿಸುವಾಗ ಚಲ್ಲಿದ ಕಸದ ಬಗ್ಗೆ ಅಂತೂ ಯಾರೂ ಕೇಳುವವರೇ ಇಲ್ಲವಾಗಿದ್ದು,ಕಸದ ವಾಹನ ಬಾರದೆ ಇನ್ನು ಕಸ ಸುಡುವುದುದನ್ನು ಮುಂದುವರೆಸಿದ್ದಾರೆ. ವಾರಕ್ಕೊಮ್ಮೆ ಕೂಡ ಮೇಲ್ವಿಚಾರಣೆ ಮಾಡದೇ ಪಂಚಾಯಿತಿ ಹತ್ತಿರವೇ ರಾಶಿ ಹಾಕಿರುವ ಕಸ ಈಗ ದೊಡ್ಡ ಗುಡ್ಡ ಆಗಿ ಹೋಗಿದ್ದು, ರೋಗಗಳು ಅಲ್ಲಿಂದಾನೆ ಹರಡುವ ಆತಂಕ ಇದೆ. ಇದನ್ನ ಪ್ರಶ್ನಿಸಿದರೆ ಕಸದ ವಾಹನ ಒಂದೇ ಇದೆ ಎಂಬ ಉತ್ತರ ಪಂಚಾಯತದವರು ನೀಡುತ್ತಾರೆ. ಆದರೆ ಕ್ರಮ ಏನು ಬಗ್ಗೆ ಉತ್ತರವಿಲ್ಲವಾಗಿದೆ.

ಗ್ರಾಪಂ ನಿರ್ಲಕ್ಷ್ಯ

ಮನೆ, ಹೊಟೇಲ್‌ಗಳಿಂದ ಕಸ ಸಂಗ್ರಹಿಸಿ ವಿಲೇವಾರಿ ಮಾಡಲು ಒಂದೆ ವಾಹನವಿದ್ದು, ಇನ್ನೊಂದು ವಾಹನ ಹಾಳಾಗಿ ಹಲವು ತಿಂಗಳುಗಳೇ ಕಳೆದಿದೆ. ಆದರೆ ಹೊಸ ವಾಹನ ಅಥವಾ ಬೇರೆಡೆಯಿಂದ ವಾಹನ ತಂದು ಸ್ವಚ್ಛತೆ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ ಎಂದು ಜನರು ಹೇಳುತ್ತಿದ್ದಾರೆ.

ಡಿಕೆಶಿಗೆ ಅಭಿನಂದನೆ ಮಹಾಪೂರ


ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ ಶಿವಕುಮಾರ್ ಅವರಿಗೆ ಪಕ್ಷದ ಹಿರಿಯ ಮತ್ತು ಕಿರಿಯ ನಾಯಕರು ಭೇಟಿ ಮಾಡಿ ಹೂಗುಚ್ಛ ನೀಡಿ ಶುಭ ಹಾರೈಸಿದರು.

ಭಾನುವಾರಬೆಳಗ್ಗೆಯಿಂದಲೇಸದಾಶಿವನಗರದನಿವಾಸಕ್ಕೆಆಗಮಿಸಿದನಾಯಕರುಶುಭಕೋರಿ ಮಾತುಕತೆ ನಡೆಸಿದರು. ಕಾಂಗ್ರೆಸ್ ಮುಖಂಡರಾದ ಎಂ.ಬಿ ಪಾಟೀಲ್, ದಿನೇಶ್ ಗುಂಡೂ ರಾವ್, ಎಚ್ ಕೆ ಪಾಟೀಲ್, ಎಚ್.ಸಿ ಮಹದೇವಪ್ಪ, ಸುನಿಲ್ ಬೋಸ್, ಡಾ ಅಜಯ್ ಸಿಂಗ್, ಮಾಂಕಾಳ ವೈದ್ಯ, ಮಧು ಬಂಗಾರಪ್ಪ, ರಾಘವೇಂದ್ರ ಹಿಟ್ನಾಳ್, ಬಿ.ಆರ್ ಪಾಟೀಲ್,ತನ್ವೀರ್ ಸೇಠ್,ವಿಜಯಾನಂದ್ ಕಾಶಪ್ಪನವ ನವರ್, ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಮತ್ತಿತರರು ಆಗಮಿಸಿದ್ದರು.



ನಾನು ಸಚಿವ ಸ್ಥಾನದ ಆಕಾಂಕ್ಷಿ: ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರು ಡಿ.ಕೆ ಶಿವಕುಮಾರ್ ಅವರನ್ನು ಕುಮಾರಕೃಪ ಅತಿಥಿ ಗೃಹದಲ್ಲಿ ಸಂಜೆ ಭೇಟಿ ಮಾಡಿ ಶುಭ ಹಾರೈಸಿದರು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ ಶಿವಕುಮಾರ್ ಅವರನ್ನು ಅಭಿನಂದಿಸಲು ಬಂದಿದ್ದೆ. ಈ ವೇಳೆ ಎಸ್ಐಆರ್ ಮತ್ತು ಮೈಸೂರು ಜಿಲ್ಲೆಯ ರಾಜಕೀಯ ಕುರಿತು ಚರ್ಚಿಸಿದ್ದೇವೆ. ನಾನು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದು, ಹೈಕಮಾಂಡ್ ನನಗೂ ಭರವಸೆ ನೀಡಿದೆ ಎಂದು ತಿಳಿಸಿದರು.

ಡಿಕೆಶಿಗೆ ಶುಭ ಹಾರೈಕೆ



ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ಅವರನ್ನು ಕುಮಾರಕೃಪ ಅತಿಥಿ ಗೃಹದಲ್ಲಿ ಭಾನುವಾರ ಭೇಟಿ ಮಾಡಿ ಶುಭ ಹಾರೈಸಿದರು.

ಬ್ರಾಹ್ಮಣರು ಸಮಾಜಕ್ಕೆ ಅನಿವಾರ್ಯ: ಜಯಸಿಂಹ

ಬೆಂಗಳೂರು: ಬ್ರಾಹ್ಮಣರು ಸರ್ವೇ ಜನಾಃಸುಖಿನೋ ಭವಂತು ಎಂದು ಎಲ್ಲರ ಹಿತಾವನ್ನು ಕಾಪಾಡುತ್ತಾರೆ, ಬ್ರಾಹ್ಮಣರು ಸಮಾಜಕ್ಕೆ ಅನಿವಾರ್ಯ ಎಂದು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಅಸಗೋಡು ಜಯಸಿಂಹ ಹೇಳಿದರು.

ನಗರದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಗಾಯಿತ್ರಿ ಭವನದಲ್ಲಿ ವಿಪ್ರ ಬ್ಯುಸಿನೆಸ್ ಫೋರಂ ವತಿಯಿಂದ ನಡೆದ ಮಾತೃ ವೈಭವ ಕಾರ್ಯಕ್ರಮ, ಬ್ರಾಹ್ಮಣ ಸಮುದಾಯದ ಮಹಿಳೆಯರ ತಯಾರಿಕೆ ಮಾಡಿದ ಆಹಾರ ಮತ್ತು ವಸ್ತುಗಳ ಮಾರಾಟ ಮತ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೀವನದಲ್ಲಿ ಸಂಸ್ಕಾರ ಮತ್ತು ಮಾನವೀಯತೆ ಮುಖ್ಯ. ಪ್ರತಿಯೊಬ್ಬರು ಸರಿಯಾದ ದಾರಿಯಲ್ಲಿ ಸಾಗಬೇಕು. ತಂದೆ, ತಾಯಿಗೆ ಮಕ್ಕಳು ಗೌರವ ಕೊಡಬೇಕು. ಆದಕ್ಕೆ ಮಕ್ಕಳಿಗೆ ಸಂಸ್ಕಾರ ಕೊಡಿಸಬೇಕು. ಸಮಾಜದಲ್ಲಿ ಬದುಕಲು ಹಣ ಇರಬೇಕು. ಆದರೆ ಹಣದ ವ್ಯಾಮೋಹಕ್ಕೆ ಬೀಳಬಾರದು. ಬ್ರಾಹ್ಮಣರು ಅಲ್ಪತೃಪ್ತರು. ಸರ್ವೇ ಜನಾಃ ಸುಖಿನೋ ಭವಂತು ಎಂದು ಎಲ್ಲರ ಹಿತವನ್ನು ಕಾಪಾಡುತ್ತಾರೆ ಎಂದು ತಿಳಿಸಿದರು.

ಬ್ರಾಹ್ಮಣರು ತಯಾರಿಸಿದ ಆಹಾರ ಪದಾರ್ಥಗಳಿಗೆ ಉತ್ತಮ ಬೇಡಿಕೆ ಇದೆ.ಬ್ರಾಹ್ಮಣ ಮಹಿಳೆಯರು ಸ್ವಾವಲಂಬಿ, ಸ್ವಾಭಿಮಾನಿಯಾಗಿ ಬದುಕಲು ಸ್ವಂತ ವ್ಯಾಪಾರ ಉದ್ಯಮಿ ಪ್ರಾರಂಭ ಮಾಡಬೇಕು.ಆದಕ್ಕೆಬ್ರಾಹ್ಮಣಅಭಿವೃದ್ಧಿಮಂಡಳಿಯಿಂದಸುಲಭಸಾಲ, ಸೌಲಭ್ಯ ಸಿಗಲಿದೆ. ಮಂಡಳಿಯಿಂದ ಪ್ರತಿಯೊಬ್ಬ ಮಹಿಳೆಗೆ 2ಲಕ್ಷ ಸಾಲ ಸೌಲಭ್ಯ ಸಿಗಲಿದೆ. ಇದುವರಗೆ 1,116 ಜನರಿಗೆ ತಲಾ 2ಲಕ್ಷ ಸಾಲ ನೀಡಲಾಗಿದ್ದು, ಇದರಲ್ಲಿ 376 ಹೆಣ್ಣು ಮಕ್ಕಳು ಫಲಾನುಭವಿಗಳು ಇದ್ದಾರೆ ಎಂದು ಮಾಹಿತಿ ನೀಡಿದರು.



ಮಂಡಳಿ ವತಿಯಿಂದ ಪ್ರತಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ ನಗದು ಪುರಸ್ಕಾರ ನೀಡಲಾಗುತ್ತಿದೆ. ಮೆಡಿಕಲ್, ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ ಎಂದು ತಿಳಿಸಿದರು.

ವಿಪ್ರ ಬ್ಯುಸಿನೆಸ್ ಫೋರಂ ಅಧ್ಯಕ್ಷ ಆನಂದ್ ಮಾತನಾಡಿ, ಮಾತೃ ವೈಭವ ಎಂಬ ಕಾರ್ಯಕ್ರಮದ ಮೂಲಕ ವಿಪ್ರ ಸಮುದಾಯದವರು ಸ್ವಾವಲಂಬಿ ಮತ್ತು ಸ್ವಯಂ ಉದ್ಯೋಗದಿಂದ ತಯಾರಿಕೆ ಮಾಡಿದ ಆಹಾರ ಪದಾರ್ಥಗಳು ಮತ್ತು ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮಾಡಲು ವೇದಿಕೆ ಕಲ್ಪಿಸಲಾಗಿದೆ. ಮಹಿಳೆಯರು ತಾಯಿ, ತಂಗಿ ಅಕ್ಕನಾಗಿ ಹಾಗೂ ಸಮಾಜದ ಅಭಿವೃದ್ಧಿಗೆ ಶ್ರಮಿಸುವಳು. ಅವರಿಗೆ ಗೌರವ ಸಲ್ಲಿಸಬೇಕಾಗಿದ್ದು ನಮ್ಮ ಕರ್ತವ್ಯ ಎಂದು ಹೇಳಿದರು.

ಕಿರುಸುದ್ದಿ

ಜೂ.3ರ ನಂತರ ಡಿಸಿಎಂ ಹುದ್ದೆ ನಿರ್ಧಾರ: ಮಲ್ಲಿಕಾರ್ಜುನ ಖರ್ಗೆ

ಕಲಬುರಗಿ: ಹೆಚ್ಚುವರಿ ಡಿಸಿಎಂ ಸ್ಥಾನಕ್ಕೆ ಸಂಬಂಧಿಸಿದಂತೆ ಹೈಕಮಾಂಡ್‌ಗೆ ಇನ್ನು ಯಾವುದೇ ಅಧಿಕೃತ ಪ್ರಸ್ತಾವನೆ ಬಂದಿಲ್ಲ, ಜೂನ್ 3ರ ನಂತರ ಈ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದರು. ಕಲಬುರಗಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ರಾಜಕಾರಣದ ತೀವ್ರ ಕುತೂಹಲ ಕೆರಳಿಸಿರುವ ಉಪಮುಖ್ಯಮಂತ್ರಿ ಸ್ಥಾನದ ಸೃಷ್ಟಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ವಿವರಣೆ ನೀಡಿದರು. ಮುಖ್ಯಮಂತ್ರಿಯವರ ಜೊತೆಗೆ ಎಷ್ಟು ಜನ ಸಚಿವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂಬುದು ಸಹ ಇನ್ನೂ ಅಂತಿಮವಾಗಿಲ್ಲ ಎಂದರು. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ಮೇಲೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಸಹಜವಾಗಿಯೇ ಬದಲಾವಣೆಯಾಗಲಿದೆ. ಮುಖ್ಯಮಂತ್ರಿಯವರೊಂದಿಗೆ ಉತ್ತಮ ಸಮನ್ವಯತೆ (ಕೋ-ಆರ್ಡಿನೇಷನ್) ಹೊಂದಿರುವ ಹಾಗೂ ಸಾರ್ವಜನಿಕವಾಗಿ ದೊಡ್ಡ ಜನ ಬೆಂಬಲವಿರುವ ಸೂಕ್ತ ವ್ಯಕ್ತಿಯನ್ನೇ ಮುಂದಿನ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.

ಬಾಗೇಪಲ್ಲಿ ಬಳಿ ಭೀಕರ ರಸ್ತೆ ಅಪಘಾತ: 6 ಮಂದಿ ಸಾವು

ಬಾಗೇಪಲ್ಲಿ: ತಾಲೂಕಿನ ಸುಂಕಲಮ್ಮ ದೇವಸ್ಥಾನದ ಬಳಿ ಭೀಕರ ಸರಣಿ ಅಪಘಾತದಲ್ಲಿ ಆರು ಕಾರ್ಮಿಕರು ಅಸುನೀಗಿದ್ದಾರೆ. ಈ ದುರ್ಘಟನೆಯಲ್ಲಿ ಐವರು ಸ್ಥಳದಲ್ಲೇ ಮೃತಪಟ್ಟಿರೆ, ಆಸ್ಪತ್ರೆಯಲ್ಲಿ ಓರ್ವ ಅಸುನೀಗಿದ್ದಾನೆ. ನಾಲ್ವರು ಗಾಯಗೊಂಡಿದ್ದು, ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಪಟ್ಟಣ ಹೊರವಲಯದ ರಾಷ್ಟ್ರೀಯ ಹೆದ್ದಾರಿ 44ರ ಗಂಗೋತ್ರಿ ಪೆಟ್ರೋಲ್ ಬಂಕ್ ಬಳಿ ಈ ದುರಂತ ಸಂಭವಿಸಿದೆ. ಮಿಂಚನಹಳ್ಳಿಯಿಂದ ಕೆಲಸ ಮುಗಿಸಿ ಬಾಗೇಪಲ್ಲಿ ಪಟ್ಟಣಕ್ಕೆ ಆಟೋದಲ್ಲಿ ಮರಳುತ್ತಿದ್ದಾಗ್ಲ ಬೆಂಗಳೂರು ಕಡೆಯಿಂದ ವೇಗವಾಗಿ ಬಂದ ಥಾರ್ ಕಾರು ಆಟೋಗೆ ಡಿಕ್ಕಿ ಹೊಡೆದಿದು, ನಿಂತಿದ್ದ ಲಾರಿಗೂ ಡಿಕ್ಕಿಯಾಗಿದೆ. ಪಟ್ಟಣದ ಸರೋಜಮ್ಮ (65) ಉಮಾದೇವಿ(55) ವಿಜಯ (40) ಲಕ್ಷ್ಮೀಬಾಯಿ (50) ಆಟೋ ಚಾಲಕ ಅಂಜನಪ್ಪ (35) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಜಿಲ್ಲಾ ವರಿಷ್ಠಾಧಿಕಾರಿ ಚೌಕ್ಸೆ ಡಿ.ವೈ.ಎಸ್ಪಿ. ಪ್ರಭಾಕರ್ ರೆಡ್ಡಿ, ಎಸ್ಐ ಸುನಿಲ್ ಕುಮಾರ್, ಪೊಲೀಸ್ ಸಿಬ್ಬಂದಿ ಶ್ರೀಪತಿ, ಸುರೇಶ್ ನಾಯ್ಕ್ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಉಪತಹಸೀಲ್ದಾರ್ ಆತ್ಮಹತ್ಯೆ

ಹಾಸನ: ನಗರದ ಬಿಎಂ ರಸ್ತೆಯಲ್ಲಿರುವ ಲಾಡ್ಜ್‌ನಲ್ಲಿ ಉಪತಹಸೀಲ್ದಾರ್ ತಿಮ್ಮಯ್ಯ (52) ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ತಿಮ್ಮಯ್ಯ (52) ಆತ್ಮಹತ್ಯೆಗೆ ಶರಣಾದ ಉಪತಹಸೀಲ್ದಾರ್. ಮೈಸೂರು ಜಿಲ್ಲೆ, ಸಾಲಿಗ್ರಾಮದಲ್ಲಿ ಉಪತಹಸೀಲ್ದಾರ್ ಆಗಿದ್ದ ತಿಮ್ಮಯ್ಯ ಮೂರು ವರ್ಷಗಳ ಹಿಂದೆ ಹಾಸನದಲ್ಲಿ ಕರ್ತವ್ಯ ನಿರ್ವಹಿಸಿದ್ದರು. ನಾಲ್ಕು ಪುಟದ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೂಲತಃ ಕೊಡಗು ಜಿಲ್ಲೆಯವರಾದ ತಿಮ್ಮಯ್ಯ ಹಾಸನ ನಗರದ ಚನ್ನಪಟ್ಟಣದ ದ್ಯಾವಮ್ಮ ಬಡಾವಣೆಯಲ್ಲಿ ಕುಟುಂಬಸ್ಥರೊಂದಿಗೆ ವಾಸವಿದ್ದರು. ಬಡಾವಣೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು ಸ್ಥಳಕ್ಕೆ ಪೊಲೀಸರು ಭೇಟಿ, ಪರಿಶೀಲನೆ ನಡೆಸಿದ್ದಾರೆ.



ಜಾತಿವಾರು 4ರಿಂದ 5 ಕಾರ್ಯಾಧ್ಯಕ್ಷ ನೇಮಕದ ಬಗ್ಗೆಯೂ ಚರ್ಚೆ

ಕೆಪಿಸಿಸಿ ಸಾರಥಿಗೆ ಹುಡುಕಾಟ

ಬೆಂಗಳೂರು: ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ.ಶಿವಕುಮಾರ್ ಜೂನ್ 3 ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ಹೀಗಾಗಿ ತೆರವಾಗುವ ಈ ಮಹತ್ವದ ಸ್ಥಾನಕ್ಕೆ ಸಮರ್ಥ ನಾಯಕನ ಹುಡುಕಾಟ ನಡೆದಿದೆ.

ಈಗಾಗಲೇ ಸಚಿವ ಸ್ಥಾನದ ಜೊತೆಗೆ ಅಧ್ಯಕ್ಷ ಪಟ್ಟವನ್ನೂ ನಿಭಾಯಿಸಲು ಸಿದ್ಧ ಎಂದು ಸತೀಶ್ ಜಾರಕಿಹೊಳಿ ಆಸಕ್ತಿ ತೋರಿದ್ದಾರೆ. ಇವರ ಜೊತೆಗೆ ಡಾ. ಜಿ. ಪರಮೇಶ್ವರ್ ಮತ್ತು ಎಂ.ಬಿ.ಪಾಟೀಲ್ ಹೆಸರುಗಳು ಮುಂಚೂಣಿಯಲ್ಲಿವೆ. ಇದರೊಂದಿಗೆ ಜಾತಿವಾರು 4 ರಿಂದ 5 ಕಾರ್ಯಾಧ್ಯಕ್ಷ ನೇಮಕದ ಬಗ್ಗೆಯೂ ಚರ್ಚೆ ನಡೆದಿದೆ.

ಇನ್ನು ಕಲಬುರಗಿಯಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದ ಬಳಿಕ ಕೆಪಿಸಿಸಿಗೆ ಹುದ್ದೆಗೆ ಮತ್ತೊಬ್ಬರು ಬರಲೇಬೇಕು. ಅದು ಸಹಜ ಪ್ರಕ್ರಿಯೆ. ಒಳ್ಳೆಯವರನ್ನು ನೋಡಿ, ಕಾಂಬಿನೇಷನ್ ನೋಡಿ ಕೆಪಿಸಿಸಿಗೆ ನೇಮಕ ಮಾಡಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಚುನಾವಣೆಗೆ ಕೇವಲ 24 ತಿಂಗಳು ಮಾತ್ರ ಬಾಕಿ ಇದೆ. ಬಹಳ ವೇಗವಾಗಿ ಕೆಲಸ ಮಾಡಬೇಕಿದೆ. ವೇಗವಾಗಿಯೂ, ಸಾಮೂಹಿಕವಾಗಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವ ನಾಯಕನನ್ನು ನಾವು ಹುಡುಕಬೇಕಿದೆ.

ಜೊತೆಗೆ ಅವರಿಗೆ ಸಹಕಾರ ನೀಡುವಂಥ ತಂಡವೂ ಇರಬೇಕಾಗುತ್ತದೆ. ಇವೆಲ್ಲವೂ ವಿಚಾರ ಮಾಡಿ ನಾವು ಅಧ್ಯಕ್ಷರ ಆಯ್ಕೆ ಮಾಡುತ್ತೇವೆ' ಎಂದು ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಪಕ್ಷದ ವೇದಿಕೆಯಲ್ಲಿ ಚರ್ಚೆ: ಎಂಬಿಪಾ



ವೀರಶೈವ ಲಿಂಗಾಯತ ಸಮುದಾಯಕ್ಕೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವ ವಿಚಾರವಾಗಿ ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡುವುದಾಗಿ ಮಾಜಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿನ್ನೆ ಶಾಸಕಾಂಗ ಸಭೆ ನಡೆದು ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಆಗಿ ಆಯ್ಕೆಯಾಗಿದ್ದಾರೆ. ಆಗ ಅಭಿನಂದನೆ ಸಲ್ಲಿಸಲು ಆಗಲಿಲ್ಲ. ಆದಕ್ಕಾಗಿ ಮನೆಗೆ ಬಂದು ಶುಭ ಹಾರೈಸಿದ್ದಾಗಿ ಹೇಳಿದರು. ಭೇಟಿಯ ವೇಳೆ ಸಾಮಾನ್ಯವಾದ ಮಾತುಕತೆಗಳಾಗಿವೆ. ಲಿಂಗಾಯತ ಸಮುದಾಯಕ್ಕೆ ಪಕ್ಷದ ಅಧ್ಯಕ್ಷ ಸ್ಥಾನ ನೀಡುವುದು, ಸಂಪುಟ ಪುನರ್ ರಚನೆ ಸೇರಿದಂತೆ ಎಲ್ಲವನ್ನೂ ಹೈಕಮಾಂಡ್ ನಿರ್ಧರಿಸುತ್ತದೆ ಎಂದಿದ್ದಾರೆ.



ಮುಂಬರುವ ಚುನಾವಣೆ ಮತ್ತು ಪಕ್ಷದ ಸಿದ್ದತೆ ಹಾಗೂ ಪಕ್ಷ ಕಟ್ಟುವ ದೃಷ್ಟಿಯಿಂದ ಎಲ್ಲವನ್ನೂ ವಿಚಾರ ಮಾಡಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಬೇಕಾಗುತ್ತದೆ.
■ **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ



ಹೊಸ ಸಂಪುಟದಲ್ಲಿ ಯಾರು ಸಚಿವರಾಗಬೇಕು, ಉಪ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಹೈಕಮಾಂಡ್ ನಿರ್ಧರಿಸಲಿದೆ. ಈಗ ಡಿ.ಕೆ.ಶಿವಕುಮಾರ್ ಅವರು ಜೂನ್ 3ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಅದಕ್ಕೆ ತಯಾರಿ ನಡೆದಿದೆ.
■ **ಸಂತೋಷ್‌ಲಾಡ್,** ಮಾಜಿ ಸಚಿವ

ಡಿಕೆಶಿ ಸರ್ವಧರ್ಮ ಗುರುಗಳ ಸಮ್ಮುಖದಲ್ಲಿ ಪ್ರಮಾಣವಚನ

ಬೆಂಗಳೂರು: ಕರ್ನಾಟಕದ ನೂತನ ಸಿಎಂ ಆಗಿ ಡಿ.ಕೆ. ಶಿವಕುಮಾರ್ ಆಯ್ಕೆಯಾಗಿದ್ದು, ಜೂ. 3ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಅವರು ಸರ್ವ ಧರ್ಮದ ಧರ್ಮ ಗುರುಗಳ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಲು ತೀರ್ಮಾನಿಸಿದ್ದಾರೆ.

ಲೋಕಭವನದ ಗಾಜಿನ ಮನೆಯಲ್ಲಿ ಡಿ.ಕೆ.ಶಿವಕುಮಾರ್ ಪ್ರಮಾಣವಚನ ಕಾರ್ಯಕ್ರಮ ಜೂ.3ರಂದು ಸಂಜೆ 4..05ಕ್ಕೆ ನಡೆಯಲಿದೆ. ರಾಜ್ಯದ 50ಕ್ಕೂ ಅಧಿಕ ಮಠಾಧೀಶರು, ಕ್ರೈಸ್ತ ಸಮು ದಾಯದ ಧರ್ಮ ಗುರುಗಳು, ಮುಸ್ಲಿಂ ಸಮುದಾಯದ ಮೌಲ್ವಿಗಳನ್ನು ಪ್ರಮಾಣವಚನ ಕಾರ್ಯಕ್ರಮಕ್ಕೆ ಆಹ್ವಾನ ನೀಡಲು ಸೂಚನೆ ನೀಡಲಾಗಿದೆ. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿ, ಸುತ್ತೂರುಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ಶ್ರೀಸಿದ್ಧ ಗಂಗಾಮಠದಶ್ರೀ ಸಿದ್ಧಲಿಂಗಮಹಾಸ್ವಾಮಿ, ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥ ಮಹಾ ಸ್ವಾಮಿ, ಆರ್ಟ್ ಆಫ್ ಲಿವಿಂಗ್ ಆಶ್ರಮದ ಶ್ರೀ ರವಿಶಂಕರ ಗುರೂಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯಸ್ವಾಮೀಜಿ, ಪೇಜಾವರ ಶ್ರೀವಿಶ್ವ ಪ್ರಸನ್ನತೀರ್ಥ ಸ್ವಾಮೀಜಿ ಸಹಿತ 50ಕ್ಕೂ ಅಧಿಕ ಮಠಾಧೀ ಶರನ್ನು ಆಹ್ವಾನಿಸಲು ಯೋಜಿಸಲಾಗಿದೆ.

ಬೆಂಗಳೂರು ಕ್ಯಾಥೋಲಿಕ್ ಚರ್ಚ್‌ನ ಆರ್ಚ್ ಬಿಷಪ್ ಡಾ.ಪೀಟರ್ ಮಚಾದೋ, ಕಲಬುರಗಿಯ ದರ್ಗಾ ಹಜರತ್ ಖ್ವಾಜಾ ಬಂದೇನವಾಜ್‌ನ ಹಜರತ್ ಹಫೀಜ್ ಡಾ. ಸೈಯದ್ ಮೊಹಮ್ಮದ್ ಅಲಿ ಅಲ್ ಹುಸೈನ್ ಆಹ್ವಾನಿಸಲಾಗುತ್ತದೆ.

ಸಿದ್ಧತೆ ಪರಿಶೀಲನೆ

ಲೋಕಭವನದ ಗಾಜಿನ ಮನೆಯಲ್ಲಿ ಬುಧವಾರ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣವಚನ ಸ್ವೀಕರಿಸುತ್ತಿರುವ ಹಿನ್ನೆಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಸೋಮವಾರ (ಜೂ.1) ಸಭೆ ನಡೆಸಲಿದ್ದಾರೆ. ಡಿಪಿಎಆರ್ ಕಾರ್ಯದರ್ಶಿಯಾಗಿರುವ ಜಗದೀಶ್ ಅವರು ಲೋಕಭವನದಲ್ಲಿ ಅಧಿಕಾರಿಗಳ ಸಭೆ ನಡೆಸಲಿದ್ದು, ಪ್ರಮಾಣವಚನ ಕಾರ್ಯಕ್ರಮದ ಸಿದ್ಧತೆಯನ್ನು ಪರಿಶೀಲಿಸಲಿದ್ದಾರೆ. ಪ್ರಮಾಣ ವಚನ ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರ ವಾಹನ ನಿಲುಗಡೆ ವ್ಯವಸ್ಥೆ, ಕಾರ್ಯಕರ್ತರಿಗೆ ಪ್ರವೇಶ ಪಾಸ್ ವಿತರಣೆ, ಪ್ರಮಾಣ ವಚನ ಸ್ವೀಕರಿಸಲಿರುವ ಕುಟುಂಬಸ್ಥರಿಗೆ ಹಾಗೂ ಗಣ್ಯರಿಗೆ ಆಸನ ವ್ಯವಸ್ಥೆ ಬಗ್ಗೆ ಪರಿಶೀಲಿಸಿದ್ದಾರೆ.

ಚನ್ನರಾಯಪಟ್ಟಣದಲ್ಲಿ ಹಾಸನ-ಸೊಲ್ಲಾಪುರ ಎಕ್ಸ್‌ಪ್ರೆಸ್ ರೈಲು ನಿಲುಗಡೆ

ಅಭಿವೃದ್ಧಿಗಾಗಿ ಮೋದಿ ಶ್ರಮ: ಸೋಮಣ್ಣ

ಚನ್ನರಾಯಪಟ್ಟಣ: ಪ್ರತಿಯೊಂದು ಹಳ್ಳಿಗಳು ಅಭಿವೃದ್ಧಿಯಾದಾಗ ಮಾತ್ರ ದೇಶದ ಪ್ರಗತಿ ಸಾಧ್ಯ ಎಂಬ ಉದ್ದೇಶದೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.



ಚನ್ನರಾಯಪಟ್ಟಣ ರೈಲ್ವೆ ನಿಲ್ದಾಣದಲ್ಲಿ ಹಾಸನ-ಸೊಲ್ಲಾಪುರ ಎಕ್ಸ್‌ಪ್ರೆಸ್ ರೈಲಿನ ನಿಲುಗಡೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಭಾಗದ ಪ್ರಯಾಣಿಕರು, ಸ್ಥಳೀಯ ಶಾಸಕರು ಹಾಗೂ ಸಂಸದರ ಬಹುದಿನಗಳ ಬೇಡಿಕೆಯನ್ನು ಈಡೇರಿಸಿ, ಇಂದಿನಿಂದ ಚನ್ನರಾಯಪಟ್ಟಣ ನಿಲ್ದಾಣದಲ್ಲಿಈರೈಲಿನನಿಲುಗಡೆಗೆಅವಕಾಶಕಲ್ಪಿಸಲಾಗಿದೆ. ಈ ಮೊದಲು 17 ಭೋಗಿಗಳನ್ನು ಹೊಂದಿದ್ದ ಈ ರೈಲಿಗೆ ಈಗ 21 ಭೋಗಿಗಳನ್ನು ಜೋಡಿಸಲಾಗಿದ್ದು, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ನಿಲ್ದಾಣದಲ್ಲಿ ಹೆಚ್ಚುವರಿ ಪ್ಲಾಟ್‌ಫಾರ್ಮ್ ನಿರ್ಮಾಣ ಕಾರ್ಯ ವಿಳಂಬವಾಗಿದ್ದರಿಂದ ನಿಲುಗಡೆ ತಡವಾಗಿತ್ತು, ಈಗ ಎಲ್ಲಾ ತಾಂತ್ರಿಕ ಕೆಲಸಗಳು ಮುಗಿದಿವೆ. ಮುಂದಿನ ದಿನಗಳಲ್ಲಿ ರೈತರ ಅನುಕೂಲಕ್ಕಾಗಿ ಇನ್ನು ಹತ್ತಾರು ರೈಲುಗಳನ್ನು ಬಿಡುವ ಯೋಜನೆಯಿದ್ದು, ಹಾಸನ-ತಿರುಪತಿ ಹಾಗೂ ಬೆಂಗಳೂರು-ಮುಂಬೈ ನಡುವೆ ಪ್ರತ್ಯೇಕ ರೈಲು ಸಂಚಾರ ಆರಂಭಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಐದು ತಿಂಗಳ ಹಿಂದೆಯೇ ಈ ರೈಲು ನಿಲುಗಡೆಗೆ ಸರ್ಕಾರ ಆದೇಶ ನೀಡಿದ್ದರೂ ತಾಂತ್ರಿಕ ದೋಷಗಳಿಂದ ಜಾರಿಯಾಗಿರಲಿಲ್ಲ. ಈ ವಿಷಯ ಗಮನಕ್ಕೆ ಬಂದ ತಕ್ಷಣ ರೈಲ್ವೆ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಇಂದಿನಿಂದ ನಿಲುಗಡೆಗೆ ಅನುಕೂಲ ಮಾಡಿಕೊಡಲಾಗಿದೆ.
■ **ಶ್ರೇಯಸ್ ಪಟೇಲ್,** ಸಂಸದ

ಈಜಲು ತೆರಳಿದ್ದ ಐವರು ನೀರು ಪಾಲು

ರಾಯಚೂರು: ಮಂತ್ರಾಲಯದ ತುಂಗಭದ್ರಾ ನದಿಯಲ್ಲಿ ಈಜಲು ತೆರಳಿದ್ದ ಐವರು ಮುಳುಗಿ ಮೃತಪಟ್ಟಿದ್ದಾರೆ. ನೀರು ಪಾಲಾದವರನ್ನು ಹೈದ್ರಾಬಾದ್ ಮೂಲದ ಯುವನ ಚಂದ್ರ(5), ಸತೀಶ್ (35) ಮಂತ್ರಾಲಯ ಗ್ರಾಮದ ರಾಘವೇಂದ್ರ (25), ಧನುಷ್ (23), ಉರವಕೊಂಡದ ಸಂಧ್ಯಾ(22) ಎಂದು ಗುರುತಿಸಲಾಗಿದೆ.

ಮೃತರು ಭಾನುವಾರ ಮಂತ್ರಾಲಯದಲ್ಲಿನ ಸಂಬಂಧಿಕರ ಮನೆಯಲ್ಲಿ ಏರ್ಪಡಿಸಿದ್ದ ಸತ್ಯನಾರಾಯಣ ಪೂಜೆಗೆ ಆಗಮಿಸಿದ್ದರು. ಪೂಜೆಯ ಬಳಿಕ ನದಿಯಲ್ಲಿ ಈಜಲು ತೆರಳಿದ್ದರು. ಆದರೆ, ನದಿಯಲ್ಲಿನ ನೀರಿನ ಆಳ ತಿಳಿಯದೆ ನದಿಯಲ್ಲಿಸ್ವಲ್ಪ ದೂರ ತೆರಳಿದ್ದಾರೆ. ನೀರಿನ ಸೆಳವಿಗೆ ಸಿಲುಕಿ ಈ ಐವರು ನೀರು ಪಾಲಾಗಿದ್ದಾರೆ. ಇವರೊಂದಿಗೆ ತೆರಳಿದ್ದ ಯುವತಿ ಅಪರ್ಣಾ ಸಾವಿನ ದವಡೆಯಿಂದ ಪಾರಾಗಿದ್ದಾರೆ. ಧನುಷ್ ಮೃತದೇಹ ಪತ್ತೆಯಾಗಿದ್ದು ಉಳಿದವರ ಶವಕ್ಕಾಗಿ ಶೋಧಕಾರ್ಯ ನಡೆಯುತ್ತಿದೆ. ಪೊಲೀಸರು ಸ್ಥಳೀಯ ಮೀನುಗಾರರ ಸಹಾಯದೊಂದಿಗೆ ಶವಗಳ ಶೋಧ ಕಾರ್ಯ ನಡೆಸಿದ್ದಾರೆ. ಎಮ್ಮಿಗನೂರು ಡಿವೈಎಸ್‌ಪಿ ಭಾರ್ಗವಿ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದರು.

ಇಂದು ಶಾಲೆ ಆರಂಭ

ಬೆಂಗಳೂರು: ಸುಮಾರು ಎರಡು ತಿಂಗಳಿನಿಂದ ಬೇಸಿಗೆ ರಜೆ ಹಿನ್ನೆಲೆಯಲ್ಲಿ ಮೌನವಾಗಿದ್ದ ರಾಜ್ಯದ ಶಾಲೆಗಳು, ಇಂದಿನಿಂದ ಮಕ್ಕಳ ಕಲರವ ಆರಂಭವಾಗಲಿದ್ದು, ಶಾಲಾ ಅಂಗಳ ಕಳೆಕಟ್ಟಲಿದೆ.

ಶಿಕ್ಷಣ ಇಲಾಖೆಯು ಹೊಸ ಶೈಕ್ಷಣಿಕ ವರ್ಷದ ಅಂದರೆ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳನ್ನು ಜೂನ್ 1 ರಿಂದ ಪ್ರಾರಂಭಿಸಲು ಆದೇಶಿಸಿದ್ದು, ಮೇ 29 ರಂದು ಶಾಲಾ ಶಿಕ್ಷಕರು ಪೂರ್ವ ಸಿದ್ಧತೆ ಕೈಗೊಂಡಿದ್ದಾರೆ. ಇಂದಿನಿಂದ ಮಕ್ಕಳು ಆಗಮಿಸಲಿದ್ದು, ಪ್ರಾರಂಭೋ ತ್ಸವದ ಮೂಲಕ ವಿದ್ಯಾರ್ಥಿಗಳಿಗೆ ಸ್ವಾಗತ ನೀಡಲಾಗುತ್ತಿದೆ.

ಮೇ 29 ರಂದು ಪೂರ್ವ ಸಿದ್ಧತೆಗೊಸ್ಕರ ನಿಗದಿ ಮಾಡಲಾಗಿತ್ತು. ಶಾಲಾ ಆವರಣ, ಕೊಠಡಿ ಹಾಗೂ ಶೌಚಾಲಯಗಳ ಸ್ವಚ್ಛತೆ, ಕುಡಿಯುವ ನೀರಿನ ಟ್ಯಾಂಕ್ ಸ್ವಚ್ಛತೆ, ಅಡುಗೆ ಮನೆ, ಪಾತ್ರೆ ಸ್ವಚ್ಛಗೊಳಿಸುವುದು, ಶಾಲಾ ವೇಳಾಪಟ್ಟಿ ಸಿದ್ಧತೆ, ಎಸ್‌ಡಿಪಿ ಕ್ರಿಯಾಯೋಜನೆ, ಶಿಕ್ಷಕರಿಗೆ ವಿಷಯಗಳ ಹಂಚಿಕೆ ಸೇರಿದಂತೆ ವಿದ್ಯಾರ್ಥಿಗಳು ಕಡ್ಡಾಯವಾಗಿ ಹಾಜರು ಇರುವಂತೆ ನೋಡಿಕೊಳ್ಳಲು ಇಲಾಖೆಯು ಆಯಾ ಶಾಲೆಯ ಮುಖ್ಯಶಿಕ್ಷಕರಿಗೆ ಸೂಚಿಸಿತ್ತು. ಅದರಂತೆ ಶಾಲಾ ಶಿಕ್ಷಕರು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು ಶಾಲೆಗಳನ್ನು ಆರಂಭಿಸಿದ್ದಾರೆ. ಜೂ. 1ರಂದು ಉತ್ಸವದ ರೀತಿಯಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಇಲಾಖೆ ಸೂಚಿಸಿದ್ದು, ಶಾಲೆಗೆ ತಳಿರು-ತೋರಣ ಕಟ್ಟಿ ಡೋಲು, ನಗಾರಿ ಮೂಲಕ ಮಕ್ಕಳನ್ನು ಕರೆ ತಂದು ಗುಬಾಬಿ ಹೂ ನೀಡಿ ಸ್ವಾಗತಿಸಲು ಸಿದ್ಧವಾಗಿದೆ. ಅಲ್ಲದೆ ಬಿಸಿಯೂಟ ಸಿಹಿಯೊಂದಿಗೆ ಪ್ರಾರಂಭಿಸುವುದು, ಶಾಲಾ ಸಮವಸ್ತ್ರ ಪುಸ್ತಕಗಳ ಹಂಚಿಕೆಯೂ ನಡೆಯಲಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ಸುರಕ್ಷತೆಗೆ ಆದ್ಯತೆ

ಮಳೆಗಾಲದ ಹಿನ್ನೆಲೆಯಲ್ಲಿ ಶಾಲಾ ಕೊಠಡಿಗಳ ಸುರಕ್ಷತೆಗೆ ಆದ್ಯತೆ ನೀಡಲು ಶಿಕ್ಷಕರಿಗೆ ಸೂಚಿಸಿರುವ ಶಿಕ್ಷಣ ಇಲಾಖೆಯು, ಲಭ್ಯ ಇರುವ ಅನುದಾನ ಬಳಸಿಕೊಂಡು ಶಾಲಾ ಕೊಠಡಿಗಳ ದುರಸ್ತಿಗೆ ತಿಳಿಸಿದೆ. ಯಾವುದೇ ಕಾರಣಕ್ಕೂ ಅಸುರಕ್ಷಿತ ಕೊಠಡಿಗಳಲ್ಲಿ ಮಕ್ಕಳನ್ನು ಕೂರಿಸುವಂತಿಲ್ಲ. ವಿದ್ಯುತ್ ಶಾರ್ಟ್ ಸರ್ಕ್ಯೂಟ್ ತೊಂದರೆ ಇದ್ದಲ್ಲಿ ದೂರು ನೀಡುವುದು ಸೇರಿದಂತೆ ಮಕ್ಕಳ ವಿಷಯದಲ್ಲಿ ಅಲಕ್ಷ್ಯ ತೋರಿದಲ್ಲಿ ಅನಾಹುತ ಸಂಭವಿಸಿದರೆ ಶಿಕ್ಷಕರನ್ನೇ ಹೊಣೆಗಾರಿಕೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.



ರಾಜ್ಯಮಟ್ಟದ ಕಾರ್ಯಕ್ರಮ ರದ್ದು

ಶಾಲಾ ಪ್ರಾರಂಭೋತ್ಸವದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶಿವಮೊಗ್ಗದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್(ಕೆಪಿಎಸ್) ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಬೇಕಾಗಿತ್ತು. ಅಲ್ಲದೆ ಮುಖ್ಯಮಂತ್ರಿಗಳು ಸ್ವತಃ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಗೆ ಸ್ವಾಗತಿಸಿ, ರಾಜ್ಯಾದ್ಯಂತ ಎಲ್ಲಾ ಶಾಲೆಗಳಲ್ಲಿ ಏಕಕಾಲದಲ್ಲಿ ನಡೆಯುವ ಮಹಾ ಪೋಷಕ-ಶಿಕ್ಷಕರ ಸಭೆಯನ್ನು ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗೆ ನೇರ ಸಂವಾದ ನಡೆಸಲು ಸಿದ್ಧತೆ ನಡೆಸಲಾಗಿತ್ತು. ಆದರೆ ಸದ್ಯ ರಾಜ್ಯದಲ್ಲಿ ನಡೆದ ರಾಜಕೀಯ ಬೆಳವಣಿಗೆಗಳಿಂದಾಗಿ ರಾಜ್ಯಮಟ್ಟದ ಪ್ರಾರಂಭೋತ್ಸವ ಮತ್ತು ಕೆಪಿಎಸ್ ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ಕಾರ್ಯಕ್ರಮವನ್ನು ರದ್ದು ಪಡಿಸಲಾಗಿದೆ. ಒಟ್ಟಾರೆ ಎರಡು ತಿಂಗಳ ರಜೆಯಲ್ಲಿ ಮೋಜು, ಮಸ್ತಿಯಲ್ಲಿ ಕಾಲ ಕಳೆದ ಚಿಣ್ಣರು ಈಗ ಶಾಲೆಯತ್ತ ಮುಖ ಮಾಡಿದ್ದು,ಶಾಲೆಗಳಲ್ಲಿ ಚಟುವಟಿಕೆಗಳು ಆರಂಭವಾಗಲಿದೆ.

ಸಫಲತೆಗಾಗಿ ಸಂಕಲ್ಪ

ಮೇಘಾ ಪ್ರಮೋದ್

ಕೇರಳದ ಎರ್ನಾಕುಲಂ ಜಿಲ್ಲೆಯ ಪುಥೆನ್‌ಕ್ರಾವು ಪಟ್ಟಣದಲ್ಲಿ ವಾಸಿಸುವ ಶಿಖಾ ಸುರೇಂದ್ರನ್‌ರ ಪುಟ್ಟ-ಪುಟ್ಟ ಕಣ್ಣುಗಳಲ್ಲಿ ದೊಡ್ಡ-ದೊಡ್ಡ ಕನಸುಗಳಿತ್ತು. ತಂದೆ ಹಾಸಿಗೆ ಹಿಡಿದಿದ್ದರು ಹಾಗು ತಾಯಿ ಅಸಹಾಯಕಳಾಗಿದ್ದಳು. ಹೇಗೊ ಸಂಬಂಧಿಕರ ಸಹಾಯದಿಂದ ಎಂಜಿನಿಯರಿಂಗ್ ಪದವಿಯನ್ನು ಮುಗಿಸಿದ ಈ ಪ್ರತಿಭಾಶಾಲಿ ಹುಡುಗಿ ಐಎಎಸ್ ಮುಗಿಸಿ ದೇಶದ ಸೇವೆ ಮಾಡಲು ಬಯಸಿದ್ದಳು, ಆದರೆ ಹಣವಿಲ್ಲದೆ ದೆಹಲಿಯಲ್ಲಿದ್ದು ಕೋಚಿಂಗ್ ಪಡೆಯುವುದು ಹೇಗೆ ಸಾಧ್ಯವಾದೀತು. ಆಗ ಶಿಖಾ ಸಂಕಲ್ಪದ ಸಂಪರ್ಕಕ್ಕೆ ಬಂದರು. ರಾಷ್ಟ್ರೀಯಸ್ವಯಂಸೇವಕಸಂಘದ ಪ್ರಚಾರಕರಾದ ಸಂತೋಷ್ ತನೇಜಾಜೀಯವರ ಪ್ರಯತ್ನದಿಂದ1986ರಲ್ಲಿ ಪ್ರಾರಂಭವಾದ ಈ ಸಂಸ್ಥೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದೆಹಲಿಯಲ್ಲಿ ಸಿವಿಲ್ ಸರ್ವಿಸ್ ಗಾಗಿ ತರಬೇತಿಯನ್ನು ನೀಡುತ್ತಿದೆ. ಇಲ್ಲಿ ಅತಿ ಕಡಿಮೆ ಮೊತ್ತದ ಶುಲ್ಕವನ್ನು ನೀಡಿ ತರಬೇತಿಯ ಜೊತೆಗೆ ಹಾಸ್ಟೆಲ್ ಸೌಲಭ್ಯವನ್ನೂ ಪಡೆದ ಶಿಖಾ ದಾಖಲೆ ನಿರ್ಮಿಸಿದ್ದಳು.2017-18ರ ಬ್ಯಾಚಿನ ಶಿಖಾ ಸುರೇಂದ್ರನ್ ಐಎಎಸ್ ನಲ್ಲಿ ದೇಶದಲ್ಲೇ16ನೇ ಸ್ಥಾನವನ್ನು ಪಡೆದರು.



ಸೇವಾಗಾಥ
ಕಥೆ-8

ರಾಜಸ್ಥಾನದ ಅಲ್ವಾರ್ ಜಿಲ್ಲೆಯ ರೋನಿಜಾಜಾಟ್ ಹಳ್ಳಿಯ ರೈತ ಕುಟುಂಬದ ರಾಜೀವ್ ಕುಮಾರರದ್ದು ಇದೇ ರೀತಿಯ ಕಥೆ. ಅವರ ಕುಟುಂಬದಲ್ಲಿ ಯಾರೂ ಶಿಕ್ಷಿತರಿರಲಿಲ್ಲ. ಇಂದು ಇವರು ಸಿವಿಲ್ ಸೇವೆಗೆ ಆಯ್ಕೆಯಾಗಿ ಮಸ್ಸೂರಿಯಲ್ಲಿ ಐಎಎಸ್ ತರಬೇತಿ ಪಡೆಯುತ್ತಿದ್ದಾರೆ. ಹಾಗೆಯೆ ಅವರ ಈ ಯಶಸ್ಸಿಗೆ ಸಂಕಲ್ಪ ಪರಿವಾರವೆ ಕಾರಣ ಎನ್ನುತ್ತಾರೆ. ಹಣದ ಸಮಸ್ಯೆ ಯಾವ ವಿದ್ಯಾರ್ಥಿಗಳ ಪ್ರತಿಭೆಗೆ ತೊಡಕಾಗಿದೆಯೊ ಅಂತಹ 20ವಿದ್ಯಾರ್ಥಿಗಳಿಗೆ ಸಂಕಲ್ಪ ಪರಿವಾರವು ಪ್ರತಿ ವರ್ಷ ಉಚಿತ ತರಬೇತಿಯನ್ನು ನೀಡುತ್ತಿದೆ. ವಿಶೇಷವಾಗಿ ಜನಜಾತಿಸಮುದಾಯ ಹಾಗು ಈಶಾನ್ಯ ಭಾಗದ ಬಡ ವಿದ್ಯಾರ್ಥಿಗಳಿಗೆ ಸಂಕಲ್ಪವು ಪಾಲಕರ ಹಾಗು ಗುರುವಿನ ಪಾತ್ರವನ್ನು ನಿರ್ವಹಿಸುವ ಕುಟುಂಬದಂತಿದೆ.

ಬೆಳಗ್ಗಿನ ಯೋಗಾಭ್ಯಾಸ, ಸಂಜೆಯ ಶಾಖೆಯಿಂದ ಹಿಡಿದು ರಾತ್ರಿಯ ಪ್ರಾರ್ಥನೆಯ ತನಕ ನಿಯಮಬದ್ಧವಾದ ಹಾಗೂ ಸಂಸ್ಕಾರಗಳಿಂದ ಕೂಡಿದ ದಿನಚರಿಯು ಸಂಕಲ್ಪವನ್ನು ಬೇರೆ ತರಬೇತಿ ಕೇಂದ್ರಗಳಿಗಿಂತ ಭಿನ್ನವಾಗಿಸುತ್ತದೆ. ವಿಶೇಷವಾದ ಉಪನ್ಯಾಸ ಸರಣಿಗಳಲ್ಲಿ ಕಾಶ್ಮೀರಿ ವಿದ್ಯಾರ್ಥಿಗಳನ್ನು ಶಿಕ್ಷಣದೊಂದಿಗೆ ಜೋಡಿಸಿದಮೇಜರ್ ಜನರಲ್ ಪಿ.ಕೆ. ಸಹಗಲ್ ಹಾಗು ಶ್ರೀ ರವಿಶಂಕರ್ ಗುರೂಜಿ ಅವರಂತಹ ರಾಷ್ಟ್ರೀಯವಾದಿಗಳ ಅನುಭವ ವಿದ್ಯಾರ್ಥಿಗಳಲ್ಲಿ ದೇಶಕ್ಕಾಗಿ ಜವಾಬ್ದಾರಿಯುತರಾಗಿರಲು ಪ್ರೇರೇಪಿಸುತ್ತದೆ. ದೇಶಕ್ಕೆ ರಾಷ್ಟ್ರೀಯವಾದಿ ಆಡಳಿತಗಾರರನ್ನು ನೀಡುವ ಉದ್ದೇಶದಿಂದ 1986ರಲ್ಲಿ ಸಂಕಲ್ಪವನ್ನು ಸ್ಥಾಪಿಸಲಾಯಿತು ಎಂದು ಸಂಸ್ಥೆಯ ಸಂಸ್ಥಾಪಕರಾದ ಸಂತೋಷ್ ಜೀಯವರು ಹೇಳುತ್ತಾರೆ.2015ರಲ್ಲಿ ಸಿವಿಲ್ ಸೇವೆಯಲ್ಲಿ ಯಶಸ್ವಿಯಾದ ಒಟ್ಟು 1256 ವಿದ್ಯಾರ್ಥಿಗಳಲ್ಲಿ 670 ವಿದ್ಯಾರ್ಥಿಗಳು ಸಂಕಲ್ಪದವರೆ ಆಗುವುದರೊಂದಿಗೆ ಸಂಕಲ್ಪವು ಸಫಲತೆಯ ಇತಿಹಾಸವನ್ನು ನಿರ್ಮಿಸಿದೆ.

ಸಂಸ್ಥೆಯು ಪ್ರತಿ ವರ್ಷ ಆಯೋಜಿಸುವ ಗುರು ಸಮ್ಮಾನ್ ಕಾರ್ಯಕ್ರಮದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳನ್ನೂ ಸಹ ಗುರುಗಳೊಂದಿಗೆ ಸನ್ಮಾನಿಸಲಾಗುತ್ತದೆ. ಇಷ್ಟೆ ಅಲ್ಲದೆ, ಪ್ರತಿ ವರ್ಷ ಜಿಂಜೋಲಿಯಲ್ಲಿ ನಡೆಯುವ 'ದಿಶಾಬೋಧ' ಶಿಬಿರದಲ್ಲಿ ದೇಶದ 200 ಪದವೀದರರನ್ನು ಸಿವಿಲ್ ಸೇವೆಯ ಪರೀಕ್ಷೆಯ ತಯಾರಿಯ ಮೊದಲು ಅವರಿಗೆ ಓದುವ ವಿಧಾನವನ್ನು ಕಲಿಸಿ ದೇಶಕ್ಕಾಗಿ ತಮ್ಮ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಡಲಾಗುತ್ತಿದೆ.ಈ ಶಿಬಿರದಲ್ಲಿ ಭಾಗವಹಿಸಿದವರಿಗೆಸಂಘದಸಹಸರಕಾರ್ಯವಾಹರಾದ ಮಾನ್ಯ ಶ್ರೀ ಕೃಷ್ಣಗೋಪಾಲ್ ಜಿ ಸೇರಿದಂತೆ ಸಂಘದ ಹಿರಿಯ ಅಧಿಕಾರಿಗಳ ಮಾರ್ಗದರ್ಶನವೂ ದೊರೆಯುತ್ತಿದೆ.

ಸಂಕಲ್ಪದ ವೈಶಿಷ್ಟ್ಯವೆಂದರೆ ಇಲ್ಲಿನ ಆತ್ಮೀಯ ವಾತಾವರಣದಲ್ಲಿ ದೆಹಲಿಯಂತಹ ಮಹಾನಗರದಲ್ಲಿ ಕೌಟುಂಬಿಕ ವಾತಾವರಣದ ಕೊರತೆ ಕಾಣಿಸುವುದಿಲ್ಲ ಎಂದು ಕೇರಳದ ಶಿಖಾ ಸುರೇಂದ್ರನ್ ಹೇಳುತ್ತಾರೆ. ಆಡಳಿತಾಧಿಕಾರಿಗಳನ್ನು ರಾಷ್ಟ್ರೀಯವಾದಿ ಚಿಂತನೆಗಳಿಗೆ ಜೋಡಿಸಲು ಪ್ರತಿ ವರ್ಷ 3 ದಿನಗಳ ಉಪನ್ಯಾಸ ಸರಣಿಗಳನ್ನು ಆಯೋಜಿಸಲಾಗುತ್ತದೆ. ಇದರಲ್ಲಿ ಸಮಾಜದ ಪ್ರಬುದ್ಧ ಚಿಂತಕರು ವಿವಿಧ ರಾಷ್ಟ್ರೀಯ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಾರೆ.

ಜಾರಕಿಹೊಳಿ ವಿರುದ್ಧ ನಕಲಿ ಪೋಸ್ಟ್: ದೂರು ದಾಖಲು

ಬೆಳಗಾವಿ: 'ಕರುನಾಡ ಕುರುಬಗೌಡ್ರು ಹಾಗೂ ಬಂಡಾಯ ಧ್ವನಿ' ಎಂಬ ನಕಲಿ ಫೇಸ್‌ಬುಕ್ ಖಾತೆಯಲ್ಲಿ ಸಚಿವ ಸತೀಶ ಜಾರಕಿಹೊಳಿ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಾಕಿದ ಘಟನೆಯ ಕುರಿತು, ವಾಲ್ಮೀಕಿ ಸಮಾಜದ ಮುಖಂಡ ರಾಜಶೇಖರ ತಳವಾರ ಬೆಳಗಾವಿ ಸೈಬರ್ ಕ್ರೈಂ ಠಾಣೆಗೆ ದೂರು ದಾಖಲಿಸಿದ್ದಾರೆ.



ಕರುನಾಡ ಕುರುಬಗೌಡ್ರು ಹಾಗೂ ಬಂಡಾಯ ಧ್ವನಿ ಎಂಬ ನಕಲಿ ಫೇಸ್‌ಬುಕ್ ಖಾತೆಯಲ್ಲಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸಿದ್ದರಾಮಯ್ಯ ಅವರ ವಿರುದ್ಧ 37 ಶಾಸಕರಿಂದ ಸಚಿವ ಸತೀಶ ಜಾರಕಿಹೊಳಿ ಅವರು ಸಹಿ ಸಂಗ್ರಹ ಮಾಡಲಾಗಿದೆ ಎಂಬ ಗಂಭೀರ ಆರೋಪ ಮಾಡಲಾಗಿದೆ. ಈ ಆರೋಪವನ್ನು ಸ್ವತಃ ಸಚಿವ ಸತೀಶ ಜಾರಕಿಹೊಳಿ ನಿರಾಕರಿಸಿದ್ದಾರೆ. ಹೀಗಾಗಿ ಸತೀಶ ಜಾರಕಿಹೊಳಿ ಅವರ ವಿರುದ್ಧ ಇಲ್ಲ ಸಲ್ಲದ ಅಪವಾದ ಹೊರಿಸಿ ಅವರ ಹೆಸರು ಹಾಳು ಮಾಡಲು ನಕಲಿ ಫೇಸ್‌ಬುಕ್ ಖಾತೆಯಲ್ಲಿ ಸಂಚು ರೂಪಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಸಾರ್ವಜನಿಕರಲ್ಲಿ ಶಾಂತಿ ಭಂಗ, ದೊಂಬಿ ಉಂಟು ಮಾಡುವಂತೆ ಮಾಡಲು ಸುಳ್ಳು ಸುದ್ದಿಗಳನ್ನು ಸಚಿವ ಸತೀಶ ಜಾರಕಿಹೊಳಿ ಅವರ ವಿರುದ್ಧ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿದೆ. ಶೀಘ್ರವೇ ಸುಳ್ಳು ಸುದ್ದಿ ಹರಡಿಸುವವರ ಹಾಗೂ ಈ 2 ನಕಲಿ ಫೇಸ್‌ಬುಕ್ ಖಾತೆ ಮಾಡಿ ಅವಹೇಳನಕಾರಿ ಪೋಸ್ಟ್ ಹಾಕಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಲಾಗಿದೆ.

ಗಡಿ ನಿಯಂತ್ರಣ ರೇಖೆ ಬಳಿ ಭಾರತೀಯ ಸೇನಾ ಕಾರ್ಯಾಚರಣೆ

ಪಿಓಕೆ ನುಸುಳುಕೋರ ಸೇರಿ ಮೂವರ ಬಂಧನ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಬಳಿ ಭಾರತೀಯ ಸೇನಾ ಪಡೆಗಳು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಅಕ್ರಮವಾಗಿ ಗಡಿ ದಾಟಲು ಯತ್ನಿಸುತ್ತಿದ್ದ ಮೂವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿವೆ. ಇದರ ಬೆನ್ನಲ್ಲೇ ಮತ್ತೊಂದು ಪ್ರತ್ಯೇಕ ಕಾರ್ಯಾಚರಣೆಯಲ್ಲಿ, ಪ್ರೀತಿಯ ಆಮಿಷಕ್ಕೆ ಒಳಗಾಗಿ ಗಡಿ ದಾಟಿ ಬಂದಿದ್ದ ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಯುವಕನೊಬ್ಬನನ್ನು ಸೇನೆ ವಶಕ್ಕೆ ಪಡೆದಿದೆ.

ಬಾರಾಮುಲ್ಲಾ ಜಿಲ್ಲೆಯ ಉರಿ ಸೆಕ್ಟರ್‌ನಲ್ಲಿ ಕೆಲವರು ದೇಶ ವಿರೋಧಿ ಕೃತ್ಯ ಎಸಗುವ ಉದ್ದೇಶದಿಂದ ಗಡಿ ದಾಟಲುಯತ್ನಿಸುತ್ತಿದ್ದಾರೆ ಎಂಬ ನಿಖರ ಮಾಹಿತಿ ಸೇನೆಗೆ ಲಭ್ಯವಾಗಿತ್ತು. ಶನಿವಾರ ರಾತ್ರಿ ಭಾರತೀಯ ಸೇನೆ ಮತ್ತು ಜಮ್ಮು-ಕಾಶ್ಮೀರ ಪೊಲೀಸರು ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಸೋಪೋರ್ ಮೂಲದ ಇಬ್ಬರು ಹಾಗೂ ಅವರಿಗೆ ಸಹಾಯ ಮಾಡುತ್ತಿದ್ದ ಗೈಡ್ (ಮಾರ್ಗದರ್ಶಿ) ಸೇರಿದಂತೆ ಮೂವರನ್ನು ಚಿನಾರ್ ವಾರಿಯರ್ಸ್ ಪಡೆಗಳು ಬಂಧಿಸಿವೆ. ಬಂಧಿತರನ್ನು ಆದಿಲ್ ಹುಸೇನ್, ಇಶ್ಫಾಕ್ ಲೋನ್ ಮತ್ತು ಜಾಫರ್ ಹಫೀಜ್ ಎಂದು ಗುರುತಿಸಲಾಗಿದ್ದು, ಸದ್ಯ ಇವರನ್ನು ತೀವ್ರ



ವಿಚಾರಣೆಗೆ ಒಳಪಡಿಸಲಾಗಿದೆ.

ಇದೇ ಉರಿ ವಲಯದಲ್ಲಿ ನಡೆದ ಮತ್ತೊಂದು ಹೈಡ್ರಾಮಾ ಘಟನೆಯಲ್ಲಿ, ಭಾರತದ ಗಡಿಯೊಳಗೆ ಅಕ್ರಮವಾಗಿ ನುಸುಳುತ್ತಿದ್ದ ಪಾಕ್ ಆಕ್ರಮಿತ ಕಾಶ್ಮೀರದ ಯುವಕನನ್ನು ಸೇನೆ ಜಾಣ್ಮೆಯಿಂದ ಬಂಧಿಸಿದೆ. ಆತನ ಬಳಿ ಇದ್ದ ಗುರುತಿನ ಚೀಟಿ ಆಧರಿಸಿ ಮುಜಾಫರಾಬಾದ್ ಮೂಲದ 22 ವರ್ಷದ


ಸಾಮಾಜಿಕ ಜಾಲತಾಣ ಪ್ರೇಮಿ ಗಡಿ ದಾಟಿದ ಸಾಹಸ

ಗಡಿ ದಾಟಿ ಬಂದ ಯುವಕನ ಕಥೆ ಕೇಳಿ ಅಧಿಕಾರಿಗಳೇ ದಂಗು

ಜೀಶನ್ ಮೀರ್ ಎಂದು ಗುರುತಿಸಲಾಗಿದೆ.

ಪ್ರಾಥಮಿಕ ವಿಚಾರಣೆ ವೇಳೆ ಈತ ನೀಡಿದ ಹೇಳಿಕೆ ಕೇಳಿ ಭದ್ರತಾ ಸಿಬ್ಬಂದಿಯೇ ಆಶ್ಚರ್ಯಚಕಿತರಾಗಿದ್ದಾರೆ. ಸಾಮಾಜಿಕ ಜಾಲತಾಣದ ಮೂಲಕ ಭಾರತದ ಕಡೆಯ ಹುಡುಗಿಯೊಬ್ಬಳ ಪರಿಚಯವಾಗಿದ್ದು, ಅವಳನ್ನು ಭೇಟಿಯಾಗಲು ತಾನು ಗಡಿ ದಾಟಿ ಬಂದಿರುವುದಾಗಿ ಆತ ಒಪ್ಪಿಕೊಂಡಿದ್ದಾನೆ. ಗಡಿಯಲ್ಲಿ ಜಾಗರೂಕರಾಗಿದ್ದ ಚಿನಾರ್ ವಾರಿಯರ್ಸ್ ಯುವಕನ ಮೇಲೆ ಗುಂಡು ಹಾರಿಸದೆ, ಅತ್ಯಂತ ಸಂಯಮದಿಂದ ಆತನನ್ನು ಜೀವಂತವಾಗಿ ಸೆರೆಹಿಡಿದು ಮುಂದಿನ ಕಾನೂನು ಕ್ರಮಗಳಿಗಾಗಿ ಜಮ್ಮು-ಕಾಶ್ಮೀರ ಪೊಲೀಸರಿಗೆ ಒಪ್ಪಿಸಿದ್ದಾರೆ. ಗಡಿಯಲ್ಲಿ ಉಭಯ ಘಟನೆಗಳಿಂದಾಗಿ ಭದ್ರತೆಯನ್ನು ಮತ್ತಷ್ಟು ಕಠಿಣಗೊಳಿಸಲಾಗಿದೆ.

ರಾಮ ಬಾಣ



ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನಮ್ಮ ಸಮಾಜ ಕಟ್ಟುವಲ್ಲಿ ಮಹತ್ತರ ಪಾತ್ರ ವಹಿಸುವ ಪತ್ರಿಕೆಯವರ ಪೆನ್ನು ಸದಾ ಕಾಲ ಸತ್ಯದ ಕಡೆಗಿರಲಿ - ಯು.ಟಿ.ಖಾದರ್
- ಸತ್ಯ ಹೇಳಬಹುದಿತ್ತು, ಆದರೆ ಪೆನ್ನಿನ ಹಿಂದೆ ಗನ್ನು ಇರುವ ಭಯ ಅನೇಕರಿಗೆ!

ದಿನ ಭವಿಷ್ಯ

ಮೇಷ
ವೃತ್ತಿಯಲ್ಲಿ ಒತ್ತಡ. ಯಾವುದೇ ಕೆಲಸ ಬಾಕಿ ಇಡಬೇಡಿ. ಸಂಗಾತಿ ಜತೆಗಿನ ಸಂಬಂಧ ಸುಧಾರಣೆ. ಭಿನ್ನಮತ ನಿವಾರಣೆ.

ವೃಷಭ
ಆಪ್ತ ಸಂಬಂಧ ಇನ್ನೊಂದು ಸ್ತರ ಮೇಲೇರಲಿದೆ. ಏಕಾಂಗಿಗಳಿಗೆ ವೈವಾಹಿಕ ಅವಕಾಶ ಉಜ್ವಲ. ಆರ್ಥಿಕ ಪರಿಸ್ಥಿತಿ ಉತ್ತಮ, ಆದಾಯ ಏರಿಕೆ.

ಮಿಥುನ
ವೃತ್ತಿಯಲ್ಲಿ ಸವಾಲು. ತಪ್ಪು ಘಟಿಸದಂತೆ ಎಚ್ಚರ ವಹಿಸಿ. ಹೊಸ ವ್ಯವಹಾರದಲ್ಲಿ ಹಣ ಹೂಡುವುದು ಸಮಂಜಸವೆನಿಸದು. ಕೌಟುಂಬಿಕ ಅಸಹಕಾರ.

ಕಟಕ
ಎಲ್ಲ ವಿಧಗಳಲ್ಲೂ ಇಂದು ತೃಪ್ತಿಕರ ದಿನ. ಧನಪ್ರಾಪ್ತಿ. ಕಾರ್ಯ ಸಫಲ. ನಿಮ್ಮ ಇಷ್ಟವೊಂದು ನೆರವೇರುವುದು. ಬಂಧು ಸಹಕಾರ.

ಸಿಂಹ
ಏರಿಳಿತಗಳ ದಿನ. ದೊಡ್ಡ ಹೊಣೆ ಬೀಳಲಿದೆ. ಅದನ್ನು ಪೂರೈಸಲು ಕಷ್ಟ ಪಡುವಿರಿ. ಕಳಕೊಂಡ ಪ್ರೀತಿ ಪಡೆಯಲು ಪ್ರಾಮಾಣಿಕ ಪ್ರಯತ್ನ ನಡೆಸಿರಿ.

ಕನ್ಯಾ
ಸವಾಲಿನ ದಿನ. ಹಣದ ವ್ಯವಹಾರದಲ್ಲಿ ತೊಡಕು ಕಾಣಿಸೀತು. ಹದ ತಪ್ಪಿದ ಮಾತು ಉದ್ವಿಗ್ನತೆ ಉಂಟು ಮಾಡಬಹುದು. ಸಂಯಮ ವಹಿಸಿರಿ.

ತುಲಾ
ವೃತ್ತಿಕ್ಷೇತ್ರದಲ್ಲಿ ಉಂಟಾಗಿದ್ದ ಉದ್ವಿಗ್ನತೆ ನಿವಾರಣೆ. ಸೌಹಾರ್ದ ಪರಿಸ್ಥಿತಿ ನೆಲೆಸಲಿದೆ. ಧನಹಾನಿ ಸಂಭವ, ಎಚ್ಚರದಿಂದ ವ್ಯವಹರಿಸಿ.

ವೃಶ್ಚಿಕ
ದೈನಂದಿನ ಒತ್ತಡದಿಂದ ಮುಕ್ತಿ. ನಿಮ್ಮ ಇಷ್ಟದ ಹವ್ಯಾಸದಲ್ಲಿ ಕಾಲ ಕಳೆಯುವ ಅವಕಾಶ. ಒಟ್ಟಿನಲ್ಲಿ ಇಂದು ಸಂತೋಷದ ಮನಸ್ಥಿತಿ

ಧನು
ಅದೃಷ್ಟ ನಿಮಗೆ ಕೈಕೊಡಬಹುದು. ಹಾಗಾಗಿ ಕಾರ್ಯದಲ್ಲಿ ಸಫಲತೆ ದೊರಕದು. ಪ್ರೀತಿಯ ವಿಷಯದಲ್ಲಿ ಭಾವನಾತ್ಮಕ ಏರುಪೇರು.

ಮಕರ
ಇಂದು ಹೆಚ್ಚು ಭಾವುಕ ಪ್ರಸಂಗಕ್ಕೆ ಸಾಕ್ಷಿಯಾಗುವಿರಿ. ಆರ್ಥಿಕ ಪ್ರಗತಿಗೆ ಅಡ್ಡಿ ಬಂದೀತು. ವೃತ್ತಿಯಲ್ಲಿ ಆಂಶಿಕ ಯಶಸ್ಸು ಪಡೆಯುವಿರಿ

ಕುಂಭ
ಬಹಳಷ್ಟು ಕೆಲಸ ಬಾಕಿಯಿದೆ. ಅದನ್ನು ಪೂರೈಸಬೇಕಾದ ಒತ್ತಡ. ಪ್ರೀತಿಯ ವಿಚಾರದಲ್ಲಿ ದುಡುಕಿನ ನಿರ್ಧಾರ ತಾಳಬೇಡಿ.

ಮೀನ
ವೃತ್ತಿಯಲ್ಲೂ, ಖಾಸಗಿ ಬದುಕಲ್ಲೂ ಕೆಲ ಸಮಸ್ಯೆ ಎದುರಿಸುವಿರಿ. ಅಭದ್ರತೆಯ ಭಾವ ಕಾಡಲಿದೆ. ಸಂಗಾತಿ ಜತೆಗೆ ಮನಸ್ತಾಪ ಸಂಭವ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 4,9,2,8

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್

ಜೂ.3ಕ್ಕೆ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ

ಬೆಂಗಳೂರು: ಜೂನ್ 3ರಂದು ಸಿಎಂ ಆಗಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಮುಗಿದ ಬಳಿಕ ರೇಸ್ ಕೋರ್ಸ್ ರಸ್ತೆ ಬಳಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ಕಾರ್ಯಕ್ರಮ ನಡೆಸಲು ಆಲೋಚಿಸಲಾಗಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ತಿಳಿಸಿದರು.

ರೇಸ್ ಕೋರ್ಸ್ ರಸ್ತೆ ಬಳಿ ಉದ್ದೇಶಿತ ಕಾಂಗ್ರೆಸ್ ಭವನ ನಿರ್ಮಾಣ ಜಾಗಕ್ಕೆ ಭಾನುವಾರ ಭೇಟಿ ನೀಡಿ, ಪರಿಶೀಲನೆ ನಡೆಸಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಇನ್ನಷ್ಟೇ ಸಮಯ ನಿಗದಿ ಮಾಡಬೇಕಿದೆ. ಈ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ರಾಹುಲ್ ಅವರಿಗೆ ಇನ್ನಷ್ಟೇ ನೀಡಲಾಗುವುದು. ರಾಮಲಿಂಗಾರೆಡ್ಡಿ ಅವರ ನೇತೃತ್ವದಲ್ಲಿ ಕಚೇರಿ ಶಂಕುಸ್ಥಾಪನೆ ನೆರವೇರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪಕ್ಷದ ಎಲ್ಲಾ ಬ್ಲಾಕ್ ಹಾಗೂ ಜಿಲ್ಲಾ ಅಧ್ಯಕ್ಷರು, ಶಾಸಕರು ಹಾಗೂ ಮಾಜಿ ಶಾಸಕರು, ಗ್ಯಾರಂಟಿ ಸಮಿತಿಗಳ ಅಧ್ಯಕ್ಷರು, ಪಕ್ಷದ ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು, ಸಂಸದರು, ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರಿಗೆ ಆಹ್ವಾನ ನೀಡಲಾಗುವುದು. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಅವಕಾಶ ಇರುವುದಿಲ್ಲ. ಕಾರ್ಯಕರ್ತರು ಕ್ಷಮಿಸಬೇಕು. ಜಾಗದ ಕೊರತೆ ಇರುವುದರಿಂದ ಆಹ್ವಾನಿತರಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು.

ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ನಮ್ಮ ಪಕ್ಷದ ಎಲ್ಲಾ ನಾಯಕರು ಹಾಗೂ ಪದಾಧಿಕಾರಿಗಳಿಗೆ ಆಹ್ವಾನ ನೀಡಲು ಆಗದ ಕಾರಣ, ಇಲ್ಲೇ ಎಲ್ಇಡಿ ಪರದೆಗಳಲ್ಲಿ ಆ ಕಾರ್ಯಕ್ರಮ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ನಮಗಾಗಿ ಹೋರಾಟ ಮಾಡಿ, ಶ್ರಮಿಸಿದ ನಾಯಕರಿಗೆ ನಾವು ಇಷ್ಟಾದರೂ ಅವಕಾಶ ಮಾಡಿಕೊಡಬೇಕು ಎಂದು ತಿಳಿಸಿದರು.



ಸಾರ್ವಜನಿಕರಿಗೆ ತೊಂದರೆಯಾಗದಂತೆ ಸರಳ ಸಮಾರಂಭ

ಬೆಂಗಳೂರಿನ ನಾಗರಿಕರಿಗೆ ತೊಂದರೆಯಾಗಬಾರದು, ಪ್ರಮಾಣ ವಚನ ಕಾರ್ಯಕ್ರಮಕ್ಕೆ ಹೊರಗಡೆಯಿಂದ ಹೆಚ್ಚಿನ ವಾಹನ ಆಗಮಿಸಿ ಸಂಚಾರ ದಟ್ಟಣೆ ಆಗಬಾರದು ಎಂಬ ಕಾರಣಕ್ಕೆ ವಿಧಾನಸೌಧದ ಮೆಟ್ಟಿಲುಗಳ ಬದಲು ಲೋಕಭವನದಲ್ಲಿ ಪ್ರಮಾಣ ವಚನ ಕಾರ್ಯಕ್ರಮ ಮಾಡಲಾಗುವುದು. ಈ ಕಾರ್ಯಕ್ರಮ ಸರಳವಾಗಿ ನಡೆಯುತ್ತಿರುವುದರಿಂದ ಹೆಚ್ಚಿನ ಜನ ಸೇರಲು ಆಗುವುದಿಲ್ಲ. ಹೀಗಾಗಿ ನಮ್ಮ ಕಾರ್ಯಕರ್ತರು ಕ್ಷಮಿಸಬೇಕು ಎಂದು ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು. ತಮ್ಮೊಂದಿಗೆ ಬೇರೆ ಸಚಿವರು ಪ್ರಮಾಣ ವಚನ ಸ್ವೀಕರಿಸುವ ಕುರಿತ ಪ್ರಶ್ನೆಗೆ, ಅದರ ಬಗ್ಗೆ ನನಗೆ ಗೊತ್ತಿಲ್ಲ. ಪಕ್ಷದ ಹೈಕಮಾಂಡ್ ನಿರ್ಧರಿಸಿದಂತೆ ಮಾಡುತ್ತೇವೆ. ಹಾಗಾಗಿ ಈ ಬಗ್ಗೆ ಯಾವುದೇ ಹೇಳಿಕೆ ನೀಡಲು ಬಯಸುವುದಿಲ್ಲ ಎಂದು ತಿಳಿಸಿದರು.

ನೂರು ಕಚೇರಿಗಳ ಶಂಕುಸ್ಥಾಪನೆ ಬಗ್ಗೆ ಕೇಳಿದಾಗ, ಗಾಂಧಿ ಭಾರತ ಮತ್ತು ಗಾಂಧೀಜಿಯವರ 100 ವರ್ಷಗಳ ನೆನಪಿನ ಅಂಗವಾಗಿ ನಾವು 100 ಕಚೇರಿಗಳನ್ನು ಸ್ಥಾಪಿಸಲು ನಿರ್ಧರಿಸಿದ್ದೆವು. ಈಗ ಅವುಗಳನ್ನು ಸಿದ್ಧಪಡಿಸುತ್ತಿದ್ದೇವೆ. ಅವುಗಳಿಗೆ ಮುಂದಿನ ದಿನಗಳಲ್ಲಿ ಭೂಮಿ ಪೂಜೆ ಮಾಡಲಾಗುವುದು. ಈಗ ರೇಸ್ ಕೋರ್ಸ್ ರಸ್ತೆಯ ಕಚೇರಿಗೆ ಭೂಮಿ ಪೂಜೆ ಮಾಡಲು ಅನುಮತಿ ಕೇಳುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಸ್ಪೀಕರ್ ಸ್ಥಾನಕ್ಕೆ ಶಾಸಕರ ಹಿಂದೇಟು

ಬೆಂಗಳೂರು: ಒಂದೆಡೆ ಸಚಿವ ಸ್ಥಾನಕ್ಕಾಗಿ ಹಿರಿಯ ಮತ್ತು ಕಿರಿಯ ಶಾಸಕರಿಂದ ಇನ್ನಿಲ್ಲದ ಲಾಬಿ ನಡೆಯುತ್ತಿದ್ದರೆ, ಮತ್ತೊಂದೆಡೆ ಅದಕ್ಕೆ ವ್ಯತಿರಿಕ್ತವಾಗಿ ವಿಧಾನಸಭೆಯ ಸಭಾಧ್ಯಕ್ಷ ಸ್ಥಾನ ಕೊಡ್ತೀನಿ ಅಂದ್ರೂ ಹಿಂದೇಟು ಹಾಕುತ್ತಿರುವುದು ಕಂಡುಬರುತ್ತಿದೆ.

ಹಾಲಿ ಇರುವ ಸ್ಪೀಕರ್ ಯು.ಟಿ. ಖಾದರ್ ಸಚಿವ ಆಕಾಂಕ್ಷಿಯಾಗಿದ್ದಾರೆ. ಇದಕ್ಕಾಗಿ ಭಾರಿ ಲಾಬಿ ನಡೆಸಿದ್ದಾರೆ. 2023ರಲ್ಲೇ ಇದಕ್ಕಾಗಿ ಅವರು ಕಸರತ್ತು ನಡೆಸಿದ್ದರು. ಆದರೆ, ಅಂತಿಮವಾಗಿ ಸ್ಪೀಕರ್ ಹುದ್ದೆ ಲಭಿಸಿತ್ತು. ಈಗ ಹೊಸ ಸಂಪುಟದಲ್ಲಿ ಶತಾಯಗತಾಯ ಸೇರಲು ಯತ್ನಿಸುತ್ತಿದ್ದಾರೆ.

ಇನ್ನು ಒಂದು ವೇಳೆ ಖಾದರ್ ಸಂಪುಟ ಸೇರಿದರೆ, ತೆರವಾಗಲಿರುವ ಸ್ಥಾನಕ್ಕೆ ಹಿರಿಯ ನಾಯಕರಾದ ಎಚ್.ಕೆ. ಪಾಟೀಲ, ಆರ್.ವಿ. ದೇಶಪಾಂಡೆ ಮತ್ತು ಟಿ.ಬಿ. ಜಯಚಂದ್ರ ಅವರ ಹೆಸರು ಕೇಳಿಬರುತ್ತಿದೆ. ಇವರಲ್ಲಿ ಒಬ್ಬರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ. ಆದರೆ, ಈ ಪೈಕಿ ಆರ್.ವಿ. ದೇಶಪಾಂಡೆ ಈಗಾಗಲೇ ಸ್ಪೀಕರ್ ಸ್ಥಾನ ನಿರಾಕರಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ದೇಶಪಾಂಡೆ, ನಾನು ಸ್ಪೀಕರ್ ಹುದ್ದೆ ಆಕಾಂಕ್ಷಿ ಅಲ್ಲ, ನನಗೆ ಆಸಕ್ತಿಯೂ ಇಲ್ಲ. ಒಂದು ವೇಳೆ ಕೊಟ್ಟರೂ ನನಗೆ ಆ ಹುದ್ದೆ ಬೇಡ ಎಂದು ಸ್ಪಷ್ಟಪಡಿಸಿದ್ದಾರೆ.

ಒಟ್ಟಾರೆಯಾಗಿ ದೆಹಲಿ ಭೇಟಿಯ ನಂತರ ರಾಜ್ಯ ರಾಜಕಾರಣದ ಹೊಸ ಸಂಪುಟ ಮತ್ತು ಕೆಪಿಸಿಸಿ ಸಾರಥ್ಯದ ಕುರಿತು ಚರ್ಚೆ ನಡೆಯಲಿದೆ. ಇದೇ ವೇಳೆ ಸ್ಪೀಕರ್ ಹುದ್ದೆಯ ಬಗ್ಗೆಯೂ ಸ್ಪಷ್ಟ ಚಿತ್ರಣ ಸಿಗಲಿದೆ ಎನ್ನಲಾಗಿದೆ.

ಮತ್ತೆ ಮುನ್ನೆಲೆಗೆ ಬಂದ ಸಮನ್ವಯ ಸಮಿತಿ

ಬೆಂಗಳೂರು: ಈ ಹಿಂದೆ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಸಮನ್ವಯ ಸಮಿತಿ ರಚನೆ ವಿಚಾರ ಮತ್ತೆ ಮುನ್ನೆಲೆಗೆ ಬಂದಿದ್ದು, ಇದರ ಬಗ್ಗೆ ಪರ-ವಿರೋಧಗಳು ವ್ಯಕ್ತವಾಗುತ್ತಿವೆ.

ಸಿದ್ದರಾಮಯ್ಯ ನಾಯಕತ್ವದಲ್ಲಿ 3 ವರ್ಷ ಪೂರ್ಣಗೊಳಿಸಿರುವ ಕಾಂಗ್ರೆಸ್ ಸರ್ಕಾರ ಈಗ ಸುಸೂತ್ರ ಅಧಿಕಾರ ಹಸ್ತಾಂತರದ ಬಳಿಕ ಡಿ.ಕೆ. ಶಿವಕುಮಾರ್ ಅವರ ನಾಯಕತ್ವದಲ್ಲಿ ಮುಂದುವರಿಯುತ್ತಿದೆ. ಈ ಸಂದರ್ಭದಲ್ಲಿ ಎರಡೂ ಬಣಗಳು ಮತ್ತು ಹೈಕಮಾಂಡ್ ನಡುವೆ ಸಂಪರ್ಕ ಕೊಂಡಿಯಂತೆ ಕೆಲಸ ಮಾಡಲು ಕೋರ್ ಕಮಿಟಿ ಅಥವಾ ಸಮನ್ವಯ ಸಮಿತಿಯೊಂದರ ಅಗತ್ಯತೆ ಇದೆ ಎಂಬ ಮಾತುಗಳು ಕೆಲ ಹಿರಿಯ ಸಚಿವರಿಂದ ಕೇಳಿಬರುತ್ತಿದೆ.

ಸಮನ್ವಯ ಸಮಿತಿ ಅತ್ಯವಶ್ಯ: ಭಾನುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ, ಯಾವುದೇ ರಾಜಕೀಯ ಪಕ್ಷ ಅಧಿಕಾರದಲ್ಲಿರಲಿ. ಅದಕ್ಕೊಂದು ಸಮನ್ವಯ ಸಮಿತಿ ಇರುವುದು ಅತ್ಯಂತ ಅವಶ್ಯಕ. ಅದು ತುಂಬ ಮುಖ್ಯವಾದದ್ದಾಗಿದೆ. ಹಾಗಾಗಿ, ನಾನೂ ಅದನ್ನೇ ಸಲಹೆ ಮಾಡುತ್ತೇನೆ ಎಂದು ತಿಳಿಸಿದರು.

ಈ ಹಿಂದೆ ಅಂದರೆ 2018-19ರಲ್ಲಿ ಸಮ್ಮಿಶ್ರ ಸರ್ಕಾರ ರಚನೆಯಾಗಿತ್ತು. ಆಗ ಸಿದ್ದರಾಮಯ್ಯ ನೇತೃತ್ವದಲ್ಲಿ ಸಮನ್ವಯ ಸಮಿತಿ ರಚನೆಯಾಗಿತ್ತು. ಆದಾಗ್ಯೂ ಅದೇ ಸಮನ್ವಯದ ಕೊರತೆಯಿಂದ ಸರ್ಕಾರ ಅವಧಿಗೂ ಮೊದಲೇ ವಿಸರ್ಜನೆಯಾಯಿತು.

ಸಂಪುಟ ರಚನೆ ಕಸರತ್ತು

ಪುಟ ೧ ➜ ವಿಧಾನ ಪರಿಷತ್ ಮತ್ತು ರಾಜ್ಯಸಭೆ ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ಚರ್ಚೆ ಇಲ್ಲ ಎಂದು ಮೂಲಗಳು ತಿಳಿಸಿವೆ. ರಾಜ್ಯಸಭೆ ಚುನಾವಣೆ ಇನ್ನೂ ಒಂದು ವಾರ ಇರುವುದರಿಂದ ಸದ್ಯಕ್ಕೆ ಸಂಪುಟ ಚರ್ಚೆ ಮಾತ್ರ ಆಗಲಿದೆ. ಅಲ್ಲದೆ, ಪ್ರಮಾಣವಚನ ಕಾರ್ಯಕ್ರಮದಲ್ಲಿ ಭಾಗನಹಿಸುವಂತೆ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ್ ಗಾಂಧಿ ಅವರಿಗೆ ಡಿ.ಕೆ. ಶಿವಕುಮಾರ್ ಆಹ್ವಾನ ನೀಡಲಿದ್ದಾರೆ.

15 ದಿನ ಬಳಿಕ ಸಂಪುಟ ವಿಸ್ತರಣೆ: ಖರ್ಗೆ

ಪುಟ ೧ ➜ ಪ್ರಸ್ತಾವ ಬಂದ ಬಳಿಕ ಎಷ್ಟು ಡಿಸಿಎಂ ಮಾಡಬೇಕು? ಎಷ್ಟು ಸಚಿವರನ್ನು ಮಾಡಬೇಕು? ಎಂದು ತೀರ್ಮಾನಿಸಲಾಗುವುದು. ಮಹತ್ವದ ನಿಗಮದ ಅಧ್ಯಕ್ಷ ಸ್ಥಾನಗಳನ್ನೂ ಜತೆಯಲ್ಲೇ ಮಾಡಬೇಕಾ? ಎನ್ನುವ ಚರ್ಚೆ ಸಹ ನಡೆದಿದೆ. ಇವೆಲ್ಲಾ ಜೂನ್ 3ರ ನಂತರ ನಿರ್ಧಾರ ಮಾಡುತ್ತೇವೆ ಎಂದರು.

ಎಷ್ಟು ಮಂದಿ ಪ್ರಮಾಣವಚನ ಸ್ವೀಕರಿಸುತ್ತಾರೋ ಗೊತ್ತಿಲ್ಲ: ಡಿ.ಕೆ. ಶಿವಕುಮಾರ್ ಅವರೊಂದಿಗೆ ಎಷ್ಟು ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸುತ್ತಾರೆ ಎನ್ನುವ ಪ್ರಸ್ತಾವ ಇನ್ನೂ ಬಂದಿಲ್ಲ. ಎಂಟು ಸಚಿವರನ್ನು ಮಾಡುತ್ತಾರೋ, ಹತ್ತು ಜನರನ್ನು ಸಚಿವರನ್ನಾಗಿ ಮಾಡುತ್ತಾರೋ ಗೊತ್ತಿಲ್ಲ. ಸದ್ಯಕ್ಕೆ ಒಂದು ಹಂತದಲ್ಲಿ ಸಚಿವರನ್ನು ಮಾಡುತ್ತೇವೆ. ಆದಾದ 15 ದಿನ ಅಥವಾ ಒಂದು ತಿಂಗಳು ಬಿಟ್ಟು ಎರಡನೇ ಹಂತದ ಮಂತ್ರಿಮಂಡಲ ರಚನೆ ಮಾಡುವ ವಿಚಾರ ಇದೆ. ಆದರೆ, ಸಿಎಂ ಏನು ವಿಚಾರ ಮಾಡುತ್ತಾರೋ ಅವರಿಗೇ ಬಿಟ್ಟಿದ್ದು ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಇಂದಿನಿಂದ ನಾಮಪತ್ರ ಸಲ್ಲಿಕೆ ಆರಂಭ

ಬೆಂಗಳೂರು: ವಿಧಾನಸಭೆಯಿಂದ ರಾಜ್ಯಸಭೆಯ 4 ಹಾಗೂ ವಿಧಾನಪರಿಷತ್ತಿನ 7 ಸ್ಥಾನಗಳಿಗೆ ಸೋಮವಾರದಿಂದ ಅಧಿಸೂಚನೆ ಆರಂಭವಾಗಲಿದೆ.

ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿದ್ದ 7 ಸದಸ್ಯರ ಅವಧಿ ಜೂನ್ 30ಕ್ಕೆ ಕೊನೆಗೊಳ್ಳಲಿದೆ. ಅದೇ ರೀತಿ ರಾಜ್ಯಸಭೆಯ 4 ಸದಸ್ಯರ ಅವಧಿ ಜೂನ್ 26ಕ್ಕೆ ಕೊನೆಗೊಳ್ಳಲಿದೆ. ಸರ್ಕಾರ ರಚನೆಯ ಕಸರತ್ತು ಜೋರಾಗಿರುವುದರಿಂದ ಆಡಳಿತ ಪಕ್ಷದ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಂಡಿಲ್ಲ, ವಿರೋಧ ಪಕ್ಷಗಳ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳ್ಳದ ಕಾರಣ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕ್ಕೆ ವಿಳಂಬವಾಗಬಹುದು.

ಜೂ.8 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದ್ದು, ಜೂ.9 ನಾಮಪತ್ರಗಳ ಪರಿಶೀಲನೆ. ನಾಮಪತ್ರ ಹಿಂಪಡೆಯಲು ಕೊನೆ ದಿನ ಜೂ.11 ಜೂ.18 ರಂದು ಬೆಳಗ್ಗೆ 9ರಿಂದ ಸಂಜೆ 4 ಗಂಟೆ ನಡೆಯಲಿದೆ. ಅದೇ ದಿನ ಫಲಿತಾಂಶ ಪ್ರಕಟಗೊಳ್ಳಲಿದೆ. ರಾಜ್ಯಸಭೆಯ 4 ಸ್ಥಾನಗಳಿಗೂ ಅದೇ ದಿನ ಮತದಾನ ನಿಗದಿಯಾಗಿರುವುದರಿಂದ ಶಾಸಕರು ಮತದಾರರಾಗಿರುವ ರಾಜ್ಯಸಭೆಯ 4 ಹಾಗೂ ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ ಒಂದೇ ದಿನ ಏಕಕಾಲಕ್ಕೆ ಚುನಾವಣೆ ನಡೆಯಲಿದೆ.

ಡಿಕೆಶಿಗೆ ಹೂವಿನ ಹಾರ ಹಾಕುವುದು ನಿಷೇಧ

ಬೆಂಗಳೂರು: ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಅಭಿನಂದಿಸಲು ಕಾರ್ಯಕರ್ತರು, ಸಾರ್ವಜನಿಕರು ಮುಗಿ ಬೀಳುತ್ತಿದ್ದಾರೆ. ಆದರೆ, ಅವರಿಗೆ ಹೂವಿನ ಹಾರ ಹಾಕುವುದನ್ನು ನಿಷೇಧಿಸಲಾಗಿದೆ.



ಸಾಮಾನ್ಯವಾಗಿ ಅಭಿನಂದಿಸುವಾಗ ಹೂಗುಚ್ಛ ನೀಡುವುದು, ಹೂವಿನ ಹಾರಗಳನ್ನು ಕೊರಳಿಗೆ ಹಾಕುವುದು ಸಾಮಾನ್ಯ. ಡಿ.ಕೆ. ಶಿವಕುಮಾರ್ ಅವರಿಗೆ ಸುಗಂಧ ರಾಜ ಹೂವು ಅಲರ್ಜಿ. ಸುಗಂಧರಾಜ ಹೂವು ಮೈಗೆ ತಾಗಿದರೆ ತುರಿಕೆ ಬರುವುದರಿಂದ ಈವರೆಗೆ ಅವರನ್ನು ಅಭಿನಂದಿಸಲು ಸುಗಂಧರಾಜ ಹೂವಿನ ಮಾಲೆಗಳಿಗೆ ನಿಷೇಧವಿತ್ತು. ಇನ್ನು ಮುಂದೆ ಎಲ್ಲಾ ರೀತಿಯ ಹೂವಿನ ಹಾರಗಳನ್ನೂ ನಿಷೇಧಿಸಲಾಗಿದೆ.

ಅಂಗಡಿಗಳಲ್ಲಿ ಹೂವಿನ ಹಾರಗಳು ಒಂದಕ್ಕೊಂದು ತಗಲುವಂತೆ ಇಡುವುದು, ಒಂದೇ ಬುಟ್ಟಿಯಲ್ಲಿ ಹಾಕುವುದು ಇದೆಲ್ಲವೂ ನಡೆಯುವುದರಿಂದ ಬೇರೆ ಹೂವಿನ ಮಾಲೆಗಳಿಗೂ ಸುಗಂಧ ರಾಜ ಹೂವು ತಗುಲಿರುವ ಸಾಧ್ಯತೆ ಹೆಚ್ಚು. ಹೊಸದಾಗಿ ಆಯ್ಕೆಯಾಗಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬೆಂಬಲಿಗರು, ಕಾರ್ಯಕರ್ತರು, ಸಾರ್ವಜನಿಕರು, ಅಧಿಕಾರಿಗಳಾದಿಯಾಗಿ ಎಲ್ಲರೂ ಅಭಿನಂದಿಸುವುದರಿಂದ ಕಟ್ಟುನಿಟ್ಟಾಗಿ ಹೂವಿನ ಹಾರವನ್ನು ನಿಷೇಧಿಸಲಾಗಿದೆ ಎಂದು ಸ್ವತಃ ಡಿ.ಕೆ. ಶಿವಕುಮಾರ್ ಅವರೇ ತಿಳಿಸಿದ್ದಾರೆ. ತಮಗೆ ಸುಗಂಧರಾಜ ಹೂವಿನ ಅಲರ್ಜಿ ಇರುವುದರಿಂದ ಈ ನಿರ್ಧಾರ ಮಾಡಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಇದೇ ವೇಳೆ ತಮ್ಮ ಪ್ರಮಾಣ ವಚನ ಸಮಾರಂಭಕ್ಕೆ ಆಹ್ವಾನಿಸಲು ಸಾಧ್ಯವಾಗದಿರುವುದಕ್ಕೆ ಡಿ.ಕೆ. ಶಿವಕುಮಾರ್ ಅವರು ಕಾರ್ಯಕರ್ತರಲ್ಲಿ ಕ್ಷಮೆ ಕೋರಿದ್ದಾರೆ.

ಕಮಿಟಿ ರಚನೆ ಹೈಕಮಾಂಡ್‌ಗೆ ಬಿಟ್ಟಿದ್ದು: ಸತೀಶ್

ಬೆಂಗಳೂರು: ಸರ್ಕಾರಕ್ಕೆ ಮಾರ್ಗದರ್ಶನ ನೀಡಲು ಹಿರಿಯ ನಾಯಕರ ನೇತೃತ್ವದಲ್ಲಿ ಕೋರ್ ಕಮಿಟಿ ರಚನೆ ಮಾಡುವುದು ಹೈಕಮಾಂಡ್‌ಗೆ ಬಿಟ್ಟಿದ್ದು ಎಂದು ಮಾಜಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತುಕತೆ ನಡೆಸಿದ ಅವರು, ಈ ಹಿಂದೆಯೂ ಕೋರ್ ಕಮಿಟಿ ಬಗ್ಗೆ ಚರ್ಚೆ ಆಗಿತ್ತು, ಆದರೆ ಆಗಲಿಲ್ಲ. ಮಾಡುವುದು ಬಿಡುವುದು ಹೈಕಮಾಂಡ್ ನಿರ್ಧರಿಸಲಿದೆ ಎಂದರು. ಡಿ.ಕೆ. ಶಿವಕುಮಾರ್ ಆಡಳಿತಕ್ಕೆ ಸಿದ್ದರಾಮಯ್ಯ ಮಾರ್ಗದರ್ಶನ ಇದೆ. ಅವರು ಅನುಸರಿಸ ಮಾರ್ಗಗಳೇ ಮಾನದಂಡ ಆಗಿದ್ದು, 3 ವರ್ಷದ ಆಡಳಿತದ ಮಾದರಿಯಲ್ಲೇ ಇವರು ಆಡಳಿತ ನಡೆಸಲಿದ್ದಾರೆ. ಅಧಿಕಾರ ಹಂಚಿಕೆ ಸರಳವಾಗಿ ಗೊಂದಲ ಇಲ್ಲದೇ ಹಂಚಿಕೆಯಾಗಿದೆ. ಪಕ್ಷದಲ್ಲಿ ಶಿಸ್ತು ಇದೆ ಎಂಬುದನ್ನು ತೋರಿಸಲಾಗಿದೆ ಎಂದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಹೈಕಮಾಂಡ್ ಸಭೆಯಲ್ಲಿ ಚರ್ಚೆಯಾಗಬಹುದು, ಅಧ್ಯಕ್ಷ ಸ್ಥಾನಕ್ಕೆ ಬೇಡಿಕೆ ಇಟ್ಟಿಲ್ಲ, ನಾನೇ ಆಗಬೇಕು ಅಂತ ಇಲ್ಲ, ಸೂಕ್ತ ಅನಿಸಿದವರು ಅಧ್ಯಕ್ಷ ಆಗುತ್ತಾರೆ. ಲಾಭ ನಷ್ಟದ ಬಗ್ಗೆ ಹೈಕಮಾಂಡ್ ಚರ್ಚೆ ಮಾಡಲಿದ್ದಾರೆ. ಮೊದಲ ಹಂತದಲ್ಲಿ ಹಿರಿಯರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ ಎಂದು ಜಾರಕಿಹೊಳಿ ಹೇಳಿದರು.

ಮಹಿಳಾ ಸಬಲೀಕರಣ ಧರ್ಮಸ್ಥಳವೇ ಮಾದರಿ



ಪುಟ ೧ ➜ ಧರ್ಮ ಮತ್ತು ಪರಂಪರೆಯ ರಕ್ಷಣೆಯೊಂದಿಗೆ ಅನ್ನದಾನ ವಿದ್ಯಾದಾನ, ಔಷಧದಾನ, ಅಭಯದಾನ ಮೊದಲಾದ ಮಾನವೀಯ ಸೇವೆಗಳನ್ನು ಮಾಡುವುದರ ಜತೆಗೆ ಸ್ವಚ್ಛತೆ ಕಾಪಾಡುವುದು ಹಾಗೂ ವೈಜ್ಞಾನಿಕವಾದ ಪಾರದರ್ಶಕ ಆಡಳಿತ ವೈಖರಿ ಮಾದರಿಯಾಗಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಗ್ರಾಮೀಣ ಹಿನ್ನೆಲೆಯುಳ್ಳ ಬಡವರಿಗೆ ಸಿರಿ ನೇರವಾಗಿ ನೆರವಾಗಿದೆ. ರಾತ್ರೋರಾತ್ರಿ ಇದು ಬೆಳೆದಿಲ್ಲ, ವರ್ಷಾನುಗಟ್ಟಲೆ ಕಾಲ ತೆಗೆದುಕೊಂಡು ಬೆಳೆದಿದೆ. ಮಾತೃಶ್ರೀ ಸಿರಿ ಕೈಗಾರಿಕಾ ಪಾರ್ಕ್ ನಿರ್ಮಾಣ ಆಗಿರುವುದು, ಅಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹಾಸ್ಟೆಲ್ ವ್ಯವಸ್ಥೆ ಸೇರಿದಂತೆ ಕೊಟ್ಟಿರುವ ಸೌಲಭ್ಯಗಳನ್ನೆಲ್ಲ ನೋಡಿ ನಾನು ಬಹಳ ಖುಷಿಯಾಗಿದ್ದೇನೆ ಎಂದು ಉಪ ರಾಷ್ಟ್ರಪತಿ ರಾಧಾಕೃಷ್ಣನ್ ಹೇಳಿದರು. ಕರ್ನಾಟಕ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್, ಲೋಕಸಭಾ ಸದಸ್ಯ ಕ್ಯಾಪ್ಟನ್ ಬ್ರಿಜೇಶ್ ಚೌಟ, ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಹೇಮಾವತಿ ಹೆಗ್ಗಡೆ, ವಿಧಾನಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್, ಡಿ. ಸುರೇಂದ್ರ ಕುಮಾರ್, ಡಿ. ಹರ್ಷೇಂದ್ರ ಕುಮಾರ್, ಡಿ. ಶ್ರೇಯಸ್ ಕುಮಾರ್ ಹಾಗೂ ಅಮಿತ್ ಕುಮಾರ್ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

2026-27ನೇ ಸಾಲಿನಲ್ಲಿ 150 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ ನಿರೀಕ್ಷೆ

ರಾಜ್ಯದ 114.50 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ

ದೇವಿತಾ.ಸಿ.ಸುಬ್ಬಯ್ಯ

ಬೆಂಗಳೂರು: ಈ ಭಾರಿ 2026-27ನೇ ಸಾಲಿನ ಮುಂಗಾರು ಹಂಗಾಮಿಗೆ ಕೃಷಿ ಇಲಾಖೆಯು ಮಹತ್ವಾಕಾಂಕ್ಷಿ ಗುರಿ ನಿಗದಿಪಡಿಸಿದ್ದು, ಒಟ್ಟು 114.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಡೆಸುವ ಯೋಜನೆ ರೂಪಿಸಿದೆ.

ಕೃಷಿ ಇಲಾಖೆಯು 2026-27ನೇ ಸಾಲಿನಲ್ಲಿ ರಾಜ್ಯದಲ್ಲಿ 150 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ ಮಾಡುವ ಮಹತ್ವಾಕಾಂಕ್ಷಿ ಗುರಿ ಹೊಂದಿದ್ದು, ಮುಂಗಾರು ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳನ್ನು ಬೆಳೆಯಲು 82.48 ಲಕ್ಷ ಹೆಕ್ಟೇರ್ ಪ್ರದೇಶವನ್ನು ನಿಗದಿಪಡಿಸಲಾಗಿದೆ. ಪೂರ್ವ ಮುಂಗಾರು ಅವಧಿಯಲ್ಲಿ 2.78 ಲಕ್ಷ ಹೆಕ್ಟೇರ್ ಗುರಿಗೆ ಅನುಗುಣವಾಗಿ ಈಗಾಗಲೇ 28,900 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಪೂರ್ಣಗೊಂಡಿದ್ದು, ಮಳೆ ಪ್ರಮಾಣಕ್ಕೆ ಅನುಗುಣವಾಗಿ ಬಿತ್ತನೆ ಚಟುವಟಿಕೆಗಳು ವೇಗ ಪಡೆಯುತ್ತಿವೆ. ಮುಂಗಾರು ಹಂಗಾಮಿನಲ್ಲಿ 4.71 ಲಕ್ಷ ಕ್ವಿಂಟಾಲ್ ವಿವಿಧ ಬಿತ್ತನೆ ಬೀಜಗಳ ಬೇಡಿಕೆಯಿದ್ದು, ಅಗತ್ಯಕ್ಕಿಂತ ಅಧಿಕ 5.46 ಲಕ್ಷ ಕ್ವಿಂಟಲ್ ಬಿತ್ತನೆ ಬೀಜಗಳು ಲಭ್ಯವಿದೆ.

ದಿಗಂತ ವಿಶೇಷ



"ಈ ವರ್ಷದ ಮುಂಗಾರು ಹಂಗಾಮಿಗೆ ಬೇಕಾದ ಎಲ್ಲ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದೇವೆ. ರೈತರಿಗೆ ಗುಣಮಟ್ಟದ ಬೀಜ, ರಸಗೊಬ್ಬರ ಹಾಗೂ ತಾಂತ್ರಿಕ ಸಲಹೆ ಲಭ್ಯವಾಗುವಂತೆ ಕ್ರಮ ಕೈಗೊಂಡಿದ್ದೇವೆ. ರೈತರು ಸಮಯಕ್ಕೆ ಸರಿಯಾಗಿ ಬಿತ್ತನೆ ಆರಂಭಿಸಿದರೆ ಉತ್ತಮ ಉತ್ಪಾದನೆ ಸಾಧ್ಯ.
■ **ಎನ್.ಚೆಲುವರಾಯಸ್ವಾಮಿ, ಹಂಗಾಮಿ ಕೃಷಿ ಸಚಿವ**

ಬೆಳೆವಾರು ಗುರಿ ಏನು? ಮುಂಗಾರು ಹಂಗಾಮಿನಲ್ಲಿ ಬಹುಪಾಲು ಆಹಾರ ಧಾನ್ಯಗಳನ್ನು ಬೆಳೆಯುವ ಗುರಿಯಿದ್ದು, ಒಟ್ಟಾರೆ 37.60 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರಾಗಿ, ಜೋಳ, ಮೆಕ್ಕೆಜೋಳ, ಭತ್ತ, ನವಣೆ, ಸಾವೆ, ಬರಗು ಮತ್ತಿತರ ಆಹಾರ ಧಾನ್ಯಗಳ ಬೆಳೆಗಳು ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆಯಾಗುವ ಗುರಿಯಿದೆ. ಈ ಬೆಳೆಗಳಿಂದ 101.71 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ.

22 ಲಕ್ಷ ಹೆಕ್ಟೇರ್‌ನಲ್ಲಿ ತೊಗರಿ, ಹೆಸರು, ಅವರೆ ಮತ್ತಿತರ ಬೇಳೆಕಾಳುಗಳನ್ನು ಬೆಳೆಯುವ ಸಾಧ್ಯತೆ ಇದ್ದು, 12.44 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ. ಸೂರ್ಯಕಾಂತಿ, ಶೇಂಗಾ, ಎಳ್ಳುಮತ್ತಿತರ ಎಣ್ಣೆಕಾಳು ಬೆಳೆಗಳನ್ನು 7.91 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡುವ ಗುರಿ ಇದ್ದು, 8.08 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಬಹುದು. ಇನ್ನುಳಿದಂತೆ ಹತ್ತಿ, ಕಬ್ಬು, ತಂಬಾಕು ಮತ್ತಿತರ ಬೆಳೆಗಳನ್ನು 15.75 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಬಹುದಾಗಿದೆ ಎಂದು ಕೃಷಿ ಇಲಾಖೆ ಅಂದಾಜಿಸಿದೆ.



ರೈತರಿಗೆ ಅಗತ್ಯ ಸಿದ್ಧತೆ

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮುಂಗಾರು ಮಳೆ ಆರಂಭವಾಗುವ ಮುನ್ನವೇ ಬೀಜ, ರಸಗೊಬ್ಬರ ಹಾಗೂ ಕೃಷಿ ಪರಿಕರಗಳ ಸಂಗ್ರಹಣೆ ಮಾಡಲಾಗಿದೆ. ರೈತರಿಗೆ ಯಾವುದೇ ಕೊರತೆ ಉಂಟಾಗದಂತೆ ಸಹಕಾರಿ ಸಂಘಗಳು ಹಾಗೂ ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಣೆ ಮಾಡುವ ಯೋಜನೆ ರೂಪಿಸಲಾಗಿದೆ. ಕೃಷಿ ತಜ್ಞರ ಅಭಿಪ್ರಾಯದಂತೆ, ಹವಾಮಾನದಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬೆಳೆ ವೈವಿಧ್ಯತೆ ಕಡೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಮಳೆ ಪ್ರಮಾಣ ಕಡಿಮೆ ಇರುವ ಪ್ರದೇಶಗಳಲ್ಲಿ ಕಡಿಮೆ ನೀರಿನ ಅವಶ್ಯಕತೆ ಇರುವ ಬೆಳೆ ಬೆಳೆಸುವಂತೆ ಸಲಹೆ ನೀಡಲಾಗುತ್ತಿದೆ ಎಂದು ಕೃಷಿ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಎನ್‌ಡಿಎ ಸರ್ಕಾರ ಜೂ.7ರಂದು 12 ವರ್ಷ ಪೂರ್ಣ

ಜೂ. 5ರಿಂದ ವಿವಿಧ ಕಾರ್ಯಕ್ರಮ ಆಯೋಜನೆ: ಸುಭಾಷ್ ಪಾಟೀಲ



ಬೆಳಗಾವಿ: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರಕ್ಕೆ ಜೂನ್ 7ರಂದು 12 ವರ್ಷ ಪೂರ್ಣಗೊಳ್ಳುವ ಹಿನ್ನೆಯಲ್ಲಿ ಬೆಳಗಾವಿ ನಗರದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಅಧ್ಯಕ್ಷ ಸುಭಾಷ್ ಪಾಟೀಲ ತಿಳಿಸಿದರು.

ಭಾನುವಾರ ನಗರದ ಧರ್ಮನಾಥ ಭವನ ಹತ್ತಿರವಿರುವ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ಅವರು ಮಾತನಾಡಿ, 12 ವರ್ಷಗಳ ವಿಶ್ವಾಸ, ಅಭಿವೃದ್ಧಿ ಮತ್ತು ಜನಕಲ್ಯಾಣದ ಸಂಭ್ರಮಾಚರಣೆಯ ನಿಟ್ಟಿನಲ್ಲಿ ಜೂನ್ 5ರಿಂದ ಜೂನ್ 21ರ ವರೆಗೆ ಜಿಲ್ಲೆಯ ಎಲ್ಲಾ ಮಂಡಲಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ಪರಿಸರ ದಿನಾಚರಣೆ ಅಂಗವಾಗಿ ಶಾಲಾ-ಕಾಲೇಜುಗಳ ಆವರಣದಲ್ಲಿ ತಾಯಿಯ ಹೆಸರಲ್ಲಿ ಗಿಡ ನೇಡುವುದರ ಮೂಲಕ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಯೋಗ ಶಿಬಿರವನ್ನು ಆಯೋಜನೆ ಮಾಡಲಾಗುವುದು.

ಬಳಿಕ ಮಾಧ್ಯಮ ಸಂವಾದ, ವಿಶೇಷ ಸಂಪರ್ಕ ಅಭಿಯಾನ, ಕಲ್ಯಾಣ ಶಿಬಿರ, ಸಭಾಂಗಣದ ಸಭೆಗಳು,ಮೋದಿ ಸರ್ಕಾರದ ಸಾಧನೆಗಳ ಪ್ರದರ್ಶಿನಿ, ಸಾವಯವ ಕೃಷಿ ಕಾರ್ಯಾಗಾರಗಳು ಹೀಗೆ ನಾನಾ ಕಾರ್ಯಕ್ರಮಗಳು ನಡೆಯಲಿವೆ. ಕಾರ್ಯಕ್ರಮದಲ್ಲಿ ರಾಜ್ಯದ ಪಕ್ಷದ ಪ್ರಮುಖ ಮುಖಂಡರು ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂದೀಪ ದೇಶಪಾಂಡೆ, ಅಭಿಯಾನದ ಜಿಲ್ಲಾ ಸಂಚಾಲಕರಾದ ಶಂಕರ ಹುರಕಡ್ಲಿ, ಶ್ರೀಕಾಂತ ಇಟಗಿ, ನಿಂಗಪ್ಪ ಚೌಡಣ್ಣವರ, ಮಂಜುನಾಥ ತೊಟ್ಟಲಮನಿ, ಈರಣ್ಣ ಚಂದರಗಿ, ಪ್ರಮೋದ ನುಗ್ಗಾನಟ್ಟಿ ಸೇರಿದಂತೆ ಹಲವು ಕಾರ್ಯಕರ್ತರು ಪಾಲ್ಗೊಂಡಿದ್ದರು.

17ನೇ ದಿನಕ್ಕೆ ಕಾಲಿಟ್ಟ ಪಾಲಿಕೆ ಹೋರಾಟ | ಬಿ.ಡಿ.ಹಿರೇಮಠ ಸರ್ಕಾರಕ್ಕೆ ಎಚ್ಚರಿಕೆ

ಅಧಿಸೂಚನೆ ಹೊರಡಿಸದಿದ್ದರೆ ಹೋರಾಟ ತೀವ್ರ

ಧಾರವಾಡ: ಸ್ವಾಭಿಮಾನಿ ಹೋರಾಟ ಸಮಿತಿ ಕೈಗೊಂಡ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ 17ನೇ ದಿನಕ್ಕೆ ಕಾಲಿಟ್ಟಿದ್ದು, ಭಾನುವಾರ ವಿವಿಧ ಸಂಘ-ಸಂಸ್ಥೆಗಳು ಬೆಂಬಲ ಸೂಚಿಸಿವೆ.

ಸುಧೀರ ಮುಧೋಳ, ಶರೀಫ್ ಅಮ್ಮಿನಬಾವಿ, ಲಕ್ಷ್ಮಣ ದೊಡ್ಡಮನಿ, ಗಿರೀಶ ಮೇಗಲಮನಿ, ದುರ್ಗಪ್ಪ ಕಡೇಮನಿ, ಮಹೇಶ ಪಾಟೀಲ ಉಪವಾಸ, ಮಂಜುನಾಥ ಸುತಗಟ್ಟಿ ಸತ್ಯಾಗ್ರಹ ನಡೆಸಿದರು. ಹೋರಾಟಗಾರ ಬಿ.ಡಿ.ಹಿರೇಮಠ ಮಾತನಾಡಿ, ನೂತನ ಸಚಿವ ಸಂಪುಟ ರಚನೆ ಬಳಿಕ ಪ್ರತ್ಯೇಕ ಪಾಲಿಕೆ ರಚನೆಯ ಅಧಿಕೃತ ಅಧಿಸೂಚನೆ ಹೊರಡಿಸುವ ಸ್ಪಷ್ಟ ಭರವಸೆ ಸರ್ಕಾರ ನೀಡಿಲ್ಲ ಎಂದು ದೂರಿದರು.



> ಹು-ಧಾ ಅವಳಿನಗರ ಆಡಳಿತಾತ್ಮಕ ವಿಕೇಂದ್ರೀಕರಣದಿಂದ ಮಾತ್ರ ಧಾರವಾಡದ ಮೂಲಸೌಕರ್ಯಗಳು ಸುಧಾರಿಸಲು ಸಾಧ್ಯವಿದೆ. ಸರ್ಕಾರ ಇನ್ನಾದರೂ ಕೂಡ ತನ್ನ ಮೌನ ಮುರಿದು, ಶೀಘ್ರವೇ ಅಧಿಸೂಚನೆ ಹೊರಡಿಸಬೇಕು.
> ■ ಬಿ.ಡಿ.ಹಿರೇಮಠ, ಹೋರಾಟಗಾರ

ರಾಜ್ಯ ಸರ್ಕಾರ ನಿರಾಸಕ್ತಿ ದೋರಣೆ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ರಾಜಕೀಯ ಇಚ್ಛಾಶಕ್ತಿ ಕೊರತೆ ಕಾರಣದಿಂದ ಅಧಿಸೂಚನೆ ವಿಳಂಬ ಯಾವುದೇ ಕಾರಣಕ್ಕೂ ಸಹಿಸಲ್ಲ ಎಂದರು. ಪ್ರತ್ಯೇಕ ಪಾಲಿಕೆ ರಚನೆ ಕೇವಲ ಬೇಡಿಕೆಯಲ್ಲ, ಇದು ಧಾರವಾಡ ಜನತೆಯ ಹಕ್ಕು. ಸರ್ಕಾರ ತಕ್ಷಣವೇ ಅಧಿಸೂಚನೆ ಹೊರಡಿಸದಿದ್ದರೆ, ಹೋರಾಟವನ್ನು ತ್ರೀವ್ರಗೊಳಿಸುವ ಎಚ್ಚರಿಕೆಯೂ ನೀಡಿದರು.

ಪ್ರತ್ಯೇಕ ಪಾಲಿಕೆ ಅಧಿಸೂಚನೆ ಹೊರಡಿಸುವಂತೆ ಜಿಲ್ಲೆಯ ಸಚಿವರು, ಶಾಸಕರು ನೂತನ ಮುಖ್ಯಮಂತ್ರಿಗಳ ಮೇಲೆ ಒತ್ತಡ ತರಬೇಕು. ವಿಳಂಬ ಮಾಡುವುದು ಧಾರವಾಡಿಗರು ಸಹಿಸುವುದಿಲ್ಲ ಎಂದರು. ಅರವಿಂದ ಏಗನಗೌಡರ ಮಾತನಾಡಿ, ರಾಜ್ಯದಲ್ಲಿ ರಾಜಕೀಯ ಬೆಳವಣಿಗೆ ನಡೆದಿದೆ. ನೂತನ ಮುಖ್ಯಮಂತ್ರಿ ಆಯ್ಕೆ ಹಿನ್ನಲೆ ಅಧಿಸೂಚನೆ ವಿಳಂಬವಾದರೂ ಸಹ ಹೊರಡಿಸುವ ವಿಶ್ವಾಸ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ವಿಪ ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ, ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ, ಮಹಾದೇವ ಹೊರಟ್ಟಿ, ಶಂಕರ ಹಲಗತ್ತಿ, ಮನೋಜ ಪಾಟೀಲ, ದಾನಪ್ಪ ಕಬ್ಬೇರ ಇತರರಿದ್ದರು.

ಮೊಬೈಲ್ ಕಳ್ಳತನ ಮಾಡುತ್ತಿದ್ದ 8 ಜನರ ಬಂಧನ



ರಾಮದುರ್ಗ: ಕಟಕೋಳ ಪೊಲೀಸ್ ಠಾಣೆ ವ್ಯಾಪ್ತಿಯ ಜನನಿಬೀಡ ಪ್ರದೇಶ, ಸಂತೆ, ಜಾತ್ರೆ ನಡೆಯುವ ವಿವಿಧ ಗ್ರಾಮಗಳಲ್ಲಿ ಜನರ ಗಮನವನ್ನು ಬೇರೆಡೆ ಸೆಳೆದು ಮೊಬೈಲ್ ಕಳ್ಳತನ ಮಾಡುತ್ತಿದ್ದ 8 ಜನ ಆರೋಪಿಗಳನ್ನು ಕಟಕೋಳ ಪೊಲೀಸರು ಬಂಧಿಸಿದ್ದಾರೆ.

ಖಚಿತ ಮಾಹಿತಿ ಆಧರಿಸಿದ ಪೊಲೀಸರು ವಿಶೇಷ ತಂಡ ರಚಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರ ಮಾರ್ಗದರ್ಶನದಲ್ಲಿ ಶೋಧ ಕಾರ್ಯ ನಡೆಸಿದರು. ಒಟ್ಟು 8 ಜನರನ್ನು ಬಂಧಿಸಿ ಅವರಿಂದ ರೂ. 10.34 ಲಕ್ಷ ಮೌಲ್ಯದ 40 ಮೊಬೈಲ್ ಮತ್ತು ಎರಡು ಕಾರುಗಳನ್ನು ವಶ ಪಡಿಸಿಕೊಂಡಿದ್ದಾರೆ.

ಈ ಪ್ರಕರಣದಲ್ಲಿ ಭಾಗಿಯಾದ ಶಿವಮೊಗ್ಗ ಜಿಲ್ಲೆ ಭದ್ರಾವತಿ ಮೂಲದ ವಿಕಾಸ ವೆಂಕಟೇಶ ಭೋವಿ, ಕುಮಾರ ಪಾಪಣ್ಣ ಭೋವಿ, ಪ್ರವೀಣ ಮಂಜಪ್ಪ ಭೋವಿ, ಸಂತೋಷ ಗವಿಸ್ವಾಮಿ ಕುಂಡಾ, ಶಿವು ಯಲ್ಲಪ್ಪ ಭೋವಿ, ವೆಂಕಟೇಶ ಈರಪ್ಪ ಭೋವಿ, ಅಕ್ಷಯ ಗಣೇಶ ಎ.ಜಿ., ಮತ್ತು ಹುಬ್ಬಳ್ಳಿಯ ಸಚೀನ ಲಕ್ಷ್ಮಣ ಕಲ್ಲವಡ್ಡರ ಅವರನ್ನು ಬಂಧಿಸಿದ್ದಾರೆ.

ಒಟ್ಟು ರೂ.4,94,200 ಕಿಮ್ಮತ್ತಿನ ವಿವಿಧ ಕಂಪನಿಗಳ 40 ಮೊಬೈಲ್ ಫೋನ್‌ಗಳನ್ನು ಹಾಗೂ ರೂ. 5,40,000 ಕಿಮ್ಮತ್ತಿನ ಎರಡು ಕಾರುಗಳನ್ನು ಆರೋಪಿತರಿಂದ ಕಟಕೋಳ ಪೋಲೀಸರು ವಶಪಡಿಸಿಕೊಂಡಿದ್ದಾರೆ.

ಡಿಎಸ್‌ಪಿ ಚಿದಂಬರ ಮಡಿವಾಳರ, ಸಿಪಿಐ ವಿನಾಯಕ ಬಡಿಗೇರ ನೇತೃತ್ವದಲ್ಲಿ ಕಟಕೋಳ ಪಿಎಸ್‌ಐ ಬಸವರಾಜ ಕೊಣ್ಣೂರೆ, ಪ್ರೊಬೆಷನರಿ ಪಿಎಸ್‌ಐ ಅನ್ನಪೂರ್ಣ, ನುರಿತ ಅಪರಾಧ ವಿಭಾಗದ ಸಿಬ್ಬಂದಿ ಬಿ.ವಿ.ಹುಲಕುಂದ, ಎಸ್.ಎಸ್. ವಜ್ರಮಟ್ಟಿ, ಎಂ.ಸಿ. ಮನ್ನಿಕೇರಿ, ಎಸ್. ಎಂ.ಬಸರಿಕಟ್ಟಿ, ಆರ್.ಬಿ.ಗೋಕಾಕ. ಡಿ.ಎಚ್. ನಧಾಫ, ಬಿ.ಎಸ್. ಚುಂಚನೂರ, ಬಿ.ಎಚ್.ಪಾಟೀಲ, ಎಂ.ಎಂ.ದ್ಯಾಮನಗೌಡರ, ಎಂ.ಜಿ.ಹಿರೂರ, ಜೆ.ಆರ್. ಗಿಡ್ಡಪ್ಪನವರ ತಂಡದಲ್ಲಿದ್ದರು.

ಗುಂಡು ಹಾರಿಸಿ ಕೊಲೆಗೆ ಯತ್ನಿಸಿದ ಕಳ್ಳ

ಬಾದಾಮಿ: ಕಳ್ಳತನ ಮಾಡಲು ಬಂದ ವ್ಯಕ್ತಿ ಮನೆಯ ಮಾಲೀಕನ ಹೆಂಡತಿಗೆ ಗುಂಡು ಹಾರಿಸಿದ ಘಟನೆ ಶನಿವಾರ ರಾತ್ರಿ ತಾಲೂಕಿನ ಕರಡಿಗುಡ್ಡ ಎಸ್.ಎನ್.ಗ್ರಾಮದಲ್ಲಿ ನಡೆದಿದೆ.

ದೇವರನಿಂಬರಗಿ ಗ್ರಾಮದ ಕಳ್ಳತನ ಮಾಡಲು ಬಂದ ಆರೋಪಿ ಪ್ರಶಾಂತ ನಾವಿ ಈತ ಕಳ್ಳತನ ಮತ್ತು ಸುಲಿಗೆಯನ್ನು ಮಾಡುವ ಉದ್ದೇಶದಿಂದ ಕರಡಿಗುಡ್ಡ ಎಸ್.ಎನ್.ಗ್ರಾಮದಲ್ಲಿರುವ ಹೊಳೆಯಪ್ಪ ಮುಗಳಿ ಇವರ ಮನೆಯ ಹತ್ತಿರ ಹೋಗಿ ಮನೆಯ ಮುಂದೆ ಮಲಗಿದ್ದ ವ್ಯಕ್ತಿಯ ಜೇಬನ್ನು ಚೆಕ್ ಮಾಡಿ ಎರಡು ಕಿವಿಯಲ್ಲಿದ್ದ ಬಂಗಾರದ ಮುರುವುಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹೊಳೆಯಪ್ಪ ಅವನ ಹೆಂಡತಿ ಬಸವ್ವ ಮುಗಳಿ ಅದನ್ನು ತಡೆಯಲು ಪ್ರಯತ್ನಿಸಿದ್ದಾರೆ.

ಹೊಳೆಯಪ್ಪ ಮತ್ತು ಬಸವ್ವ ಇಬ್ಬರಿಗೂ ಕೊಲೆ ಮಾಡುವ ಉದ್ದೇಶದಿಂದ ತನ್ನ ಹತ್ತಿರ ಇದ್ದ ಪಿಸ್ತೂಲಿನಿಂದ ಹೆಂಡತಿಗೆ ಎರಡು ಗುಂಡುಗಳನ್ನು ಹಾರಿಸಿದ್ದು ಅದರಲ್ಲಿ ಒಂದು ಗುಂಡು ಬಸವ್ವನ ಬಲಗಾಲಿಗೆ ಬಡಿದು ಭಾರೀ ರಕ್ತಗಾಯವಾಗಿದೆ. ಹೆಂಡತಿಯನ್ನು ಆಸ್ಪತ್ರೆಯಲ್ಲಿ ಉಪಚಾರ ದಾಖಲಿಸಿ ಹೆಚ್ಚಿನ ಉಪಚಾರ ಕುರಿತು ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿದ್ದು ಘಟನೆಗೆ ಸಂಬಂಧಿಸಿದಂತೆ ಬಾದಾಮಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೀವರಕ್ಷಕ ಸಿಬ್ಬಂದಿಗಳಿಂದ ಮಗು ರಕ್ಷಣೆ

ಗೋಕರ್ಣ: ಪಾಲಕರಿಂದ ತಪ್ಪಿಸಿಕೊಂಡು ಅತ್ತಿತ್ತ ತಿರುಗಾಡುತ್ತಿದ್ದ ಪುಟ್ಟ ಮಗುವನ್ನ ಪ್ರವಾಸಿ ಮಿತ್ರ, ಗೃಹರಕ್ಷಕ ಸಿಬ್ಬಂದಿಗಳು ಸುರಕ್ಷಿತವಾಗಿ ಪಾಲಕರ ಮಡಿಲಿಗೆ ಸೇರಿಸಿದ ಘಟನೆ ಭಾನುವಾರ ಇಲ್ಲಿನ ಮುಖ್ಯ ಕಡಲತೀರದ ವಾಹನ ನಿಲುಗಡೆ ಸ್ಥಳದಲ್ಲಿ ನಡೆದಿದೆ.

ಚಿಕ್ಕ ಮಗು ಅಳುತ್ತಾ ತಿರುಗಾಡುತ್ತಿರುವುದನ್ನ ಗಮನಿಸಿದ ಕರ್ತವ್ಯದಲ್ಲಿದ್ದ ಗೃಹರಕ್ಷಕ ಸಿಬ್ಬಂದಿ ರಘು ನಾಯ್ಕ ಹಾಗೂ ಪ್ರವಾಸಿ ಮಿತ್ರ ಶೇಖರ ಹರಿಕಂತ್ರ ತಕ್ಷಣ ಮಗುವನ್ನ ತೆಗೆದುಕೊಂಡು ಸಮುದ್ರದ ಕಡೆ ತೆರಳದಂತೆ ತಡೆದಿದ್ದಾರೆ. ನಂತರ ಪಾಲಕರ ಹುಡುಕಾಟ ಪ್ರಾರಂಭಿಸಿದ್ದು, ಇವರಿಗೆ ಜೀವರಕ್ಷಕ ಸಿಬ್ಬಂದಿಗಳು ಜೊತೆಯಾಗಿದ್ದಾರೆ.

ಅರ್ಧ ಗಂಟೆಗೂ ಹೆಚ್ಚು ಕಾಲ ಅಳುತ್ತಿರುವ ಮಗುವನ್ನ ಸಮಾಧಾನ ಪಡಿಸುತ್ತಾ ಇಟ್ಟುಕೊಂಡು ಅಂತೂ ಪಾಲಕರನ್ನ ಪತ್ತೆ ಹಚ್ಚಿ ಹಸ್ತಾಂತರಿಸಿದ್ದಾರೆ. ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಅಶ್ವಿನಿ, ರಾಜು ಎಂಬುವವರು ಕುಟುಂಬ ಸಮೇತರಾಗಿ ಇಲ್ಲಿಗೆ ಪ್ರವಾಸಕ್ಕೆ ಬಂದಿದ್ದು, ಈ ವೇಳೆ ಮಗು ತಪ್ಪಿಸಿಕೊಂಡು ನಾಪತ್ತೆಯಾಗಿತ್ತು ಎಂದು ನಂತರ ತಿಳಿದು ಬಂತು. ಅಕ್ಷತಾ(1ವರ್ಷ)ರಕ್ಷಣೆಯಾದ ಬಾಲಕಿಯಾಗಿದ್ದು,ಸುರಕ್ಷಿತವಾಗಿ ನೀಡಿದ ರಕ್ಷಣಾ ತಂಡಕ್ಕೆ ಪ್ರವಾಸಿಗರು ಅಭಿನಂದಿಸಿ, ಕೃತಜ್ಞತೆ ಸಲ್ಲಿಸಿ ತೆರಳಿದ್ದಾರೆ.

ಜೂನಿಯರ್ ಅಟ್ಯಾ-ಪಟ್ಯಾ ಚಾಂಪಿಯನ್‌ಶಿಪ್‌ಗೆ ಆಯ್ಕೆ



ರಾಮದುರ್ಗ: ತಾಲೂಕಿನ ಚಂದರಗಿ ಎಸ್.ಎಂ.ಕಲೂತಿ ಕ್ರೀಡಾ ವಸತಿ ಶಾಲೆ ಕ್ರೀಡಾಪಟುಗಳು ಬಾಂಗ್ಲಾ ದೇಶದ ಈಶ್ವರಡಿಯಲ್ಲಿ ಮೇ ತಿಂಗಳು 29ರಿಂದ 31ರ ವರೆಗೆ ನಡೆಯಲಿರುವ ಏಷ್ಯನ್ ಅಂತಾರಾಷ್ಟ್ರೀಯ ಜೂನಿಯರ್ ಅಟ್ಯಾ-ಪಟ್ಯಾ ಚಾಂಪಿಯನ್‌ಶಿಪ್‌ಗೆ ಭಾರತ ತಂಡದ ಪರವಾಗಿ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳಾದ ಶಶಾಂಕ ಹುರಳಿ ಹಾಗೂ ಉಳವೇಶ ಲಮಾಣಿ ಅವರು ತಂಡಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು. ಜೊತೆಗೆ ತರಬೇತುದಾರರಾದ ಲಕ್ಷ್ಮಣ್ ಲಮಾಣಿ ಅವರು ಸಹ ಭಾರತ ತಂಡದ ತರಬೇತುದಾರರಾಗಿ ಆಯ್ಕೆಯಾಗಿದ್ದಾರೆ.

ಸಂಸ್ಥೆಯ ಸಂಸ್ಥಾಪಕ ಎಸ್.ಎಂ.ಕಲೂತಿ, ಅಧ್ಯಕ್ಷೆ ಮೃಣಾಲಿಣಿ ಪಟ್ಟಣ, ಉಪಾಧ್ಯಕ್ಷ ಮಹೇಶ ಭಾತೆ ಮತ್ತು ಆಡಳಿತ ಮಂಡಳಿಯ ನಿರ್ದೇಶಕರು, ವ್ಯವಸ್ಥಾಪಕರು, ಪ್ರಾಚಾರ್ಯರು ಹಾಗೂ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

ಜಾತ್ರೆ, ಕುಂಭೋತ್ಸವ ನಿಷೇಧಕ್ಕೆ ಆದೇಶ

ಬಳ್ಳಾರಿ: ಬಳ್ಳಾರಿ ತಾಲೂಕಿನ ಯರಗುಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಬೆಣಕಲ್ಲು ಗ್ರಾಮದಲ್ಲಿ ಜೂನ್ 4 ಮತ್ತು 5ರಂದು ಆಯೋಜಿಸಲಾಗಿದ್ದ ದುರುಗಮ್ಮ ಮತ್ತು ಮರಿಗಮ್ಮ ದೇವಿಯ ದೇವರ ಜಾತ್ರೆ ಹಾಗೂ ಕುಂಭೋತ್ಸವ ಕಾರ್ಯಕ್ರಮಗಳನ್ನು ನಿಷೇಽಸಿ ಜಿಲ್ಲಾಽಕಾರಿ ಹಾಗೂ ಜಿಲ್ಲಾ ದಂಡಾಽಕಾರಿ ನಾಗೇಂದ್ರ ಪ್ರಸಾದ್ ಕೆ. ಆದೇಶ ಹೊರಡಿಸಿದ್ದಾರೆ.

ಬೆಣಕಲ್ಲು ಗ್ರಾಮದಲ್ಲಿ ಸುಮಾರು 18 ವರ್ಷಗಳ ಹಿಂದೆ (2009ರಲ್ಲಿ) ಸಾಂಪ್ರದಾಯಿಕ ಕುಂಭೋತ್ಸವ ನಡೆದಿತ್ತು. ಆ ಬಳಿಕ ವಿವಿಧ ಕಾರಣಗಳಿಂದಾಗಿ ಕಳೆದ 18 ವರ್ಷಗಳಿಂದ ಈ ಕಾರ್ಯಕ್ರಮ ನಡೆದಿರಲಿಲ್ಲ. ಪ್ರಸಕ್ತ ಸಾಲಿನಲ್ಲಿ ದುರುಗಮ್ಮ ಮತ್ತು ಮರಿಗಮ್ಮ ದೇವಿಯ ಟ್ರಸ್ಟ್ ಸಮಿತಿಯವರು ಜಾತ್ರೆ ಮತ್ತು ಕುಂಭೋತ್ಸವವನ್ನು ಆಯೋಜಿಸಿದ್ದರು.

ಈ ಕಾರ್ಯಕ್ರಮದ ಕುರಿತು ಗ್ರಾಮದ ಎರಡು ಗುಂಪುಗಳ ನಡುವೆ ತೀವ್ರ ಭಿನ್ನಾಭಿಪ್ರಾಯಗಳು ಮೂಡಿದ್ದವು. ಫೆಬ್ರವರಿ 24ರಂದು ಸಿರುಗುಪ್ಪ ಉಪ ವಿಭಾಗದ ಪೊಲೀಸ್ ಉಪ ಅಽೕಕ್ಷಕರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಹಾಗೂ ಮೇ 19ರಂದು ಸಹಾಯಕ ಆಯುಕ್ತರ ನೇತೃತ್ವದಲ್ಲಿ ನಡೆದ ಶಾಂತಿ ಸಭೆಯಲ್ಲೂ ಗ್ರಾಮಸ್ಥರ ನಡುವೆ ದಿನಾಂಕ ಹಾಗೂ ಇತರ ವಿಷಯಗಳಿಗೆ ಸಂಬಂಽಸಿದಂತೆ ಒಮ್ಮತ ಮೂಡಿರಲಿಲ್ಲ. ಒಂದು ವೇಳೆ ಈ ಪರಿಸ್ಥಿತಿಯಲ್ಲಿ ಜಾತ್ರೆ ಮತ್ತು ಕುಂಭೋತ್ಸವ ಜರುಗಿದಲ್ಲಿ ಗ್ರಾಮದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಬರುವ ಸಂಭವ ಇರುವುದರಿಂದ ಕಾರ್ಯಕ್ರಮಕ್ಕೆ ಅನುಮತಿ ನೀಡಬಾರದು ಎಂದು ಜಿಲ್ಲಾ ಪೊಲೀಸ್ ಅಽೕಕ್ಷಕರು ಹಾಗೂ ಸಹಾಯಕ ಆಯುಕ್ತರು ಜಿಲ್ಲಾಽಕಾರಿಗಳಿಗೆ ವರದಿ ಸಲ್ಲಿಸಿದ್ದರು.

ತೆರೆಮರೆಯ ಸಾಧಕರಿಗೆ ಆರ್ಟ್ ಆಫ್ ಲಿವಿಂಗ್ ಪ್ರಶಸ್ತಿ ಪ್ರದಾನ



ಕಲಬುರಗಿ: ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 45ನೇ ವಾರ್ಷಿಕೋತ್ಸವ ಹಾಗೂ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ರವಿಶಂಕರ್ ಅವರ 70ನೇ ಜನ್ಮದಿನೋತ್ಸವದ ಅಂಗವಾಗಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ತೆರೆಮರೆಯ ಸಾಧಕರನ್ನು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸುಂದರ್ಭದಲ್ಲಿ ಸೇಡಂನ ಸದಾಶಿವ ಸ್ವಾಮಿಗಳು, ಡಾ.ರಘು ಕೃಷ್ಣಮೂರ್ತಿ ಹಾಗೂ ಶ್ರೀ ಸೂರಜ್ ಪುಲ್ಕರ್ ಅವರಿಗೆ 'ತೆರೆಮರೆಯ ಸಾಧಕರ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಪ್ರಶಸ್ತಿಯನ್ನು ಕಲಬುರಗಿಯ ಶ್ರೀ ಶರಣು ಸ್ವಾಮೀಜಿ ಅವರು ಪ್ರದಾನ ಮಾಡಿ, ಸಮಾಜದ ಒಳಿತಿಗಾಗಿ ಮೌನವಾಗಿ ಸೇವೆ ಸಲ್ಲಿಸುವ ವ್ಯಕ್ತಿಗಳ ಕೊಡುಗೆ ಅಪಾರವಾಗಿದ್ದು, ಇಂತಹ ಸಾಧಕರನ್ನು ಗುರುತಿಸಿ ಗೌರವಿಸುವುದು ಸಮಾಜಕ್ಕೆ ಮಾದರಿಯಾಗಲಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶರಣು ಪಪ್ಪಾ, ಉಮೇಶ ಶೇಟ್ಟಿ, ದತ್ತಾತ್ರೇಯ ಚಿಂಚೋಳಿ, ಚೆನ್ನವೀರ ತಡಕಲ್, ರಮೇಶ್ ಜೋಶಿ, ರಾಘವೇಂದ್ರ ಕುಲಕರ್ಣಿ, ವಿಜಯ ಮರಗೋಳ, ಮಲ್ಲಿನಾಥ್ ಪಾಟೀಲ್, ವಿಜಯ್ ಹೆರೂರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಆರ್ಟ್ ಆಫ್ ಲಿವಿಂಗ್ ವತಿಯಿಂದ ಆಯೋಜಿಸಲಾದ ಈ ಕಾರ್ಯಕ್ರಮವು ಸಾಧಕರಿಗೆ ಗೌರವ ಸಲ್ಲಿಸುವ ಮೂಲಕ ವಿಶೇಷವಾಗಿ ಗಮನ ಸೆಳೆಯಿತು.

CHANGE OF NAME
I, **AKSHATA GANGADHAR MAHENDRAKAR** (Old Name) Resident of H NO 27/28C, Near Shandil Aashram, Ramesh Bhavan, Nagashetti Koppa Keshwapur, Hubli, Dharwad, Karnataka, Pin Code: 580023, have changed my name as **AKSHATA SACHIN NAVALE** (New Name) henceforth I will be called and recognized by new name for all future purposes, dated: 31/05/2026.

CHANGE OF NAME
I, **BIBI AYIZA ALLABAX TAILOR** (Old Name) Age: 19 Occ: Student, R/o. Ward No 30 Bagalkot Road Near Govt Polytechnic Haveli Galli, Vijayapura Karnataka, Pin Code: 586101, I have changed my Name as **BIBI AYIZA TAILOR** (New Name) for all purposes affidavit dtd. 30-05-2026 Sworn before notory **M.M.Mulla** at Vijayapura Reg no 20410.

CHANGE OF NAME
I, **KARTHIKEY KADATI** (Old Name) Resident At H No: 171 Shivakrupa 3rd Main Road Vinayak Nagar Ranebennur - 581115, have changed my name as **KARTHIKEY DINESH KADATI** (New Name) for all purposes, vide affidavit dated: 30/05/2025 before notary **Chandrashekar Siddannavar**

CHANGE OF NAME
I, **KOUSER JAHAN MULLA** (Old Name) Age: 52 Occ: Housewife, R/o. Ward No 32 Opp Karnataka Vaibhav Press Shahu Nagar, Vijayapura Karnataka, Pin Code: 586101, I have changed my Name as **KOUSAR JAHAN MULLA** (New Name) for all purposes affidavit dtd. 30-05-2026 Sworn before notory **M.M.Mulla** at Vijayapura Reg no 20410.

CHANGE OF NAME
I, **MIRZA SAYADSAHEB NAIKWADI** (Old Name) Resident of 139, Mantor Road Mudhol. 587313, Dt: Bagalkot (address), have changed my name as **MIRZA NAIKWADI** (New Name) henceforth I will be called and recognized by new name for all future purposes, dated: 31/05/2026.

ಬಂಗಾರದ ನಾಣ್ಯದ ಹೆಸರಲ್ಲಿ ವಂಚನೆ

ಹಾವೇರಿ: ಬಂಗಾರದ ನಾಣ್ಯಗಳನ್ನು ಕೊಡುವುದಾಗಿ ನಂಬಿಸಿ ಬೆಂಗಳೂರು ಮೂಲದ ವ್ಯಾಪಾರಿಯೊಬ್ಬರಿಂದ ಸುಮಾರು 6 ಲಕ್ಷ ಹಣವನ್ನು ತೆಗೆದುಕೊಂಡು ಬಂಗಾರ ಕಾಯಿನ್ ಕೊಡದೆ ಮೋಸ ಮಾಡಿರುವ ಘಟನೆ ರಾಣೇಬೆನ್ನೂರ ತಾಲೂಕು ಕವಲೆತ್ತು ಗ್ರಾಮದಲ್ಲಿ ನಡೆದಿದೆ.

ಬೆಂಗಳೂರಿನ ಬೇಗೂರು ಬಳಿ ಇರುವ ಮೈಲಸಂದ್ರದ ವ್ಯಾಪಾರಿ ಎಚ್.ಎನ್ ಗುರುಮೂರ್ತಿ ಎಂಬುವವರೆ ಹಣ ಕಳೆದುಕೊಂಡವರು. ಬಾಗಲಕೋಟೆ ಜಿಲ್ಲೆ ಸಿದ್ದಾಪುರದ ಕುಮಾರ ಹಾಗೂ ಇತರೆ ಐದು ಜನರ ವಿರುದ್ಧ ದೂರು ದಾಖಲಿಸಲಾಗಿದೆ. ಕುಮಾರಪಟ್ಟಣಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಘಟನೆ ವಿವರ: ಆರೋಪಿ ಕುಮಾರ ಎಂಬುವವರು ಬೆಂಗಳೂರಿನಲ್ಲಿರುವ ದೂರುದಾರರ ಅಂಗಡಿಗೆ ವುಡನ್ ಕಂಪನಿಯಿಂದ ಹಣ್ಣು ಮತ್ತು ತರಕಾರಿ ಸರಬರಾಜು ಮಾಡುತ್ತಿದ್ದರು. ಕಳೆದ ಮೂರು ತಿಂಗಳಿನಿಂದ ಕೆಲಸ ಬಿಟ್ಟಿದ್ದ ಆರೋಪಿ ಕುಮಾರ, 15 ದಿನಗಳ ಹಿಂದೆಯಷ್ಟೇ ಫೋನ್ ಮಾಡಿ, ನಮ್ಮೂರಿನಲ್ಲಿ ಮನೆ ಕಟ್ಟಲು ತಳಪಾಯ ತೆಗೆಯುವಾಗ ಬಂಗಾರದ ನಾಣ್ಯಗಳು ಸಿಕ್ಕಿವೆ. ಅವುಗಳಲ್ಲಿ ಕೆಲವೊಂದು ನಾಣ್ಯ ತೆಗೆದುಕೊಂಡು ಆಭರಣ ಮಾಡಿಸಿಕೊಂಡಿದ್ದೇನೆ. ಉಳಿದ ನಾಣ್ಯಗಳನ್ನು ನಿನಗೆ ಕೊಡುತ್ತೇನೆ, ಹಣ ತೆಗೆದುಕೊಂಡು ಬರುವಂತೆ ತಿಳಿಸಿದ್ದಾರೆ.

ದೂರುದಾರರನ್ನು ರಾಣೇಬೆನ್ನೂರ ತಾಲೂಕು ಕವಲೆತ್ತು ಗ್ರಾಮದ ದುರ್ಗಾದೇವಿ ದೇವಸ್ಥಾನ ಬಳಿ ಕರೆಸಿಕೊಂಡ ಆರೋಪಿಗಳು, 6ಲಕ್ಷ ರೂ.ಹಣವನ್ನು ತೆಗೆದುಕೊಂಡು, ಎರಡು ಸಣ್ಣ ಬಂಗಾರದ ಮಾದರಿಯ ಕಾಯಿನ್ ಕೊಟ್ಟಿದ್ದಾರೆ. ಉಳಿದ ಕಾಯಿನ್‌ಗಳನ್ನು ಬೆಂಗಳೂರಿನ ಅಂಗಡಿಗೆ ಬಂದು ಕೊಡುತ್ತೇವೆಂದು ಹೇಳಿ ಮೋಸ ಮಾಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ತಿಳಿಸಿದೆ.

ಸಾಲಬಾಧೆ: ರೈತ ಆತ್ಮಹತ್ಯೆ

ಹಾವೇರಿ: ಸಾಲಬಾಧೆ ತಾಳಲಾರದೆ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ರಾಣೇಬೆನ್ನೂರ ತಾಲೂಕು ಕೂನಬೇವು ಪ್ಲಾಟ್‌ನಲ್ಲಿ ನಡೆದಿದೆ. ಕೂನಬೇವು ಗ್ರಾಮದ ಅಶೋಕಪ್ಪ ಮಹಾದೇವಪ್ಪ ಓರಗೊಂಡರ (68) ಆತ್ಮಹತ್ಯೆಗೆ ಶರಣಾದ ರೈತ. ಮೃತರು 3 ಎಕರೆ ಜಮೀನು ಹೊಂದಿದ್ದು, ಕೃಷಿ ಚಟುವಟಿಕೆಗಳಿಗಾಗಿ ಕೆನರಾ ಬ್ಯಾಂಕಿನಲ್ಲಿ 4 ಲಕ್ಷ ರೂ.ಬೆಳೆ ಸಾಲ ಮಾಡಿಕೊಂಡಿದ್ದರು. ಕಳೆದೆರಡು ವರ್ಷಗಳಿಂದ ಅತಿವೃಷ್ಟಿ ಹಾಗೂ ಅನಾವೃಷ್ಟಿ ಮಳೆಯಿಂದಾಗಿ ಬೆಳೆಗಳು ಸರಿಯಾಗಿ ಬಾರದೆ ಮನನೊಂದಿದ್ದರು. ಮಾಡಿದ ಸಾಲವನ್ನು ತೀರಿಸುವುದು ಹೇಗೆ ಎಂಬುದರ ಚಿಂತೆಯಲ್ಲಿ ಜೀವನದಲ್ಲಿ ಜಿಗುಪ್ಸೆಗೊಂಡು, ಮನೆಯಲ್ಲಿ ಯಾರು ಇಲ್ಲದಿರುವಾಗ ತನ್ನಷ್ಟಕ್ಕೆ ತಾನೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆಂದು ಮೃತರ ಮಗ ವಾಗೀಶ ಓರಗೊಂಡರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಾಣೇಬೆನ್ನೂರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷ್ಣಾ ನದಿಯಲ್ಲಿ ಬಾಲಕ ನೀರುಪಾಲು



ಕುಡಚಿ: ಕೃಷ್ಣಾ ನದಿಯಲ್ಲಿ ಆಟವಾಡುತ್ತಿದ್ದ ವೇಳೆ ಏಳು ವರ್ಷದ ಬಾಲಕನೊಬ್ಬ ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ರಾಯಬಾಗ ತಾಲೂಕಿನ ಶಿರಗೂರ ಸಮೀಪ ಸಂಭವಿಸಿದೆ.

ಮೃತ ಬಾಲಕನನ್ನು ಪ್ರಣವ ಸುನೀಲ ಕಾಂಬಳೆ (7) ಎಂದು ಗುರುತಿಸಲಾಗಿದೆ. ಆತನು ಮೂಲತಃ ಉಗಾರ ಖುರ್ದ ನಿವಾಸಿಯಾಗಿದ್ದು, ಪ್ರಸ್ತುತ ತಾಯಿಯ ಜೊತೆ ಶಿರಗೂರದಲ್ಲಿ ವಾಸವಾಗಿದ್ದ ಎನ್ನಲಾಗಿದೆ.

ಭಾನುವಾರ (ಮೇ 31) ಬೆಳಗ್ಗೆ ಬಾಲಕನ ತಾಯಿ ಪೂಜಾ ಅವರು ಬಟ್ಟೆ ಒಗೆಯಲು ಕೃಷ್ಣಾ ನದಿಗೆ ತೆರಳಿದ್ದ ವೇಳೆ, ತಾಯಿಯೊಂದಿಗೆ ಹೋಗಿದ್ದ ಪ್ರಣವ ನದಿಯ ನೀರಿನಲ್ಲಿ ಆಟವಾಡುತ್ತಿದ್ದನು. ಈ ಸಂದರ್ಭದಲ್ಲಿ ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿದ್ದಾನೆ. ಮಗನನ್ನು ಉಳಿಸಲು ತಾಯಿಯೂ ಕೂಡ ನೀರಿಗೆ ಹಾರಿದ್ದಾಳೆ. ವಿಷಯ ತಿಳಿದ ಕೂಡಲೇ ಕುಟುಂಬಸ್ಥರು, ಗ್ರಾಮಸ್ಥರು ಬಂದು ತಾಯಿಯನ್ನು ಮೇಲಕ್ಕೆತ್ತುವ ವೇಳೆಯಲ್ಲಿ ಪ್ರಜ್ಞಾಹೀನಾವಸ್ಥೆಯಲ್ಲಿದ್ದು ಕುಡಚಿ ಪಟ್ಟಣದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತಿದ್ದಾಳೆ. ಪ್ರಣವ್ ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿದ್ದಾನೆ. ಅಗ್ನಿಶಾಮಕ ದಳದ ಸಿಬ್ಬಂದಿಯಾದ ರಮೇಶ್ ಚಳನ್ನವರ, ನಿಲ್ಲಪ್ಪ ಹೆರವಾಡೆ, ಗೋಪಾಲ ಬನಶಂಕರಿ, ಶಂಕರ್ ಮೂಡಸಿ, ಶಾಹೂ ಕದಂ, ಸುಖುಮರ್ ಕಾಣಿಕೊಡಿ, ಸುರೇಶ ಹೆಗ್ಗಣ್ಣವರ, ಮುಜುಬ್ ಪಿರಂಜದೆ, ಶ್ರೀನಾಥ್ ಇಂಚಲ್, ಸುನಿಲ್ ನಾವಿ ಬಾಲಕನಿಗಾಗಿ ಶೋಧ ಕಾರ್ಯಾಚರಣೆ ನಡೆಸಿದರು.ಮಧ್ಯಾಹ್ನ ಸುಮಾರು 12 ಗಂಟೆ ವೇಳೆಗೆ ಬಾಲಕನ ಶವ ನದಿಯಲ್ಲಿ ಪತ್ತೆಯಾಗಿದೆ. ಘಟನೆ ಕುರಿತು ನೀಡಿರುವ ದೂರಿನಲ್ಲಿ ಬಾಲಕನ ಸಾವಿನ ಬಗ್ಗೆ ಯಾವುದೇ ಅನುಮಾನ ಇಲ್ಲ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಈ ಸಂಬಂಧ ಕುಡಚಿ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪಟ್ಟಣ ಪಂಚಾಯಿತಿ ಕಾರ್ಯಾಲಯ ತೆಕ್ಕಲಕೋಟೆ
ಬಳ್ಳಾರಿ (ಜಿಲ್ಲೆ)
ನಂ.ಪಪಂತೆ/ಕಾಮಗಾರಿ/ಕೆ.ಪಿ.ಪಿ.ಪೋರ್ಟಲ್/2026-27 ದಿನಾಂಕ: 29-05-2026
-:: ಅಲ್ಪಾವಧಿ ಟೆಂಡರ್ ಪ್ರಕಟಣೆ ::-
(ಸ್ಟಾಂಡರ್ಸ್ ಟೆಂಡರ್ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಬಿಡ್ ಡಾಕುಮೆಂಟ್ ಪ್ರಕಾರ ರ ನಿಬಂಧನೆಗಳಿಗೆ ಒಳಪಟ್ಟು)
1) ಖಾಲಿ ಟೆಂಡರ್ ಫಾರಂಗಾಗಿ ಕೆ.ಪಿ.ಪಿ. ಪೋರ್ಟಲ್ ಪದ್ಧತಿಯಲ್ಲಿ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಅವಧಿ : ದಿನಾಂಕ: 01/06/2026 ರಿಂದ 15/06/2026ರ ಸಂಜೆ 5.30 ಗಂಟೆವರೆಗೆ
2) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : ದಿನಾಂಕ 17/06/2026 ರಂದು ಬೆಳಿಗ್ಗೆ 11.00 ಗಂಟೆಗೆ
3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : ದಿನಾಂಕ 22/06/2026 : ರಂದು ಬೆಳಿಗ್ಗೆ 11.00 ಗಂಟೆಗೆ
ಒಂದು ವೇಳೆ ನಿಗಧಿಪಡಿಸಿದ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು.
ಇಂಡೆಂಟ್ ನಂ. 1) DMA/2025-26/SE7455/Call-2
ಸೂಚನೆ: ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್:- https://kppp.karnataka.gov.in/ ರಲ್ಲಿ ಮಾಹಿತಿ ಪಡೆಯಲು ತಿಳಿಯಪಡಿಸಿದೆ.
ಸಹಿ/- ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ತೆಕ್ಕಲಕೋಟೆ
ಸಹಿ/- ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ತೆಕ್ಕಲಕೋಟೆ

ಪಟ್ಟಣ ಪಂಚಾಯಿತಿ ಕಾರ್ಯಾಲಯ ತೆಕ್ಕಲಕೋಟೆ
ಬಳ್ಳಾರಿ (ಜಿಲ್ಲೆ)
ನಂ.ಪಪಂತೆ/ಕಾಮಗಾರಿ/ಕೆ.ಪಿ.ಪಿ.ಪೋರ್ಟಲ್/2026-27 ದಿನಾಂಕ: 29-05-2026
-:: ಅಲ್ಪಾವಧಿ ಟೆಂಡರ್ ಪ್ರಕಟಣೆ ::-
(ಸ್ಟಾಂಡರ್ಸ್ ಟೆಂಡರ್ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಬಿಡ್ ಡಾಕುಮೆಂಟ್ ಪ್ರಕಾರ ರ ನಿಬಂಧನೆಗಳಿಗೆ ಒಳಪಟ್ಟು)
1) ಖಾಲಿ ಟೆಂಡರ್ ಫಾರಂಗಾಗಿ ಕೆ.ಪಿ.ಪಿ. ಪೋರ್ಟಲ್ ಪದ್ಧತಿಯಲ್ಲಿ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಅವಧಿ : ದಿನಾಂಕ: 01/06/2026 ರಿಂದ 09/06/2026ರ ಸಂಜೆ 5.30 ಗಂಟೆವರೆಗೆ
2) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : ದಿನಾಂಕ 11/06/2026 ರಂದು ಬೆಳಿಗ್ಗೆ 11.00 ಗಂಟೆಗೆ
3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : ದಿನಾಂಕ 15/06/2026 : ರಂದು ಬೆಳಿಗ್ಗೆ 11.00 ಗಂಟೆಗೆ
ಒಂದು ವೇಳೆ ನಿಗಧಿಪಡಿಸಿದ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು.
ಇಂಡೆಂಟ್ ನಂ. 1)DMA/2026-27/SE7755 call-2, 2) DMA/2026-27/OW/WORK_INDENT58965, 3) DMA/2026-27/RD/WORK_INDENT_58371, 4)DMA/2026-27/RD/WORK_INDENT58366
ಸೂಚನೆ: ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್:- https://kppp.karnataka.gov.in/ ರಲ್ಲಿ ಮಾಹಿತಿ ಪಡೆಯಲು ತಿಳಿಯಪಡಿಸಿದೆ.
ಸಹಿ/- ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ತೆಕ್ಕಲಕೋಟೆ
ಸಹಿ/- ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ತೆಕ್ಕಲಕೋಟೆ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು

ಜಾಹೀರಾತಿಗಾಗಿ ಸಂಪರ್ಕಿಸಿ
8892497927

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 25536567/26096832/910/922 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop
ಸಂ. ಕಹಾಮ/ಖರೀದಿ/NPFP/ಇ-ಪ್ರೊಕ್./ಟೆಂಡರ್-930/2026 ದಿನಾಂಕ: 30.05.2026
ಟೆಂಡರ್ ಪ್ರಕಟಣೆ
ಕರ್ನಾಟಕ ಹಾಲು ಮಹಾ ಮಂಡಳಿ ಬೆಂಗಳೂರು ನಂದಿನಿ ಪ್ಯಾಕೇಜಿಂಗ್ ಫಿಲಂ ಘಟಕಕ್ಕೆ ಅವಶ್ಯವಿರುವ Master Batch (White Premium Master Batch), PPA (Polymer Processing Aid), Ethyl Acetate & IPA (Food Grade) ಅರೆವಾರ್ಷಿಕ ಅವಧಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 20.06.2026 ರಂದು 03.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್‌ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಕಾರ್ಯದರ್ಶಿಗಳ ಕಾರ್ಯಾಲಯ
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಮಹದೇಶ್ವರ ಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.
ದೂರವಾಣಿ ಸಂಖ್ಯೆ: 08225-272128 Email: sec.mmtemple@gmail.com
ಸಂಖ್ಯೆ: ಶ್ರೀ ಮ.ಮ.ಕ್ಷೇ.ಅ.ಪ್ರಾ/3(ದಾಸೋಹ)/ಪಿಆರ್/05/2026-27 ದಿನಾಂಕ: 28-05-2026
ಅಲ್ಪಾವಧಿ ಇ-ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ 2ನೇ ಕರೆ
ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕ್ರ ಸಂ	ಟೆಂಡರ್ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ)
1	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ನಿತ್ಯ ಅನ್ನ ದಾಸೋಹದಲ್ಲಿ ದಾಸ್ತಾನು ಇರುವ ಸುಮಾರು 200 ಟನ್ (2 ಲಕ್ಷ ಕೆ.ಜಿ.) ಹೆಚ್ಚುವರಿ ಅಕ್ಕಿಯನ್ನು ವಿಲೇ ಮಾಡುವ ಬಗ್ಗೆ	60.00	60,000.00

ವಿವರಗಳನ್ನು https://kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ಅವಧಿಯಲ್ಲಿ ದಿನಾಂಕ 05.06.2026 ಸಂಜೆ 4.00 ಗಂಟೆ ಒಳಗಾಗಿ ಪ್ರಾಧಿಕಾರದ ಕಛೇರಿ ಮೊಬೈಲ್ ಸಂಖ್ಯೆ: +91 9739117671 ಶ್ರೀ ಮಲ್ಲಿಕಾರ್ಜುನ ದಾಸೋಹ ವ್ಯವಸ್ಥಾಪಕ ರವರನ್ನು ಸಂಪರ್ಕಿಸಬಹುದು.
ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1.	ಇ-ಪೋರ್ಟಲ್‌ನಲ್ಲಿ ಇ-ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	ದಿ. 28.05.2026 ರ ನಂತರ
2.	ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಕಾಲ	ದಿನಾಂಕ 06.06.2026 ಸಂಜೆ 5.00 ಗಂಟೆವರೆಗೆ
3.	ಬಹಿರಂಗ ಹರಾಜು ನಡೆಯುವ ದಿನಾಂಕ ಮತ್ತು ಕಾಲ ಸ್ಥಳ: ದಾಸೋಹ ಭವನದ ಆವರಣ, ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮ.ಬೆಟ್ಟ	ದಿನಾಂಕ 08.06.2026 ಬೆಳಿಗ್ಗೆ 11.00 ಗಂಟೆಗೆ
4.	ಇ-ಟೆಂಡರ್ ತೆರೆಯುವ ದಿನಾಂಕ ಮತ್ತು ಕಾಲ	ದಿನಾಂಕ 08.06.2026 ಬೆಳಿಗ್ಗೆ 12.00 ನಂತರ

ಕಾರ್ಯದರ್ಶಿ, ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ, ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟ
ಸಂ/ವಾಸಾಸಂಇ/ಹಿಸನಿ/ಚಾ.ನಗರ/140/2026-27

ಸಂಪಾದಕೀಯ

ಹಲ್ಲೆ ಮತ್ತು ಹುಟ್ಟುವ ಪ್ರಶ್ನೆಗಳು

ತೃಣಮೂಲ ಕಾಂಗ್ರೆಸಿನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮೇಲೆ ಹಲ್ಲೆ ನಡೆಸಿದವರ ಬಂಧನವಾಗಿದೆ. ಆದರೆ ರಾಜಕೀಯದಾಟ ಆರಂಭವಾಗಿದೆ. ಮಮತಾ ಬ್ಯಾನರ್ಜಿಯವರು ಅದನ್ನು ದೇಶದ ಅತ್ಯಂತ ಪ್ರಮುಖ ಘಟನೆ ಎಂಬಂತೆ ಚಿತ್ರಿಸಲಾರಂಭಿಸಿದ್ದಾರೆ. ರಾಹುಲ್ ಗಾಂಧಿ ಕೂಡ ಸಾಂತ್ವನ ವ್ಯಕ್ತಪಡಿಸಿದ್ದಾರೆ. ಸ್ವಯಂ ಅಭಿಷೇಕ್ ಬ್ಯಾನರ್ಜಿ, ಇದು ಸರ್ಕಾರಿ ಪ್ರಾಯೋಜಿತ ಹಲ್ಲೆ ಎಂದಿದ್ದಾರೆ. ಹಲ್ಲೆ ಅಕ್ಷಮ್ಯ. ಆದರೆ ಈ ಪ್ರಕರಣ ಅನೇಕ ಪ್ರಶ್ನೆಗಳನ್ನು ಹುಟ್ಟಿಸುತ್ತವೆ.



ಬಿಜೆಪಿ ಸರ್ಕಾರ ಪಶ್ಚಿಮ ಬಂಗಾಳದಲ್ಲಿ ಹಿಂಸೆಯ ರಾಜಕಾರಣಕ್ಕಿಳಿದಿದೆ, ವ್ಯವಸ್ಥೆಯನ್ನು ಬಳಸಿಕೊಂಡು ವಿರೋಧ ಪಕ್ಷಗಳನ್ನು ದಮನಿಸುತ್ತಿದೆ ಎನ್ನುವ ಮಮತಾ ತಮ್ಮ ಅಧಿಕಾರಾವಧಿಯಲ್ಲಿ ದಿನನಿತ್ಯ ಬಿಜೆಪಿ ಕಾರ್ಯಕರ್ತರ ಕೊಲೆಗಳಾಗುತ್ತಿದ್ದಾಗ ಸಂವೇದನಾಹೀನರಾಗಿ ನಡೆದುಕೊಂಡಿದ್ದರು. ಅಭಿಷೇಕ್ ಬ್ಯಾನರ್ಜಿಯ ಸೋನಾರ್‌ಪುರ ಭೇಟಿಯಲ್ಲೇ ಅಪ್ರಮಾಣಿಕತೆಯಿದೆ. ಚುನಾವಣೆಯ ನಂತರದ ಹಿಂಸಾಚಾರದಲ್ಲಿ ಮೃತರಾದವರ ಮನೆಗಳಿಗೆ ಸಂತಾಪ ಸೂಚಿಸಲು ತೆರಳಿದ್ದರೋ ಅಥವಾ ಕೆರಳಿಸಲು ಹೋಗಿದ್ದರೋ ಎಂಬ ಗುಮಾನಿ ಜನರಿಗಿದೆ. ಚುನಾವಣೆಯ ಸಮಯದಲ್ಲಿ ಇದೇ ಅಭಿಷೇಕ್ ಬ್ಯಾನರ್ಜಿ ಮೇ 4ರ ನಂತರ ನಿಮ್ಮನ್ನು ಕಾಪಾಡಲು ಯಾವ ದೆಹಲಿಯ ನಾಯಕ ಬರುತ್ತಾನೆ ನೋಡೋಣ ಎಂದು ನೇರಾನೇರ ಬಿಜೆಪಿ ಕಾರ್ಯಕರ್ತರಿಗೆ ಬೆದರಿಕೆಯನ್ನೂ ಒಡ್ಡಿದ್ದರು. ಅಂದರೆ ಈ ಅಭಿಷೇಕ್ ಬ್ಯಾನರ್ಜಿ ಮೂಲತಃ ಗೂಂಡಾಗಿರಿಯನ್ನೇ ರಾಜಕಾರಣ ಎಂದುಕೊಂಡ ಮನುಷ್ಯ. ಅಲ್ಲದೆ ಪ.ಬಂಗಾಳದಲ್ಲಿ ಮಮತಾರನ್ನು ಬೆಂಬಲಿಸುವ ಅಸಂಖ್ಯಾತ ಕಾರ್ಯಕರ್ತರಿಗೂ ಅಭಿಷೇಕ್ ಬ್ಯಾನರ್ಜಿ ಕಂಡರಾಗುತ್ತಿರಲಿಲ್ಲ. ಸೋಲಿನ ನಂತರ ಇದಕ್ಕೆ ನೇರವಾಗಿ ಅಭಿಷೇಕ್ ಬ್ಯಾನರ್ಜಿಯೇ ಕಾರಣ ಎಂದು ಅನೇಕ ಟಿ.ವಿ ಚರ್ಚೆಗಳಲ್ಲಿ ತೃಣಮೂಲ ಕಾಂಗ್ರೆಸಿನ ಸಮರ್ಥಕರೇ ಆರೋಪವನ್ನು ಮಾಡಿದ್ದರು. ಇವೆಲ್ಲವನ್ನೂ ನೋಡಿದರೆ ಟಿಎಂಸಿಯ ಕಾರ್ಯಕರ್ತರೇ ತಮ್ಮ ಸೋಲಿಗೆ ಇವರೇ ಕಾರಣರಾದರೆಂದು ಯಾಕೆ ಹಲ್ಲೆ ನಡೆಸಿರಬಾರದು? ದಶಕಗಳ ಕಾಲ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಂಡು ಹಿಂಸಾಚಾರದ ಮೂಲಕ ಗೆಲ್ಲುತ್ತಿದ್ದ ಟಿಎಂಸಿ ಹಲ್ಲೆಯ ಬಗ್ಗೆ ದೂರನ್ನೇಕೆ ನೀಡಲಿಲ್ಲ? ಇದು ಸರ್ಕಾರಿ ಪ್ರಾಯೋಜಿತ ಹಲ್ಲೆಯಾಗಿದ್ದರೆ ಪೊಲೀಸರೇಕೆ ಸ್ವಯಂಪ್ರೇರಣೆಯಿಂದ ದೂರು ದಾಖಲಿಸಿಕೊಳ್ಳುತ್ತಿದ್ದರು? ನಾಲ್ವರನ್ನೇಕೆ ಬಂಧಿಸುತ್ತಿದ್ದರು? ಘಟನೆಯ ನಂತರ ಅನುಕಂಪದ ಹೇಳಿಕೆಗಳನ್ನು ನೀಡುತ್ತಿರುವ ಟಿಎಂಸಿ ಮತ್ತು ಅದರ ನಾಯಕಿಯ ಸುಳ್ಳುಗಳನ್ನು ನೋಡಿದರೆ ಇವೆಲ್ಲಾ ಸೋಲಿನ ಹತಾಶೆಯಿಂದ ಹೊರಬಂದ ನಾಟಕ ಎಂದೇ ಅನಿಸುತ್ತದೆ. ಮಮತಾ ಬ್ಯಾನರ್ಜಿ ಒಂದು ಹೆಜ್ಜೆ ಮುಂದುವರಿದು ಐಸಿಯುನಲ್ಲಿದ್ದ, ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯನ್ನು ಆಸ್ಪತ್ರೆಯಿಂದ ತುರಾತುರಿಯಲ್ಲಿ ಬಿಡುಗಡೆ ಮಾಡಿದ್ದಾರೆ ಎಂದೂ ಆರೋಪಿಸಿದ್ದಾರೆ, ಇದಕ್ಕೆ ಸರ್ಕಾರದ ಬೆದರಿಕೆಯೇ ಕಾರಣ ಎಂದು ಆರೋಪವನ್ನು ಮಾಡಿದ್ದಾರೆ. ಹಲ್ಲೆ ಪ್ರಕರಣದಲ್ಲಿ ಸಹಜವಾಗಿ ನಡೆಯಬೇಕಾದ ವೈದ್ಯಕೀಯ ಪ್ರಕ್ರಿಯೆಗಳು ಮುಗಿದ ಮೇಲೆ ಯಾಕಾದರೂ ಅಭಿಷೇಕ್ ಬ್ಯಾನರ್ಜಿ ಆಸ್ಪತ್ರೆಯಲ್ಲಿರಬೇಕು? ಈ ಎಲ್ಲಾ ನಾಟಕದ ತಾತ್ಪರ್ಯವೇನೆಂದರೆ ಸೋತು ಸುಣ್ಣವಾದ ಟಿಎಂಸಿ ಮುಂದಿನ ದಿನಗಳಲ್ಲಿ ಇಂಥ ನಾಟಕಗಳನ್ನು ನಿರಂತರ ಮಾಡುತ್ತಿರುತ್ತದೆ ಎಂಬುದು!

ಸಮರ್ಪಿತ ಬದುಕಿನ ಒಂದೇ ಬಳ್ಳಿಯ ಹೂಗಳು

ಈ ಮೂವರದೂ ಒಂದೇ ರಾಗ -ಅದು ಸಮಾಜಮುಖಿ ರಾಗ. ಅವರೆಲ್ಲ ಸ್ವಂತಕ್ಕಾಗಿ ಬದುಕದೆ ಸಮಾಜಕ್ಕಾಗಿ ಬದುಕು ನಡೆಸಿದವರು.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಒಂದೇ ಮನೆಗೆ ಸೇರಿದ ಸದಸ್ಯರಲ್ಲಿ ಹಲವರು ವೈದ್ಯರಾಗುವುದನ್ನು ನೋಡಿದ್ದೇವೆ. ನ್ಯಾಯವಾದಿ, ನ್ಯಾಯಾಧೀಶರು, ಅಧ್ಯಾಪಕರಾಗುವುದನ್ನು ನೋಡಿದ್ದೇವೆ. ಒಂದೇ ಮನೆಯಲ್ಲಿ, ತಂದೆ, ಮಗ, ಮೊಮ್ಮಗ ರಾಜಕಾರಣಿಯಾಗುವುದು ಹೊಸತೇನಲ್ಲ. ಆದರೆ ಒಂದೇ ಮನೆಗೆ ಸೇರಿದ ಸೋದರ, ಸೋದರಿಯರು ಸಮಾಜ ಸೇವೆಗಾಗಿ ಬದುಕು ಮುಡಿಪಾಗಿಟ್ಟ ನಿದರ್ಶನ ತೀರಾ ವಿರಳ. ಬೆಂಗಳೂರಿನ ಸ್ವರ್ಗೀಯರಾದ ಸೂರ್ಯನಾರಾಯಣರಾವ್, ಕೃ. ನರಹರಿ ಮತ್ತು ಕೃ. ರುಕ್ಮಿಣಿ ಸಮಾಜ ಸೇವೆಗಾಗಿಯೇ ಸಂಪೂರ್ಣ ಬದುಕು ಮುಡಿಪಾಗಿಟ್ಟ ಒಂದೇ ಬಳ್ಳಿಯ ಹೂಗಳು.

1967ರಲ್ಲಿ ಎಂ.ನಾಗೇಶ್ವರರಾವ್ ಮತ್ತು ಎಂ.ಎಸ್.ನಾಯಕ್ ನಿರ್ದೇಶನದ 'ಒಂದೇ ಬಳ್ಳಿಯ ಹೂಗಳು' ಎಂಬ ಕನ್ನಡ ಚಿತ್ರ ತೆರೆಕಂಡಿತ್ತು. ಅದರಲ್ಲೊಂದು ಅರ್ಥಗರ್ಭಿತ ಹಾಡು: ''ಒಂದೇ ಬಳ್ಳಿಯ ಹೂಗಳು ನಾವು ಪ್ರೀತಿಯೇ ನಮಗಾಧಾರ! ಒಂದೇ ರಾಗ ಹರಿಸಿರೇ ಹರಿಸಿರೆ ಈಗ ಪಾವನ ಗಂಗಾಧರ'' ಸ್ವರ್ಗೀಯರಾದ ಕೃ.ಸೂರ್ಯನಾರಾಯಣರಾವ್, ಕೃ.ನರಹರಿ ಮತ್ತು ಕೃ. ರುಕ್ಮಿಣಿ– ಈ ಮೂವರು ಒಂದೇ ಬಳ್ಳಿಯ ಹೂಗಳು. ಒಂದೇ ತಾಯಿಯ ಮಕ್ಕಳು. ದೇಶಭಕ್ತಿ, ಸಮಾಜ ಸೇವೆಯೇ ಅವರಿಗಾಧಾರ. ಈ ಮೂವರದೂ ಒಂದೇ ರಾಗ –ಅದು ಸಮಾಜಮುಖಿ ರಾಗ. ಸ್ವಂತಕ್ಕಾಗಿ ಬದುಕದೆ ಸಮಾಜಕ್ಕಾಗಿ ಬದುಕು ನಡೆಸಿದರು. ಸ್ವಂತದ ಸುಖ ಭೋಗಗಳನ್ನು ತ್ಯಜಿಸಿ, ಸಮಾಜ ಸೇವೆಯ ಯಜ್ಞದಲ್ಲಿ ಸಮಿಧೆಯಾಗಿ ಉರಿದರು. 'ಹಮ್ ಕರೇ ರಾಷ್ಟ್ರ ಆರಾಧನ್ /ತನ್ ಸೇ ಮನ್ ಸೇ ಧನ್ ಸೇ/ ತನು ಮನ ಧನ ಜೀವನ ಸೇ' ಎಂಬ ಸಂಘಗೀತೆಗೆ ನಿದರ್ಶನವಾದರು.

ಕೃ. ಸೂರ್ಯನಾರಾಯಣ ರಾವ್



ಸೂರೂಜಿ ಎಂದೇ ಜನಪ್ರಿಯರಾಗಿದ್ದ ಸೂರ್ಯನಾರಾಯಣರಾವ್ ಅಜಾನುಬಾಹು ವ್ಯಕ್ತಿ. (ಜನನ 20-08-1924; ನಿಧನ 19-11-2016). ತಮ್ಮ ಬಿ.ಎಸ್‌ಸಿ. ಪದವಿ ಮುಗಿಸಿದ ಬಳಿಕ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ ಹೊರಟವರು ಮತ್ತೆ ಹಿಂತಿರುಗಿ ನೋಡಿದ್ದೇ ಇಲ್ಲ. ಕರ್ನಾಟಕದಲ್ಲಿ ಸಂಘದ ವಿವಿಧ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಸೂರೂಜಿಯವರನ್ನು ಸಂಘದ ಪಾಲಿಗೆ ಕಬ್ಬಿಣದ ಕಡಲೆಯಂತಿದ್ದ ತಮಿಳುನಾಡು ಪ್ರಾಂತ ಪ್ರಚಾರಕರಾಗಿ ಶ್ರೀ ಗುರೂಜಿಯವರು ಕಳುಹಿಸಿದಾಗ ಸೂರೂಜಿ ಅಲ್ಲೊಂದು ಪವಾಡವನ್ನೇ ಮಾಡಿಬಿಟ್ಟರು. ಕನ್ನಡಿಗರಾಗಿದ್ದ ಸೂರೂಜಿ ಮೊದಲು ತಮಿಳು ಭಾಷೆಯನ್ನು ಮಾತನಾಡಲು, ಓದಲು ಕಲಿತರು. ಕ್ರಮೇಣ ಸಭೆಗಳಲ್ಲಿ ತಮಿಳಿನಲ್ಲೇ ಭಾಷಣ ಮಾಡಿ ತಮಿಳರ ಹೃದಯ ಗೆದ್ದರು. ನಡುವೆ ಕರ್ನಾಟಕಕ್ಕೆ ಕಾರ್ಯನಿಮಿತ್ತ ಬಂದು ಇಲ್ಲಿ ಸ್ವಯಂಸೇವಕರ ಬೈಠಕ್ ತೆಗೆದುಕೊಂಡಾಗ ಸೂರೂಜಿ ಮರೆತು ತಮಿಳಿನಲ್ಲೇ ಕೆಲವು ಬಾರಿ ಮಾತನಾಡಿದ್ದೂ ಉಂಟು! ಆ ಮಟ್ಟಕ್ಕೆ ತಮಿಳು ಅವರಿಗೆ ಹೃದ್ಗತವಾಗಿತ್ತು. ಸ್ವಾಮಿ ವಿವೇಕಾನಂದರ ಕುರಿತು ಅವರು ಮಾತನಾಡತೊಡಗಿದರೆ ವಿವೇಕಾನಂದರೇ ಪ್ರತ್ಯಕ್ಷ ಎದುರು ಬಂದು ಮಾತಾಡಿದಷ್ಟು ಪ್ರಭಾವಿಯಾಗಿರುತ್ತಿತ್ತು. ಸಂಘದ ಅ.ಭಾ. ಸೇವಾ ಪ್ರಮುಖರಾಗಿಯೂ ಕಾರ್ಯನಿರ್ವಹಿಸಿದ ಸೂರೂಜಿ ಕೆನ್ಯಾ, ನೈರೋಬಿ ಸೇರಿದಂತೆ ಹಲವು ದೇಶಗಳಿಗೆ ತೆರಳಿ, ಅಲ್ಲೆಲ್ಲ ಹಿಂದೂ ಸಂಘಟನೆಗಳಿಗೆ ಮಾರ್ಗದರ್ಶನ ಮಾಡಿದ್ದರು.

ಉಡುಪಿಯಲ್ಲಿ ನಡೆದ ವಿಶ್ವ ಹಿಂದು ಪರಿಷತ್ ಸಮ್ಮೇಳನದ ಯಶಸ್ಸಿಗೆ ಸೂರೂಜಿಯವರ ಕುಶಲ ಸಂಘಟನೆಯೂ ಪ್ರಮುಖ ಕಾರಣ. ಸಮಾಜದ ಅನೇಕ ಗಣ್ಯರು, ಸಂತ ಮಹಂತರು, ಚಿಂತಕರನ್ನು ಸಂಘದ ತೆಕ್ಕೆಗೆ ತಂದು ಅವರನ್ನು ಸಮಾಜಮುಖಿ ಕಾರ್ಯಗಳಿಗೆ ಪ್ರೇರಿಸಿದ ಮಹಾನ್ ಸಂಘಟಕ. ಕುಟುಂಬದ ಹಿರಿ ಮಗನಾಗಿ ಸಂಸಾರದ ನೊಗವನ್ನು ಹೊರಬೇಕಾಗಿದ್ದರೂ ಸಮಾಜ ಕಾರ್ಯದ ನೊಗಹೊತ್ತು ತಿರುಗಿದ ಧ್ಯೇಯವಾದಿ.

ಕೃ. ನರಹರಿ



ಕೃ. ನರಹರಿಯವರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರ. ಕೊಡಗು ಜಿಲ್ಲೆಯಲ್ಲಿ ಎರಡು ವರ್ಷ ಸಂಘದ ಪ್ರಚಾರಕ್ ಆಗಿ ಕಾರ್ಯನಿರ್ವಹಣೆ. ಮನೆಯ ಆರ್ಥಿಕ ಸ್ಥಿತಿ ಸರಿಯಾಗಿಸಲು ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ 24 ವರ್ಷ ಉಪನ್ಯಾಸಕನಾಗಿ ಸೇವೆ. ಸಂಘದ ಸೂಚನೆಯಂತೆ ಉಪನ್ಯಾಸಕ ವೃತ್ತಿ ಕೈಗೊಂಡಿದ್ದರೇ ಹೊರತು ಅವರ ಸ್ವಂತ ಇಚ್ಛೆ ಅದಾಗಿರಲಿಲ್ಲ. (ಅಸಲಿಗೆ ಸ್ವಂತದ ಇಚ್ಛೆ ಎಂಬುದೇ ಅವರಿಗಿರಲಿಲ್ಲ). ಅನಂತರ ಸ್ವಯಂ ನಿವೃತ್ತಿ ಪಡೆದು ಶಿಕ್ಷಕ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಿದ್ದೂ ಸಂಘದ ಸೂಚನೆಯ ಪಾಲನೆಗಾಗಿ. ವಿಧಾನ ಪರಿಷತ್ ಸದಸ್ಯರಾಗಿ 18 ವರ್ಷ ಕಾಲ ಕಾರ್ಯ ನಿರ್ವಹಿಸಿದರೂ ತಾನೊಬ್ಬ ಎಂಎಲ್‌ಸಿ ಎಂಬ ಗತ್ತು, ದರ್ಪ ಅವರಲ್ಲಿ ಒಂದಿನಿತೂ ಇರಲಿಲ್ಲ. ಶಾಸಕನಾಗಿ ದೊರೆಯುತ್ತಿದ್ದ ವೇತನ , ಉಚಿತ ಸರ್ಕಾರಿ ನಿವೇಶನ ಇನ್ನಿತರ ಸೌಲಭ್ಯಗಳನ್ನು ನರಹರಿಯವರು ಸ್ವಂತಕ್ಕೆ ಬಳಕೆ ಮಾಡಿಕೊಂಡಿದ್ದೇ ಇಲ್ಲ. ಅದನ್ನೆಲ್ಲ ಸಂಘ ಪರಿವಾರದ ಸಂಘ ಸಂಸ್ಥೆಗಳಿಗೆ ದಾನವಾಗಿ ನೀಡಿದರು. ಅದೆಷ್ಟೋ ಬಡ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ತಮ್ಮ ಜೇಬಿನಿಂದ ಹಣ ಕಳಿಸುತ್ತಿದ್ದರು. ಪ್ರಸಿದ್ಧಿ, ಪ್ರಚಾರಗಳಿಂದ ಸದಾ ದೂರ. ನರಹರಿಯವರು ಆರೆಸ್ಸೆಸ್‌ನ ಕಟ್ಟಾಳು ಎಂಬುದು ಬಿಜೆಪಿಯೇತರ ರಾಜಕೀಯ ಪಕ್ಷಗಳಿಗೆ ಚೆನ್ನಾಗಿ ತಿಳಿದಿತ್ತು. ಆದರೆ ಎಲ್ಲಾ ಪಕ್ಷದ ಮುಖಂಡರು ಅವರಿಗೆ ತಲೆಬಾಗಿ ಗೌರವ ನೀಡುತ್ತಿದ್ದರು. ಅಧಿವೇಶನದ ವೇಳೆ ಶಿಕ್ಷಣ ರಂಗಕ್ಕೆ ಸಂಬಂಧಿಸಿ ನರಹರಿಯವರು ಮಾಡುತ್ತಿದ್ದ ಭಾಷಣವನ್ನು ತದೇಕಚಿತ್ತರಾಗಿ ಆಲಿಸುತ್ತಿದ್ದರು.

ವೈಯಕ್ತಿಕ ಮೌಲ್ಯ, ಕೌಟುಂಬಿಕ ಮೌಲ್ಯ, ಸಾಮಾಜಿಕ ಮೌಲ್ಯ, ಆಧ್ಯಾತ್ಮಿಕ ಮೌಲ್ಯ ಮತ್ತು ರಾಷ್ಟ್ರೀಯ ಮೌಲ್ಯ– ಈ ಐದು ಬಗೆಯ ಮೌಲ್ಯಗಳನ್ನು ರೂಢಿಸಿಕೊಳ್ಳುವಂತೆ ನರಹರಿಯವರು ತಾವು ಹೋದೆಡೆಯಲ್ಲೆಲ್ಲ ಯುವ ಪೀಳಿಗೆಗೆ ಕರೆ ನೀಡುತ್ತಿದ್ದರು. ಶಿಸ್ತು, ಸರಳತೆ, ಬದ್ಧತೆಗೆ ಅನ್ವರ್ಥಕರಾಗಿ ಸಮಾಜ ಸಮರ್ಪಿತ ಬದುಕು ನಡೆಸಿದರು. (ಜನನ 25-05-1932; ನಿಧನ 8-10-2025).

ಕೃ. ರುಕ್ಮಿಣಿ



ಕೃ. ಸೂರೂಜಿಯವರ ತಂಗಿಯಾಗಿ, ನರಹರಿಯವರ ಅಕ್ಕನಾಗಿ ಜನಿಸಿದವರು ಕೃ. ರುಕ್ಮಿಣಿ (ರುಕ್ಮಿಣಿಯಕ್ಕ ಎಂದೇ ಚಿರಪರಿಚಿತರು). ಬಿ.ಎಸ್‌ಸಿ, ಬಿಎಡ್ ಪದವಿ ಪಡೆದ ಬಳಿಕ ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ ಪ್ರೌಢಶಾಲೆಗೆ ಶಿಕ್ಷಕಿಯಾಗಿ ಸೇರಿ ವೃತ್ತಿ ಆರಂಭಿಸಿದರು. ಅನಂತರ ಗಣಿತದ ಸಂಖ್ಯಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ನಾಗಪುರ ವಿಶ್ವವಿದ್ಯಾಲಯದಲ್ಲಿ ಗಳಿಸಿದರು. ಪರೀಕ್ಷೆ ವೇಳೆ ಅವರ ವಾಸ್ತವ್ಯ ಆರೆಸ್ಸೆಸ್ ಸರಸಂಘಚಾಲಕರಾಗಿದ್ದ ಗುರೂಜಿಯವರ ಮನೆಯಲ್ಲಿ. ಮುಂದೆ ಎಂ.ಎಲ್.ಎ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಬಡ್ತಿ ಹೊಂದಿ, ಸಮರ್ಥವಾಗಿ ಆ ಜವಾಬ್ದಾರಿ ನಿರ್ವಹಿಸಿದರು. ಅವರ ಬೋಧನಾ ಕ್ರಮ ವಿದ್ಯಾರ್ಥಿಗಳಿಗೆ ಮೆಚ್ಚುಗೆಯಾಗಿತ್ತು.

ಕಾಲೇಜಿನಿಂದ ನಿವೃತ್ತಿ ಹೊಂದಿದ ಮೇಲೆ ಅವರನ್ನು ಸೆಳೆದಿದ್ದು ಮಹಿಳೆಯರ ಕ್ಷೇತ್ರದಲ್ಲಿ ಹಿಂದು ಸಂಘಟನೆ ಮಾಡುತ್ತಿದ್ದ ರಾಷ್ಟ್ರ ಸೇವಿಕಾ ಸಮಿತಿ. ಹೆಚ್ಚು ಕಡಿಮೆ ಸಮಿತಿಯ ಪೂರ್ಣಾವಧಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸಿ, ಆ ಸಂಘಟನೆಯ ಅಖಿಲ ಭಾರತ ಸಹಕಾರ್ಯ ವಾಹಿಕೆಯಾಗಿ ಕಾರ್ಯನಿರ್ವಹಿಸಿದ್ದ ರುಕ್ಮಿಣಿಯಕ್ಕನವರು ಸೂರ್ಯನಾರಾಯಣ ರಾವ್ ಕುಟುಂಬದ ಕೊನೆಯ ಕೊಂಡಿಯಾಗಿದ್ದರು. ರಾಷ್ಟ್ರಸೇವಿಕಾ ಸಮಿತಿಯ ಮೂಲಕ ಹಿಂದು ಸಮಾಜವನ್ನು ಸಂಘಟಿಸುವ ಮತ್ತು ಮಹಿಳೆಯರಿಗೆ ಮೌಲ್ಯ-ಸಂಸ್ಕಾರಗಳನ್ನು ನೀಡುವ ಉದಾತ್ತ ಕೆಲಸದಲ್ಲಿ ಅವರು ಸದಾ ಸಕ್ರಿಯರಾಗಿದ್ದರು. ಅವರ ನಿಷ್ಕಪಟ ಮಾತೃತ್ವ ಮತ್ತು ನಿರಂತರ ಕ್ರಿಯಾಶೀಲತೆ ಎಲ್ಲರ ಮೇಲೂ ಪ್ರಭಾವ ಬೀರಿತ್ತು.

ವೈರಲ್ ಆರ್ಥರೈಟಿಸ್‌ನಿಂದಾಗಿ ಮಂಡಿಗಳ ಶಕ್ತಿ ಕುಗ್ಗಿ ನಡೆಯಲು ಅಶಕ್ತರಾಗಿದ್ದಾಗಲೂ 12 ಮನೆಗಳ ಸುಡೋಕು ಸವಾಲುಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಿದ್ದರು. ವಿವಾಹವಾದ ಕೆಲವೇ ದಿನಗಳಲ್ಲಿ ಪತಿಯನ್ನು ಕಳೆದುಕೊಂಡರೂ ಧೃತಿಗೆಡದೆ ಸಮಾಜಮುಖಿ ಬದುಕು ನಡೆಸಿದರು. (ಜನನ 14-03-1929; ನಿಧನ: 21-05-2026). ರುಕ್ಮಿಣಿಯಕ್ಕನವರ ತಾಯಿ ಸುಂದರಮ್ಮನವರ ಇಚ್ಛೆಯಂತೆ, ಮಲ್ಲೇಶ್ವರಂ ರೈಲ್ವೇ ನಿಲ್ದಾಣದ ಹಿಂದಿರುವ ಗಾಯತ್ರಿ ನಗರದಲ್ಲಿ ರುಕ್ಮಿಣಿಯಕ್ಕನವರ ಸ್ವಂತ ಸ್ವತ್ತಾಗಿ ಒಂದು ಮನೆಯನ್ನು ಕಟ್ಟಿಸಲಾಗಿತ್ತು. 'ಸುಕೃಪಾ' ಹೆಸರಿನ ಆ ಮನೆಯನ್ನು ರಾಷ್ಟ್ರ ಸೇವಿಕಾ ಸಮಿತಿಯ ಸುಕೃಪಾ ಟ್ರಸ್ಟಿಗೆ ದಾನವಾಗಿ ನೀಡಿದರು.

ಕೃ.ಸೂರ್ಯನಾರಾಯಣ ರಾವ್ ಬದುಕಿದ್ದುದು 93 ವರ್ಷ. ಕೃ.ನರಹರಿಯವರ ಜೀವಿತಾವಧಿಯೂ 93 ವರ್ಷ. ಕೃ. ರುಕ್ಮಿಣಿಯಕ್ಕನವರದು 97 ವರ್ಷಗಳ ತುಂಬು ಜೀವನ. ಒಂದೇ ಬಳ್ಳಿಯ ಹೂಗಳಾದ ಈ ಮೂವರು ಪ್ರಾತಃಸ್ಮರಣೀಯರು. ಸಮಾಜ ಪುರುಷನ ಅಭಂಗ ಪೂಜೆಗೆ ಅರಳಿದ ಕಮಲಗಳಾದರು. ಸಾರ್ಥಕ ಬದುಕು ನಡೆಸಿದರು. 'ಸ್ವಂತಕ್ಕೆ ಸ್ವಲ್ಪ , ಸಮಾಜಕ್ಕೆ ಸರ್ವಸ್ವ' ಎಂಬ ನುಡಿಗೆ ಉಜ್ವಲ ನಿದರ್ಶನವಾಗಿ ಬೆಳಗಿದರು. ಸಾಮಾಜಿಕ ಕಾರ್ಯಕರ್ತರಿಗೆ ಒಂದೇ ಬಳ್ಳಿಯ ಈ ಹೂಗಳ ಉಜ್ವಲ ಬದುಕು ನಿತ್ಯ ನಿರಂತರ ಪ್ರೇರಣಾದಾಯಿ.

ಹರೆಯದವರು-ಪೋಷಕರ ಜವಾಬ್ದಾರಿ

ಹರಯದ ಮಕ್ಕಳ ಜತೆ ಪೋಷಕರು ಸಹನೆಯಿಂದ ವರ್ತಿಸಿ ಅವರ ಅನಿಸಿಕೆಗಳನ್ನು ಲಕ್ಷ್ಯಕೊಟ್ಟು ಆಲಿಸಬೇಕು.

ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ಹರೆಯದವರು ಉಜ್ವಲ ಭವಿಷ್ಯವನ್ನು ಎದುರಿಸಿ ಸಫಲರಾಗುವಲ್ಲಿ ಪೋಷಕರ ಪಾತ್ರ ಹಿರಿದು. ಮಕ್ಕಳು ಹರೆಯಕ್ಕೆ ಕಾಲಿಟ್ಟಾಗ ಅವರನ್ನು ಸಕಾರಾತ್ಮಕ ಮಾರ್ಗದರ್ಶನದಿಂದ ಅವರು ಸಾಗುವ ದಾರಿಯಲ್ಲಿ ಯಶಸ್ಸು ಗಳಿಸುವಂತೆ ನೋಡಿಕೊಳ್ಳುವುದು ಪೋಷಕರ ಹಿಂದಿನ ಜವಾಬ್ದಾರಿ. ಹಿಂದಿನ ಲೇಖನಗಳಲ್ಲಿ ತಿಳಿಸಿದಂತೆ ಮಕ್ಕಳು ಹರೆಯಕ್ಕೆ ಕಾಲಿಡುತ್ತಿದ್ದಂತೆ ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಮುಖ್ಯವಾಗಿ ಶರೀರದಲ್ಲಾಗುವ ಬದಲಾವಣೆಗಳು, ಮನೋವಿಕಾಸದಿಂದ ಉಂಟಾಗುವ ತಲ್ಲಣಗಳು, ಭಾವನಾತ್ಮಕವಾಗಿ ಹೊಂದಿಕೊಳ್ಳುವುದು, ಸಾಮಾಜಿಕ ಸವಾಲುಗಳನ್ನು ಎದುರಿಸುವುದು ಇವು ತಾರುಣ್ಯದ ಮನಸ್ಸನ್ನು ಸುಳಿಯಲ್ಲಿ ಸಿಕ್ಕಿಸುತ್ತವೆ. ಅದೇ ರೀತಿ ಎದುರಾಗುವ ಒತ್ತಡಗಳನ್ನು ಎದುರಿಸಿ ಅವುಗಳನ್ನು ಯಶಸ್ವಿಯಾಗಿ ನಿಭಾಯಿಸಬೇಕಾಗುತ್ತದೆ. ಹಾಗಿದ್ದಲ್ಲಿ ಮಾತ್ರ ಅವರು ನಡೆಯುವ ದಾರಿ ಸುಗಮವಾಗಿ ಮುಂದೆ ಸಾಗಬಹುದು. ಮನಸ್ಸನ್ನು ನೆಮ್ಮದಿಯಿಂದ ಇಟ್ಟುಕೊಳ್ಳಬಹುದು. ಅದಿಲ್ಲದಿದ್ದಲ್ಲಿ ಅವರ ಭವಿಷ್ಯ ಡೋಲಾಯಮಾನವಾಗುತ್ತದೆ. ಈ ಕುರಿತು ಕೆಲವು ಅಂಶಗಳನ್ನು ಪೋಷಕರು ಗಮನಿಸಿದರೆ ಒಳ್ಳೆಯದು.

ಮಗು ಹರೆಯಕ್ಕೆ ಕಾಲಿಟ್ಟಾಗ ಮೊದಲು ಕಾಣಿಸಿಕೊಳ್ಳುವುದು ಶಾರೀರಿಕ ಬದಲಾವಣೆಗಳು. ಹೀಗೆ ಆಗುವ ಬದಲಾವಣೆಗಳನ್ನು ಕಂಡು ಮನಸ್ಸು ದಿಗಿಲುಗೊಳ್ಳುವ ಸಂದರ್ಭಗಳು ಸಾಮಾನ್ಯ. ಶಾರೀರಿಕ ಬದಲಾವಣೆಗಳು ಎಲ್ಲರಲ್ಲೂ ಒಂದೇ ಅವಧಿಗೆ ಆಗುವುದಿಲ್ಲ, ಕೆಲವರಿಗೆ ಕೊಂಚ ಬೇಗ ಆದರೆ ಇನ್ನು ಕೆಲವರಿಗೆ ಕೊಂಚ ತಡವಾಗಿ ಆಗಬಹುದು. ಕೆಲವರಿಗೆ ನನಗೇಕೆ ಇಷ್ಟು ಮುಂಚಿತವಾಗಿ ಆಯಿತು ಎಂಬ ಸಂದೇಹ ಉಂಟಾದರೆ, ನನ್ನಲ್ಲೇಕೆ ಇನ್ನೂ ಅವರಿಗಾದ ಬದಲಾವಣೆಗಳು (ಬೆಳವಣಿಗೆ) ಆಗಲಿಲ್ಲ ಎಂಬ ಚಿಂತೆ ಕೆಲವರಿಗೆ. ತಮ್ಮ ಚಿಂತೆಯನ್ನು ಯಾರೊಂದಿಗೆ ಹಂಚಿಕೊಳ್ಳಬೇಕು, ಅಪ್ಪ ಅಮ್ಮನ ಹತ್ತಿರ ಕೇಳಿದರೆ ಅವರು ಅಲಕ್ಷ್ಯ ಮಾಡಬಹುದು. ಗೆಳೆಯರ ಹತ್ತಿರ ಕೇಳಲು ನಾಚಿಕೆ, ಹೀಗೆ ಮನಸ್ಸು ಸಂದೇಹಗಳ ಒತ್ತಡಕ್ಕೆ ಗುರಿಯಾಗುತ್ತದೆ. ಇದಕ್ಕೆ ಅವಶ್ಯವಿರುವುದು ಪೋಷಕರ ಸಕಾರಾತ್ಮಕ ಮಾರ್ಗದರ್ಶನ.

ಹರೆಯದಲ್ಲಿ ಲೈಂಗಿಕ ಅಂಗಾಂಗಗಳು ವಿಕಾಸಗೊಳ್ಳುತ್ತವೆ. ಲೈಂಗಿಕ ವಿಕಾಸದಲ್ಲಿ ಮೊದಲು ಉಂಟಾಗುವ ಸಂದೇಹ ಲಿಂಗಬೇಧ, ಹುಡುಗನಾದರೆ, ತನ್ನಲ್ಲಾಗುವ ಲೈಂಗಿಕ ಬದಲಾವಣೆಗಳು ಸರಿಯಾಗಿವೆಯೋ ಅಥವಾ ಇಲ್ಲವೇ, ತನ್ನ ಕುರಿತು ಇತರರು ಏನು ಹೇಳುತ್ತಾರೆ? ತಾನು ಇತರರಿಗಿಂತ ಚೆನ್ನಾಗಿದ್ದೇನೆಯೋ, ಇಲ್ಲವೋ, ತಾನು ಧರಿಸುವ ಉಡುಪುಗಳು, ತಲೆಕೂದಲು, ಧ್ವನಿ, ಸ್ನಾಯುಗಳು ಹೀಗೆ ಪುರುಷ ಚಿಹ್ನೆಗಳು ಆಕರ್ಷಿತವಾಗಿವೆಯೋ ಇಲ್ಲವೋ ಎಂಬ ಹಲವಾರು ಪ್ರಶ್ನೆಗಳು ಮೂಡುತ್ತವೆ. ಅದರೊಂದಿಗೆ ಸುಮಾರು ಹದಿನಾಲ್ಕನೇ ವಯಸ್ಸಿಗೆ ಗಂಡುಮಕ್ಕಳಲ್ಲಿ ವೀರ್ಯೋತ್ಪತ್ತಿ ಪ್ರಾರಂಭವಾಗುತ್ತದೆ. ಉತ್ಪತ್ತಿಯಾದ ಹೆಚ್ಚಿನ ವೀರ್ಯವು ರಾತ್ರಿ ನಿದ್ದೆಯಲ್ಲಿ ಸ್ಖಲನವಾಗಿ ಹಾಸಿಗೆ ಒದ್ದೆಯಾಗಬಹುದು. ಆದರೆ ಬೆಳ್ಳಗಿರುವ ಈ ದ್ರವ ಎಲ್ಲಿಂದ ಬಂತು, ಹೇಗೆ ಬಂತು, ಇದರಿಂದ ಆಗುವ ದುಷ್ಪರಿಣಾಮಗಳೇನು ಎಂಬ ಹಲವಾರು ಪ್ರಶ್ನೆಗಳು ಹರೆಯದವರ ಮನಸ್ಸಿನಲ್ಲಿ ಮೂಡಿ ಅದು ಒತ್ತಡಕ್ಕೆ ಕಾರಣವಾಗುತ್ತದೆ. ಇದನ್ನು ಯಾರೊಂದಿಗೆ ಕೇಳಿ ತನ್ನ ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕೆಂಬ ಚಿಂತೆ ಸದಾ ಹರೆಯದ ಮನಸ್ಸನ್ನು ಕಾಡುತ್ತದೆ.

ಹರೆಯದ ಗಂಡು ಮಕ್ಕಳಲ್ಲಿ 'ವೀರ್ಯಸ್ಖಲನ' (Night wets)ವು ಸಹಜವಾದ ಪ್ರಕ್ರಿಯೆ. ಇದು ಪುರುಷ ಲಿಂಗದ ಸಂಕೇತ ಎಂಬುದನ್ನು ತಂದೆ ತಾಯಿಗಳು ಮಕ್ಕಳಿಗೆ ತಿಳಿಸಬೇಕಾಗುತ್ತದೆ. ಅದಿಲ್ಲದಿದ್ದಲ್ಲಿ ಅದರಿಂದ ತಾನು ಮುಂದೆ ಷಂಡನಾಗಬಹುದು, ತನ್ನ ಭವಿಷ್ಯ ಹಾಳಾಗುತ್ತದೆ ಎಂದು ಭಾವಿಸಿ ಅದರ ಕುರಿತೇ ಚಿಂತಿಸುತ್ತಾ ಕಲಿಕೆಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ. ಕೈಕಾಲು ಸುಸ್ತು, ಹೊಟ್ಟೆನೋವು, ಒಂದು ವಿಧದ ಭಯ, ಗಾಬರಿ, ಹಸಿವಿಲ್ಲದಿರುವಿಕೆ, ಹೀಗೆ ಹಲವಾರು ದೈಹಿಕ ಮತ್ತು ಮಾನಸಿಕ ರೋಗ ಲಕ್ಷಣಗಳಿಂದ ನರಳುತ್ತಾ ಅದನ್ನು ನಿವಾರಿಸಲು ಗ್ರಹಚಾರ, ವೈದ್ಯರು, ಹೀಗೆ, ನಾನಾವಿಧದ ಪದ್ಧತಿಗೆ ಮಾರುಹೋಗುತ್ತಾರೆ. ಹರೆಯದ ಕೆಲವರಿಗೆ ಗಡ್ಡ ಮೀಸೆಗಳು, ಕಂಕುಳು ಮತ್ತು ಜನನಾಂಗದ ಮೇಲ್ಭಾಗದಲ್ಲಿ ಸಹಜವಾಗಿ ಕಾಣಿಸಿಕೊಳ್ಳುವ ಕೂದಲುಗಳು ತಡವಾಗಬಹುದು. ಅದಕ್ಕೆ ತನಗೆ ಹೀಗೆ ತಡವಾದರೆ ತನ್ನ ಸ್ನೇಹಿತರು ನೀನು ಹೆಣ್ಣಿಗ ಎಂದು ಟೀಕಿಸಬಹುದು ಎಂಬ ಚಿಂತೆಯಿಂದ ಮನಸ್ಸು ಸಂಕಟ ಅನುಭವಿಸಬಹುದು.

ಹೆಣ್ಣು ಮಕ್ಕಳಲ್ಲಿ ಲೈಂಗಿಕ ಅಂಗಾಂಗಗಳ ವಿಕಾಸದಲ್ಲಿ ಶರೀರದ ಉಬ್ಬು ತಗ್ಗುಗಳು ರೂಪುಗೊಂಡು, ಜನನದ ಗುಪ್ತಾಂಗಗಳು ವೃದ್ಧಿಸುತ್ತವೆ. ಸ್ತನಗಳು ದೊಡ್ಡವಾಗುತ್ತವೆ. ಹರೆಯದ ಹೆಣ್ಣು ಮಕ್ಕಳಲ್ಲಿ ಲೈಂಗಿಕ ವಿಕಾಸದ ಮುಖ್ಯವಾದ ಪ್ರಕ್ರಿಯೆ ಋತುಮತಿಯಾಗುವಿಕೆ, ಋತುವಿನ ಪ್ರಕ್ರಿಯೆಯಲ್ಲಿ ಗುಪ್ತಾಂಗದಿಂದ ಹೊರಹೊಮ್ಮುವ ರಕ್ತಸ್ರಾವ, ಇದರ ಕುರಿತು ತಾಯಿ ಮಗಳಿಗೆ ಸರಿಯಾದ ಮಾಹಿತಿ ನೀಡಬೇಕು. ಅದು ಏಕಾಗುತ್ತದೆ, ಅದರ ಅರ್ಥವೇನು, ರಕ್ತಸ್ರಾವ ಹೆಚ್ಚು ಕಡಿಮೆಯಾದರೆ ಏನು ಮಾಡಬೇಕು, ನೆಂಟರಿಷ್ಟರ ಮನೆಗೆ ಹೋಗುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು ಹೀಗೆ ಎಲ್ಲವನ್ನೂ ಸಮಾಧಾನದಿಂದ ವಿವರಿಸಬೇಕು. ಆಗ ಹರೆಯದ ಹೆಣ್ಣು ಮಕ್ಕಳ ಮನಸ್ಸು ನಿರಾಳವಾಗುತ್ತದೆ. ಹೆಣ್ಣು ಮಕ್ಕಳ ಸಾಮಾಜಿಕ ನಡವಳಿಕೆ ಹೇಗಿರಬೇಕು, ಹೇಗೆ ಹೆಣ್ಣಿನ ಮೌಲ್ಯಗಳನ್ನು ಕಾಪಾಡಿಕೊಳ್ಳಬೇಕು, ಶೀಲವನ್ನು ರಕ್ಷಣೆ ಮಾಡಿಕೊಳ್ಳಲು ಇತರರೊಂದಿಗೆ ಹೇಗೆ ವರ್ತಿಸಬೇಕು, ಅದಿಲ್ಲದಿದ್ದಲ್ಲಿ ಆಗುವ ಪರಿಣಾಮಗಳನ್ನು ತಾಯಿ ಮಗಳಿಗೆ ವಿವರಿಸಬೇಕು. ಹಾಗೆಯೇ ಸಂದರ್ಭವೊದಗಿದಾಗ ಹೇಗೆ ತನ್ನನ್ನು ರಕ್ಷಣೆ ಮಾಡಿಕೊಳ್ಳಬೇಕು ಎಂಬ ಹಲವಾರು ವಿವರಗಳನ್ನು ಮಕ್ಕಳಿಗೆ ತಿಳಿಸಬೇಕು. ಗಂಡು ಮಕ್ಕಳಾಗಲೀ ಅಥವಾ ಹೆಣ್ಣು ಮಕ್ಕಳಾಗಲೀ ಅವರಿಗೆ ಲೈಂಗಿಕ ಶಿಕ್ಷಣ ನೀಡಬೇಕು. ಸರಿಯಾಗಿ ಲೈಂಗಿಕ ಶಿಕ್ಷಣ ಅವರ ಭವಿಷ್ಯದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ಹರೆಯದವರಲ್ಲಿ ಮಿದುಳಿನಲ್ಲಿರುವ ನರಕೋಶಗಳ ಸಮೂಹಗಳು ವೃದ್ಧಿಯಾಗುತ್ತಿರುತ್ತವೆ. ಹರೆಯದ ಮಿದುಳಿನ ಕೆಲವು ಭಾಗಗಳಲ್ಲಿ ಸ್ರವಿಸುವ ನರವಾಹಕಗಳು ಹರೆಯದವರ ಭಾವನೆಗಳನ್ನು ನಿಯಂತ್ರಿಸುತ್ತವೆ. ಅದೇ ಕಾರಣದಿಂದ ಹರೆಯದವರ ಭಾವನೆಗಳು ಪ್ರವಾಹದೋಪಾದಿಯಲ್ಲಿ ಏರಿಳಿತಗೊಳ್ಳುತ್ತವೆ. ಭಾವನೆಗಳ ಪ್ರವಾಹವು ಹರೆಯದವರ ಯೋಚನೆಗಳ ಮೇಲೆ ಪರಿಣಾಮ ಬೀರಿ ಏನಾದರೂ ಆಗಬೇಕೆಂದರೆ ಅದು ಕೂಡಲೇ ಆಗಬೇಕೆಂದು ಹಾತೊರೆಯುತ್ತದೆ. ಅದು ಆಗದಿದ್ದಾಗ ಒಂದೇ ಬಾರಿಗೆ ಮನಸ್ಸು ನಿರಾಸೆ, ಹತಾಶೆಗೊಳ್ಳಬಹುದು. ಕೂಡಲೆ ತಡೆಯಲಾರದ ಕೋಪವುಂಟಾಗಬಹುದು. ಇದರಿಂದ ಹರೆಯದ ಮನಸ್ಸು ಖಿನ್ನತೆಗೊಳಗಾಗಿ ಆ ಕ್ಷಣದಲ್ಲಿ ತನಗೆ ಜೀವವೇ ಬೇಡ ಎಂಬ ಯೋಚನೆಯಿಂದ ಆತ್ಮಹತ್ಯೆಗೆ ಆಲೋಚಿಸಬಹುದು. ಇದಕ್ಕೆ ಅವಶ್ಯವಾಗಿರುವುದು ಪೋಷಕರ ಆತ್ಮೀಯತೆ, ಮುಕ್ತ ಸಂವಹನ, ಸಹನೆಯಿಂದ ಅವರ ಅನಿಸಿಕೆಗಳನ್ನು ಆಲಿಸಿ ಘಟನೆಗಳ ಕುರಿತು ಸರಿಯಾದ ಮಾಹಿತಿ ಒದಗಿಸುವುದು.

ಹರೆಯದ ಅವಧಿಯ ಮುಖ್ಯವಾದ ಮತ್ತೊಂದು ಪ್ರಕ್ರಿಯೆ 'ತನ್ನತನ' ವನ್ನು ಕಂಡುಕೊಳ್ಳುವುದು. 'ತನ್ನತನ' ಎಂದರೆ ಮನೋವಿಕಾಸದಿಂದ ಪುಟಿದೇಳುವ ತಾನು ಯಾರು? ತಾನು ಸಹಜವಾಗಿದ್ದೇನೆಯೇ? ತಾನು ಯಾರಂತಾಗಬೇಕು? ತಾನು ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳಬೇಕು, ತನ್ನನ್ನು ಗುರುತಿಸುವವರಿದ್ದಾರೆಯೇ? ತನ್ನ ಸಾಮರ್ಥ್ಯ ಎಷ್ಟು, ತನ್ನನ್ನು ತನ್ನ ತಂದೆತಾಯಿಗಳು ಹೇಗೆ ಗುರುತಿಸುತ್ತಾರೆ? ಈ ಸಮಾಜದಲ್ಲಿ ತನ್ನ ಸ್ಥಾನಮಾನಗಳೇನು ಎಂಬ ಹಲವಾರು ಪ್ರಶ್ನೆಗಳಿಗೆ 'ತನ್ನತನ' (Self Identity) ಎಂದು ಕರೆಯುತ್ತಾರೆ. ಅಪಕ್ವವಾಗಿರುವ ಹರೆಯದ ಮನಸ್ಸಿಗೆ ಇವಕ್ಕೆಲ್ಲ ಉತ್ತರ ಕಂಡುಕೊಂಡು 'ತನ್ನತನ' ವನ್ನು ಸಾಧಿಸಿ ಮುನ್ನಡೆಯುವುದು ಅತಿಯಾದ ಒತ್ತಡವನ್ನುಂಟು ಮಾಡುವ ಅಂಶ. ಇದನ್ನು ನಿಭಾಯಿಸಿ ಹರೆಯದ ಮಕ್ಕಳನ್ನು ಮುನ್ನಡೆಯಲು ಅನುವು ಮಾಡಿಕೊಡುವುದು ಪೋಷಕರಿಗೂ ಒಂದು ಸವಾಲು ಎನ್ನಬಹುದು.

ಹರೆಯದವರು ತನ್ನತನವನ್ನು ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಅವರ ವರ್ತನೆಗಳು ಅಸಹಜವೆಂದು ಪೋಷಕರಿಗೆ ಅನಿಸಬಹುದು. ಈ ಅವಧಿಯಲ್ಲಿ ಅವರು ಯೋಚಿಸುವ ರೀತಿ, ಕೇಳುವ ಪ್ರಶ್ನೆಗಳು, ಪ್ರದರ್ಶಿಸುವ ಭಾವನೆಗಳು ಹರೆಯದವರ ಆತಂಕಗಳನ್ನು ಮತ್ತು ಒತ್ತಡಗಳನ್ನು ಹೊರಹಾಕುವ ಒಂದು ಮಾರ್ಗ. ಇದಕ್ಕೆ ಅವಶ್ಯವಿರುವುದು ಪೋಷಕರ ಸಹನೆ, ಅವರ ಅನಿಸಿಕೆಗಳನ್ನು ಲಕ್ಷ್ಯಕೊಟ್ಟು ಆಲಿಸುವುದು, ಆತ್ಮೀಯ ಮುಕ್ತ ಸಂವಾದ ಮತ್ತು ಅವರಿಗೆ ವಾಸ್ತವಗಳ ಕುರಿತು ತಿಳಿಸಿ ಹೇಳುವುದು. ಸಮಸ್ಯೆಗಳು ಇದ್ದಲ್ಲಿ ಅದಕ್ಕೆ ತಾವೂ ಜವಾಬ್ದಾರರು ಎಂದು ಭಾವಿಸಿ ಅವರೊಂದಿಗೆ ಸಹಕರಿಸಬೇಕು. 'ತನ್ನತನ'ವನ್ನು ಸಾಧಿಸುವ ಹರೆಯದ ಮನಸ್ಸು ಆತ್ಮವಿಶ್ವಾಸದಿಂದ ಬೀಗುತ್ತದೆ. ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತದೆ. ನೆಮ್ಮದಿಯ ಬಾಳನ್ನು ನಡೆಸಲು ಸಿದ್ಧವಾಗುತ್ತದೆ.

ಸಾಮಾಜಿಕವಾಗಿ ಹರೆಯದ ಮನಸ್ಸು ಗಲಿಬಿಲಿಗೊಳ್ಳುತ್ತದೆ. ಅವುಗಳಲ್ಲಿ ಮುಖ್ಯವಾದವು ಒಳ್ಳೆಯ ಗೆಳೆಯರ ಒಡನಾಟ, ಸಮಾಜದ ಟೀಕೆ ಟಿಪ್ಪಣಿಗಳಿಗೆ ಸಹನೆಯಿಂದ ಸ್ಪಂದಿಸುತ್ತಾ ಮುನ್ನಡೆ ಸಾಧಿಸುವುದು. ಸಾಮಾಜಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು. ಪೋಷಕರು, ಮಕ್ಕಳಿಗೆ ಬಾಲ್ಯದಿಂದಲೇ ಜೀವನ ಕೌಶಲಗಳನ್ನು ಕುರಿತು ತರಬೇತಿ ನೀಡಿದಾಗ, ಹರೆಯದ ಮನಸ್ಸು ಪೋಷಕರ ಮಾರ್ಗದರ್ಶನದಲ್ಲಿ ಮುನ್ನಡೆ ಸಾಧಿಸುವುದರಲ್ಲಿ ಸಂಶಯವಿಲ್ಲ.


ತುಂಡು 'but'ಏ ಸಾಕು ಅನುಮಾನ ಹೆಚ್ಚೋಕೆ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಈಚಲು ಮರದ ಕೆಳಗೆ ಕುಳಿತು ಮಜ್ಜಿಗೆಯನ್ನೇ ಕುಡಿದರೂ, ಅದು ಹೆಂಡ ಇರಬಹುದು' ಎಂದು ಭಾವಿಸುತ್ತಾರೆ ಎಂಬ ಮಾತಿದೆ. ಯಾರಾದರೂ ಹಾಗೆ ಭಾವಿಸುತ್ತಾರೆಂದರೆ ಅದಕ್ಕೆ ಮೂಲ ಕಾರಣವೇ ಅವರ ಮನಸ್ಸಿನಲ್ಲಿ ಮೂಡುವ ಅನುಮಾನ. ಹಾಗಾದರೆ ಅದನ್ನೇ ಪ್ರಸ್ತುತ ಕಾಲಮಾನದ ಸಂದರ್ಭಕ್ಕೆ ಅನ್ವಯಿಸೋಣ. ಯಾರಾದರೂ ಈಚಲು ಮರದ ಕೆಳಗೆ ಕುಳಿತು ಮಜ್ಜಿಗೆ ಕುಡಿದರೆ, ಆಗ ಅದು ಹೆಂಡ ಇರಬಹುದೆಂಬ ಅನುಮಾನ ಮೂಡುವುದಷ್ಟೇ ಅಲ್ಲದೇ, ಅವರನ್ನು ಅಲ್ಲಿ ಕುಳ್ಳಿರಿಸಿದ್ದು ಯಾರು? ಅದರ ಹಿಂದೆ ಒಂದು ನಿರ್ದಿಷ್ಟ ಕಸುಬುದಾರರನ್ನು ಅವಮಾನಿಸುವ ಉದ್ದೇಶ ಅಡಗಿರಬಹುದೇ?, ಮರದ ಕೆಳಗೆ ಕುಳಿತು ಕುಡಿಯಲು ಈ ಕೆಟ್ಟ ವ್ಯವಸ್ಥೆಯೇ ಕಾರಣವಲ್ಲವೇ? ಇದರ ಹಿಂದೆ ಮೇಲ್ವರ್ಗ ಕೆಳವರ್ಗವೆಂಬ ತಾರತಮ್ಯ ಕೆಲಸ ಮಾಡಿಲ್ಲವೆಂದು ಹೇಗೆ ಹೇಳುವುದು? – ಇಂಥ ಸಾಲು ಸಾಲು ಅನುಮಾನಗಳು ಹೆಡೆಯೆತ್ತಿ ನಿಲ್ಲುತ್ತವೆ. ಏಕೆಂದರೆ ಇದು 'ಅನುಮಾನ'ವಂತರ ಕಾಲ! ಮಾನವಂತರಿಗಿದು ಕಾಲ ಹೌದೋ ಅಲ್ಲವೋ ಎನ್ನುವುದು ಅವರವರ ಜಿಜ್ಞಾಸೆಗೆ ಬಿಟ್ಟಿದ್ದು. ಆದರೆ ಇದು 'ಅನುಮಾನ'ವಂತರ ಕಾಲ ಎನ್ನುವುದನ್ನು ಮಾತ್ರ ಯಾವುದೇ ಕಾರಣಕ್ಕೂ ತಳ್ಳಿಹಾಕುವಂತಿಲ್ಲ.

ಮಾನವರು ಎಂದ ಮೇಲೆ ಕೆಲವರು ಮಾನವೀಯತೆ ಉಳ್ಳವರಾದರೆ, ಇನ್ನೊಂದಷ್ಟು ಜನ ಅಮಾನವೀಯತೆಯನ್ನೇ ಹೊದ್ದಿರುತ್ತಾರೆ. ಈ ನಡುವೆಯೂ ಮಾನವೀಯ ನೋಟ, ಸಂವೇದನೆ ಇರಬೇಕು ಎಂಬ ನಿರೀಕ್ಷೆ ಸಹಜ. ಆದರೆ ಇದಕ್ಕೆ ಹೊರತಾಗಿ ಕೆಲವರು ಸದಾ 'ಅನುಮಾನ'ವೀಯ ನೋಟವನ್ನೇ ಹೊಂದಿರುತ್ತಾರೆ. ತನ್ಮೂಲಕ ಅಲ್ಲಲ್ಲಿ ಸಂ'ವೇದನೆ'ಗೂ ಕಾರಣರಾಗುತ್ತಾರೆ. ಹಾಗೆಂದ ಮಾತ್ರಕ್ಕೆ ಅನುಮಾನವೇ ಇರಬಾರದು ಎಂದೇನಲ್ಲ, ಆದರೆ ಆ ಅನುಮಾನ ಅತಿರೇಕವಾದರೆ ಅದೂ ಒಂದು ಬಗೆಯ ಅಮಾನವೀಯ ನಡೆಯೇ ಎಂದೆನಿಸಿಕೊಳ್ಳುವುದು ನಿಸ್ಸಂಶಯ. ಎಲ್ಲೇ ಏನೇ ನಡೆಯಲಿ ಆ ಬಗ್ಗೆ ಒಂದು ಅನುಮಾನದ ಬಾಣ ಎಸೆಯುವ ಆಧುನಿಕ 'ಬಾಣ'ಭಟ್ಟರು ಜಾಲತಾಣಗಳಲ್ಲಿ, ಕೆಲವು ಮೀಡಿಯಾಗಳಲ್ಲಿ ಭರಪೂರ ಕ್ರಿಯಾಶೀಲರಾಗಿದ್ದಾರೆ. ಹೀಗೆ ಅವರವರ ಆಸಕ್ತಿ, ಒಲವು, ನಿಲುವಿಗೆ ಅನುಗುಣವಾಗಿ ಎಲ್ಲರನ್ನೂ, ಎಲ್ಲವನ್ನೂ ಅನುಮಾನದಿಂದಲೇ ನೋಡಿ ನೋಡಿ, 'ಅನುಮಾನ'ವೇ ಒಂದು ಮಟ್ಟಿಗೆ ಅವಮಾನಕ್ಕೆ ಗುರಿಯಾಗಬೇಕು. ಹಾಗಿರುತ್ತದೆ ಅವರ ವೈಖರಿ. ಏನೇ ಹೇಳಿ ಹೆಚ್ಚೆಚ್ಚು ಅನುಮಾನಪಡುವವರನ್ನು ಅನು'ಮಾನವ'ರು ಎಂದು ಕರೆಯಬಹುದೇನೋ!



ಅನುಮಾನ ಎಂಬ ಪದಕ್ಕೆ ಸಂಶಯ, ಸಂದೇಹ, ಗುಮಾನಿ, ಶಂಕೆ ಎಂಬಿತ್ಯಾದಿ ಅರ್ಥಗಳಿವೆ. ಗೊಂದಲ, ಇಬ್ಬಂದಿತನ ಎನ್ನುವುದೂ ಕೂಡಾ ಒಂದು ರೀತಿಯಲ್ಲಿ ಅದಕ್ಕೆ ಸಂಬಂಧಿಸಿದ ಪದಗಳೇ ಆಗಿವೆ. ಇಂಗ್ಲೀಷ್‌ನಲ್ಲಿ ಇದಕ್ಕೆ ಬೇರೆ ಬೇರೆ ಪದಗಳಿದ್ದರೂ ಬಹುಮುಖ್ಯವಾಗಿ 'ಡೌಟ್' ಎಂಬ ಪದವನ್ನು ಬಳಸಲಾಗುತ್ತದೆ. ಈ ಡೌಟ್ ಎಂಬ ಪದದ ಮೂಲ 'ಡ್ಯೂಓ' (duo) ಎಂದರೆ ಎರಡು ಎಂಬ ಅರ್ಥದ ಪದವಂತೆ. ಅಂದರೆ ಯಾವುದೇ ಆಗಲಿ ಎರಡೆರಡು ಇದ್ದಾಗ ಅಲ್ಲಿ ಅನುಮಾನ ಹುಟ್ಟುವ ಸಾಧ್ಯತೆಯೇ ಹೆಚ್ಚು ಎಂದು ಅರ್ಥೈಸಿಕೊಳ್ಳಬಹುದು. ಉದಾಹರಣೆಗೆ ಎರಡು ಮನೆ, ಎರಡು ಪಕ್ಷ, ಎರಡು ಮಡದಿ... ಇರುವೆಡೆಗಳಲ್ಲಿ ಎಷ್ಟೇ ಆದರೂ ಅನುಮಾನವೂ ಜಾಸ್ತಿಯೇ! ಕೆಲವೊಮ್ಮೆ ಅನುಮಾನಗಳ ಕಾರಣಕ್ಕೇ ಇವೆಲ್ಲವೂ ಎರಡೆರಡು ಆಗಿ ಬದಲಾಗುವ ಸಾಧ್ಯತೆಯೂ ಇದೆ. ಕೆಲವರ ಮೂಡು ಹೇಗಿದೆ, ಅವರ ಮನಸ್ಸಿನಲ್ಲಿ ಎಂಥೆಂಥ ಯೋಚನೆ ಮೂಡೀತು ಎಂದೆಲ್ಲಾ ಯೋಚಿಸಬೇಕಾದ್ದೇ ಇಲ್ಲ, ಏಕೆಂದರೆ ಅವರು ಸದಾ 'ಅನುಮಾನದ' ಮೋಡ್‌ನಲ್ಲೇ ಇರುತ್ತಾರೆ. ಅಂದರೆ ಸದಾ ಸುತ್ತಮುತ್ತಲ ಆಗುಹೋಗುಗಳ ಬಗ್ಗೆ ಅನುಮಾನ ಮೂಡುತ್ತಿರುತ್ತದೆ ಎಂದು ಹೇಳಬಹುದು!

'ನಂಗ್ಯಾಕೋ ಡೌಟು!' ಎನ್ನುತ್ತಲೇ ತಮ್ಮ ಮಾತು, ಆಲೋಚನೆ ಹಾಗೂ ವಿವೇಚನೆಗಳೆಲ್ಲವನ್ನೂ ಅದರ ಸುತ್ತಲೇ ಸುತ್ತುವಂತೆ ಮಾಡುವ 'ಡೌಟೇಶ'ರಿಗೆ ನಮ್ಮಲ್ಲೇನೂ ಕೊರತೆಯೇ ಇಲ್ಲ. 'ಡೌನ್-ಟು-ಅರ್ಥ್' ರೀತಿಯ ಮನುಷ್ಯರು ಇರುವಂತೆ ಇವರು ಅಗ್ದೀ 'ಡೌಟ್-ಟು-ಅರ್ಥ್' ಮನುಷ್ಯರೇ ಸೈ. ಅವರು ಈ ಭೂಮಿಯ ಮೇಲೆ ಇರುವುದೇ ಒಂದಿಲ್ಲೊಂದು ರೀತಿಯಲ್ಲಿ ಇನ್ನೊಬ್ಬರ ಮೇಲೆ ಡೌಟ್ ಪಡಲು ಎನ್ನುವುದನ್ನು ಅವರು ಅತ್ಯಂತ ಕಟ್ಟುನಿಟ್ಟಿನಿಂದ ಪಾಲಿಸಿಕೊಂಡು ಬರಲು ಅನವರತ ಶ್ರಮಿಸುತ್ತಲೇ ಇರುತ್ತಾರೆ. ತನ್ನ ದೇಹವೇ ಸಂದೇಹಗಳ ಗುಡಾಣ ಎನ್ನುವುದನ್ನು ಡಣಾಡಂಗುರ ಬಾರಿಸುತ್ತಾ ಸಾರಿ ಸಾರಿ ಹೇಳುವಂತಿರುತ್ತದೆ ಅವರ ವರ್ತನೆ ಎಂದರೆ ಬಹುಶಃ ತಪ್ಪಾಗಲಿಕ್ಕಿಲ್ಲ.

'...ತುಂಡು ಬಟ್ಟೆ ಸಾಕು ಮಾನ ಮುಚ್ಚೋಕೆ' ಎಂಬ ಸಾಲು ಎಲ್ಲರಿಗೂ ಗೊತ್ತು. ಇಂದಿಗೆ ತುಂಡುಡುಗೆಯನ್ನೇ ಕೆಲವರು ಹೆಚ್ಚು ಹೆಚ್ಚು ಬಳಸುವುದರಿಂದ, ಆ ಸಾಲುಗಳಲ್ಲಿ ಅಡಗಿರುವ ತತ್ವವು ಈ ಆಧುನಿಕ ಕಾಲದಲ್ಲಿ ಬೇರೆಯದೇ ಅರ್ಥ ಪಡೆದುಕೊಂಡಿದ್ದನ್ನು ಗಮನಿಸಬಹುದು. ಅದೇನೇ ಇರಲಿ. ಅದನ್ನೇ ಈ 'ಅನುಮಾನ'ದ ಬಗ್ಗೆ ಹೇಳುವುದಾದರೆ, 'ತುಂಡು ' but'ಏ ಸಾಕು ಅನುಮಾನ ಹೆಚ್ಚೋಕೆ...' ಎಂದು ನಿಸ್ಸಂಶಯವಾಗಿ ಹೇಳಬಹುದು. ಅಲ್ಲವೇ ಮತ್ತೆ ಯಾವುದರಲ್ಲಾದರೂ ಅನುಮಾನವನ್ನು ಹೆಚ್ಚಿಸುವವರಿಗೆ, ವಾಕ್ಯದ ಒಂದು ಸಣ್ಣ ತುಂಡಾದ 'but' ಅರ್ಥಾತ್ 'ಆದರೆ' ಎನ್ನುವುದು ಬಲು ದೊಡ್ಡ ಆಧಾರವೇ ಆಗುತ್ತದೆ. ಅವರು 'ಆದರೆ, ಹಾಗಾದರೆ, ಹೀಗಾದರೆ' ಎಂಬಿತ್ಯಾದಿ 'ರೇ'ಗಳನ್ನು ನಿರಂತರವಾಗಿ ಬೀರುತ್ತಲೇ ಇರುತ್ತಾರೆ! ಅವರಿಗೆ ಅದೇ ಒಂಥರಾ 'ರೇ ಆಫ್ ಹೋಪ್' (ಭರವಸೆಯ ಕಿರಣ) ಅವರ ಅಸ್ತಿತ್ವಕ್ಕೆ! ಹಸ್ತದಲ್ಲಿ ಅದೃಷ್ಟದ ರೇಖೆ, ವಿಜಯದ ರೇಖೆ, ಸಂತಾನ ರೇಖೆ ಇತ್ಯಾದಿಗಳನ್ನು ಗುರುತಿಸುವುದನ್ನು ನೋಡಿದ್ದೇವೆ. ಆದರೆ ಈ 'ರೇ' ಮಂದಿಗಳಿಗೆ ಬಾಯಲ್ಲೇ ಒಂದು ವಿಶಿಷ್ಟ ರೇಖೆ ಇರುತ್ತದೆ. ಅದೆಂದರೆ 'ರೇ' ಪ್ರಯೋಗ ಹಾಗೂ ಅದನ್ನು ಅನುಸರಿಸಿ ಏ'ಕೆ' ಎಂಬ ಪ್ರಶ್ನೆ. ಎರಡೂ ಒಟ್ಟಾಗಿ ರೇಖೆ! ಅದನ್ನೆಲ್ಲಾ 'ಮಹಾತ್ರಾಣ'ದಿಂದ ಮಾಡುವುದರಿಂದ, ಇನ್ನೊಬ್ಬರಿಗೆ ತ್ರಾಣ ಉಂಟುಮಾಡುವುದರಿಂದ 'ಕ' ಅಕ್ಷರಕ್ಕೆ ಮಹಾಪ್ರಾಣ ಕಾಂಪ್ಲಿಮೆಂಟರಿ!

ಇನ್ನು, ಆರಂಭದಲ್ಲಿ ಪ್ರೀತಿ ಪ್ರೇಮದ 'ಅನುಬಂಧ'ವಾಗಿ ಅಣು ಅಣುವಲ್ಲೂ ಪರಸ್ಪರ ಪ್ರೀತಿಸುತ್ತಾ ದಾಂಪತ್ಯ ನಡೆಸುವವರ ಮಧ್ಯೆ ಪರಸ್ಪರ ಗುಮಾನಿಯ ಅಪಥ್ಯವೊಂದು ಹುಟ್ಟಿ ಅದು ಅವರ ಪಥವನ್ನೇ ಬದಲಿಸಬಲ್ಲದು. ಕೊನೆಗೆ ಅನುಬಂಧ ಹೋಗಿ 'ಅನುಮಾನ'ಬಂಧವಾಗಿ ಪರಿವರ್ತಿತವಾಗುತ್ತದೆ. ಹೋದ ಬಂದಲ್ಲೆಲ್ಲಾ ಬರೀ ಅನುಮಾನ! ಇನ್ನು ರಾಜಕಾರಣದಲ್ಲಂತೂ ಅನುಮಾನದ ಹಾವಳಿ ಹೇಳತೀರದು. ಪ್ರತೀ ಕ್ಷಣವೂ 'ಅನುಮಾನವನ್ನೇ ಚಾಳೀಸು' ಮಾಡಿಕೊಂಡಿರುತ್ತಾರೆ ಅವರು. ಅಂದರೆ ಎಲ್ಲವನ್ನೂ ಹಾಗೂ ಎಲ್ಲರನ್ನೂ ಅನುಮಾನಿಸುವ ಚಾಳಿಯೂ ಹಾಗೂ ಅನುಮಾನದ ಕನ್ನಡಕ(ಚಾಳೀಸು) ತೊಟ್ಟೇ ಎಲ್ಲವನ್ನೂ ನೋಡುವ ಖಯಾಲಿಯೂ ಅವರಲ್ಲಿ ಖಾಯಂ. ಹಾಗಾಗಿ ಅಲ್ಲಿರುವವರ ಬಗ್ಗೆ 'ಮಾನವನಾಗುವೆಯೋ... ಇಲ್ಲ ಅನುಮಾನವನಾಗುವೆಯೋ...?' ಎಂದು ಕೇಳಬೇಕಾಗುತ್ತದೆ. ಅನುಮಾನದ ದೃಷ್ಟಿಕೋನ, ಅನುಮಾನದ ಕಣ್ಣು ಎಂದೆಲ್ಲಾ ಹೇಳುತ್ತೇವೆ. ಆ ನಿಟ್ಟಿನಲ್ಲಿ ನೋಡಿದರೆ ಸಿ.ಸಿ.ಟಿ.ವಿ ಕ್ಯಾಮೆರಾಗಳು ಅನುಮಾನದ ಆಧುನಿಕ ಕಣ್ಣುಗಳು ಎಂದರೆ ತಪ್ಪಾಗಲಿಕ್ಕಿಲ್ಲ, ಕಣ್ಣಿಗೆ ಸಮೀಕರಿಸಿ ಹೇಳಿದರೂ ಇದು ತದನಂತರ ಕಿವಿಗೂ ಲಿಂಕ್ ಆಗುತ್ತದೆ. ಯಾವುದೇ ಸಂಗತಿಯ ಬಗ್ಗೆ 'ಅನುಮಾನ'ವೊಂದು ಮೂಡಿದಾಗ, ಅದು ಕದ್ದು ಕೇಳಬೇಕು ಎಂಬ ಕ್ರಿಯೆಗೆ ಪ್ರಚೋದನೆಯಾಗಿಯೂ ಪರಿಣಮಿಸುತ್ತದೆ. ಯಾವುದೇ ಸಂಗತಿ ಎಂದೆನಷ್ಟೇ ಅದು ಅಷ್ಟೇ ಮುಖ್ಯವಾಗಿ 'ಸಂಗಾತಿ'ಗೂ ಅನ್ವಯವಾಗುವಂಥದ್ದೇ! ಅವರೂ ಒಂದಿಲ್ಲೊಂದು ಸಂದರ್ಭದಲ್ಲಿ ಕದ್ದು ಕೇಳುವುದನ್ನು ಮಾಡಿಯೇ ಇರುತ್ತಾರಲ್ಲ.

ರಾಜಕಾರಣದಲ್ಲಿ ಆಕೆ/ಈಕೆ ಯ ಬಗ್ಗೆಯೆಲ್ಲಾ ಚರ್ಚೆಯಾದಂತೆಯೇ ಕದ್ದಾಲಿಕೆಯ ಬಗ್ಗೆಯೂ ಆಗುತ್ತದೆ. ಇದನ್ನು ಸಂಪೂರ್ಣವಾಗಿ 'ಅನುಮಾನದ ಕಿವಿ' ಎಂದೇ ಹೇಳಬಹುದು. ಫೋನ್ ಟ್ಯಾಪ್ ಮಾಡಿ ತಮ್ಮ ವಿರೋಧಿಗಳ ಮಾತಿಗೆ 'ಖಾನ್' ಕೊಟ್ಟು ಸಾಕಷ್ಟು ವಿಷಯಗಳನ್ನು ಚಪ್ಪರಿಸಿ ಕೇಳಿ ಸವಿಯುವ ಅವರ ಪಾಲಿಗೆ ಅದುವೇ 'ಖಾನ್'ವಳಿ. ಒಂದು ಮಟ್ಟಿಗೆ ಅದು ಅವರ ಅನುಮಾನದ ಹಸಿವನ್ನು ತೀರಿಸುತ್ತದೆ ಇಲ್ಲವೇ ಮತ್ತಷ್ಟು ಹೆಚ್ಚಿಸುತ್ತದೆ. ಕೆಲವು ಖಾನಾವಳಿಗಳ ಹೆಸರು ಕೇಳಿದಾಕ್ಷಣ ಹೊಟ್ಟೆ, ಮುಂಚೆಗಿಂತ ಹೆಚ್ಚೇ ಚುರುಗುಡುತ್ತದಲ್ಲ, ಹಾಗೆ! ರಾಜಕಾರಣದಲ್ಲಿ ಇಂಥವರ ಖಾನ್‌ದಾನ್ ಬಗ್ಗೆ ಆಗಿಂದಾಗ್ಗೆ ಸದ್ದು, ಸುದ್ದಿ ಆಗುತ್ತಲೇ ಇರುತ್ತದೆ. ಇದನ್ನೆಲ್ಲಾ ಗಮನಿಸಿದರೆ ಕೆಲವರಿಗಂತೂ ಶಯನಾಗ್ರಹ ಅಂದರೆ ಮಲಗುವ ಕೋಣೆಗಿಂತಲೂ ತುಂಬಾ ಮುಖ್ಯವಾಗಿ ಬೇಕಾಗಿರುವುದು 'ಸಂಶಯ'ನಾಗ್ರಹ ಎನ್ನುವುದು ಸ್ಪಷ್ಟವಾಗುತ್ತದೆ. ಅಷ್ಟಕ್ಕೂ ನಮ್ಮ ಜೀವನವು ಒಂದು ಸಂದೇಶವಾಗಬೇಕೇ ಹೊರತು ಸಂದೇಹವಲ್ಲ!

ಓವರ್‌ಡೋಸ್: ಎಲ್ಲದರ ಬಗ್ಗೆಯೂ ಏನೋ ಒಂದು 'ಶಂಕೆ' ವ್ಯಕ್ತಪಡಿಸುತ್ತಲೇ ಇರುವ ಮನೋಧೋರಣೆ ಒಂದು ರೀತಿಯ ಕಾಯಿಲೆಯೇ ಸರಿ ಎಂದು ಹೇಳುತ್ತಾರೆ. ಹಾಗಾದರೆ ಆ ಕಾಯಿಲೆಯನ್ನು 'ಆಮಶಂಕೆ' ಎನ್ನಬಹುದೇನೋ?!

ಮನ್ ಕಿ ಬಾತ್‌ನಲ್ಲಿ ಜನರಿಗೆ ಮೋದಿ ಸಲಹೆ

ಉಷ್ಣ ಅಲೆಯಿಂದ ಜಾಗರೂಕರಾಗಿರಿ

- ಜನಸಾಮಾನ್ಯರ ಅಸಾಧಾರಣ ಸಾಧನೆಗಳಿಗೆ ಪ್ರಧಾನಿ ಶ್ಲಾಘನೆ
- ಜಲ ಸಂರಕ್ಷಣೆ, ಕ್ರೀಡೆ, ದೇಶದ ವೈವಿಧ್ಯತೆಯ ಬಗ್ಗೆ ಉಲ್ಲೇಖ

ಹೊಸದಿಲ್ಲಿ: ಉಷ್ಣ ಅಲೆಯ ಮುನ್ನೆಚ್ಚರಿಕೆಗಳು, ಮಾವು ಬೆಳೆಗಾರರಿಗೆ ಪ್ರಶಂಸೆ, ಜಲ ಸಂರಕ್ಷಣೆ, ಕ್ರೀಡಾ ಸಾಧನೆ ಹಾಗೂ ಸಮಾಜ ಸೇವೆ ಸೇರಿದಂತೆ ಹಲವು ಪ್ರಮುಖ ವಿಷಯಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ತಮ್ಮ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದ 134ನೇ ಸಂಚಿಕೆಯಲ್ಲಿ ಬೆಳಕು ಚೆಲ್ಲಿದರು.

ದೇಶದ ಹಲವು ಭಾಗಗಳಲ್ಲಿ ಉಷ್ಣ ಅಲೆ ತೀವ್ರವಾಗಿರುವ ಹಿನ್ನೆಲೆಯಲ್ಲಿ ನಾಗರಿಕರು ಜಾಗರೂಕರಾಗಿರಬೇಕು ಎಂದು ಮೋದಿ ಕೋರಿದರು. ಸಾಕಷ್ಟು ನೀರು ಕುಡಿಯಿರಿ, ಬಿಸಿಲಿನಲ್ಲಿ ಹೋಗುವಾಗ ಎಚ್ಚರದಿಂದಿರಿ ಮತ್ತು ಸರ್ಕಾರಿ ಇಲಾಖೆಗಳು ನೀಡಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ಎಂದು ಅವರು ಜನರಲ್ಲಿ ಮನವಿ ಮಾಡಿದರು.



ಸಮಾಜ ಸೇವಕರನ್ನು ಗುರುತಿಸಿ: ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರುತ್ತಿರುವ ವ್ಯಕ್ತಿಗಳಿಂದ ಕಲಿಯುವಂತೆ ಕರೆ ನೀಡಿದ ಪ್ರಧಾನಿ, ಸಮಾಜಕ್ಕಾಗಿ ಉತ್ತಮ ಕೆಲಸ ಮಾಡುತ್ತಿರುವವರನ್ನು ಗುರುತಿಸಿ, ಅವರನ್ನು ಶ್ಲಾಘಿಸಿ. ಸಾಧ್ಯವಾದರೆ ನೀವೂ ಅಂತಹ ಸತ್ಕಾರ್ಯಗಳ ಭಾಗವಾಗಿ ಎಂದರು. ಇಂತಹ ನಿಸ್ವಾರ್ಥ ಸೇವೆಗಳು ದೇಶದ ಪ್ರಗತಿಗೆ ಪ್ರೇರಣೆಯಾಗುತ್ತವೆ ಎಂದು ಆಶಯ ವ್ಯಕ್ತಪಡಿಸಿದರು.

ಸಾಂಪ್ರದಾಯಿಕ ಪಾನೀಯಗಳಲ್ಲಿ ಏಕ ಭಾರತ ಶ್ರೇಷ್ಠ ಭಾರತ: ದೇಶದ ಸಾಂಸ್ಕೃತಿಕ ವೈವಿಧ್ಯತೆಯನ್ನು ಬಿಂಬಿಸುವ ಸಾಂಪ್ರದಾಯಿಕ ಬೇಸಿಗೆ ಪಾನೀಯಗಳಾದ ಉತ್ತರ ಭಾರತದ ಆಮ್ ಪನ್ನಾ, ಪಂಜಾಬ್‌ನ ಲಸ್ಸಿ, ಗುಜರಾತ್‌ನ ಮಜ್ಜಿಗೆ, ಬಿಹಾರದ ಸತ್ತು ಶರಬತ್, ಕೊಂಕಣದ ಕೋಕಂ ಹಾಗೂ ದಕ್ಷಿಣ ಭಾರತದ ಪಾನಕ ಮತ್ತು ಮಜ್ಜಿಗೆ ಕುರಿತು ಪ್ರಧಾನಿ ಮಾತನಾಡಿದರು. ಇವು ಏಕ ಭಾರತ ಶ್ರೇಷ್ಠ ಭಾರತದ ಸಂಕೇತಗಳಾಗಿವೆ ಎಂದರು.

ಜಲ ಸಂರಕ್ಷಣೆ ಮತ್ತು ಕ್ರೀಡಾ ಸಾಧಕರಿಗೆ ಶ್ಲಾಘನೆ: ನದಿ, ಕೆರೆ ಮತ್ತು ಬಾವಿಗಳನ್ನು ಪುನಶ್ಚೇತನಗೊಳಿಸುವಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಯನ್ನು ಪ್ರಧಾನಿ ಶ್ಲಾಘಿಸಿದರು.

ಮಾವು ಬೆಳೆಗಾರರಿಗೆ ಪ್ರಧಾನಿ ಗೌರವ

ಭಾರತದ ವೈವಿಧ್ಯಮಯ ಮಾವಿನ ತಳಿಗಳ ಬಗ್ಗೆ ಮಾತನಾಡಿರುವ ಪ್ರಧಾನಿ ಮೋದಿಯವರು, ಮಾವು ಕೃಷಿಯಲ್ಲಿ ತೊಡಗಿರುವ ರೈತರನ್ನು ಶ್ಲಾಘಿಸಿದರು. ಬೇಸಿಗೆಯ ಆಗಮನದೊಂದಿಗೆ ಪ್ರತಿಯೊಂದು ಮನೆಯಲ್ಲೂ ಮತ್ತೊಂದು ಚರ್ಚೆ ಆರಂಭವಾಗುತ್ತದೆ – ಅದೇ ಮಾವಿನ ಹಣ್ಣಿನ ಬಗ್ಗೆ... ಮಹಾರಾಷ್ಟ್ರ ಮತ್ತು ಕೊಂಕಣ ಭಾಗದಲ್ಲಿ ಹಾಪುಸ್, ಅಲ್ಫಾನ್ಸೋ ಇದ್ದರೆ, ಗುಜರಾತ್‌ನ ಕೇಸರ್ ತಳಿಯು ಮಾವಿನ ರಸದ ಆತ್ಮವಾಗಿದೆ. ಉತ್ತರ ಪ್ರದೇಶದಲ್ಲಿ ದಶೇರಿ ಮತ್ತು ನನ್ನ ಕಾಶಿಯಲ್ಲಿ ಲಂಗ್ಡಾ ಮಾವುಗಳಿವೆ... ಮಾವಿನ ಹಣ್ಣಿನ ಪ್ರಯಾಣವು ಈಗ ಹಳ್ಳಿಗಳಿಂದ ಜಾಗತಿಕ ಮಾರುಕಟ್ಟೆಯವರೆಗೆ ತಲುಪುತ್ತಿದೆ... ಮಾವು ಬೆಳೆಗಾರರನ್ನು ಶ್ಲಾಘಿಸುತ್ತಾ ಅವರು, ಮಾವು ಕೃಷಿಯಲ್ಲಿ ತೊಡಗಿರುವ ನನ್ನ ರೈತ ಮಿತ್ರರನ್ನು ನಾನು ಪ್ರಶಂಸಿಸಲು ಬಯಸುತ್ತೇನೆ. ದೇಶದ ಕೃಷಿ ಆರ್ಥಿಕತೆಗೆ ನೀವು ಕೇವಲ ಸಾಮಾನ್ಯ ರೈತರಲ್ಲ, ಬದಲಿಗೆ ಅತ್ಯಂತ ವಿಶೇಷವಾದವರು ಎಂದು ಹೇಳಿದರು.

ಇದೇ ವೇಳೆ, ಜಾರ್ಖಂಡ್‌ನಲ್ಲಿ ನಡೆದ ರಾಷ್ಟ್ರೀಯ ಅಥ್ಲೆಟಿಕ್ಸ್‌ನಲ್ಲಿ ಹೊಸ ದಾಖಲೆ ಬರೆದ ಗುರುಇಂದರ್ ವೀರ್ ಸಿಂಗ್, ತೇಜಸ್ವಿನ್ ಶಂಕರ್ ಸೇರಿದಂತೆ ಹಲವು ಯುವ ಕ್ರೀಡಾಪಟುಗಳನ್ನು ಮೋದಿ ಅಭಿನಂದಿಸಿದರು.

ಜನಸಾಮಾನ್ಯರ ಸಾಮೂಹಿಕ ಪ್ರಯತ್ನಗಳು ಮತ್ತು ರಾಷ್ಟ್ರ ನಿರ್ಮಾಣದ ಜವಾಬ್ದಾರಿಯನ್ನು ಈ ಬಾರಿಯ ಮನ್ ಕಿ ಬಾತ್ ಸಂಚಿಕೆ ಯಶಸ್ವಿಯಾಗಿ ಬಿಂಬಿಸಿತು.

ಹಿಮಾಚಲದಲ್ಲಿ ಬಿಜೆಪಿ ಸಂಭ್ರಮ

ಧರ್ಮಶಾಲಾ: ಹಿಮಾಚಲ ಪ್ರದೇಶ ಸ್ಥಳೀಯ ಸಂಸ್ಥೆ ಚುನಾವಣಾ ಫಲಿತಾಂಶ ಭಾನುವಾರ ಪ್ರಕಟವಾಗಿದ್ದು, ಮೂರು ಮಹಾನಗರಪಾಲಿಕೆಗಳಲ್ಲಿ ಬಿಜೆಪಿ ಸ್ಪಷ್ಟ ಬಹುಮತದೊಂದಿಗೆ ಗೆಲುವು ಸಾಧಿಸಿದೆ. ಒಂದು ಮಹಾನಗರಪಾಲಿಕೆಯಲ್ಲಿ ಮಾತ್ರ ಕಾಂಗ್ರೆಸ್ ಅಧಿಕಾರ ಉಳಿಸಿಕೊಂಡಿದ್ದು, ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಭಾರೀ ಹಿನ್ನಡೆ ಅನುಭವಿಸಿದೆ. ಧರ್ಮಶಾಲಾದ 17 ವಾರ್ಡ್‌ಗಳಲ್ಲಿ 11ರಲ್ಲಿ ಬಿಜೆಪಿ ಗೆದ್ದರೆ, 5 ಕಾಂಗ್ರೆಸ್ ಪಾಲಾಗಿವೆ. ಸೋಲನ್‌ನ 17 ವಾರ್ಡ್‌ಗಳಲ್ಲಿ 10ರಲ್ಲಿ ಬಿಜೆಪಿ ಗೆದ್ದರೆ, 6ರಲ್ಲಿ ಕಾಂಗ್ರೆಸ್ ಮತ್ತು ಒಬ್ಬ ಸ್ವತಂತ್ರ ಅಭ್ಯರ್ಥಿ ಜಯ ಸಾಧಿಸಿದ್ದಾರೆ. ಮಂಡಿಯ 14 ವಾರ್ಡ್‌ಗಳಲ್ಲಿ ಬಿಜೆಪಿ 12ರನ್ನು ಗೆದ್ದುಕೊಂಡಿದೆ. ಪಾಲಂಪುರ್‌ನ 15 ವಾರ್ಡ್‌ಗಳಲ್ಲಿ ಕಾಂಗ್ರೆಸ್ 11 ಸ್ಥಾನ ಗೆದ್ದು ಗದ್ದುಗೆ ಉಳಿಸಿಕೊಂಡರೆ, 4 ವಾರ್ಡ್‌ಗಳು ಬಿಜೆಪಿ ಪಾಲಾಗಿವೆ. 25 ನಗರಸಭೆಗಳ ಚುನಾವಣೆಯಲ್ಲೂ ತಾವರೆ ಪಕ್ಷ 18ರಲ್ಲಿ ಗೆದ್ದು ಸಂಭ್ರಮಿಸಿದ್ದು, 22 ನಗರ ಪಂಚಾಯಿತಿಗಳಲ್ಲಿ 12ರಲ್ಲಿ ಬಿಜೆಪಿ ಗೆಲುವು ಸಾಧಿಸಿದೆ.

ಹೈಕೋರ್ಟ್ ತೀರ್ಪುಗಳ ಪ್ರಕಟಣೆಗೆ ಸುಪ್ರೀಂ ವೇಗ

ದೇಶದ ಎಲ್ಲಾ ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ಕಡ್ಡಾಯ ನಿರ್ದೇಶನ ನೀಡಿದ್ದು, ತೀರ್ಪುಗಳ ಪ್ರಕಟಣೆ ಮತ್ತು ಜಾಮೀನು ಅರ್ಜಿಗಳ ವಿಲೇವಾರಿಗೆ ಕಟ್ಟುನಿಟ್ಟಾದ ಗಡುವು ನಿಗದಿಪಡಿಸಿದೆ. ಆದೇಶಗಳನ್ನು ಕಾಯ್ದಿರಿಸಿದ ನಂತರ ತೀರ್ಪು ನೀಡಲು ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ಗರಿಷ್ಠ ಮೂರು ತಿಂಗಳ ಅವಧಿಯನ್ನು ನಿಗದಿಪಡಿಸಿದೆ.



ಕಾಲಮಿತಿ ಜಾರಿ

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜೊಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠ ಈ ನ್ಯಾಯಾಂಗ ಸುಧಾರಣೆಯನ್ನು ಪ್ರಕಟಿಸಿದೆ. ಆದೇಶವನ್ನು ಕಾಯ್ದಿರಿಸಿದ ದಿನಾಂಕದಿಂದ ಗರಿಷ್ಠ ಮೂರು ತಿಂಗಳೊಳಗೆ ಹೈಕೋರ್ಟ್‌ಗಳು ತಮ್ಮ ತೀರ್ಪು ಪ್ರಕಟಿಸಬೇಕು ಎಂದು ಈ ಕಡ್ಡಾಯ ಮಾರ್ಗಸೂಚಿ ಹೇಳುತ್ತದೆ. ಇದರೊಂದಿಗೆ, ಜಾಮೀನು ಅರ್ಜಿಗಳನ್ನು ಸಾಮಾನ್ಯವಾಗಿ ಅದೇ ದಿನ, ಅಥವಾ ತಡವಾದರೆ ವಿಚಾರಣೆಯ 24 ಗಂಟೆಗಳ ಒಳಗೆ ಆಲಿಸಿ ನಿರ್ಧರಿಸಬೇಕು ಎಂದು ಉನ್ನತ ನ್ಯಾಯಾಲಯ ನಿರ್ದೇಶಿಸಿದೆ. ದೇಶಾದ್ಯಂತ ನ್ಯಾಯಾಂಗ ಪ್ರಕ್ರಿಯೆಯನ್ನು ಸುಗಮಗೊಳಿಸಲು ಈ ಹೊಸ ನಿರ್ದೇಶನಗಳು ತಕ್ಷಣದಿಂದಲೇ ಜಾರಿಗೆ ಬರಲಿವೆ.

ಸ್ವಯಂಚಾಲಿತ ಅಧಿಸೂಚನೆಗಳು

ನಿರಂತರ ನಿಗಾ ವಹಿಸಲು ಮತ್ತು ಸಾಂಸ್ಥಿಕ ಟ್ರ್ಯಾಕಿಂಗ್ ಕಾಯ್ದುಕೊಳ್ಳಲು, ವಿಳಂಬವಾದ ಕಾಯ್ದಿರಿಸಿದ ತೀರ್ಪುಗಳ ವಿವರಗಳನ್ನು ಒಳಗೊಂಡಿರುವ ಮಾಸಿಕ ಇಮೇಲ್‌ಗಳನ್ನು ಸಂಬಂಧಪಟ್ಟ ನ್ಯಾಯಾಧೀಶರಿಗೆ ಮತ್ತು ಆಯಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಿಗೆ ನೇರವಾಗಿ ಕಳುಹಿಸಲಾಗುತ್ತದೆ. ಇದಲ್ಲದೆ, ತೀರ್ಪುಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ತಕ್ಷಣ ವಕೀಲರಿಗೆ ಸ್ವಯಂಚಾಲಿತ ಇಮೇಲ್‌ಗಳು ಮತ್ತು ಅಧಿಸೂಚನೆಗಳು ತಲುಪುತ್ತವೆ. ಇದು ಬಾಕಿ ಇರುವ ವಿಷಯಗಳಲ್ಲಿ ಭಾಗಿಯಾಗಿರುವ ಎಲ್ಲಾ ಕಾನೂನು ಪ್ರತಿನಿಧಿಗಳ ನಡುವೆ ಪಾರದರ್ಶಕ ಸಂವಹನವನ್ನು ಖಾತರಿಪಡಿಸುತ್ತದೆ.

ಹೊಣೆಗಾರಿಕೆ ಕಾರ್ಯವಿಧಾನ

ವಿಳಂಬವನ್ನು ನಿಯಂತ್ರಿಸಲು ವ್ಯವಸ್ಥಿತ ಹೊಣೆಗಾರಿಕೆಯ ಚೌಕಟ್ಟನ್ನು ಸ್ಥಾಪಿಸಲಾಗಿದೆ. ಇದನ್ನು ಅನುಷ್ಠಾನಕ್ಕೆ ತರಲು ತಮ್ಮ ತಮ್ಮ ಮುಖ್ಯ ನ್ಯಾಯಮೂರ್ತಿಗಳ ಮುಂದೆ ಮಂಡಿಸುವಂತೆ ಎಲ್ಲಾ ಹೈಕೋರ್ಟ್‌ಗಳ ರಿಜಿಸ್ಟ್ರಾರ್ ಜನರಲ್‌ಗಳಿಗೆ ಸೂಚಿಸಲಾಗಿದೆ. ಹೊಸ ಮಾರ್ಗಸೂಚಿಗಳ ಪ್ರಕಾರ, ತೀರ್ಪು ಮೂರು ತಿಂಗಳಿಗಿಂತ ಹೆಚ್ಚು ಕಾಲ ಬಾಕಿ ಉಳಿದಿದ್ದರೆ, ಆ ವಿಷಯವನ್ನು ಎರಡು ವಾರಗಳ ಒಳಗೆ ಸಂಬಂಧಪಟ್ಟ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಗಮನಕ್ಕೆ ತರಬೇಕು. ಹೆಚ್ಚುವರಿ ಎರಡು ವಾರಗಳ ನಂತರವೂ ತೀರ್ಪು ಹೊರಬರದಿದ್ದರೆ, ಮುಖ್ಯ ನ್ಯಾಯಮೂರ್ತಿಗಳು ಹೊಸ ವಿಚಾರಣೆಗಾಗಿ ಪ್ರಕರಣವನ್ನು ಮತ್ತೊಂದು ಪೀಠಕ್ಕೆ ವರ್ಗಾಯಿಸಬಹುದು.

ದಾವೆದಾರರಿಗೆ ಪರಿಹಾರ

ತೀರ್ಪು ಪ್ರಕಟಣೆಯ ವಿಳಂಬದಿಂದ ತೊಂದರೆಗೊಳಗಾದ ದಾವೆದಾರರಿಗೆ, ಸುಪ್ರೀಂ ಕೋರ್ಟ್ ಆದೇಶ ನಿರ್ದಿಷ್ಟ ಕಾನೂನು ಪರಿಹಾರಗಳನ್ನು ಒದಗಿಸಿದೆ. ತೀರ್ಪನ್ನು ಕಾಯ್ದಿರಿಸಿದ ಮೂರು ತಿಂಗಳೊಳಗೆ ತೀರ್ಪು ನೀಡದಿದ್ದರೆ, ಸಂಬಂಧಪಟ್ಟ ಪಕ್ಷಗಳು ಶೀಘ್ರ ತೀರ್ಪು ಕೋರಿ ಅರ್ಜಿ ಸಲ್ಲಿಸಲು ಅನುಮತಿಸಲಾಗಿದೆ. ಅಂತಹ ಅರ್ಜಿಗಳನ್ನು ರಜಾದಿನಗಳನ್ನು ಹೊರತುಪಡಿಸಿ ಎರಡು ಕೆಲಸದ ದಿನಗಳ ಒಳಗೆ ಸಂಬಂಧಪಟ್ಟ ಪೀಠದ ಮುಂದೆ ಪಟ್ಟಿ ಮಾಡಬೇಕೆಂದು ಮಾರ್ಗಸೂಚಿ ಸೂಚಿಸುತ್ತದೆ. ಆರಂಭಿಕ ಮೂರು ತಿಂಗಳು ಮತ್ತು ಹೆಚ್ಚುವರಿ ಒಂದು ತಿಂಗಳ ನಂತರವೂ ತೀರ್ಪು ಬಾಕಿ ಉಳಿದಿದ್ದರೆ, ದಾವೆದಾರರು ಹೊಸ ವಿಚಾರಣೆಗಾಗಿ ಪ್ರಕರಣವನ್ನು ಮತ್ತೊಂದು ಪೀಠಕ್ಕೆ ವರ್ಗಾಯಿಸಲು ಕೋರಬಹುದು.



ನ್ಯಾಯದಾನಕ್ಕೆ ಸುಪ್ರೀಂ ವೇಗ

- ಸುಪ್ರೀಂ ಕೋರ್ಟ್‌ನಿಂದ ಹೈಕೋರ್ಟ್ ತೀರ್ಪುಗಳಿಗೆ ಮೂರು ತಿಂಗಳ ಗಡುವು
- ಜಾಮೀನು ಅರ್ಜಿಗಳ ಮೇಲೆ 24 ಗಂಟೆಗಳ ಒಳಗೆ ನಿರ್ಧಾರ ಅಗತ್ಯ.
- ಮೂರು ತಿಂಗಳು ಮೀರಿದ ಪ್ರಕರಣಗಳನ್ನು ಮುಖ್ಯ ನ್ಯಾಯಮೂರ್ತಿಗಳು ಮರುನಿಯೋಜಿಸಬಹುದು.
- ನಾಲ್ಕು ತಿಂಗಳ ವಿಳಂಬದ ನಂತರ ದಾವೆದಾರರು ವರ್ಗಾವಣೆ ಕೋರಬಹುದು.
- ಒಂದು ತಿಂಗಳಾದರೂ ಸಕಾರಣ ಆದೇಶ ಸಿಗದಿದ್ದರೆ ಮರುನಿಯೋಜನೆಗೆ ವಿನಂತಿಸಬಹುದು.

ಸಕಾರಣ ಆದೇಶಗಳು

ವಿವರವಾದ ತೀರ್ಪುಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವಲ್ಲಿನ ವಿಳಂಬವನ್ನೂ ಈ ನಿರ್ದೇಶನ ಪರಿಹರಿಸುವ ಪ್ರಯತ್ನ ನಡೆಸಿದೆ. ತೀರ್ಪಿನ ಕೇವಲ ಮುಖ್ಯ ಭಾಗವನ್ನು ಮಾತ್ರ ಪ್ರಕಟಿಸಿ, ವಿವರವಾದ ಆದೇಶವನ್ನು 15 ದಿನಗಳ ಒಳಗೆ ಅಪ್‌ಲೋಡ್ ಮಾಡದ ಸಂದರ್ಭಗಳಲ್ಲಿ, ಪಕ್ಷಗಳು ಅದರ ಶೀಘ್ರ ಬಿಡುಗಡೆಗಾಗಿ ಅರ್ಜಿ ಸಲ್ಲಿಸಬಹುದು. ಒಂದು ತಿಂಗಳ ನಂತರವೂ ವಿವರವಾದ ತೀರ್ಪು ಲಭ್ಯವಾಗದಿದ್ದರೆ, ದಾವೆದಾರರು ಪ್ರಕರಣವನ್ನು ಮತ್ತೊಂದು ಪೀಠಕ್ಕೆ ಮರುನಿಯೋಜಿಸಲು ವಿನಂತಿಸಬಹುದು.

- ಸರ್ವೋಚ್ಚ ನ್ಯಾಯಾಲಯದಿಂದ ನಿರ್ದೇಶನ
- ಕಾಯ್ದಿರಿಸಿದ ತೀರ್ಪು ಘೋಷಣೆಗೆ ಗರಿಷ್ಠ 3 ತಿಂಗಳ ಅವಧಿ ನಿಗದಿ



ಕಾಯ್ದಿರಿಸಿದ ತೀರ್ಪಿನ ವಿವರಣೆ

ವಿಚಾರಣೆಯ ಮುಕ್ತಾಯದ ನಂತರ ನ್ಯಾಯಾಲಯದ ನಿರ್ಧಾರವನ್ನು ತಕ್ಷಣವೇ ನೀಡದೆ ಮುಂದೂಡಿದಾಗ ಮತ್ತು ಅದನ್ನು ಔಪಚಾರಿಕವಾಗಿ ಪ್ರಕಟಿಸುವವರೆಗೆ ಬಾಕಿ ಇರಿಸಿದಾಗ ಅದನ್ನು ಕಾಯ್ದಿರಿಸಿದ ತೀರ್ಪು ಎನ್ನಲಾಗುತ್ತದೆ. ಇದು ನ್ಯಾಯಾಧೀಶರಿಗೆ ವಾದಗಳು, ಪುರಾವೆಗಳು, ಕಾನೂನು ಪೂರ್ವಾಪರಗಳು ಮತ್ತು ಸಂಕೀರ್ಣ ಕಾನೂನು ಪ್ರಶ್ನೆಗಳನ್ನು ಪರಿಶೀಲಿಸಲು ಅಥವಾ ಲಿಖಿತ ನಿರ್ಧಾರವನ್ನು ನೀಡುವ ಮುನ್ನ ಇತರ ನ್ಯಾಯಾಧೀಶರೊಂದಿಗೆ ಚರ್ಚಿಸಲು ಸಮಯ ನೀಡುತ್ತದೆ. ವಿಚಾರಣೆ ಮುಗಿದ ತಕ್ಷಣವೇ ಪ್ರಕಟವಾಗುವ ಸಾಮಾನ್ಯ ತೀರ್ಪಿಗಿಂತ ಇದು ಕೇವಲ ಸಮಯದ ವಿಷಯದಲ್ಲಿ ಭಿನ್ನವಾಗಿದೆ. ಸಾಕಷ್ಟು ಪುರಾವೆಗಳು, ಸಂಕೀರ್ಣ ಸಂಗತಿಗಳು ಅಥವಾ ಮಹತ್ವದ ಕಾನೂನು ಪ್ರಶ್ನೆಗಳನ್ನು ಒಳಗೊಂಡಿರುವ ಪ್ರಕರಣಗಳಲ್ಲಿ ತೀರ್ಪುಗಳನ್ನು ಕಾಯ್ದಿರಿಸುವುದು ಸಾಮಾನ್ಯ. ತೀರ್ಪುಗಳನ್ನು ಕಾಯ್ದಿರಿಸುವುದು ವಿವರವಾದ ವಿಶ್ಲೇಷಣೆಗೆ ಅವಕಾಶ ನೀಡುತ್ತದೆಯಾದರೂ, ಸುದೀರ್ಘ ವಿಳಂಬ ನ್ಯಾಯಾಂಗ ವ್ಯವಸ್ಥೆಯ ಮೇಲಿನ ಸಾರ್ವಜನಿಕ ನಂಬಿಕೆಯನ್ನು ಕುಂದಿಸಬಹುದು ಎಂಬ ಅಭಿಪ್ರಾಯ ವ್ಯಾಪಕವಾಗಿದೆ.

ಕಿರುಸುದ್ದಿ

ಅಪಘಾತ: ಬೆಂಗಳೂರಿನ ಮೂವರ ಸಹಿತ 8 ಸಾವು

ಚಂಬಾ: ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯ ಕಾಲಾವನ್‌ನಲ್ಲಿ ಭಾನುವಾರ ಭೀಕರ ಅಪಘಾತ ಸಂಭವಿಸಿದ್ದು, ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಟ್ಯಾಕ್ಸಿ ಚಾಲಕನ ನಿಯಂತ್ರಣ ತಪ್ಪಿ 500 ಮೀ. ಆಳದ ಪ್ರಪಾತಕ್ಕೆ ಉರುಳಿದೆ. ದುರಂತದಲ್ಲಿ ಬೆಂಗಳೂರಿನ ಒಂದು ಕುಟುಂಬ, ಛತ್ತೀಸ್‌ಗಢದ ಇನ್ನೊಂದು ಕುಟುಂಬ ಮತ್ತು ಸ್ಥಳೀಯ ಚಾಲಕ ಸೇರಿ ಒಟ್ಟು 8 ಮಂದಿ ಮೃತಪಟ್ಟಿದ್ದಾರೆ. ಅಪಘಾತದ ಸಮಯದಲ್ಲಿ ಒಟ್ಟು 8 ಮಂದಿ ವಾಹನದಲ್ಲಿದ್ದರು. ಈವರೆಗೆ 3 ಮೃತದೇಹ ಗಳನ್ನು ಹೊರತೆಗೆಯಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ(ಎಸ್‌ಪಿ) ತಿಳಿಸಿದ್ದಾರೆ.

ಕೇದಾರನಾಥ ಯಾತ್ರೆ ಸ್ಥಗಿತ

ರುದ್ರಪ್ರಯಾಗ್: ಉತ್ತರಾಖಂಡದ ರುದ್ರಪ್ರಯಾಗದಲ್ಲಿ ಭಾರೀ ಮಳೆ ಮತ್ತು ಬಿರುಗಾಳಿಯ ಮುನ್ಸೂಚನೆ ನೀಡಿ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದ ಹಿನ್ನೆಲೆಯಲ್ಲಿ, ಭಾನುವಾರ ಕೇದಾರನಾಥ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಯಾತ್ರಿಕರ ಸುರಕ್ಷತೆಯ ದೃಷ್ಟಿಯಿಂದ ಯಾತ್ರೆಯನ್ನು ನಿಲ್ಲಿಸಲಾಗಿದ್ದು, ಪ್ರಯಾಣಿಕರನ್ನು ಸುರಕ್ಷಿತ ಸ್ಥಳಗಳಲ್ಲಿ ಉಳಿಯುವಂತೆ ಜಿಲ್ಲಾಡಳಿತ ಸೂಚಿಸಿದೆ.

ಇಂದಿನಿಂದ ನಾಲ್ಕು ದಿನ ಭಾರತ-ಅಮೆರಿಕ ಚರ್ಚೆ

ಹೊಸದಿಲ್ಲಿ: ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಮಾತುಕತೆ ಮತ್ತೆ ವೇಗ ಪಡೆಯುತ್ತಿದ್ದು, ದಿಲ್ಲಿಯಲ್ಲಿ ಉಭಯ ನಿಯೋಗಗಳು ನಾಲ್ಕು ದಿನಗಳ ಚರ್ಚೆ ನಡೆಸಲಿವೆ. ಮುಖ್ಯ ಸಂಧಾನಕಾರ ಬ್ರೆಂಡನ್ ಲಿಂಚ್ ನೇತೃತ್ವದ ಹಾಗೂ ವಾಣಿಜ್ಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಮತ್ತು ಮುಖ್ಯ ಸಂಧಾನಕಾರ ದರ್ಪಣ್ ಜೈನ್ ನೇತೃತ್ವದ ಭಾರತ ನಿಯೋಗ ರಾಷ್ಟ್ರ ರಾಜಧಾನಿಯಲ್ಲಿ ಪರಸ್ಪರ ಲಾಭದಾಯಕ ವ್ಯಾಪಾರ ಬಗ್ಗೆ ಚರ್ಚಿಸಲಿವೆ.

ವ್ಯಾಣಿಜ್ಯ ಇಲಾಖೆಯ ಪ್ರಕಾರ, ಅಮೆರಿಕ ಜತೆ ಮಧ್ಯಂತರ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಿದ ಬಳಿಕ ವಿಸ್ತೃತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ(ಬಿಟಿಎ) ಚರ್ಚೆ ನಡೆಸುವತ್ತ ಕೇಂದ್ರ ಸರ್ಕಾರ ಯೋಚಿಸಲಿದೆ. ವಿದೇಶಿ ಮಾರುಕಟ್ಟೆ ವ್ಯಾಪ್ತಿ, ತೆರಿಗೇತರ ವಿಧಾನಗಳು, ಸುಂಕ ಮತ್ತು ವ್ಯಾಪಾರ ಸೌಲಭ್ಯಗಳು, ಹೂಡಿಕೆ ಉತ್ತೇಜನ ಹಾಗೂ ಆರ್ಥಿಕ ಭದ್ರತೆ ಇತ್ಯಾದಿ ವಿಚಾರಗಳ ಕುರಿತು ಚರ್ಚೆ ನಡೆಯಲಿದೆ.

ಭಾರತ-ಅಮೆರಿಕ ನಡುವಿನ ಮಧ್ಯಂತರ ಒಪ್ಪಂದವೆಂದು ಪರಿಗಣಿಸಲಾದ ಮೊದಲ ಹಂತದ ಬಿಟಿಎ ಚೌಕಟ್ಟನ್ನು ಫೆ.7ರಂದು ಜಂಟಿಯಾಗಿ ಘೋಷಿಸಿದ್ದವು. ಪ್ರಸ್ತಾವಿಸಿದ ಒಪ್ಪಂದವನ್ನು ಕಾನೂನಾತ್ಮಕ ರೀತಿಯಲ್ಲಿ ಸಿದ್ಧಪಡಿಸುವುದು ಮುಂದಿನ ಹಂತ. ಬಿಟಿಎ ಒಪ್ಪಂದ ಚೌಕಟ್ಟನ್ನು ಘೋಷಿಸಿದ್ದರಿಂದ, ಉಭಯ ರಾಷ್ಟ್ರಗಳ ನಡುವಿನ ವಿಶಾಲವಾದ ವ್ಯಾಪಾರ ಸಾಧ್ಯತೆ ಖಚಿತಪಡಿಸಿದೆ. ಘೋಷಿತ ಬಿಟಿಎ ಚೌಕಟ್ಟಿನ ಪ್ರಕಾರ, ಭಾರತ ಮೇಲಿನ ಶೇ.50 ಸುಂಕವನ್ನು ಅಮೆರಿಕ ಶೇ.18ಕ್ಕೆ ಇಳಿಸಿದ್ದು, ರಷ್ಯಾ ತೈಲ ಖರೀದಿಗೆ ಹೇರಿದ್ದ ಶೇ.25 ದಂಡವನ್ನೂ ತೆಗೆದುಹಾಕಿದೆ.

ಬಕ್ರೀದ್‌ಗೆ ಕರೆದು ಹಿಂದು ಹತ್ಯೆಗೈದ ಆರೋಪಿ ವಧೆ

ಘಾಜಿಯಾಬಾದ್: ಬಕ್ರೀದ್‌ಗೆ ಆಹ್ವಾನಿಸಿ ಹಿಂದು ಯುವಕನ ಹತ್ಯೆಗೈದ ಪ್ರಕರಣದ ಪ್ರಮುಖ ಆರೋಪಿ ಅಸಾದ್ ಭಾನುವಾರ ಮುಂಜಾನೆ ಪೊಲೀಸ್ ಎನ್‌ಕೌಂಟರ್‌ಗೆ ಬಲಿಯಾಗಿದ್ದಾನೆ. ಅಸಾದ್ ತಂದೆ ನವಾಬ್ ಸೇರಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಉತ್ತರಪ್ರದೇಶದ ಘಾಜಿಯಾಬಾದ್‌ನ ಖೋಡಾದಲ್ಲಿ 17 ವರ್ಷದ ಸೂರ್ಯ ಪ್ರತಾಪ್ ಚೌಹಾಣ್‌ನನ್ನು ಬಕ್ರೀದ್‌ಗೆ ಆಹ್ವಾನಿಸಿದ್ದ ಅಸಾದ್, ಚಾಕುನಿಂದ ಇರಿದು ಹಲ್ಲೆ ನಡೆಸಿದ್ದ. ಏಳು ಮಂದಿಯಿಂದ ಚಾಕು ಇರಿತಕ್ಕೊಳಗಾಗಿ ಗಂಭೀರ ಗಾಯಗೊಂಡಿದ್ದ ಸೂರ್ಯನನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಘಟನೆಗೆ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದ್ದು, ಕುಟುಂಬಸ್ಥರು ಮತ್ತು ಸ್ಥಳೀಯರು ಆರೋಪಿಗಳ ಬಂಧನಕ್ಕೆ ಆಗ್ರಹಿಸಿದ್ದರು. ಅಸಾದ್ ಮಾಹಿತಿ ನೀಡಿದವರಿಗೆ 50,000 ರೂ. ಬಹುಮಾನವನ್ನೂ ಪೊಲೀಸರು ಘೋಷಿಸಿದ್ದರು.

7 ಮಂದಿಯಿಂದ ಚಾಕು ಇರಿತ: ಸಹೋದರ ಮನೆಯಲ್ಲಿದ್ದ. ಅಸಾದ್‌ನಿಂದ ದೂರವಾಣಿ ಕರೆ ಮಾಡಿ ಪದೇ ಪದೇ ಬಕ್ರೀದ್‌ಗೆ ಆಹ್ವಾನಿಸಿದ್ದ. ಆತನಿಗೆ ಬಕ್ರೀದ್ ಆಚರಣೆಗೆ ಹೋಗುವ ಇಚ್ಛೆಯಿರಲಿಲ್ಲ. ಅಸಾದ್ ಒತ್ತಾಯಕ್ಕೆ ತೆರಳಿದ್ದ. ಅಸಾದ್ ಜತೆಗಿದ್ದ 7 ಮಂದಿ ಕೈಯಲ್ಲಿ ಚಾಕುಗಳಿದ್ದವು. ನನ್ನ ಸಹೋದರನ ಮೇಲೆ ಎಲ್ಲರೂ ಚಾಕುವಿನಿಂದ ಇರಿದಿದ್ದಾರೆಂದು ಮೃತನ ಸಹೋದರಿ ಆರೋಪಿಸಿದ್ದಾರೆ. ತನ್ನ ಜೀವ ರಕ್ಷಿಸಿಕೊಳ್ಳಲು ಸೂರ್ಯ 200 ಮೀ. ದೂರದವರೆಗೆ ಓಡಿದ್ದ. ಆದರೆ ದಾಳಿಕೋರರು ಸೂರ್ಯನನ್ನು ಬೆನ್ನತ್ತಿ ಹೋಗಿ ಮತ್ತೆ ಚಾಕುವಿನಿಂದ ಇರಿದಿದ್ದಾರೆಂದು ಸಹೋದರಿ ಆರೋಪಿಸಿದ್ದಾರೆ.

ಭಾರತ- ಬಾಂಗ್ಲಾ ಗಡಿ ಮಾತುಕತೆ ಮಾ.8ರಿಂದ

ಹೊಸದಿಲ್ಲಿ: ಬಾಂಗ್ಲಾದೇಶದಲ್ಲಿ ಹೊಸ ಬಿಎನ್‌ಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಭಾರತ ಮತ್ತು ಬಾಂಗ್ಲಾದೇಶ ನಡುವಿನ ಮೊದಲ ದ್ವೈವಾರ್ಷಿಕ ಡಿಜಿ ಮಟ್ಟದ ಗಡಿ ಮಾತುಕತೆ ಮುಂದಿನ ವಾರ ದಿಲ್ಲಿಯಲ್ಲಿ ನಡೆಯಲಿದೆ. ಜೂನ್ 8ರಿಂದ 11ರವರೆಗೆ ನಡೆಯಲಿರುವ ಈ ಸಭೆಯಲ್ಲಿ ಬಿಎಸ್‌ಎಫ್ ಡಿಜಿ ಪ್ರವೀಣ್ ಕುಮಾರ್ ಮತ್ತು ಬಿಜಿಬಿ ಡಿಜಿ ಮೇಜರ್ ಜನರಲ್ ಮೊಹಮ್ಮದ್ ಅಶ್ರಫುಜ್ಜಮಾನ್ ಸಿದ್ದಿಕಿ ನೇತೃತ್ವದ ನಿಯೋಗಗಳು ಭಾಗವಹಿಸಲಿವೆ.

ಭಾರತವು ಬಾಂಗ್ಲಾದೇಶದೊಂದಿಗೆ 4,096 ಕಿಮೀ ಉದ್ದದ ಅಂತಾರಾಷ್ಟ್ರೀಯ ಗಡಿ ಹಂಚಿಕೊಂಡಿದ್ದು, ಇದರಲ್ಲಿ ಸುಮಾರು 860 ಕಿಮಿ ಭಾಗಕ್ಕೆ ಇನ್ನು ಬೇಲಿ ಹಾಕಲಾಗಿಲ್ಲ. ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿದ್ದು, ಅಕ್ರಮ ನುಸುಳುವಿಕೆ ತಡೆಯಲು ಬಿಎಸ್‌ಎಫ್‌ಗೆ ಭೂಮಿ ಹಸ್ತಾಂತರಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಕ್ರಮ ನುಸುಳುಕೋರರ ವಿರುದ್ಧ ಪತ್ತೆ ಹಚ್ಚಿ, ತೆಗೆದುಹಾಕಿ ಮತ್ತು ಗಡೀಪಾರು ಮಾಡಿ ಎಂಬ 3ಡಿ ಯೋಜನೆಯನ್ನು ಈಗಾಗಲೇ ಹೇಳಿದ್ದಾರೆ. ಈ ಮಾತುಕತೆಯಲ್ಲಿ ಗಡಿ ಬೇಲಿ ನಿರ್ಮಾಣ, ಬಿಎಸ್‌ಎಫ್ ಸಿಬ್ಬಂದಿ ಮೇಲಿನ ದಾಳಿ ತಡೆ, ಕಳ್ಳಸಾಗಣೆ, ಡ್ರೋನ್ ನುಸುಳುವಿಕೆ ಮತ್ತು ಅಕ್ರಮ ಬಾಂಗ್ಲಾ ವಲಸಿಗರನ್ನು ಮರಳಿ ಹಸ್ತಾಂತರಿಸುವ ಕುರಿತು ಚರ್ಚಿಸಲಾಗುವುದು. ಬಿಜಿಬಿ ತನ್ನ ನಾಗರಿಕರ ಮೇಲಿನ ದಾಳಿ ಬಗ್ಗೆ ಪ್ರಸ್ತಾಪಿಸುವ ಸಾಧ್ಯತೆಯಿದೆ. ಜೂ.11ರಂದು ಉಭಯ ದೇಶಗಳ ನಡುವೆ ಜಂಟಿ ಚರ್ಚೆಯ ದಾಖಲೆಗೆ ಸಹಿ ಹಾಕಲಾಗುವುದು.

ತೈಲ ರಫ್ತು ಮೇಲೆ ವಿಶೇಷ ಹೆಚ್ಚುವರಿ ಸುಂಕ ಕಡಿತ

ಹೊಸದಿಲ್ಲಿ: ಪೆಟ್ರೋಲ್, ಡೀಸೆಲ್, ಎಟಿಎಫ್ ಇಂಧನಗಳ ರಫ್ತು ಮೇಲಿನ ವಿಶೇಷ ಹೆಚ್ಚುವರಿ ಸುಂಕವನ್ನು ಕೇಂದ್ರ ಸರ್ಕಾರ ಕಡಿತಗೊಳಿಸಿದೆ. ಲೀಟರ್ ಪೆಟ್ರೋಲ್‌ಗೆ 1.5 ರೂ., ಡೀಸೆಲ್‌ಗೆ 13.5 ರೂ. ಮತ್ತು ವಿಮಾನಯಾನ ಟರ್ಬೈನ್ ಇಂಧನಕ್ಕೆ 9.5 ರೂ. ಕಡಿತಗೊಳಿಸಿದ್ದು, ಸೋಮವಾರದಿಂದ ಜಾರಿಯಾಗಲಿವೆ. ಪೆಟ್ರೋಲ್ ಮತ್ತು ಡೀಸೆಲ್ ರಫ್ತಿನ ಮೇಲೆ ರಸ್ತೆ ಮತ್ತು ಮೂಲಸೌಕರ್ಯ ಸೆಸ್ ಕಡಿತಗೊಳಿಸಿದ್ದಾಗಿ ವಿತ್ತ ಸಚಿವಾಲಯ ತಿಳಿಸಿದೆ. ದೇಶೀಯ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸುಂಕದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ, ಮಧ್ಯಪ್ರಾಚ್ಯ ಯುದ್ಧದಿಂದ ದೇಶೀಯ ತೈಲ ಪೂರೈಕೆ ಹೆಚ್ಚಿಸುವುದಕ್ಕಾಗಿ ಮೇ 16ರಂದು ಪೆಟ್ರೋಲಿಯಂ ರಫ್ತಿನ ಮೇಲೆ ಮೋದಿ ಸರ್ಕಾರ ವಿಶೇಷ ಹೆಚ್ಚುವರಿ ಸುಂಕ ವಿಧಿಸಿತ್ತು. 2022ರಲ್ಲಿ ಕೇಂದ್ರ ಸರ್ಕಾರ ಇಂಧನ ರಫ್ತುಗಳ ಮೇಲಿನ ವಿಶೇಷ ಹೆಚ್ಚುವರಿ ತೆರಿಗೆಯನ್ನು ಜಾರಿಗೆ ತಂದಿತ್ತು.

ನೌಕಾ ಪಡೆ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್

ದೇಶದ ಪ್ರತಿಷ್ಠಿತ ಹುದ್ದೆಗೇರಿದ ಕನ್ನಡಿಗ

ಹೊಸದಿಲ್ಲಿ: ಭಾರತೀಯ ಸಶಸ್ತ್ರ ಪಡೆಯಲ್ಲಿ ಕನ್ನಡಿಗರು ಮತ್ತೊಮ್ಮೆ ಅತ್ಯುನ್ನತ ಸ್ಥಾನಕ್ಕೇರುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ಭಾನುವಾರ ಅಧಿಕಾರ ಸ್ವೀಕರಿಸಿದರು. ನೌಕಾಪಡೆ ಮುಖ್ಯಸ್ಥರಾಗಿದ್ದ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಅವರ ಅಧಿಕಾರಾವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ, ಸ್ವಾಮಿನಾಥನ್ ಅವರು ಈ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಿದ್ದಾರೆ. ಇವರು ಡಿಸೆಂಬರ್ 31, 2028ರವರೆಗೆ ಈ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ.

ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರ ಬಾಲ್ಯ ಮತ್ತು ಶಿಕ್ಷಣದ ಹಿನ್ನೆಲೆ ಅತ್ಯಂತ ಪ್ರೇರಣಾದಾಯಕವಾಗಿದೆ. ಬೆಂಗಳೂರಿನ ಐತಿಹಾಸಿಕ ಬಸವನಗುಡಿಯ ಎನ್.ಆರ್. ಕಾಲೋನಿಯಲ್ಲಿ ಬೆಳೆದ ಅವರು, ನಗರದ ಪ್ರತಿಷ್ಠಿತ ಬಿಷಪ್ ಕಾಟನ್ ಶಾಲೆಯಲ್ಲಿ ತಮ್ಮ ಆರಂಭಿಕ ಶಿಕ್ಷಣವನ್ನು ಪಡೆದರು. ದೇಶಸೇವೆಯ ಕನಸು ಹೊತ್ತು ನಂತರ ವಿಜಯಪುರದ(ವಿಜಾಪುರ) ಪ್ರಸಿದ್ಧ ಸೈನಿಕ ಶಾಲೆಯಲ್ಲಿ ಸೇನಾ ಶಿಕ್ಷಣವನ್ನು ಪೂರೈಸಿದರು. ಕಠಿಣ ಪರಿಶ್ರಮದ ಮೂಲಕ ಮೊದಲ ಪ್ರಯತ್ನದಲ್ಲೇ ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಕೇವಲ 19ನೇ ವಯಸ್ಸಿನಲ್ಲಿಯೇ (1987ರಲ್ಲಿ) ಭಾರತೀಯ ನೌಕಾಪಡೆಗೆ ಅಧಿಕಾರಿಯಾಗಿ ನೇಮಕಗೊಳ್ಳುವ ಮೂಲಕ ಯುವಕರಿಗೆ ಮಾದರಿಯಾದರು.



ಕಾರ್ಯಾಚರಣೆಗಳ ಸನ್ನದ್ಧತೆಗೆ ಆದ್ಯತೆ

ರಾಷ್ಟ್ರೀಯ ಭದ್ರತೆ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಲು ಗರಿಷ್ಠ ಕಾರ್ಯಾಚರಣೆಯ ಸಿದ್ಧತೆ ಹಾಗೂ ಯುದ್ಧದ ಪರಿಣಾಮಕಾರಿತ್ವವನ್ನು ಕಾಯ್ದುಕೊಳ್ಳುವುದು ತಮ್ಮ ಅತ್ಯುನ್ನತ ಆದ್ಯತೆ ಎಂದು ನೂತನ ಮುಖ್ಯಸ್ಥರು ತಿಳಿಸಿದ್ದಾರೆ. ಪ್ರಸ್ತುತ ಪ್ರಾದೇಶಿಕ ಕಡಲ ಭದ್ರತೆ ಸವಾಲಿನಿಂದ ಕೂಡಿದ್ದು, ಸಂಕೀರ್ಣ, ಅನಿರೀಕ್ಷಿತ ಮತ್ತು ಅನಿಶ್ಚಿತವಾಗಿದೆ ಎಂದಿದ್ದಾರೆ.

ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ ಮತ್ತು ವಿಶಿಷ್ಟ ಸೇವಾ ಪದಕಗಳನ್ನು ಅವರು ಪಡೆದಿದ್ದಾರೆ.

ಸ್ವಾಮಿನಾಥನ್ ಅವರು, ಪಶ್ಚಿಮ ನೌಕಾ ಕಮಾಂಡ್‌ನ ಫ್ಲಾಗ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆಗಿ ಮತ್ತು ಅದಕ್ಕೂ ಮುನ್ನ ನೌಕಾಸೇನೆಯ ಉಪ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಸಂವಹನ ಮತ್ತು ಎಲೆಕ್ಟ್ರಾನಿಕ್ ಯುದ್ಧ ತಂತ್ರಜ್ಞಾನದಲ್ಲಿ ಪರಿಣತಿ ಹೊಂದಿದ್ದಾರೆ.

ಐಎನ್‌ಎಸ್ ವಿದ್ಯುತ್ ಮತ್ತು ವಿನಾಶ್ ಕ್ಷಿಪಣಿ ನೌಕೆಗಳು, ಐಎನ್‌ಎಸ್ ಕುಲಿಶ್ ಕ್ಷಿಪಣಿ ಕಾರ್ವೆಟ್, ಐಎನ್‌ಎಸ್ ಮೈಸೂರು ಮಾರ್ಗದರ್ಶಿ ಕ್ಷಿಪಣಿ ವಿಧ್ವಂಸಕ ನೌಕೆ ಮತ್ತು ಐಎನ್‌ಎಸ್ ವಿಕ್ರಮಾದಿತ್ಯ ಯುದ್ಧನೌಕೆಗಳ ಕಮಾಂಡಿಂಗ್ ಅಧಿಕಾರಿಯಾಗಿದ್ದರು. ಭಾರತೀಯ ನೌಕಾ ಸುರಕ್ಷತಾ ತಂಡವನ್ನೂ ರಚಿಸಿದ ಅನುಭವವೂ ಇದೆ.

ಸಿಡಿಎಸ್ ಆಗಿ ಜನರಲ್ ರಾಜಾ ಸುಬ್ರಮಣಿ ಅಧಿಕಾರ ಸ್ವೀಕಾರ

ಹೊಸದಿಲ್ಲಿ: ಪಾಕಿಸ್ತಾನ ಮತ್ತು ಚೀನಾ ವಿಷಯಗಳಲ್ಲಿ ತಜ್ಞರೆನಿಸಿಕೊಂಡಿರುವ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ ಅವರು ಭಾನುವಾರ ಭಾರತದ ನೂತನ ರಕ್ಷಣಾ ಸಿಬ್ಬಂದಿ ಮುಖ್ಯಸ್ಥರಾಗಿ(ಸಿಡಿಎಸ್) ಅಧಿಕಾರ ವಹಿಸಿಕೊಂಡಿದ್ದಾರೆ. ಮೂರು ಸಶಸ್ತ್ರ ಪಡೆಗಳ ಏಕೀಕರಣ ಮತ್ತು ಮಹತ್ವಾಕಾಂಕ್ಷೆಯ ಥಿಯೇಟರೈಸೇಶನ್(ಸಮಗ್ರ ಮಿಲಿಟರಿ ಕಮಾಂಡ್) ಯೋಜನೆಯನ್ನು ಜಾರಿಗೊಳಿಸುವುದು ಅವರ ಪ್ರಮುಖ ಆದ್ಯತೆಯಾಗಿದೆ. ಶನಿವಾರ ನಿವೃತ್ತರಾದ ಜನರಲ್ ಅನಿಲ್ ಚೌಹಾಣ್ ಅವರ ಸ್ಥಾನಕ್ಕೆ ಸುಬ್ರಮಣಿ ಅವರು ನಿಯುಕ್ತರಾಗಿದ್ದಾರೆ.



ಅಧಿಕಾರ ಸ್ವೀಕರಿಸಿದ ನಂತರ ಮಾತನಾಡಿದ ಜನರಲ್ ಸುಬ್ರಮಣಿ, ಪ್ರಧಾನಮಂತ್ರಿಯವರ ಜೆಎಐ(ಜಾಯಿಂಟ್‌ನೆಸ್, ಆತ್ಮನಿರ್ಭರತೆ ಮತ್ತು ಇನ್ನೋವೇಶನ್) ದೃಷ್ಟಿಕೋನವನ್ನು ಸಾಕಾರಗೊಳಿಸಲು ನಾವು ಬದ್ಧರಾಗಿದ್ದೇವೆ. ಸಶಸ್ತ್ರ ಪಡೆಗಳ ಆಧುನೀಕರಣಕ್ಕಾಗಿ ಮಿಲಿಟರಿ, ಕೈಗಾರಿಕೆಗಳು, ನವೋದ್ಯಮಗಳು ಮತ್ತು ಸಂಶೋಧನಾ ಸಂಸ್ಥೆಗಳ ನಡುವೆ ಹೆಚ್ಚಿನ ಸಹಯೋಗವನ್ನು ಏರ್ಪಡಿಸಲಾಗುವುದು. ಸ್ವದೇಶಿ ಶಸ್ತ್ರಾಸ್ತ್ರಗಳ ಅಭಿವೃದ್ಧಿ ಮತ್ತು ಬಳಕೆಗೆ ವೇಗ ನೀಡಲಾಗುವುದು ಎಂದು ತಿಳಿಸಿದರು.

ಸುದೀರ್ಘ ಸೇನಾ ಅನುಭವ: ಸುಮಾರು 40 ವರ್ಷಗಳ ಸುದೀರ್ಘ ಸೇನಾ ವೃತ್ತಿಜೀವನ ಹೊಂದಿರುವ ಜನರಲ್ ಸುಬ್ರಮಣಿ ಅವರು ಈ ಹಿಂದೆ ಉಪ ಸೇನಾ ಮುಖ್ಯಸ್ಥರಾಗಿ ಮತ್ತು ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯದಲ್ಲಿ ಮಿಲಿಟರಿ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಡಿಸೆಂಬರ್ 14, 1985ರಂದು ಗರ್ವಾಲ್ ರೈಫಲ್ಸ್‌ನ 8ನೇ ಬೆಟಾಲಿಯನ್ ಮೂಲಕ ಇವರು ಸೇನೆಗೆ ಸೇರಿದರು.

ಪ್ರಮುಖ ಸಾಧನೆಗಳು: ಅಸ್ಸಾಂನಲ್ಲಿ ಆಪರೇಷನ್ ರೈನೋ ಅನ್ವಯ ಬಂಡಾಯ ನಿಗ್ರಹ ಕಾರ್ಯಾಚರಣೆ, ಜಮ್ಮು-ಕಾಶ್ಮೀರದಲ್ಲಿ ಇನ್‌ಫೆಂಟ್ರಿ ಬ್ರಿಗೇಡ್ ಹಾಗೂ ಪಶ್ಚಿಮ ಗಡಿಯಲ್ಲಿ ಪ್ರಮುಖ ಸ್ಟ್ರೈಕ್ ಕಾರ್ಪ್ಸ್ ಸೇರಿದಂತೆ ವಿವಿಧ ಕಠಿಣ ರಂಗಗಳಲ್ಲಿ ಅವರು ಯಶಸ್ವಿಯಾಗಿ ಕಮಾಂಡರ್ ಆಗಿ ಕಾರ್ಯನಿರ್ವಹಿಸಿದ್ದಾರೆ.

ಸುಬ್ರಮಣಿ ಅವರಿಗೆ ವಿಶಿಷ್ಟ ಸೇವೆಗಾಗಿ ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ, ಸೇನಾ ಪದಕ ಮತ್ತು ವಿಶಿಷ್ಟ ಸೇವಾ ಪದಕಗಳನ್ನು ನೀಡಿ ಗೌರವಿಸಲಾಗಿದೆ.

ಕಿರುಸುದ್ದಿ

ದಂಡ ಪಾವತಿಗೆ ಮನವಿ

ಧಾರವಾಡ: ನಗರದಲ್ಲಿ ಸ್ವಯಂ ಚಾಲಿತ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸಾರ್ವಜನಿಕರು ಸಂಚಾರ ನಿಯಮ ಉಲ್ಲಂಘಿಸಿದ ಬಗ್ಗೆ ಮೋಟಾರ ವಾಹನ ಪ್ರಕರಣಗಳು ದಾಖಲಾಗಿರುತ್ತವೆ. ಆದ್ದರಿಂದ ಸಾರ್ವಜನಿಕರು ಕರ್ನಾಟಕ ಒನ್ ಆನ್‌ಲೈನ್ ಮೂಲಕ ಅಥವಾ ಸಂಚಾರ ಠಾಣೆಗೆ ಖುದ್ದಾಗಿ ಹಾಜರಾಗಿ ತಕ್ಷಣ ಬಾಕಿ ಇರುವ ದಂಡದ ಮೊತ್ತ ಪಾವತಿಸಲು ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶ್ರೀನಿವಾಸ ಮೇಟಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಕಲಘಟಗಿ: 2026–27 ನೇ ಸಾಲಿನ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ರೈತರಿಂದ ಹೊಸ ಪ್ರದೇಶ ವಿಸ್ತರಣೆಯಡಿ (ಮಾವು, ಬಾಳೆ, ಪಪ್ಪಾಯ, ಕರಿಮೆಣಸು, ಹಾಗೂ ಗೊಡಂಬಿ), ಹೂ ಬೆಳೆ ಪ್ರದೇಶ ವಿಸ್ತರಣೆಯಡಿ (ಸುಗಂಧ ರಾಜ, ಸೇವಂತಿಗೆ ಹಾಗೂ ಚೆಂಡೂ ಹೂ ಬೆಳೆಗೆ), ತರಕಾರಿ ಬೆಳೆಗಳ ಪ್ರದೇಶ ವಿಸ್ತರಣೆ, ಮಾವು ಪುನಃಶ್ಚೇತನ, ಟ್ರ್ಯಾಕ್ಟರ್ (20 ಪಿಟಿಓ, ಎಚ್‌ಪಿ), ವೈಯಕ್ತಿಕ ನೀರು ಸಂಗ್ರಹಣ ಘಟಕ, ಪ್ಲಾಸ್ಟಿಕ್ ಮಲ್ಚಿಂಗ್, ತಳ್ಳುವಗಾಡಿ ಮತ್ತು ಮುಂತಾದ ಘಟಕಗಳಿಗೆ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ವಿವಿಧ ಸಹಾಯಧನ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಿದ್ದು ಆಸಕ್ತಿಯುಳ್ಳ ರೈತರು ಜೂನ್ 10, 2026 ರೊಳಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ ಪಂ) ಕಲಘಟಗಿಯ ಕಚೇರಿಗೆ ಅರ್ಜಿಯನ್ನು ಸಲ್ಲಿಸಬೇಕು. ಮೊದಲು ಬಂದ ರೈತರಿಗೆ ಆದ್ಯತೆ ಮೇರೆಗೆ ಜೇಷ್ಠತೆ ಅನುಸಾರವಾಗಿ ಸಹಾಯಧನಕ್ಕೆ ಪರಿಗಣಿಸಲಾಗುವುದು. ರೈತರು ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳಬೇಕೆಂದು ಕಲಘಟಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಿಳಿವಳಿಕೆ ಕಾರ್ಯಾಗಾರ



ಹುಬ್ಬಳ್ಳಿ: ಆದಾಯ ತೆರಿಗೆ ಇಲಾಖೆ ಹಾಗೂ ಧಾರವಾಡ ಜಿಲ್ಲಾ ತೆರಿಗೆ ಸಲಹೆಗಾರರ ಸಂಘ ಸಹಯೋಗದಲ್ಲಿ ಹೊಸ ಆದಾಯ ತೆರಿಗೆ ಕಾಯಿದೆ–2025 ಹಾಗೂ ಆದಾಯ ತೆರಿಗೆ ವಿನಾಯಿತಿ ವಿಷಯ ಕುರಿತು ಆದಾಯ ತೆರಿಗೆ ಸಲಹೆಗಾರರಿಗೆ ತಿಳಿವಳಿಕೆ ಕಾರ್ಯಾಗಾರ ನಡೆಯಿತು.

ಆದಾಯ ತೆರಿಗೆ ವಿನಾಯಿತಿಯ ಜಂಟಿ ಆಯುಕ್ತ ರಾಜಾರೆಡ್ಡಿ ಅವರು ಹೊಸ ಆದಾಯ ತೆರಿಗೆ ಕಾಯಿದೆ–2025ರ ಪರಿಚಯ ಮಾಡಿಕೊಟ್ಟರು. ಅನುರಂಜನ ವರ್ಮಾ ಅವರು ಹೊಸ ಆದಾಯ ತೆರಿಗೆ ಕಾಯಿದೆ–2025ರಲ್ಲಿ ಆದ ಬದಲಾವಣೆ ಬಗ್ಗೆ ವಿಸ್ತøತವಾಗಿ ಪ್ರಸ್ತುತ ಪಡಿಸಿದರು.

ಆದಾಯ ತೆರಿಗೆ (ವಿನಾಯಿತಿ) ಅಧಿಕಾರಿ ಮಹೇಶ ಮರದ ಮತ್ತು ಆದಾಯ ತೆರಿಗೆ ಪರೀಕ್ಷಾಧಿಕಾರಿ ಕೃಷ್ಣಕುಮಾರ ಮಾತನಾಡಿ, ಟ್ರಸ್ಟ್, ಚಾರಿಟೇಬಲ್ ಟ್ರಸ್ಟ್, ಸರ್ಕಾರೇತರ ಸಂಸ್ಥೆಗಳು ಮತ್ತು ಆಸ್ಪತ್ರೆ ಇವುಗಳ ಬಗ್ಗೆ ಹೊಸ ಆದಾಯ ತೆರಿಗೆ ಕಾಯಿದೆ–2025ರಲ್ಲಿ ಆದ ಬದಲಾವಣೆಗಳ ಬಗ್ಗೆ ತಿಳಿಸಿದರು. ಸಂಘದ ಹಿರಿಯ ತೆರಿಗೆ ಸಲಹೆಗಾರ ಎಸ್.ಟಿ. ಅಕ್ಕಿ, ಡಿ.ವಿ. ಘಾವಡೆ, ಅರವಿಂದ ಲಿಂಬಿಕಾಯಿ, ಕೆ. ಪ್ರಭಾಕರರಾವ್ ಹಾಗೂ ಇತರರಿದ್ದರು. ಸಂಘದ ಅಧ್ಯಕ್ಷ ರವೀಂದ್ರ ವಿ. ಶೆಟ್ಟಿ ಸ್ವಾಗತಿಸಿದರು. ವ್ಯವಸ್ಥಾಪನಾ ಸಮಿತಿ ಸದಸ್ಯ ಸೋಮು ಸೋಲಾರಗೊಪ್ಪ ನಿರೂಪಿಸಿದರು. ಕಾರ್ಯದರ್ಶಿ ರಾಘವೇಂದ್ರ ಹುಬಳೀಕರ ವಂದಿಸಿದರು.

ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ



ಹುಬ್ಬಳ್ಳಿ: ರೈತರಿಗೆ ಸಮರ್ಪಕವಾಗಿ ಬೀಜ ಮತ್ತು ಗೊಬ್ಬರ ಪೂರೈಕೆ ಮಾಡಲು ಕೃಷಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಕಾಳ ಸಂತೆಯಲ್ಲಿ ಮಾರಾಟ ಮಾಡುವವರ ಮೇಲೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.

ಬಿಡನಾಳದಲ್ಲಿ ಹೆಚ್ಚುವರಿ ಕೇಂದ್ರದಲ್ಲಿ ರಿಯಾಯಿತಿ ದರದಲ್ಲಿ ಬೀಜ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೃತಕ ಅಭಾವ ಸೃಷ್ಟಿಸುವುದು, ಹೆಚ್ಚಿನ ದರಕ್ಕೆ ಮಾರಾಟ ಮಾಡುವುದು, ನಕಲಿ ಬೀಜ ಗೊಬ್ಬರ ವಿತರಣೆ ಮಾಡುವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಮಾಜಿ ಉಪಾಧ್ಯಕ್ಷರಾದ ಮೋಹನ್ ಅಸುಂಡಿ, ಸಿದ್ದಪ್ಪ ಮಿಸಿ, ಚನ್ನಬಸಪ್ಪ ಅಸುಂಡಿ, ಗುರಸಿದ್ದಪ್ಪ ಕಟಗಿ, ಶಂಕರಣ್ಣಾ ಅಸುಂಡಿ, ಅಡಿವಪ್ಪ ನಂದಿಹಳ್ಳಿ, ಫಕೀರ್ ಗೌಡರ ಕೆ., ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಮಂಜುನಾಥ ಅಂತರವಳ್ಳಿ ಇದ್ದರು.



ನವಲಗುಂದ: ನಗರದ ವಾಸವಿ ದೇವಸ್ಥಾನದಲ್ಲಿ ಆರ್ಯವೈಶ್ಯ ಸಮಾಜ ಸಹಯೋಗದಲ್ಲಿ ಶ್ರೀ ವಾಸವಿ ಬೆಳಕು ಮಹಿಳಾ ಸೇವಾ ಸಂಘದಿಂದ ಅಧಿಕ ಮಾಸದ ನಿಮಿತ್ತ 160 ಜೋಡಿ ದಂಪತಿಗಳು ಸಾಮೂಹಿಕ ವೆಂಕಟೇಶ್ವರ ಸ್ವಾಮಿ ಪೂಜಾ ವ್ರತಾಚರಣೆಯಲ್ಲಿ ಪಾಲ್ಗೊಂಡರು.

ತೈಲ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ

ಧಾರವಾಡ: ಇಲ್ಲಿನ ವಿವೇಕಾನಂದ ವೃತ್ತದದಲ್ಲಿ ಎಸ್‌ಯುಸಿಐ ಪಕ್ಷದ ವತಿಯಿಂದ ತೈಲ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ಮಾಡಲಾಯಿತು. ಸರ್ಕಾರಿ ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಲೀಟರ್‌ಗೆ 11 ದಿನಗಳಲ್ಲಿ 4 ಬಾರಿ ಏರಿಕೆ ಮಾಡಿರುವ ಕ್ರಮವನ್ನು ಖಂಡಿಸಲಾಯಿತು.

ಜಿಲ್ಲಾ ಕಾರ್ಯದರ್ಶಿ ಲಕ್ಷ್ಮಣ ಜಡಗನ್ನವರ ಮಾತನಾಡಿ, ಇಂಧನಬೆಲೆ ಏರಿಕೆಯು ಬೇರೆಲ್ಲ ಅವಶ್ಯಕ ವಸ್ತುಗಳನ್ನು ದುಬಾರಿಗೊಳಿಸಿ, ಹಣದುಬ್ಬರಕ್ಕೆ ಕಾರಣವಾಗುತ್ತಿದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಅರ್ಧದಷ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸುವ ತೆರಿಗೆ ಗಳೇ ಇವೆ. ಹಾಗಾಗಿ ತಕ್ಷಣವೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆರಿಗೆಗಳನ್ನು ಕಡಿತಗೊಳಿಸಬೇಕು. ತೈಲ ಕಂಪನಿಗಳ ಲಾಭಕ್ಕಾಗಿ, ದೇಶದೊಳಗೆಯೇ ಶುದ್ಧೀಕರಣ ಮಾಡಿ ಉತ್ಪಾದಿಸುವ ಪೆಟ್ರೋಲ್ ಮತ್ತು ಡೀಸೆಲ್ ಗಳಿಗೆ ಜಾಗತಿಕ ದರಗಳನ್ನು ನಿಗದಿ ಮಾಡುವ ನೀತಿಯನ್ನು ಕೈಬಿಡಬೇಕು ಎಂದರು.

ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿ ಮದುಲತಾ ಗೌಡರ ವಹಿಸಿದ್ದರು. ಜಿಲ್ಲಾ ಸಮಿತಿ ಹಿರಿಯ ಸದಸ್ಯರಾದ ಗಂಗಾಧರ ಬಡಿಗೇರ್, ಸದಸ್ಯರಾದ ಭುವನಾ ಬಳ್ಳಾರಿ, ದೀಪಾ ಧಾರವಾಡ , ಗಂಗಾ ಕೋಕರೆ ದೇವಮ್ಮ ದೇವತಕಲ್, ರುದ್ರಕಾಂತ, ದಾದ್ ಪೀರ್‌ಸಾಬ್, ಯಲ್ಲಪ್ಪ, ಸಿಂದು, ಶಶಿಕಲಾ ಮುಂತಾದವರು ಉಪಸ್ಥಿತರಿದ್ದರು.



ಧಾರವಾಡ: ಇಲ್ಲಿನ ವಿವೇಕಾನಂದ ವೃತ್ತದದಲ್ಲಿ ಎಸ್ ಯುಸಿಐ ಪಕ್ಷದ ವತಿಯಿಂದ ಕೇಂದ್ರ ಸರ್ಕಾರದ ತೈಲ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ಮಾಡಲಾಯಿತು. ಸರ್ಕಾರಿ ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಲೀಟರ್ ಗೆ 11 ದಿನಗಳಲ್ಲಿ 4 ಬಾರಿ ಏರಿಕೆ ಮಾಡಿರುವ ಕ್ರಮವನ್ನು ಖಂಡಿಸಲಾಯಿತು.

ಗಂಟೆಯ ನಿನಾದಕ್ಕೆ ಕ್ಷಣಗಣನೆ | ಶಾಲಾ ಪ್ರಾರಂಭೋತ್ಸವದ ಸಂಭ್ರಮ

ವಿದ್ಯಾರ್ಥಿಗಳ ಸ್ವಾಗತಕ್ಕೆ ಸಿದ್ಧತೆ



▸ ಮಹಾಂತೇಶ ಕಣವಿ

ಧಾರವಾಡ: ಬೇಸಿಗೆ ರಜೆಯ ಮಜಾ ಮುಗಿದಿದೆ. ಬಿಸಿಲ ನಾಡಿನ ಮಕ್ಕಳ ಆಟ–ಪಾಟಗಳಿಗೆ ಸದ್ಯ ವಿರಾಮ ಬಿದ್ದಿದ್ದು, ಪುಸ್ತಕದ ಚೀಲ ಹೆಗಲಿಗೇರಿಸಿಕೊಳ್ಳುವ ಸಮಯ ಬಂದೇ ಬಿಟ್ಟಿದೆ.

ಜೂನ್ 1ರಿಂದ 2026–27ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭಗೊಳ್ಳುತ್ತಿದ್ದು, ವಿದ್ಯಾಕಾಶಿ ಧಾರವಾಡದಲ್ಲಿ ಶಾಲಾ ಪ್ರಾರಂಭೋತ್ಸವವನ್ನು ಅತ್ಯಂತ ಸಡಗರ–ಸಂಭ್ರಮದಿಂದ ಆಚರಿಸಲು ಜಿಲ್ಲಾಡಳಿತ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಸಂಪೂರ್ಣ ಸಜ್ಜಾಗಿದೆ. ಮಕ್ಕಳನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲು ಶಾಲೆಗಳು ಸಿಂಗಾರಗೊಳ್ಳುತ್ತಿದ್ದು, ವಿದ್ಯಾಕಾಶಿಯಲ್ಲಿ ಮತ್ತೆ ಶಾಲಾ ಗಂಟೆಯ ನಿನಾದ ಮೊಳಗಲು ಕ್ಷಣಗಣನೆ ಆರಂಭವಾಗಿದೆ. ಮೊದಲ ದಿನ ಶಾಲೆಗೆ ಬರುವ ಕಂದಮ್ಮಗಳಿಗೆ ಇದು ಕೇವಲ ಶಾಲೆಯಲ್ಲ, ಹಬ್ಬದ ವಾತಾವರಣ ಎಂಬ ಭಾವನೆ ಮೂಡಿಸಲು ತೋರಣ, ರಂಗೋಲಿಗಳಿಂದ ಶೃಂಗರಿಸಿ, ಸಿಹಿ ವಿತರಣೆಗೆ ಶಿಕ್ಷಕರು ಸಜ್ಜಾಗಿದ್ದಾರೆ. ಶಾಲೆಯ ಮುಖ್ಯ ದ್ವಾರಗಳಿಗೆ ಮಾವಿನ ಎಲೆ, ಬಣ್ಣ ಬಣ್ಣದ ಬಲೂನ್‌ಗಳ ತೋರಣ ಕಟ್ಟಿ ಶಾಲಾ ಅಂಗಳದಲ್ಲಿ ರಂಗೋಲಿ ಬಿಡಿಸಿ ಸುಂದರ ವಾತಾವರಣ ನಿರ್ಮಿಸಲಾಗುತ್ತಿದೆ.

ದಿಗಂತ ವಿಶೇಷ

▸▸ ಶಾಲಾ ಆರಂಭದ ಹಿನ್ನೆಲೆ ಧಾರವಾಡದ ಸುಭಾಷ್ ರೋಡ್, ಲೈನ್ ಬಜಾರ್ ಸೇರಿದಂತೆ ಪ್ರಮುಖ ಮಾರುಕಟ್ಟೆಗಳಲ್ಲಿ ಪೋಷಕರು ಹಾಗೂ ಮಕ್ಕಳ ಗಿಜಿಗಿಜಿ ಸದ್ದು

▸▸ ಹೊಸ ಬ್ಯಾಗ್, ಕಲರ್‌ಫುಲ್ ವಾಟರ್ ಬಾಟಲ್, ಲಂಚ್ ಬಾಕ್ಸ್, ಶೂ ಹಾಗೂ ನೋಟ್‌ಬುಕ್ ಖರೀದಿ ಜೋರು

ಆರತಿ ಬೆಳಗಿ ಸ್ವಾಗತ

ಮೊದಲ ಬಾರಿಗೆ ಶಾಲೆಗೆ ಪಾದಾರ್ಪಣೆ ಮಾಡುತ್ತಿರುವ ಒಂದನೇ ತರಗತಿಯ ಪುಟಾಣಿಗಳಿಗೆ ಹಾಗೂ ಹಳೆಯ ವಿದ್ಯಾರ್ಥಿಗಳಿಗೆ ಹೂ ಕೊಟ್ಟು, ಆರತಿ ಬೆಳಗಿ, ತಿಲಕ ಇಟ್ಟು ಬರಮಾಡಿಕೊಳ್ಳಲು ಸಿದ್ಧತೆ ನಡೆದಿದೆ. ಶಾಲಾ ಪ್ರಾರಂಭೋತ್ಸವದ ಮೊದಲ ದಿನವೇ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ವಿಶೇಷವಾಗಿ ಸಿಹಿ ಜಿಲೇಬಿ ಅಥವಾ ಪಾಯಸ ಉಣಬಡಿಸಲು ಇಲಾಖೆ ಸೂಚನೆ ನೀಡಿದೆ.

“ ಜಿಲ್ಲೆಯ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಹಬ್ಬದ ವಾತಾವರಣದಲ್ಲಿ ಶಾಲಾ ಪ್ರಾರಂಭೋತ್ಸವ ಮಾಡಬೇಕು. ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗಬಾರದು. ಮೊದಲ ದಿನವೇ ಪುಸ್ತಕ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ.

■ ಉಮೇಶ ಬೊಮ್ಮಕ್ಕನವರ, ಡಿಡಿಪಿಐ

ಜೂ.1ರಂದೇ ಪಠ್ಯಪುಸ್ತಕ, ಸಮವಸ್ತ್ರ

ಈ ಬಾರಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮ ವಹಿಸಲಾಗಿದ್ದು, ಜೂನ್ 1ರಂದೇ ಶಾಲಾ ಹಂತದಲ್ಲಿ ಉಚಿತ ಪಠ್ಯಪುಸ್ತಕ ಹಾಗೂ ಸಮವಸ್ತ್ರಗಳನ್ನು ವಿತರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ರಜೆ ಮುಗಿಸಿ ಬರುವ ಮಕ್ಕಳಿಗೆ ಹೊಸ ಪುಸ್ತಕಗಳ ಸುಗಂಧ, ಹೊಸ ಸಮವಸ್ತ್ರದ ಸಡಗರ ದುಪ್ಪಟ್ಟು ಉತ್ಸಾಹ ನೀಡಲಿದೆ. ಕಳೆದೆರಡು ತಿಂಗಳಿನಿಂದ ಮೌನವಾಗಿದ್ದ ಶಾಲಾ ಆವರಣಗಳು ಜೂನ್ 1ರಿಂದ ಮತ್ತೆ ಮಕ್ಕಳ ನಗು, ಆಟ, ಪಾಠಗಳ ಚಿಲಿಪಿಲಿಯಿಂದ ಕಳೆಗಟ್ಟಲಿವೆ.

ಮುಖ್ಯಾಧಿಕಾರಿ ಚಂದ್ರಕಾಂತ ಕುಲಕರ್ಣಿಗೆ ಸನ್ಮಾನ

ಕುಂದಗೋಳ: ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿ ವಯೋಸಹಜ ನಿವೃತ್ತಿ ಹೊಂದಿದ ಪಟ್ಟಣ ಚಂದ್ರಕಾಂತ ಕುಲಕರ್ಣಿ ಅವರಿಗೆ ಪಟ್ಟಣದ ಸವಾಯಿ ಗಂಧರ್ವ ಸ್ಮಾರಕ ಭವನದಲ್ಲಿ ಪಟ್ಟಣ ಪಂಚಾಯಿತಿ ಸಿಬ್ಬಂದಿ ವರ್ಗದವರಿಂದ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಮುಖ್ಯಾಧಿಕಾರಿ ಚಂದ್ರಕಾಂತ ಕುಲಕರ್ಣಿ ದಂಪತಿಯನ್ನು ಸನ್ಮಾನಿಸಲಾಯಿತು.

ಸನ್ಮಾನಸ್ವೀಕರಿಸಿ ಮಾತನಾಡಿದ ಚಂದ್ರಕಾಂತ ಕುಲಕರ್ಣಿ ಅವರು, ತಮ್ಮ ಸೇವಾ ಅವಧಿಯಲ್ಲಿ ಸಹಕರಿಸಿದ ಜನಪ್ರತಿನಿಧಿಗಳು, ಸಿಬ್ಬಂದಿ, ಸಾರ್ವಜನಿಕರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು, ಸಾರ್ವಜನಿಕರನ್ನು ಸ್ಮರಿಸಿದರು. ಸರ್ಕಾರಿ ಸೇವೆಯಲ್ಲಿ ಪ್ರಾಮಾಣಿಕತೆ, ಜವಾಬ್ದಾರಿ ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವದಿಂದ ಕಾರ್ಯನಿರ್ವಹಿಸಲು ಸದಾ ಪ್ರಯತ್ನಿಸಿದ್ದಾಗಿ ಹೇಳಿದರು.

ಕುಂದಗೋಳ ಪಟ್ಟಣದಲ್ಲಿ ನಾನು ಎರಡು ವರ್ಷ ಸೇವೆ ಸಲ್ಲಿಸಿದ ಅವಧಿಯಲ್ಲಿ ಸ್ವಚ್ಛತೆ, ಕುಡಿಯುವ ನೀರು, ಸಾರ್ವಜನಿಕ ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ವಿವಿಧ ಜನಪರ ಕಾರ್ಯಗಳಿಗೆ ಸಿಬ್ಬಂದಿಯ ಸಹಕಾರ ಮಹತ್ವದ್ದಾಗಿತ್ತು ಎಂದರು. ನಿವೃತ್ತಿ ಜೀವನದಲ್ಲಿಯೂ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದರು.

ಶಿವಾನಂದ ಮಠದ ಶಿವಾನಂದ ಶ್ರೀಗಳು ಮಾತನಾಡಿ, ಸರ್ಕಾರಿ ಸೇವೆಯಲ್ಲಿ ಪ್ರಾಮಾಣಿಕತೆ ಮತ್ತು ಜನಸೇವೆಯ ಮನೋಭಾವ ಅತ್ಯಂತ ಮುಖ್ಯವಾಗಿದ್ದು, ಚಂದ್ರಕಾಂತ ಕುಲಕರ್ಣಿ ಅವರು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ್ದಾರೆ ಎಂದು ಶ್ಲಾಘಿಸಿದರು. ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ರಾಜು ಮಾವರಕರ, ಸಮಾದಾಯ ಸಂಘಟನಾ ಅಧಿಕಾರಿ ಸಬರದ, ಡಿಯುಡಿಸಿ ವ್ಯವಸ್ಥಾಪಕ ಯಲ್ಲಪ್ಪ ಮಾವಿನಕಾಯಿ, ಡಿ ಯು ಡಿ ಸಿ, ಎಇಇ ಪೂಜಾರ, ಸಮಾಜ ಕಲ್ಯಾಣ ಅಧಿಕಾರಿ ಮೀನಾಕ್ಷಿ ಗುದಗಿ, ಪಪಂ ಮಾಜಿ ಅಧ್ಯಕ್ಷರಾದ ವಾಗೇಶ ಗಂಗಾಯಿ, ಗಣೇಶ, ಕೊಕಾಟೆ,ಶ್ಯಾಮಸುಂದರ ದೇಸಾಯಿ,ಮಾಜಿ ಉಪಾಧ್ಯಕ್ಷ ಮಂಜುನಾಥ ಹಿರೇಮಠ, ಹನಮಂತ ತಳವಾರ ಅನೇಕ ಮಾಜಿ ಸದಸ್ಯರು, ಬೀದಿ ಬದಿ ವ್ಯಾಪಾರಸ್ಥರ ಸದಸ್ಯೆ ಲಕ್ಷ್ಮಿ ಹಿರೇಮಠ, ಪಟ್ಟಣ ಪಂಚಾಯಿತಿ ಸಿಬ್ಬಂದಿ, ಪೌರಕಾರ್ಮಿಕರು, ವಿವಿಧ ಗಣ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಶಿಕ್ಷಕ ಡಿ.ಸಿ. ಹಿರೇಮಠ ನಿರೂಪಿಸಿದರು.



ಪರಿಸರ ಸಂರಕ್ಷಿಸುವ ಮನೋಭಾವ ಮೂಡಲಿ

ನವಲಗುಂದ: ನಗರದ ಶ್ರೀ ಶಂಕರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಸಾಧನೆಗೈದವಿದ್ಯಾರ್ಥಿಗಳಿಗೆಹಮ್ಮಿಕೊಳ್ಳಲಾಗಿದ್ದ ಬಹುಮಾನ ಮತ್ತು ಪಾರಿತೋಷಕ ವಿತರಣಾ ಸಮಾರಂಭವು ಜರುಗಿತು.

ಗದುಗಿನ ಪ್ರಸಿದ್ಧ ಪರಿಸರ ಹಾಗೂ ಪಕ್ಷಿ ತಜ್ಞ ಕಿರಣ ಕಮ್ಮಾರ ಭಾಗವಹಿಸಿದ್ದರು. ಪಿ.ಪಿ.ಟಿ ಮುಖಾಂತರ ವಿದ್ಯಾರ್ಥಿಗಳಿಗೆ ವಿವಿಧ ಪಕ್ಷಿಗಳು ಹಾಗೂ ಉರಗಗಳ ಅದ್ಭುತ ಲೋಕವನ್ನು ಪರಿಚಯಿಸಿದ ಅವರು, ಪರಿಸರದಲ್ಲಿ ಕಂಡುಬರುವ ಕ್ರಿಮಿಕೀಟಗಳ ಜೀವನ ಶೈಲಿ ಮತ್ತು ಪ್ರಕೃತಿಯ ಸಮತೋಲನದಲ್ಲಿ ಅವುಗಳ ಪಾತ್ರದ ಕುರಿತು ಹಲವು ನಿಗೂಢ ಹಾಗೂ ಆಶ್ಚರ್ಯಕರ ವಿಷಯಗಳನ್ನು ಹಂಚಿಕೊಂಡರು. ಪ್ರಕೃತಿಯನ್ನು ಪ್ರೀತಿಸುವ ಮತ್ತು ಪರಿಸರವನ್ನು ಸಂರಕ್ಷಿಸುವ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಿದರು.

ಅಧ್ಯಕ್ಷತೆ ವಹಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಸ್.ವಿ. ಬಡಿಗೇರ ಮಾತನಾಡಿ, ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಭವಿಷ್ಯದ ಉನ್ನತ ಶಿಕ್ಷಣದ ಹಾದಿ ಹಾಗೂ ಮುಂಬರುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ಎದುರಿಸುವ ಕುರಿತು ಅಮೂಲ್ಯವಾದ ಮಾರ್ಗದರ್ಶನ ನೀಡಿದರು.

ಕಾಲೇಜಿನ ಹಿರಿಯ ಪ್ರಾಧ್ಯಾಪಕು ಡಾ. ಶೀಲಾ ತುಬಚಿ ಅವರು ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿ, ಪ್ರೇರಣಾದಾಯಕ ಮಾತುಗಳನ್ನಾಡಿದರು. ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷ ಡಾ. ರುದ್ರಮುನಿ ಹಿರೇಮಠ ಪ್ರಾಸ್ತಾವಿಸಿ, ಸ್ವಾಗತಿಸಿದರು. ಪ್ರಾಚಾರ್ಯ ಪ್ರೊ. ಜಯರಾಮ ಲಮಾಣಿ, ವಿದ್ಯಾರ್ಥಿ ಒಕ್ಕೂಟದ ಕಾರ್ಯಾಧ್ಯಕ್ಷರಾದ ಡಾ. ಮಾರುತಿ ಹಾರೋಗೇರಿ, ಡಾ. ಎ.ಜಿ. ಜಕ್ಕನಗೌಡ್ರ, ವಿದ್ಯಾರ್ಥಿ ಪ್ರತಿನಿಧಿಗಳಾದ ಕುಮಾರ ಶಿವಯೋಗಿ ಹತಪನಹಳ್ಳಿ, ದೇವರಾಜ ಬೆಳ್ಳಿಗಟ್ಟಿ, ಶ್ವೇತಾ ಹೆಬಸೂರು ಹಾಗೂ ಲಕ್ಷ್ಮೀ ಕಂಬಳಿ ಉಪಸ್ಥಿತರಿದ್ದರು. ಬಿ.ಕೆ. ಮಹೇಶ ನಿರೂಪಿಸಿದರು. ಸಾಧಕ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸುವ ಪ್ರಕ್ರಿಯೆ ಡಾ. ಜಿ.ಎಸ್. ಚಿಣಗಿ ಅವರು ನಿಭಾಯಿಸಿದರು. ಪ್ರೊ. ದಾವಲಸಾಬ ಕಲಬುರ್ಗಿ ವಂದಿಸಿದರು. ಮಹಾವಿದ್ಯಾಲಯದ ಸಮಸ್ತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಒಟ್ಟಾಗಿ ಪಾಲ್ಗೊಂಡರು.



ಪ್ರಕರಣಗಳ ವಿಚಾರಣೆ ಮುಂದೂಡಿಕೆ

ಧಾರವಾಡ: ಮೇ 4ರಿಂದ ಮೇ 31ರವರೆಗೆ ಸಿವ್ಹಿಲ್ ನ್ಯಾಯಾಲಯಗಳಿಗೆ ಬೇಸಿಗೆ ರಜೆ ಇರುವುದರಿಂದ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ನಡೆಯುವ ಕಲಾಪಕ್ಕೆ ಹಾಜರಾಗಲು ವಕೀಲರಿಗೆ ಅನಾನುಕೂಲ ಕಾರಣದಿಂದ ಪ್ರಕರಣಗಳ ವಿಚಾರಣೆ ಮೇ 31ರ ನಂತರ ತೆಗೆದುಕೊಳ್ಳಲಿದೆ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿವಿಧ ದಿನಾಂಕಗಳಲ್ಲಿ ನೇಮಿಸಲಾದ ನ್ಯಾಯಾಲಯದ ಆರ್.ಟಿ.ಎಸ್., ಆರ್.ಪಿ., ವೇತನ ಹಾಗೂ ಇತರ ಪ್ರಕರಣಗಳ ವಿಚಾರಣೆಯನ್ನು ಜೂ.4ಕ್ಕೆ ಹಾಗೂ ತದನಂತರ ದಿನಾಂಕಗಳಿಗೆ ಮುಂದೂಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಭಾಗವತ ಶ್ರಮಕ್ಕೆ ಅಧಿಕ ಫಲ: ಮಳಗಿ



ಧಾರವಾಡ: ಅಧಿಕಮಾಸಕ್ಕೆ ಮೂರು ಹೆಸರು. ಈ ಮಾಸಕ್ಕೆ ಯಾರು ನಿಯಮಕ ಇರದಿರುವಾಗ ಮಲ, ನಂತರ ಶ್ರೀಕೃಷ್ಣ ನಿಯಮಕವಾದ ಮೇಲೆ ಪುರುಷೋತ್ತಮ ಮಾಸ ಈ ಮಾಸದಲ್ಲಿ ಮಾಡುವ ದಾನ, ಧರ್ಮಗಳಿಗೆ ಹೆಚ್ಚಿನ ಪುಣ್ಯವಿರುವುದರಿಂದ ಅಧಿಕಮಾಸ ಎಂದು ಪ್ರಸಿದ್ಧ ಪಡೆದಿದೆ. ವಿಶೇಷವಾಗಿ ಭಾಗವತ ಶ್ರಮಕ್ಕೆ ಅಧಿಕ ಫಲವಿದೆ ಎಂದು ಡಾ. ಪಂ. ಭೀಮಸೇನಾಚಾರ್ಯ ಮಳಗಿ ಹೇಳಿದರು.

ಸತ್ತೂರಿನ ನಾರಾಯಣ ನಾರಾಯಣ ಬಳಗದ ಆಶ್ರಯದಲ್ಲಿ ಶ್ರೀಕೃಷ್ಣ ಹುನಗುಂದ ಇವರ ನಿವಾಸದಲ್ಲಿ ಜರುಗಿದ ಅಧಿಕಮಾಸದಲ್ಲಿ ಎರಡನೇ ಭಾಗವತ ಸಪ್ತಾಹದಲ್ಲಿ ಮಾತನಾಡಿದರು. ಕಾರ್ಯಕ್ರಮದ ಪೂರ್ವದಲ್ಲಿ ಬಳಗದ ಸದಸ್ಯರಿಂದ ಶ್ರೀ ಹರಿ ವಾಯು ಗುರುಗಳ ಸ್ತೋತ್ರಗಳ ಪಾರಾಯಣ ಮತ್ತು ನಾರಾಯಣಿ ಭಜನಾ ಮಂಡಳಿ ಅವರಿಂದ 33 ತಾರತಮ್ಯ ಭಜನೆಯು ವಿಜೃಂಬಣೆಯಿಂದ ಜರುಗಿತು. ರಘೋತ್ತಮ ಅವಧಾನಿ ,ಕೃಷ್ಣ ಹುನಗುಂದ, ಶ್ರೀನಿವಾಸ ಪಟ್ಟಣ ಕೊಡಿ ಪಾಂಡು ಕುಲಕರಣಿ, ವಿಶ್ವನಾಥ ಕಾಂಗೋ, ಎಂ.ಆರ್. ಕಲಕೋಟಿ, ಬದ್ರಿನಾಥ ಬೆಟಿಗೇರಿ, ಪ್ರಕಾಶ ದೇಸಾಯಿ ಸಂಜೀವ ಗೊಳಸಂಗಿ, ಗುರುನಾಥ ಸರ್ದೇಶ್ಮುಖ, ಅನಿಲ ದೇಶಪಾಂಡೆ, ಸಂಜೀವ ಜೋಶಿ, ಆನಂದ ದೇಶಪಾಂಡೆ, ವಿಲಾಸ ಸಬ್ನೀಸ್, ಅನಂತ ಸಂಕಣ್ಣವರ ಮುಂತಾದವರಿದ್ದರು.

ತಬಲಾ ವಾದನ ದರ್ಪಣ ಕೃತಿ ಬಿಡುಗಡೆ

ಧಾರವಾಡ: ಖ್ಯಾತ ತಬಲಾ ಪಟು ಹಾಗೂ ನುರಿತ ಅಧ್ಯಾಪಕರೂ ಆದ ಪಂ.ಸಂಜೀವ ಪೋತದಾರ, ಕಲೆ ಹಾಗೂ ಬರವಣಿಗೆಯಲ್ಲಿ, ವಿಶಿಷ್ಟ ಛಾಪು ಮೂಡಿಸಿರುವುದು, ಯುವ ಕಲಾವಿದರಿಗೆ ಅನುಕರಣೀಯಯೋಗ್ಯ ಮಾದರಿ ಎಂದು ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದ, ಪಂ.ರಘುನಾಥ ನಾಕೋಡ ಶ್ಲಾಘಿಸಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ. ದೇಶಪಾಂಡೆ ಭವನದಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಅರುಣೋದಯ ಕಲಾ ನಿಕೇತನ ಹಾಗೂ ಶಾಸ್ತ್ರೀಯ ಸಂಗೀತ ವಿದ್ಯಾಲಯ ಆಯೋಜಿಸಿದ್ದ ಪಂ. ಸಂಜೀವ ಪೋತದಾರ ಅವರ ಕೃತಿ ತಬಲಾ ವಾದನ ದರ್ಪಣ ಬಿಡುಗಡೆ ಮಾಡಿ, ಮಾತನಾಡಿದರು.

ಕೃತಿ ಪರಿಚಯಿಸಿದ ಗಾಯಕ ಡಾ. ಶ್ರೀಧರ ಕುಲಕರ್ಣಿ, ಪ್ರದರ್ಶಕ ಕಲೆಗಳ ಪ್ರಾವಿಣ್ಯತೆ ಸಾಧಿಸಬಯಸುವ, ಯುವ ಕಲಾವಿದರಿಗೆ, ತಬಲಾ ವಾದನ ದರ್ಪಣ ಕೃತಿ, ಮಾರ್ಗದರ್ಶಿ ಕೈಪಿಡಿಯಾಗಿದೆ ಎಂದರು.

ರಂಗಭೂಮಿ ಕಲಾವಿದ ವೀರಣ್ಣ ಪತ್ತಾರ ಮಾತನಾಡಿದರು. ರಂಗಕರ್ಮಿ ಡಾ.ಶಶಿಧರ ನರೇಂದ್ರ ಅಧ್ಯಕ್ಷತೆ ವಹಿಸಿದ್ದರು. ಸಂಜನಾ ರವೀಂದ್ರ ಪೋತದಾರ ಹಾಗೂ ಸುಷ್ಮಾ ಶಶಿಧರ ಚವಟೆ, ಭಕ್ತಿ ಹಾಗೂ ಭಾವ ಗೀತೆಗಳನ್ನು ಪ್ರಸ್ತುತ ಪಡಿಸಿದರು. ಬಸವರಾಜ ಹಿರೇಮಠ ಹಾಗೂ ವಾದಿರಾಜ ದಂಡಾಪೂರ, ಹಾರ್ಮೋನಿಯಂ ಹಾಗೂ ತಬಲಾ ಸಾಥ್ ನೀಡಿದರು. ಬಳಿಕ ಸಾಗರದ ಚೇತನಾ ರಾಜೀವ ರಾವ, ತಬಲಾ ಸೋಲೋ ಗಮನ ಸೆಳೆಯಿತು. ಗುರುನಾಥ ಪಟ್ಟಣಕೋಡಿ, ರವೀಂದ್ರ ಶಿರೋಳಕರ, ವಸಂತ ಅರ್ಕಾಚಾರ, ನವೀನ ಹಾಗೂ ನಾಗರಾಜ ಕಡ್ಲಾಸ್ಕರ, ಪ್ರೊ.ಶೈಲಾ ಮಂಗಳೂರ, ಜಯದೇವಿ ಹಾಗೂ ಕವಿತಾ ಜಂಗಮಶೆಟ್ಟಿ, ಪ್ರಕಾಶ ಪಟ್ಟೀಹಾಳ, ಅಶೋಕ ಮೊಕಾಶಿ, ಶ್ರೀನಿವಾಸ ಘೋಷ, ಶರಭೇಂದ್ರ ಸ್ವಾಮಿ, ವೈಶಾಲಿ ರಸಾಳಕರ, ಶಶಿಧರ ಚವಟೆ ಸೇರಿದಂತೆ ಅನೇಕ ಗಣ್ಯರು, ಕಲಾವಿದರು, ಕಲಾರಸಿಕರು ಪಾಲ್ಗೊಂಡಿದ್ದರು. ಸಂಜನಾ ರವೀಂದ್ರ ಪೋತದಾರ ಪ್ರಾರ್ಥಿಸಿದರು. ಪರಿಮಳಾ ಕಾಗಲಕರ ನಿರೂಪಿಸಿದರು. ಶಿಲ್ಪಾ ಪಾಂಡೆ ವಂದಿಸಿದರು.



ಆರ್ಥಿಕ ವಿದ್ಯಮಾನಗಳ ಅರಿವು ಅಗತ್ಯ



ಧಾರವಾಡ: ಅರ್ಥಶಾಸ್ತ್ರ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಪ್ರಸ್ತುತ ಆರ್ಥಿಕ ವಿದ್ಯಮಾನಗಳನ್ನು ಅರಿಯುವುದು ಹೆಚ್ಚು ಅವಶ್ಯಕತೆ ಇದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಬಿ.ಎಚ್.ನಾಗೂರ ಹೇಳಿದರು.

ನಗರದ ಕರ್ನಾಟಕ ಕಲಾ ಮಹಾವಿದ್ಯಾಲಯದ ಅರ್ಥಶಾಸ್ತ್ರ ವಿಭಾಗ ಕಾಲೇಜಿನ ಫ್ಯಾರನ್ ಸಭಾಂಗಣದಲ್ಲಿ ಆಯೋಜಿಸಿದ ಅರ್ಥ ಸಂಚಯ–2026 ಎಂಬ ಕಾರ್ಯಕ್ರಮದಲ್ಲಿ ಬಿ.ಎ.ಅಂತಿಮ ವರ್ಷದ ಬೀಳ್ಕೊಡುಗೆ ಸಮಾರಂಭ ಉದ್ದೇಶಿಸಿ ಮಾತನಾಡಿದರು. ವಿದ್ಯಾರ್ಥಿಗಳು ಯಶಸ್ಸಿಗಾಗಿ ಶಿಸ್ತು, ಬದ್ಧತೆ, ಸಮರ್ಪಣೆ ಹಾಗೂ ನಿರಂತರ ಪರಿಶ್ರಮದಿಂದ ಸಾಧನೆ ಮಾಡಲು ಪ್ರಯತ್ನಿಸಬೇಕು. ಇಂದಿನ ಜಾಗತಿಕ ಸಂದರ್ಭದಲ್ಲಿ ಅರ್ಥಶಾಸ್ತ್ರದಲ್ಲಿ ವಿಸ್ತೃತ ಅವಕಾಶಗಳನ್ನು ಹೊಂದಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಪ್ರೊ. ಐ. ಸಿ. ಮುಳಗುಂದ ಮಾತನಾಡಿ, ಕಾಲೇಜಿನಲ್ಲಿರುವ ಸೌಲಭ್ಯಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಮುಂದೆ ಬರಲು ಪ್ರಯತ್ನಿಸಬೇಕು ಎಂದರು.

ಈಚೇಗೆ ನಿಧನರಾದ ಅರ್ಥಶಾಸ್ತ್ರ ಮುಖ್ಯಸ್ಥೆ ಡಾ.ಎಸ್.ಅನ್ನಪೂರ್ಣ ಅವರಿಗೆ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗೌರವ ಸಲಾಯಿತು. ಅರ್ಥಶಾಸ್ತ್ರ ವಿಭಾಗದ ವಿಷಯ ಸಂಯೋಜಕರಾದ ಡಾ.ಶಿಲ್ಪಾ ಧಾರವಾಡ, ಡಾ.ಸ್ಟೆಲ್ಲಾ ಸ್ಟೀವನ್, ಡಾ.ದಳಪತಿ, ಡಾ.ಓದುಗೌಡರ, ಶಾಲಿನಿ, ಸಿದ್ದಪ್ಪ ಇದ್ದರು.

ಉಜ್ವಲ ಭವಿಷ್ಯಕ್ಕೆ ಶಿಕ್ಷಣವೇ ದಾರಿ

ಧಾರವಾಡ: ಇಂದಿನ ಸಮಾಜದಲ್ಲಿನ ಬದಲಾವಣೆಗಳನ್ನು ತೀಕ್ಷ್ಣವಾಗಿ ಅರಿತು ವಿದ್ಯಾರ್ಥಿಗಳು ಭವಿಷ್ಯದ ಉನ್ನತ ಶಿಕ್ಷಣದ ದಾರಿ ಆಯ್ದುಕೊಳಲು ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ. ಸಂಜಯಕುಮಾರ ಮಾಲಗತ್ತಿ ಹೇಳಿದರು.

ನಗರದ ಸರ್ಕಾರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು. ಪ್ರಾಧ್ಯಾಪಕ ಪ್ರೊ. ಜೆ.ಎಂ.ಚಂದುನವರ ಮಾತನಾಡಿ, ಸರ್ಕಾರಿ ಕಾಲೇಜುಗಳು ಸೌಲಭ್ಯಗಳನ್ನು ಹೊಂದಿ, ಖಾಸಗಿ ಕಾಲೇಜು ಮೀರಿಸುವಷ್ಟು ವಿಪುಲವಾಗಿ ಬೆಳೆಯುತ್ತಿವೆ. ವಿದ್ಯಾರ್ಥಿಗಳು ಕಾಣುವ ಕನಸುಗಳು ದೊಡ್ಡದಾಗಿರಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಡಾ.ಗುರುನಾಥ ಬಡಿಗೇರ ಮಾತನಾಡಿ, ನೀವು ಯಾವುದೇ ಕೆಲಸ ಮಾಡಿದರು ಅದರಲ್ಲಿ ಶ್ರದ್ಧೆಯಿಂದ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು ಎಂದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಸರಸ್ವತಿ ಪಾಟೀಲ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಬಸವರಾಜೇಶ್ವರಿ ಪಾಟೀಲ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಮೌನೇಶ ಬಡಿಗೇರ, ಪತ್ರಿಕೋದ್ಯಮ ವಿಭಾಗದ ಡಾ.ವಿಶ್ವನಾಥ ಚಿಂತಾಮಣಿ ಮಾತನಾಡಿದರು. ಅಂತಿಮ ವರ್ಷದ ವಿದ್ಯಾರ್ಥಿಗಳು ಕಾಲೇಜಿಗೆ ಕಿರು ಕಾಣಿಕೆ ಸಮರ್ಪಿಸಿದರು. ಐಕ್ಯೂಎಸಿ ಸಂಯೋಜಕ ಇಬ್ರಾಹಿಂ ಸೌದಾಗರ ಇದ್ದರು. ಉದ್ದಮ್ಮ ಅಂಜನಕಟ್ಟಿ ನಿರೂಪಿಸಿದರು. ಪವಿತ್ರಾ ಮಾಲಾಪೂರ ಸ್ವಾಗತಿಸಿದರು. ನೀಲಮ್ಮ ಸಬರದ ವಂದಿಸಿದರು.



ಸಾಹಿತ್ಯ ಸಮಾಜದ ಕನ್ನಡಿ: ಡಾ.ಪಾಟೀಲ



ಧಾರವಾಡ: ಸಾಹಿತ್ಯ ಸಮಾಜದ ಕನ್ನಡಿ ಎಂದು ನಂಬಿದ ಶ್ರೀಧರ ಗಸ್ತಿ ಬರಹದ ಮೂಲಕ ಬದುಕಿನ ಸಣ್ಣ ಸತ್ಯಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ ಎಂದು ಸಾಹಿತಿ ಡಾ.ರಾಘವೇಂದ್ರ ಪಾಟೀಲ ಹೇಳಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೇಖಕ ಶ್ರೀಧರ ಗಸ್ತಿ ಬರೆದಿರುವ ಕೆಂಡದ ಧೂಳೋ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕೃತಿ ಪರಿಚಯಿಸಿದ ಪ್ರಾಧ್ಯಾಪಕಿ ಡಾ. ಪ್ರಜ್ಞಾ ಮತ್ತಿಹಳ್ಳಿ, ಈ ಕೃತಿ ಸಮಕಾಲೀನ ಬದುಕಿನ ಸಂಕಟಗಳನ್ನು ಹೊಂದಿದ್ದು, ಇಂದಿನ ಯುವ ಶಕ್ತಿಯು ನೈಜ ಜ್ವಲಂತ ಸಮಸ್ಯೆಗಳಿಗೆ ಗಟ್ಟಿಯಾಗಿ ಧ್ವನಿ ಎತ್ತಬೇಕಿದೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ ಕಾಣುವ ಜಾತಿ, ಅಂತಸ್ತು, ನಿರುದ್ಯೋಗ, ಭಾವನಾತ್ಮಕ ಸಂಬಂಧ, ಪ್ರೀತಿ–ಪ್ರೇಮ, ಅಮಾಯಕ ಮಹಿಳೆಯರ ಮೇಲಾಗುವ ಅತ್ಯಾಚಾರ, ಮೌಲ್ಯಗಳ ಅವನತಿ ಮನೋಜ್ಞವಾಗಿ ಹೆಣೆಯಲಾಗಿದೆ ಎಂದರು.

ಭ್ರಷ್ಟಾಚಾರ, ಧಾರ್ಮಿಕ ದ್ವೇಷ, ಅಂತರ್ಜಾತಿ ವಿವಾಹಗಳು ಕಥಾ ಸಂಕಲನದ ಜೀವಾಳವಾಗಿವೆ ಎಂದರು. ಕ.ವಿ. ಸಂಘದ ಉಪಾಧ್ಯಕ್ಷ ಶ್ರೀನಿವಾಸ ವಾಡಪ್ಪಿ, ಲೇಖಕ ಶ್ರೀಧರ ಗಸ್ತಿ, ಶಂಕರ ಹಲಗತ್ತಿ ಮಾತನಾಡಿದರು. ಶಿವಾನಂದ ಭಾವಿಕಟ್ಟಿ, ಡಾ. ಮಹೇಶ ಹೊರಕೇರಿ, ಗುರು ಹಿರೇಮಠ, ಹೇಮಂತ ಲಮಾಣಿ ಅನೇಕರು ಇದ್ದರು. ವೀರಣ್ಣ ಒಡ್ಡೀನ್ ನಿರೂಪಿಸಿದರು. ಡಾ.ಜಿನದತ್ತ ಹಡಗಲಿ ವಂದಿಸಿದರು.

ವ್ಯಕ್ತಿತ್ವ ನಿರ್ಮಾಣ ಶಿಕ್ಷಣದ ಗುರಿ

ಧಾರವಾಡ: ಕೇವಲ ಉದ್ಯೋಗ ಸಂಪಾದನೆ ಶಿಕ್ಷಣದ ಉದ್ದೇಶವಲ್ಲ, ಮನುಷ್ಯ ಜೀವನ ಮೌಲ್ಯಗಳೊಂದಿಗೆ ಉನ್ನತ ವ್ಯಕ್ತಿತ್ವ ನಿರ್ಮಾಣವಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಕಿತ್ತೂರು ವಲಯದ ಹೆಚ್ಚುವರಿ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ ಪ್ರತಿಪಾದಿಸಿದರು.

ಶಿಕ್ಷಣ ಇಲಾಖೆಯ ಅಧಿಕಾರಿಗಳಾದ ಪ್ರಭಯ್ಯ ಚಿಕ್ಕಮಠ, ಬಿ.ವೈ.ಭಜಂತ್ರಿ ಮತ್ತು ಶಶಿಧರ ಕಟ್ಟಿಮನಿ ಅವರ ಸೇವಾ ನಿವೃತ್ತಿ ಹಿನ್ನೆಲೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು. ನಿವೃತ್ತ ಅಧಿಕಾರಿ ಪ್ರಭಯ್ಯ ಚಿಕ್ಕಮಠ, ಅಭಿವೃದ್ಧಿ ಉಪನಿರ್ದೇಶಕ ಬಸವರಾಜ ನಾಲತವಾಡ, ಪ್ರಭಾರಿ ಡಿಡಿಪಿಐ ಉಮೇಶ ಬೊಮ್ಮಕ್ಕನವರ, ಇಲಾಖೆಯ ಅಧಿಕಾರಿಗಳಾದ ಎಸ್. ಎಂ. ಹುಡೇದಮನಿ, ಡಾ. ರೇಣುಕಾ ಅಮಲಝರಿ, ನಫೀಜಾ ದಾವಲಸಾಬನವರ, ನಿವೃತ್ತ ಉಪನಿರ್ದೇಶಕರುಗಳಾದ ಎಸ್. ಎಸ್. ಕೆಳದಿಮಠ, ಡಾ. ಗುರುನಾಥ ಹೂಗಾರ, ವಿರೂಪಾಕ್ಷಯ್ಯ ಚಿಕ್ಕಮಠ, ಕಾರ್ತಿಕ ಚಿಕ್ಕಮಠ, ಅನೂಷಾ ಚಿಕ್ಕಮಠ, ಜಯಶ್ರೀ ಕಲ್ಮಠ ಮಾತನಾಡಿದರು. ಶಿಕ್ಷಣಾಧಿಕಾರಿ ಪ್ರಭಯ್ಯ ಚಿಕ್ಕಮಠ ಅವರನ್ನು ಶಾಲಾ ಶಿಕ್ಷಣ ಇಲಾಖೆ, ವಿವಿಧ ಶಿಕ್ಷಕ ಸಂಘಟನೆಗಳು ಹಾಗೂ ಶಿಕ್ಷಣ ಸಂಸ್ಥೆಗಳ ವತಿಯಿಂದ ಗೌರವಿಸಿ ಬೀಳ್ಕೊಡಲಾಯಿತು. ಇಲಾಖೆಯ ನಿರ್ದೇಶಕ ಈಶ್ವರ ನಾಯಕ, ಉಪನಿರ್ದೇಶಕ ಗಿರೀಶ ಪದಕಿ, ಡಯಟ್ ಪ್ರಾಚಾರ್ಯ ಬಸವರಾಜ ನಾಲತವಾಡ, ಸಹಾಯಕ ನಿರ್ದೇಶಕ ಪ್ರಕಾಶ ಹೊಸಮನಿ, ಪ್ರಭುಕುಮಾರ ಅಗಡಿ, ವೀರೇಶ ಕಲಬುರ್ಗಿ ಸೇರಿದಂತೆ ಇದ್ದರು. ಐ.ಜಿ.ವೆಂಕಟಾಪೂರಮಠ ಸ್ವಾಗತಿಸಿದರು. ರಾಜು ಭೂಶೆಟ್ಟಿ ವಂದಿಸಿದರು.



ಕಿರುಸುದ್ದಿ

ವಿಶೇಷ ಉಪನ್ಯಾಸ ನಾಳೆ

ಗದಗ: ನಗರದ ಮುಳಗುಂದ ನಾಕಾದ ಹತ್ತಿರ ಇರುವ ಅಡವೀಂದ್ರ ಸ್ವಾಮಿ ಮಠದಲ್ಲಿ ಜೂ.2 ರಂದು ಸಂಜೆ 6.30ಕ್ಕೆ 348ನೇ ಮಾಸಿಕ ಶಿವಾನುಭವದಲ್ಲಿ ವಿಶ್ವ ಪರಿಸರ ದಿನಾಚರಣೆ ಹಾಗೂ ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ. ವಿಜ್ಞಾನ ಉಪನ್ಯಾಸಕ ಪ್ರೊ.ಶಿವಾನಂದ ಮಲ್ಲಿ ಗೌಡ್ರ ಪರಿಸರ ಸಂರಕ್ಷಣೆ ನಮ್ಮ ಹೊಣೆ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ನಂತರ ಸಂವಾದ ಜರುಗಲಿದೆ. ಅಡವೀಂದ್ರ ಸ್ವಾಮಿ ಮಠದ ಧರ್ಮದರ್ಶಿ ಮಹೇಶ್ವರ ಸ್ವಾಮೀಜಿ ಸಮ್ಮುಖ ವಹಿಸುವರು.

ಜೂ.14ರಂದು ಸಮಾವೇಶ

ಗದಗ: ನಗರದ ಗಾಣಿಗ ಭವನದಲ್ಲಿ ಅಖಿಲ ಭಾರತ ಗಾಣಿಗ ವಿದ್ಯಾ ಹಾಗೂ ಉದ್ಯೋಗವರ್ಧಕ ಟ್ರಸ್ಟ್ ಜಿಲ್ಲೆಯ ಎಲ್ಲಾ ತಾಲೂಕಿನ ಸಮಾಜ ಬಾಂಧವರ ಸಹಕಾರದೊಂದಿಗೆ ರಾಜ್ಯಮಟ್ಟದ ವಧು-ವರರ ಉಚಿತ ಸಮಾವೇಶ ಜೂ.14 ರಂದು ಬೆಳಗ್ಗೆ 9ಕ್ಕೆ ಹಮ್ಮಿಕೊಳ್ಳಲಾಗಿದೆ. ರಾಜ್ಯ ಮಟ್ಟದ ವಧು ವರರ ಉಚಿತ ಸಮಾವೇಶದಲ್ಲಿ ಭಾಗವಹಿಸಲು ಇಚ್ಛಿಸುವ ಗಾಣಿಗ ಸಮಾಜ ಬಾಂಧವರು ಜೂ.10ರೊಳಗಾಗಿ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಫೋಟೋ, ಆಧಾರ ಕಾರ್ಡ್ ಹಾಗೂ ಬಯೋಡೇಟಾ ಲಗತ್ತಿಸಿ ಎಲ್ಲ ವಿವರಗಳೊಂದಿಗೆ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ನೋಂದಾಯಿಸುವವರು ಮೊ.9741648546, 9591066921, 9880369245, 9448103739 ಸಂಪರ್ಕಿಸಬಹುದು ಎಂದು ಟ್ರಸ್ಟನ ಅಧ್ಯಕ್ಷ ಬಸವರಾಜ ಬಿಂಗಿ, ಕಾರ್ಯದರ್ಶಿ ಮರುಗೇಶ ಬಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಗದಗ: ಕಣಗಿನಹಾಳ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 2026-27ನೇ ಶೈಕ್ಷಣಿಕ ಸಾಲಿಗೆ ವಸತಿ ಶಾಲೆ ಮತ್ತು ಕಾಲೇಜಿನಲ್ಲಿ ಖಾಲಿರುವ ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರ ಹುದ್ದೆಗೆ ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ನೇಮಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ ಗಣಿತ ಕನ್ನಡ ಇಂಗ್ಲಿಷ್ ಅತಿಥಿ ಉಪನ್ಯಾಸಕರು/ಶಿಕ್ಷಕರು 06 ಹುದ್ದೆಗಳಿಗೆ (ವಿಷಯಕ್ಕೆ ಒಬ್ಬರಂತೆ) ಹಾಗೂ ಕನ್ನಡ ಇಂಗ್ಲಿಷ್ ಅತಿಥಿ ಉಪನ್ಯಾಸಕರು/ಶಿಕ್ಷಕರು 02 ಹುದ್ದೆಗಳಿಗೆ (ವಿಷಯಕ್ಕೆ ಒಬ್ಬರಂತೆ) ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನ ಜೂ.2 ಹಾಗೂ ಅಭ್ಯರ್ಥಿಗಳು ಖುದ್ದಾಗಿ ಶಾಲೆಗೆ ಭೇಟಿ ನೀಡಿ ಅರ್ಜಿ ಸಲ್ಲಿಸಲು ತಿಳಿಸಿದೆ ಎಂದು ಕಣಗಿನಹಾಳ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಚಾರ್ಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೌಲಭ್ಯಕ್ಕೆ ಆಹ್ವಾನ

ಗದಗ: ಪ್ರಸಕ್ತ ಸಾಲಿನಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ವಿವಿಧ ಯೋಜನೆಗಳಡಿ ಸಹಾಯಧನ ಸೌಲಭ್ಯ ಪಡೆಯಲು ತಾಲೂಕಿನ ತೋಟಗಾರಿಕೆ ಬೆಳೆಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂ.15 ರಂದು ಕೊನೆಯ ದಿನವಾಗಿದೆ. ಕೇಂದ್ರ ಪುರಸ್ಕೃತ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಕಾರ್ಯಕ್ರಮಡಿ ಪ್ರಮುಖವಾಗಿ ಬಾಳೆ (ಕಂದು/ಟಿ.ಸಿ), ಡ್ರ್ಯಾಗನ್ ಫ್ರೂಟ್, ಚಿಕ್ಕು ಮಾವು, ಪಪಾಯ, ದಾಳಿಂಬೆ, ಲಿಂಬೆ, ಪೇರಲ, ಹುಣಸೆ, ನೇರಳೆ ಹಾಗೂ ಹೈಬ್ರೀಡ್ ತರಕಾರಿ, ಹೂ ಬೆಳೆ (ಗುಲಾಬಿ, ಸುಗಂಧರಾಜ, ಸೇವಂತಿಗೆ, ಆಯಸ್ಟರ್, ಚೆಂಡುಹೂ), ಔಷಧ ಮತ್ತು ಸುಗಂಧ ದ್ರವ್ಯ ಬೆಳೆಗಳ ಪ್ರದೇಶ ವಿಸ್ತರಣೆ, ಮಾವು ಪುನಶ್ಚೇತನ, ಪ್ಲಾಸ್ಟಿಕ್ ಮಲ್ಚಿಂಗ್, ವೈಯಕ್ತಿಕ ನೀರು ಸಂಗ್ರಹಣಾ ಘಟಕ ನಿರ್ಮಾಣ, ಕಡಿಮೆ ವೆಚ್ಚದ ಈರುಳ್ಳಿ ಶೇಖರಣಾ ಘಟಕ, ಪಾಲಿಹೌಸ್, ವೀಡಮ್ಯಾಟ್, ಆಯಿಲ್ ಓರ್ಡ್ ನೆಟ್, ಸಮಗ್ರ ಕೀಟ / ರೋಗ ನಿರ್ವಹಣೆ, ಎರೆಹುಳು ಗೊಬ್ಬರ ಘಟಕ, ಯಾಂತ್ರೀಕರಣ (ಮಿನಿ ಟ್ರ್ಯಾಕ್ಟರ್ 20ಹೆಚ್.ಪಿ.ವರೆಗೆ), ಟ್ರ್ಯಾಕ್ಟರ್ ಚಾಲಿತ ಸ್ಪ್ರೇಯರ್, ಮೊಬೈಲ್ ವೆಂಡಿಗ್ ಕಾರ್ಟ್, ಸಹಾಯಧನ ಸೇರಿ ವಿವಿಧ ಸೌಲಭ್ಯ ಪಡೆಯಲು ಅರ್ಹ ರೈತರಿಂದ ಸಾಮಾನ್ಯ / ಪ.ಜಾತಿ / ಪ.ಪಂಗಡ / ಮಹಿಳೆಯರು ಅರ್ಜಿ ಸಲ್ಲಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಗದಗ: 2026-27ನೇ ಸಾಲಿನ ರಾಷ್ಟ್ರೀಯ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (ಎಂಐಡಿಎಚ್), ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಪಿಎಂಕೆಎಸ್‌ವೈ) ಹಾಗೂ ಎಣ್ಣೆ ತಾಳೆ ಅಭಿವೃದ್ಧಿ ಯೋಜನೆಗಳಡಿ ವಿವಿಧ ಘಟಕಗಳಿಗೆ ಸಹಾಯಧನ ಪಡೆಯಲು ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ರಾಷ್ಟ್ರೀಯ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ ಯೋಜನೆಯಡಿ ಕಡು ಬಾಳೆ, ಅಂಗಾಂಶ ಬಾಳೆ, ಪಪ್ಪಾಯ, ಅಂಜೂರ, ದಾಳಿಂಬೆ, ಮಾವು, ಸೀಬೆ, ಹುಣಸೆ, ನಿಂಬೆ ಸೇರಿದಂತೆ ವಿವಿಧ ಹಣ್ಣಿನ ಬೆಳೆಗಳು, ಹೈಬ್ರಿಡ್ ತರಕಾರಿ, ಸೇವಂತಿಗೆ, ಚೆಂಡು ಹೂವು, ಮಲ್ಲಿಗೆ, ಸಾಂಬಾರು ಹಾಗೂ ಔಷಧೀಯ ಸಸ್ಯಗಳ ಹೊಸ ಪ್ರದೇಶ ವಿಸ್ತರಣೆಗೆ ಸಹಾಯಧನ ನೀಡಲಾಗುತ್ತದೆ. ಇದರ ಜೊತೆಗೆ ಕೃಷಿಹೊಂಡ, ಪ್ಲಾಸ್ಟಿಕ್ ಹೊದಿಕೆ, ಪಕ್ಷಿ ನಿರೋಧಕ ಬಲೆ, ಕಳೆ ಬಾಳೆ, 20 ಹೆಚ್.ಪಿ ವರೆಗಿನ ಟ್ರ್ಯಾಕ್ಟರ್ ಚಾಲಿತ ಹಾಗೂ ನಾಲ್ಕುಚಕ್ರ ಚಾಲಿತ ಟ್ರ್ಯಾಕ್ಟರ್‌ಗಳು, ಫಾರ್ಮೆಂಟ್ ಪ್ಯಾಕ್ ಹೌಸ್, ಮೊಬೈಲ್ ಶೀತಲೀಕರಣ ಘಟಕ, ಈರುಳ್ಳಿ ಶೇಖರಣಾ ಘಟಕ, ರಿಂಗ್ ಸೇರಿದಂತೆ ವಿವಿಧ ಘಟಕಗಳಿಗೆ ಅನುದಾನ ಸೌಲಭ್ಯ ಲಭ್ಯವಿದೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಹನಿ ನೀರಾವರಿ ಹಾಗೂ ಎಣ್ಣೆ ತಾಳೆ ಬೆಳೆ ವಿಸ್ತರಣೆ ಕಾರ್ಯಕ್ರಮಗಳಿಗೂ ಸಹಾಯಧನ ನೀಡಲಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ರೈತರು ಅರ್ಜಿ ಸಲ್ಲಿಸಬಹುದಾಗಿದೆ. ಪಹಣಿ ಹಾಗೂ ಆಧಾರ್ ಕಾರ್ಡ್ ಪ್ರತಿಯೊಂದಿಗೆ ಜೂನ್ 15ರೊಳಗಾಗಿ ಮುಂಡರಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ (ಜಿಲ್ಲಾ ಪಂಚಾಯತ್) ಕಚೇರಿಗೆ ಅರ್ಜಿ ಸಲ್ಲಿಸಬೇಕು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗದಗ: ಅಧಿಕ ಜೇಷ್ಠ ಮಾಸದ ಪ್ರಯುಕ್ತ ವಿಶ್ವೇಶ್ವರಯ್ಯ ನಗರದ ವಿಘ್ನೇಶ್ವರ ದೇವಸ್ಥಾನದಲ್ಲಿ ಜೈ ಹನುಮಾನ ಮಹಿಳಾ ಬಳಗ ಮತ್ತು ವಿಘ್ನೇಶ್ವರ ಸೇವಾ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗಿತು. ಅರ್ಚಕ ಬಸಯ್ಯ ಹಿರೇಮಠ, ವಿಘ್ನೇಶ್ವರ ಸೇವಾ ಸಮಿತಿಯ ಅಧ್ಯಕ್ಷ ರವೀಂದ್ರ ರೆಡ್ಡಿ, ಕಾರ್ಯದರ್ಶಿ ಪ್ರಕಾಶ ಬೆಂತೂರ, ರವಿ ಬೆಂತೂರ, ಆಂಜನೇಯ ಕಟಗಿ, ಪ್ರೊ.ಸಿ.ಲಿಂಗಾರೆಡ್ಡಿ, ರಾಜಶೇಖರ ಹಿರೇಮಠ, ಸತೀಶ ಹೆಗಡೆಕಟ್ಟಿ, ಗೌಡಪ್ಪ ಬೊಮ್ಮಕ್ಕನವರ, ಸಂದೇಶ ಪಾಟೀಲ, ಸೋಮು ಲಮಾಣಿ ಇದ್ದರು.

ಜಿಲ್ಲೆಯಲ್ಲಿ ಒಟ್ಟು 9,05,206 ಮತದಾರರು

ಗದಗ: ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅಧ್ಯಕ್ಷತೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026 ರ ಕುರಿತು ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಸಭೆ ಜರುಗಿತು.

ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಮಾತನಾಡಿ, ಪ್ರಸ್ತುತ, ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 967 ಮತಗಟ್ಟೆಗಳಿದ್ದು, 4,48,794 ಪುರುಷ ಮತದಾರರು, 4,56,352 ಮಹಿಳಾ ಮತದಾರರು ಹಾಗೂ 60 ತೃತೀಯ ಲಿಂಗಿ ಮತದಾರರು ಸೇರಿದಂತೆ ಒಟ್ಟು 9,05,206 ಮತದಾರರಿದ್ದಾರೆ. ಪ್ರತಿ ಮತಗಟ್ಟೆಗೆ ಒಬ್ಬರಂತೆ, ಜಿಲ್ಲೆಯಲ್ಲಿ ಒಟ್ಟು 967 ಮತಗಟ್ಟೆ ಮಟ್ಟದ ಅಧಿಕಾರಿಗಳು ಹಾಗೂ ಪ್ರತಿ 10 ಬಿಎಲ್‌ಒಗಳಿಗೆ ಒಬ್ಬ ಮೇಲ್ವಿಚಾರಕರಂತೆ ಒಟ್ಟು 97 ಬಿಎಲ್‌ಒ ಮೇಲ್ವಿಚಾರಕರು ಕಾರ್ಯ ನಿರ್ವಹಿಸುತ್ತಿದ್ದಾರೆ. 2002ರ ಮತದಾರರ ಪಟ್ಟಿಗೆ 2025 ರ ಮತದಾರರನ್ನು ಮ್ಯಾಪಿಂಗ್ ಮಾಡುವಲ್ಲಿ ಜಿಲ್ಲೆಯ ಒಟ್ಟು 9,05,206 ಮತದಾರರ ಪೈಕಿ 8,26,953 ಮತದಾರರನ್ನು ಮ್ಯಾಪಿಂಗ್ ಮಾಡಿದ್ದು, ಶೇ.91.36ರಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ ಎಂದರು. ಜಿಲ್ಲೆಯ ಎಲ್ಲ 967 ಮತಗಟ್ಟೆಗಳಿಗೆ, ಮತಗಟ್ಟೆ ಮಟ್ಟದ ಏಜೆಂಟರ್‌ಗಳನ್ನು ನೇಮಕ ಮಾಡಿ ಪಟ್ಟಿಯನ್ನು ನೀಡಲು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಅಪರ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಇತರರಿದ್ದರು.



ಮುಂಡರಗಿ: ಕಲಕೇರಿ ಗ್ರಾಮದಲ್ಲಿ ಮುಸ್ಲಿಂರಿಂದ ಬಕ್ರೀದ್ ಪ್ರಯುಕ್ತ ಹೀರೆಮಸೂತಿಯ ಆವರಣದಲ್ಲಿ ಕಲಕೇರಿ ಗ್ರಾಪಂ ವ್ಯಾಪ್ತಿಯಡಿ ಬರುವ ಕಲಕೇರಿ, ಮುಷ್ಠಿಕೊಪ್ಪ, ವಿರುಪಾಪೂರ, ವಿರುಪಾಪೂರ ತಾಂಡಾ ಗ್ರಾಮಗಳಲ್ಲಿ 2026ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿ. ವಾರ್ಷಿಕ ಪರಿಕ್ಷೇಯಲ್ಲಿ ಶೇ.70 ಕ್ಕಿಂತ ಹೆಚ್ಚು ಅಂಕ ಪಡೆದಿರುವವರಿಗೆ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಕಾರ್ಯಕ್ರಮ ನಡೆಯಿತು. ಅಭಿನವ ಮುದುಕೇಶ್ವರ ಶಿವಾಚಾರ್ಯ ಸ್ವಾಮೀಜಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಡಿ. ಮಕಾಂದಾರ ಇತರರಿದ್ದರು.

ಇಂದಿನಿಂದ ಶಾಲಾ-ಕಾಲೇಜು ಪ್ರಾರಂಭ



▸ ರುದ್ರಗೌಡ ಪಾಟೀಲ

ಗದಗ: ಕಳೆದ ಒಂದೂವರೆ ತಿಂಗಳಿನಿಂದ ಬೇಸಿಗೆ ರಜೆ ಹಿನ್ನೆಲೆಯಲ್ಲಿ ಬಣಗುಡುತ್ತಿದ್ದ ಶಾಲೆ-ಕಾಲೇಜು ಆವರಣಗಳಿಗೆ ಮತ್ತೆ ಜೀವಕಳೆ ತುಂಬುವ ಸಮಯ ಬಂದಿದೆ. ಇಂದಿನಿಂದ ಶಾಲಾ ಪ್ರಾರಂಭೋತ್ಸವ ದಿನವಾಗಿದ್ದು, ಶಾಲೆಗೆ ವಿದ್ಯಾರ್ಥಿಗಳ ಬರುವಿಕೆಗಾಗಿ ಶಿಕ್ಷಕ ಸಮೂಹ ಶಾಲಾ ಕೊಠಡಿ ಸ್ವಚ್ಛಗೊಳಿಸಿ ಕಾಯುತ್ತಿದ್ದಾರೆ.

ಶೈಕ್ಷಣಿಕ ವರ್ಷಾರಂಭದ ಹಿನ್ನೆಲೆ ಶಾಲೆಗಳ ಆವರಣ, ಬೋಧನಾ ಕೊಠಡಿಗಳು, ಅಡುಗೆ ಕೊಠಡಿಗಳನ್ನು ಈಗಾಗಲೇ ಸ್ವಚ್ಛಗೊಳಿಸಲಾಗಿದ್ದು, ಸುಣ್ಣ-ಬಣ್ಣದೊಂದಿಗೆ ಅಲಂಕಾರ ಮಾಡಲಾಗಿದೆ. ರಜೆ ಮೂಡ್‌ನಲ್ಲಿದ್ದ ವಿದ್ಯಾರ್ಥಿ ಸಮೂಹ ಹೊಸ ತರಗತಿಗೆ ಹೋಗುವ ಸಂಭ್ರಮದಲ್ಲಿದ್ದರೆ. ಪಾಲಕರು ಮಕ್ಕಳಿಗೆ ಅಗತ್ಯವಾದ ಶೈಕ್ಷಣಿಕ ಸಾಮಗ್ರಿ ಖರೀದಿ ಮಾಡಿದ್ದಾರೆ. ಬೇಸಿಗೆ ರಜೆ ಮೋಜಿಗಾಗಿ ಸಂಬಂಧಿಕರು, ಬಂಧುಗಳ ಊರುಗಳಿಗೆ ತೆರಳಿದ್ದ ವಿದ್ಯಾರ್ಥಿಗಳು ಇದೀಗ ಪುನಃ ತವರಿಗೆ ಹಿಂದಿರುಗುತ್ತಿದ್ದಾರೆ. ಶಾಲೆ ಆರಂಭ ಆಗುವ ಮುನ್ನವೇ ಮಕ್ಕಳ ಓದಿಗೆ ಬೇಕಿರುವ ಪಠ್ಯಪುಸ್ತಕ, ನೋಟ್‌ಬುಕ್, ಸಮವಸ್ತ್ರಗಳನ್ನು ಹೊಂದಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಪಾಲಕರು-ವಿದ್ಯಾರ್ಥಿಗಳು ನಿರತರಾಗಿದ್ದಾರೆ.

ದಿಗಂತ ವಿಶೇಷ

» ಅವಳಿ ನಗರ ಸೇರಿದಂತೆ ಗ್ರಾಮೀಣ ಭಾಗದ ಎಲ್ಲ ಶಾಲೆಗಳಲ್ಲಿ ಶಿಕ್ಷಕರು, ಎಸ್‌ಡಿಎಂಸಿ, ಗ್ರಾಮ ಪಂಚಾಯತ ಹಾಗೂ ವಿವಿಧ ಸಂಘಟನೆಗಳ ಸಹಕಾರದಿಂದ ಶಾಲೆಗಳ ಕೊಠಡಿ ಹಾಗೂ ಆವರಣವನ್ನು ಸ್ವಚ್ಛಗೊಳಿಸಿ, ಅಡುಗೆ ಕೋಣೆಗಳಿಗೆ ಸುಣ್ಣಬಣ್ಣ ಬಳಿದು ಶೃಂಗರಿಸುವ ಕಾಯಕದಲ್ಲಿ ತೊಡಗಿದ್ದರು

» ಜಿಲ್ಲೆಯ ಬಹುತೇಕ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಕನ್ನಡ, ಇಂಗ್ಲಿಷ್, ಹಿಂದಿ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಸೇರಿ ಕನ್ನಡ, ಇಂಗ್ಲಿಷ್ ಹಾಗೂ ಉರ್ದು ಮಾಧ್ಯಮದ ಶಾಲೆಗಳಿಗೂ ಈಗಾಗಲೇ ಪುಸ್ತಕಗಳನ್ನು ಆಯಾ ತಾಲೂಕಿನ ಬಿಇಒ ಕಚೇರಿ ಮೂಲಕ ಕಳುಹಿಸಿಕೊಡಲಾಗಿದೆ

ಖರೀದಿ ಭರಾಟೆ ಜೋರು

ಮುದ್ರಣ ಕಾಶಿ ಎಂದೇ ಕರೆಯಲಾಗುವ ಗದಗನ ಪುಸ್ತಕ ಅಂಗಡಿಕಾರರು ಅಗತ್ಯ ಸಾಮಗ್ರಿಯನ್ನು ಆದಾಗಲೇ ದಾಸ್ತಾನು ಮಾಡಿಕೊಂಡಿದ್ದಾರೆ. ವಿದ್ಯಾರ್ಥಿಗಳಿಗೆ ಬೇಕಾದ ನೋಟ್ ಬುಕ್, ಪೆನ್, ಸ್ಕೂಲ್ ಬ್ಯಾಗ್, ಕಂಪಾಸ್, ಪುಸ್ತಕದ ರಕ್ಷಾ ಕವಚ ಒಳಗೊಂಡಂತೆ ಎಲ್ಲ ಬಗೆಯ ವಸ್ತುಗಳನ್ನು ಜೋಡಿಸಿಕೊಂಡಿದ್ದಾರೆ. ಕಳೆದ ಒಂದು ವಾರದಿಂದ ಪಾಲಕರು ಮಕ್ಕಳಿಗೆ ಬೇಕಾದ ವಸ್ತುಗಳ ಖರೀದಿಯಲ್ಲಿ ಮಗ್ನರಾಗಿದ್ದಾರೆ. ಅತ್ತ ಬಟ್ಟೆ ಅಂಗಡಿಕಾರರು ಕೂಡ ವಿವಿಧ ಶಾಲೆಗಳ ಸಮವಸ್ತ್ರ ಸಂಗ್ರಹಿಸಿಕೊಂಡಿದ್ದಾರೆ. ಬಿಸಿಲು ಕಳೆದು ಸಂಜೆಯಾಗುತ್ತಿದ್ದಂತೆಯೇ ನಗರದ ಪ್ರಮುಖ ಮಾರುಕಟ್ಟೆಯಲ್ಲಿ ಪಾಲಕರು ಹಾಗೂ ಮಕ್ಕಳ ದಂಡು ನೆರೆಯುತ್ತಿದೆ. ಎತ್ತ ಕಣ್ಣು ಹಾಯಿಸಿದರೂ ಪುಸ್ತಕ, ಸಮವಸ್ತ್ರ, ಶೂ ಖರೀದಿಸುವ ನೋಟವೇ ಕಂಡುಬರುತ್ತಿದೆ. ಮಳಿಗೆಗಳಲ್ಲಿ ಅಗತ್ಯ ವಸ್ತುಗಳ ಖರೀದಿ ಭರಾಟೆ ಜೋರಾಗಿದೆ.

“ ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಿಕ್ಷಕರು ಕಳೆದ ಎರಡು ದಿನಗಳಿಂದ ಶಾಲಾ ಆವರಣ, ಬೋಧನಾ ಹಾಗೂ ಅಡುಗೆ ಕೊಠಡಿಗಳ ಸ್ವಚ್ಛತಾ ಕಾರ್ಯ ಪೂರ್ಣಗೊಳಿಸಿ, ತಳಿರು ತೋರಣಗಳಿಂದ ಶೃಂಗರಿಸಿ ಮಕ್ಕಳ ಬರುವಿಕೆಗಾಗಿ ಕಾಯುತ್ತಿದ್ದಾರೆ. ಗುಣಾತ್ಮಕ ಫಲಿತಾಂಶ ವೃದ್ಧಿಸಲು ಮಕ್ಕಳ ದಾಖಲಾತಿ ಚೆನ್ನಾಗಿದ್ದರೆ ಕಲಿಕೆ ಚೆನ್ನಾಗಿರುತ್ತದೆ ಎಂಬ ಅಂಶದೊಂದಿಗೆ ಮಕ್ಕಳ ಹಾಜರಾತಿಗೆ ಹೆಚ್ಚಿಸಲು ವಿಶೇಷ ಆದ್ಯತೆ ಮೇಲೆ ಕೆಲಸ ಮಾಡಲಾಗುತ್ತಿದೆ.

■ ಆರ್.ಎಸ್. ಬುರಡಿ, ಉಪನಿರ್ದೇಶಕ, ಶಾಲಾ ಶಿಕ್ಷಣ ಇಲಾಖೆ

ಮಕ್ಕಳ ದಾಖಲಾತಿ ಹೆಚ್ಚಿಸಲು ಕ್ರಮ

ಮಕ್ಕಳಿಗೆ ಉಚಿತವಾಗಿ ದೊರೆಯುವ ಪಠ್ಯಪುಸ್ತಕ, ಸಮವಸ್ತ್ರ, ಬಿಸಿಯೂಟ, ಹಾಲು ಸೇರಿ ವಿವಿಧ ಸೌಲಭ್ಯಗಳ ಮಾಹಿತಿ ನೀಡಿ ದಾಖಲಾತಿ ಹೆಚ್ಚಿಸಲು ಶ್ರಮಿಸಲಾಗುತ್ತಿದೆ. ಶಾಲೆ ಬಿಟ್ಟಂತಹ ಮಕ್ಕಳನ್ನು ಗುರುತಿಸಿ ತಿಂಗಳ ಮೊದಲ ಹಾಗೂ ಮೂರನೇ ಸೋಮವಾರ ಇಲಾಖೆ ಅಧಿಕಾರಿಗಳು ಹಾಗೂ ಶಿಕ್ಷಕರು ಭೇಟಿ ಮಾಡಿ ಮುಖ್ಯವಾಹಿನಿಗೆ ತರಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಆರ್.ಎಸ್. ಬುರಡಿ ಮಾಹಿತಿ ನೀಡಿದರು.

ನಿವೃತ್ತಿ ನಂತರವೂ ಪಾಠ ನಿಲ್ಲಿಸದಿರಿ

ಮುಂಡರಗಿ: ಶಿಕ್ಷಕರಾದವರು ಸೇವೆಯಿಂದ ನಿವೃತ್ತಿ ಹೊಂದಿದರೂ ತಮ್ಮ ಸೇವೆಯನ್ನು ಮಕ್ಕಳ ಭವಿಷ್ಯಗೋಸ್ಕರ ಪಾಠಮಾಡುವುದನ್ನು ಮುಂದುವರೆಸಬೇಕು. ಪಾಠಮಾಡುವುದನ್ನೇ ಪ್ರವೃತ್ತಿಯನ್ನಾಗಿ ಮಾಡಿಕೊಂಡು ಕಾರ್ಯನಿರ್ವಹಿಸುವುದರೊಂದಿಗೆ ಸಮಾಜದ ಬಡಮಕ್ಕಳಿಗೆ ಆಸರೆಯಾಗಬೇಕು ಎಂದು ನಿವೃತ್ತ ಡಿಡಿಪಿಐ ಎಂ.ಎ.ರಡ್ಡೇರ ಹೇಳಿದರು.

ಅವರು ಶ್ರೀ ಜ.ಅ.ವಿದ್ಯಾ ಸಮಿತಿಯ ಶ್ರೀ ಜ.ಅ.ಪ್ರೌಢಶಾಲೆಯಲ್ಲಿ ಉಪಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತ್ತಿಯಾದ ಎಸ್.ಸಿ.ಚಕ್ಕಡಿಮಠ ಅವರಿಗೆ ಸನ್ಮಾನ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಎಸ್.ಸಿ ಚಕ್ಕಡಿಮಠ ಅವರು ಕ್ರೀಯಶೀಲ ಶಿಕ್ಷಕರಾಗಿದ್ದರು. ಬಡ ಮಕ್ಕಳಿಗೆ ಕೈಯಿಂದ ಫೀ ತುಂಬಿ ಅವರ ಶಿಕ್ಷಣಕ್ಕೆ ಅನಕೂಲಮಾಡಿಕೊಟ್ಟ ಉಪಪ್ರಾಚಾರ್ಯರಾಗಿದ್ದರು ಎಂದರು.

ಸಾನ್ನಿಧ್ಯ ವಹಿಸಿದ್ದ ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ಆಶೀರ್ವಚನ ನೀಡಿ, ನಿವೃತ್ತಿ ಆದವರ ಹುದ್ದೆಗಳನ್ನು ತುಂಬಿಕೊಳ್ಳಲು ಸರ್ಕಾರ ಅವಕಾಶ ನೀಡಬೇಕು. ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿಯ ಅಂಗಸಂಸ್ಥೆಗಳಲ್ಲಿ ಗೌರವ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ವರ್ಷಕ್ಕೆ ಶ್ರೀಮಠದಿಂದ 90 ಲಕ್ಷಕ್ಕೂ ಹೆಚ್ಚು ಹಣವನ್ನು ಸಂಬಳವನ್ನಾಗಿ ನೀಡುತ್ತಿದ್ದೇವೆ. ಇದು ಸಂಸ್ಥೆಗೆ ಹೊರೆಯಾಗುತ್ತಿದೆ. ಆದ್ದರಿಂದ ಸರ್ಕಾರ ಕೂಡಲೇ ಆ ಹುದ್ದೆಗಳನ್ನು ತುಂಬಲು ಅವಕಾಶ ನೀಡಬೇಕೆಂದರು.

ಎಸ್.ಸಿ.ಚಕ್ಕಡಿಮಠ ದಂಪತಿ ಶ್ರೀಗಳಿಗೆ ಗುರುವಂದನೆ ಸಲ್ಲಿಸಿದರು. ಸಮಿತಿಯ ಗೌರವ ಕಾರ್ಯದರ್ಶಿ ಆರ್.ಆರ್.ಹೆಗ್ಗಡಾಳ, ಶಾಲೆಯ ಮೇಲ್ವಿಚಾರಣಾ ಸಮಿತಿಯ ಕಾರ್ಯಾಧ್ಯಕ್ಷ ಕರಬಸಪ್ಪ ಹಂಚಿನಾಳ, ಉಪಕಾರ್ಯಾಧ್ಯಕ್ಷ ಡಾ.ಎಸ್.ಬಿ.ಹಿರೇಮಠ, ಎಂ.ಎಸ್.ಶಿವಶೆಟ್ಟಿ, ಕಳಕಪ್ಪ ರೋಣದ, ಚಕ್ಕಡಿಮಠ ಮುಂತಾದವರಿದ್ದರು. ಚಕ್ಕಡಿಮಠ ದಂಪತಿ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು. ಅನೇಕ ಮಹನೀಯರನ್ನು ಸನ್ಮಾನಿಸಲಾಯಿತು. ನಿವೃತ್ತಿಗೊಂಡಿರುವ ಎಸ್.ಸಿ.ಚಕ್ಕಡಿಮಠ ಅವರನ್ನು ಅವರ ಶಾಲೆಯ ಸಿಬ್ಬಂದಿ ಸನ್ಮಾನಿಸಿದರು. ಅವರ ಅಭಿಮಾನಿಗಳು ಮತ್ತು ಹಿರಿಯ ವಿದ್ಯಾರ್ಥಿಗಳು ಎಸ್.ಸಿ.ಚಕ್ಕಡಿಮಠ ದಂಪತಿಗಳನ್ನು ಸನ್ಮಾನಿಸಿ ಶುಭಹಾರೈಸಿದರು. ಶಿಕ್ಷಕ ಹಂಪಿಮಠ ಸ್ವಾಗತಿಸಿದರು. ಡಾ.ಎಸ್.ಬಿ.ಹಿರೇಮಠ ಪ್ರಾಸ್ತಾವಿಸಿದರು. ಶಿಕ್ಷಕಿ ದೀಪುಶ್ರೀ ಕಣವಿ ಮತ್ತು ಎಸ್.ಎಸ್.ಮಠದ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



ಮುಂಡರಗಿ ಮಠ ನಾಡಿನ ಹೆಮ್ಮೆ: ಸ್ವಾಮೀಜಿ

ಮುಂಡರಗಿ: ಕರ್ನಾಟಕದಲ್ಲಿ ವೀರಶೈವ-ಲಿಂಗಾಯತ ಮಠಮಾನ್ಯಗಳು ಸಮಾಜದ ಎಲ್ಲ ಜನರಿಗೆ ಶಿಕ್ಷಣ ಮತ್ತು ಪ್ರಸಾದವನ್ನು ನೀಡುತ್ತಾ ಬಂದಿವೆ. ಹೊಟ್ಟೆ ಮತ್ತು ನೆತ್ತಿಯನ್ನು ತುಂಬಿಸುವಂತಹ ಕಾರ್ಯವನ್ನು ಮಾಡುತ್ತಾ ಬಂದಿರುವುದರಿಂದಲೇ ಅನೇಕರು ಶಿಕ್ಷಣದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗಿದೆ. ಅದರಲ್ಲಿ ಮುಂಡರಗಿ ಮಠವು ಶಿಕ್ಷಣ ಮತ್ತು ದಾಸೋಹವನ್ನು ಕಳೆದ 100 ವರ್ಷದಿಂದ ನೀಡುತ್ತಿರುವುದು ಈ ನಾಡಿನ ಹೆಮ್ಮೆ ಎಂದು ಹಾವೇರಿ ಹುಕ್ಕೇರಿಮಠದ ಡಾ.ಸದಾಶಿವ ಸ್ವಾಮೀಜಿ ಹೇಳಿದರು.

ಅವರು ಇಲ್ಲಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ ಹಮ್ಮಿಕೊಂಡಿರುವ 1847ನೇ ಶಿವಾನುಭವ ಮತ್ತು ಶ್ರೀ ವೀರಮಾಹೇಶ್ವರ ಜಂಗಮಾಭಿವೃದ್ಧಿ ಸಂಘದಿಂದ ಹಾವೇರಿ ವಿಶ್ವವಿದ್ಯಾಲಯ ನೀಡಿದ ಗೌರವ ಡಾಕ್ಟರೇಟ್ ನಿಮಿತ್ತ ಸನ್ಮಾನ ಸ್ವೀಕರಿಸಿ ಆಶೀರ್ವಚನ ನೀಡಿದರು. ಇಂದು ಮುಂಡರಗಿ ಶ್ರೀಮಠ ಸಾಹಿತ್ಯ, ಶಿಕ್ಷಣ, ಧಾರ್ಮಿಕ ,ಸಾಮಾಜಿಕ ಕಳಕಳಿಯ ಕ್ಷೇತ್ರದಲ್ಲಿ ಕರ್ನಾಟಕದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಶ್ರೀಗಳು ನಡೆದಾಡುವ ವಿಶ್ವವಿದ್ಯಾಲಯವಿದ್ದಂತೆ ಎಂದರು.

ಉಪನ್ಯಾಸಕರಾಗಿ ಪಂಡಿತ ಪಂಚಾಕ್ಷರಿ ಗವಾಯಿಗಳವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ವಿರೇಶ ಹಿತ್ತಲಮನಿ ಮಾತನಾಡಿ, ಇಂದಿನ ಯುವ ಜನತೆ ನೂರೆಂಟು ಕೆಟ್ಟ ಚಟಗಳಿಗೆ ಬಲಿಯಾಗಿ ತಮ್ಮ ಜೀವನವನ್ನೇ ಹಾಳುಮಾಡಿಕೊಳ್ಳುತ್ತಿದ್ದಾರೆ. ಅವರ ಜೀವನ ಉಜ್ವಲವಾಗಬೇಕಾದರೆ ಯುವಕರು ಮತ್ತು ಮಕ್ಕಳು ಶ್ರೀಮಠದ ಸಾಮಿಪ್ಯ ಬರಬೇಕು. ಪಾಲಕರಾದವರು ಮಕ್ಕಳನ್ನು ಶ್ರೀಮಠಕ್ಕೆ ಕರೆದುಕೊಂಡು ಬಂದು ಆ ವಾತಾವರಣದಲ್ಲಿ ಕೆಲವು ದಿನ ಇದ್ದರೆ ಮಕ್ಕಳಿಗೆ ಸಂಸ್ಕಾರ ದೊರೆಯುತ್ತದೆ. ಶಿಕ್ಷಣದ ಜೊತೆಗೆ ಸಂಸ್ಕಾರವೂ ಬೇಕು ಎಂದರು.

ಸಾನ್ನಿಧ್ಯವನ್ನು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ವಹಿಸಿದ್ದರು. ಶ್ರೀಗಳಿಗೆ ಗುರುವಂದನೆ ಸಲ್ಲಿಸಲಾಯಿತು. ನೇತೃತ್ವವನ್ನು ಡಾ.ವೀರಭದ್ರ ಶಿವಾಚಾರ್ಯರು ಮತ್ತು ಲಕ್ಷ್ಮೇಶ್ವರದ ಮಂಜುನಾಥಯ್ಯ ದೇವರು ವಹಿಸಿದ್ದರು. ವಿಶೇಷ ಸಾಧನೆ ಮಾಡಿದ ಎಸ್.ಸಿ.ಚಕ್ಕಡಿಮಠ, ನಾಗಭೂಷಣ ಹಿರೇಮಠ, ಎಸ್.ಎಸ್.ಮಠದ, ಎಸ್.ಬಿ.ಗಿಂಡಿಮಠ, ವಿನಯಕುಮಾರ ಗಂದದ ಅವರನ್ನು ಸತ್ಕರಿಸಲಾಯಿತು. ಕಳೆದ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಿದರು. ವೀರಭದ್ರಯ್ಯ ಹಿರೇಮಠ, ಕೆ.ವಿ.ಹಿರೇಮಠ ಇದ್ದರು. ಸಂಗೀತ ಶಿಕ್ಷಕ ಆರ್.ಎಸ್.ಮರಿದೇವರಮಠ ಇವರಿಂದ ಸಮಗೀತ ಸೇವೆ ನಡೆಯಿತು. ಶ್ರೀ ವೀರಮಾಹೇಶ್ವರ ಜಂಗಮಾಭಿವೃದ್ಧಿ ಸಂಘದ ತಾಲೂಕು ಅಧ್ಯಕ್ಷ ವಿ.ಜೆ.ಹಿರೇಮಠ ಸ್ವಾಗತಿಸಿ, ಪ್ರಾಸ್ತಾವಿಸಿದರು. ಎಸ್.ಎಸ್. ಮಠದ ಮತ್ತು ಹಂಪಿಮಠ ಕಾರ್ಯಕ್ರಮ ನಿರೂಪಿಸಿ,ವಂದಿಸಿದರು.



ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ



ಮುಂಡರಗಿ: ಮುಂಡರಗಿ ತಾಲೂಕು ಸಾರ್ವಜನಿಕ ಹೋರಾಟ ವೇದಿಕೆ, ಗದಗ-ಹರಪನಹಳ್ಳಿ ರೈಲ್ವೆ ಮಾರ್ಗ ರಚನೆಯ ಜಂಟಿ ಕ್ರಿಯಾ ಸಮಿತಿ, ಅದ್ವಿಕ್ ವಿವಿಧೋದ್ದೇಶಗಳ ಅಭಿವೃದ್ಧಿ ಸಂಘ, ಮುಂಡರಗಿ ಆಶ್ರಯದಲ್ಲಿ ಗದಗ-ಹರಪನಹಳ್ಳಿ ರೈಲ್ವೆ ಮಾರ್ಗ ಮುಂಡರಗಿ ಹೂವಿನಹಡಗಲಿ ಮಾರ್ಗವಾಗಿ ಅನುಷ್ಠಾನಗೊಳಿಸಲು ಹಾಗೂ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ವಾರಣಾಸಿಯ ರೈಲ್ವೆ ಜಂಕ್ಷನ್ ಮುಂದೆ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ರಾಜ್ಯ ಸಾರ್ವಜನಿಕ ಹೋರಾಟ ವೇದಿಕೆ ಸಂಚಾಲಕ ಬಸವರಾಜ ಯಲ್ಲಪ್ಪ ನವಲಗುಂದ ಮಾತನಾಡಿ, ಜೂನ್ 8ರಂದು ಮುಂಡರಗಿಯ ಶ್ರೀ ತೋಂಟದಾರ್ಯ ಶಾಖಾ ಮಠದಲ್ಲಿ ರುದ್ರಾಭಿಷೇಕ ಮಾಡಿ ಜನ ಕಲ್ಯಾಣ ಯಾತ್ರೆಯ ನಿಮಿತ್ತ ಸಾರ್ವಜನಿಕರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದರು.

ಶಿಕ್ಷಣದಿಂದ ವ್ಯಕ್ತಿತ್ವ ವಿಕಸನ: ಕೃಷ್ಣಗೌಡ ಪಾಟೀಲ

ಗದಗ: ಶಿಕ್ಷಣವು ವ್ಯಕ್ತಿತ್ವವನ್ನು ವಿಕಸನಗೊಳಿಸಿ, ವ್ಯಕ್ತಿಯನ್ನು ಅತ್ಯುನ್ನತ ಸ್ಥಾನಕ್ಕೇರಿಸುವುದು. ಪಾಲಕ, ಪೋಷಕರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಲು ಮುಂದಾಗಬೇಕೆಂದು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಹೇಳಿದರು. ಇಲ್ಲಿನ ಎಪಿಎಂಸಿ ಪ್ರಾಂಗಣದ ಹಮಾಲರ ವಿಶ್ರಾಂತಿ ಗೃಹದ ಸಭಾಂಗಣದಲ್ಲಿ ಎಪಿಎಂಸಿ ಹಮಾಲರು ಹಾಗೂ ಚಕ್ಕಡಿ ಸಂಘದ ಸದಸ್ಯರುಗಳ ಪ್ರತಿಭಾನ್ವಿತ ಮಕ್ಕಳು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಎಸ್.ಎನ್.ಬಳ್ಳಾರಿ, ರಾಜ್ಯ ಹಮಾಲರ ಒಕ್ಕೂಟದ ರಾಜ್ಯ ಅಧ್ಯಕ್ಷ ಅಯ್ಯಪ್ಪ ನಾಯ್ಕರ್, ಸಂಘದ ಅಧ್ಯಕ್ಷ ಆದಪ್ಪ ಮಾರೆಪ್ಪನವರ ಮಾತನಾಡಿದರು. ಕಾರ್ಯದರ್ಶಿ ಇಮಾಮಸಾಬ ರೋಣದ ಸ್ವಾಗತಿಸಿದರು. ಉಪಾಧ್ಯಕ್ಷ ಮುಕ್ತುಮ್‌ಸಾಬ ನಾಗನೂರ ಪರಿಚಯಿಸಿದರು. ಖಜಾಂಚಿ ಶಂಕ್ರಪ್ಪ ಯರಗುಡಿ ಮಾತನಾಡಿದರು. ಇಮಾಮಹುಸೇನ ರೋಣದ ನಿರೂಪಿಸಿದರು. ಗೋವಿಂದಪ್ಪ ಮುಂಡರಗಿ ವಂದಿಸಿದರು.



ಬಸವಣ್ಣನವರನ್ನು ಒಂದು ಜಾತಿಗೆ ಸೀಮಿತಗೊಳಿಸದಿರಿ: ಕನ್ಹೇರಿ ಶ್ರೀಗಳು

ಗದಗ: ಬಸವಣ್ಣನವರನ್ನು ಒಂದು ಜಾತಿ ಅಥವಾ ಸಮುದಾಯಕ್ಕೆ ಸೀಮಿತಗೊಳಿಸುವ ಪ್ರಯತ್ನಗಳು ನಡೆಯುತ್ತಿದ್ದು, ಅಂತಹ ಷಡ್ಯಂತ್ರಗಳ ವಿರುದ್ಧ ಸಮಾಜ ಜಾಗೃತವಾಗಬೇಕು ಎಂದು ಕನ್ಹೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಇಲ್ಲಿನ ನಗರದ ವಿಡಿಎಸ್‌ಟಿ ಮೈದಾನದಲ್ಲಿ ಭಾನುವಾರ ಹಿಂದೂ ಸರ್ವ ಸಮಾಜಗಳ ಒಕ್ಕೂಟದ ವತಿಯಿಂದ ಬಸವಾದಿ ಶಿವಶರಣರ ವೇದಿಕೆಯಲ್ಲಿ ಆಯೋಜಿಸಿದ್ದ ಬೃಹತ್ ಹಿಂದೂ ಸಮಾವೇಶದಲ್ಲಿ ಅವರು ಆಶೀರ್ವಚನ ನೀಡಿದರು. ಕೆಲವರು ಬಸವಣ್ಣನವರ ಹೆಸರನ್ನು ಬಳಸಿಕೊಂಡು ಹಿಂದೂ ಸಮಾಜ ಹಾಗೂ ಶೈವ ಪರಂಪರೆಯಿಂದ ಜನರನ್ನು ದೂರ ಮಾಡುವ ಪ್ರಯತ್ನ ಕೆಲವರು ಮಾಡುತ್ತಿದ್ದಾರೆ ಎಂದರು. ಬಸವಣ್ಣ ಮತ್ತು ಕಾರ್ಲ್ ಮಾರ್ಕ್ಸ್ ಎಂಬ ಪುಸ್ತಕವನ್ನು ಹೊರತಂದಿರುವುದು ಆತಂಕಾರಿ ಬೆಳವಣಿಗೆ. ನಮ್ಮ ದೇಶದಲ್ಲಿ ನಮ್ಮದೇ ಆದ ಕುಲದೇವರುಗಳು, ಪರಂಪರೆಗಳು ಇವೆ. ಸಮಾಜವನ್ನು ಒಡೆಯಲು ಬರುವವರಿಂದ ದೂರವಿದ್ದು ಎಚ್ಚರಿಕೆಯಿಂದ ಇರಬೇಕು ಎಂದರು. ಹಿಂದೂ ಧರ್ಮವನ್ನು ಛಿದ್ರಗೊಳಿಸಲು ನಡೆಯುತ್ತಿರುವ ಪ್ರಯತ್ನಗಳ ವಿರುದ್ಧ ಜಾಗೃತಿ ಮೂಡಿಸಲು ಈ ಸಮಾವೇಶ ಆಯೋಜಿಸಲಾಗಿದೆ. ದೇಶ ಕೆಟ್ಟವರಿಂದ ಹಾಳಾಗುವುದಿಲ್ಲ, ಎಲ್ಲವನ್ನೂ ತಿಳಿದಿದ್ದೇವೆ ಎನ್ನುವವರಿಂದಲೇ ಹೆಚ್ಚು ಹಾನಿಯಾಗುತ್ತದೆ ಎಂದರು.

ಬಸವಾದಿ ಶಿವಶರಣರ ಹಿಂದೂ ಸಮಾವೇಶಕ್ಕೂ ಮುನ್ನ ಬೃಹತ್ ಮೆರವಣಿಗೆ ನಡೆಯಿತು. ಮಹಿಳೆಯರು ಕುಂಭ ಹೊತ್ತು ಸಾಗಿದರು. ಅನೇಕ ಜಾನಪದ ಕಲಾ ತಂಡಗಳು ಭಾಗವಹಿಸಿದ್ದವು. 100ಕ್ಕೂ ಹೆಚ್ಚು ಮಠಾಧೀಶರು ಪಾಲ್ಗೊಂಡರು.



ಜಿಎಸ್‌ಪಾಗೆ ಸಚಿವ ಸ್ಥಾನ ನೀಡಲಿ



ಗಜೇಂದ್ರಗಡ: ರೋಣ ಕ್ಷೇತ್ರದ ಅಭಿವೃದ್ಧಿ ಹಾಗೂ ಪಕ್ಷದ ಸಂಘಟನೆಯಲ್ಲಿ ನಿರಂತರವಾಗಿ ಶ್ರಮಿಸುತ್ತಿರುವ ಜಿ.ಎಸ್. ಪಾಟೀಲ್ ಅವರು ಹಿರಿಯ ಮತ್ತು ಅನುಭವಿ ರಾಜಕಾರಣಿಯಾಗಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಪಡಿಸಲು ಅವರ ಕೊಡುಗೆ ಅಪಾರವಾಗಿದೆ. ಈ ಹಿನ್ನೆಲೆಯಲ್ಲಿ ಅವರಿಗೆ ಸೂಕ್ತ ಸ್ಥಾನಮಾನ ನೀಡಬೇಕು ಎಂದು ಗಜೇಂದ್ರಗಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜ ಘೋರ್ಪಡೆ ಆಗ್ರಹಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಗಜೇಂದ್ರಗಡ, ನರೇಗಲ್ಲ, ರೋಣ ಬ್ಲಾಕ್ ಕಾಂಗ್ರೆಸ್ ವತಿಯಿಂದ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ರೋಣ ಶಾಸಕ ಜಿ.ಎಸ್.ಪಾಟೀಲರು ಕಾಂಗ್ರೆಸ್ ಪಕ್ಷಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ರೋಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೀರಣ್ಣ ಶೆಟ್ಟರ ಮಾತನಾಡಿ, ರೋಣ ವಿಧಾನಸಭಾ ಕ್ಷೇತ್ರದ ಹಿರಿಯ ಶಾಸಕ ಜಿ.ಎಸ್. ಪಾಟೀಲ್ ಅವರು ಕಳೆದ ನಾಲ್ಕು ದಶಕಗಳಿಂದ ಪಕ್ಷದ ಬಲವರ್ಧನೆಗೆ ಹಗಲಿರುಳು ಶ್ರಮಿಸಿದ್ದಾರೆ. ಇಂತಹ ನಿಷ್ಠಾವಂತ ಮತ್ತು ಹಿರಿಯ ರಾಜಕಾರಣಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡುವುದು ಸೂಕ್ತ ಎಂದರು. ಜಿಲ್ಲಾ ಕಾಂಗ್ರೆಸ್ ವಕ್ತಾರ ಬಸವರಾಜ ಶೀಲವಂತರ, ನರೇಗಲ ಬ್ಲಾಕ್ ಕಾಂಗ್ರೆಸ ಅಧ್ಯಕ್ಷ ಶರಣಪ್ಪ ಬೇಟಗೇರಿ,ಕಾಂಗ್ರೆಸ್ ಹಿರಿಯ ಮುಖಂಡ ಸಿದ್ದಣ್ಣ ಬಂಡಿ ಮಾತನಾಡಿದರು. ಶ್ರೀಧರ ಬಿದರಳ್ಳಿ, ಅರಿಹಂತ ಬಾಗಮಾರ, ರಾಜೂ ಸಾಂಗ್ಲೀಕರ, ಶ್ರೀಧರ ಗಂಜಿಗೌಡ್ರ, ಎಫ್.ಎಸ್.ಕರಿದುರಗಣ್ಣನವರ, ಶರಣಪ್ಪ ಚಳಗೇರಿ, ದಾದು ಹಣಗಿ, ಮಂಜುಳಾ ರೇವಡಿ,ಶಾರದಾ ರಾಠೋಡ ಇತರರಿದ್ದರು.

ಪಾಟೀಲರಿಗೆ ಸಚಿವ ಸ್ಥಾನ ಸಿಗಲಿ

ರೋಣ: ತಾಳ್ಮೆಗೂ ಮಿತಿಯಿದೆ. ಹಿಗಾಗಿ ಪಕ್ಷದ ವರಿಷ್ಠರು ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಪರೀಕ್ಷೆ ಮಾಡದೆ ಈ ಬಾರಿ ಸಚಿವ ಸಂಪುಟದಲ್ಲಿ ರೋಣ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದು ರೋಣ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವೀರಣ್ಣ ಶೆಟ್ಟರ ಹೇಳಿದರು.

ಅವರು ಭಾನುವಾರ ಪಿಡಬ್ಲ್ಯೂಡಿ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಶಾಸಕ ಜಿ.ಎಸ್.ಪಾಟೀಲರು ನಾಲ್ಕು ಬಾರಿ ಶಾಸಕರಾಗಿ ಮತಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಎಲ್ಲ ವರ್ಗದ ಜನರನ್ನು ತಮ್ಮ ಕುಟುಂಬದ ಸದಸ್ಯರಂತೆ ಕಾಣುವ ಧೀಮಂತ ವ್ಯಕ್ತಿತ್ವ ಹೊಂದಿರುವ ನಾಯಕ. ಅವರಿಗೆ ಸಚಿವ ಸ್ಥಾನ ನೀಡಬೇಕು ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ರೋಣ ಪುರಸಭೆ ಮಾಜಿ ಅಧ್ಯಕ್ಷ ಮುತ್ತಣ್ಣ ಸಂಗಳದ ಮಾತನಾಡಿ, 2013 ರಲ್ಲಿ ಸಚಿವ ಸ್ಥಾನ ನೀಡುವಂತೆ ಬೇಡಿಕೆ ಇಡಲಾಗಿತ್ತು. ಮುಂದೆ ಅವಕಾಶ ಸಿಗಬಹುದು ಎಂಬ ನಿರೀಕ್ಷೆಯಿಂದ ಸುಮ್ಮನಿದ್ದೆವು. 2023 ರ ಮೊದಲ ಅವಧಿಯಲ್ಲಿ ಸಚಿವ ಸ್ಥಾನ ದೊರಕಬಹುದು ಎಂಬ ನಿರೀಕ್ಷ ಹುಸಿಯಾಯಿತು. ಆದರೆ ಈ ಬಾರಿ ಮಾತ್ರ ರೋಣ ಮತಕ್ಷೇತ್ರಕ್ಕೆ ಸಚಿವ ಸ್ಥಾನ ನಿಡಬೇಕು.ಇಲ್ಲದಿದ್ದರೆ ಹೋರಾಟ ಅನಿವಾರ್ಯವಾಗಲಿದೆ ಎಂದರು. ಬಸವರಾಜ ನವಲಗುಂದ, ರಾಜಣ್ಣ ಗಿರಡ್ಡಿ, ತೋಟಪ್ಪ ನವಲಗುಂದ, ಪ್ರಭು ಮೇಟಿ, ಆನಂದ ಚಂಗಳಿ, ರವಿ ಸಂಗನಬಶೆಟ್ಟರ, ಶಿದ್ದಣ್ಣ ನವಲಗುಂದ ಸೇರಿದಂತೆ ಅನೇಕ ಮುಖಂಡರುಗಳು ಉಪಸ್ಥಿತರಿದ್ದರು.



ರಜತ ಮಹೋತ್ಸವ: ಪೂರ್ವಭಾವಿ ಸಭೆ



ಗದಗ: ನಗರದ ಕಾಳಿದಾಸ ಶಿಕ್ಷಣ ಸಮಿತಿಯ 25ನೇ ವರ್ಷಾಚರಣೆಯ ಅಂಗವಾಗಿ 25 ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸ್ವಾಗತಾರ್ಹವಾಗಿದೆ. ವರ್ಷಪೂರ್ತಿಯ ಕಾರ್ಯಕ್ರಮಗಳಿಗೆ ಜೂ.7 ರಂದು ಕೊಪ್ಪಳದ ಗವಿಸಿದ್ದೇಶ್ವರ ಶ್ರೀಗಳು ಚಾಲನೆ ನೀಡುತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಹೇಳಿದರು.

ನಗರದ ದೇವರಾಜ ಅರಸು ಹಾಸ್ಟೆಲ್ ಕಚೇರಿಯಲ್ಲಿ ಕಾಳಿದಾಸ ಶಿಕ್ಷಣ ಸಮಿತಿಯ ರಜತ ಮಹೋತ್ಸವ ಕುರಿತು ಜರುಗಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಜಿಲ್ಲೆಯ ಸಂಗೀತ, ಸಾಂಸ್ಕೃತಿಕ, ಕಲೆ ಸೇರಿದಂತೆ ವಿವಿದ ಕ್ಷೇತ್ರದಲ್ಲಿ ಸಾಧನೆ ಮಾಡಿದ 25 ಸಾಧಕರನ್ನು ಗುರುತಿಸಿ ಗೌರವಿಸಬೇಕು. ಜಿಲ್ಲೆಯ ನಿರುದ್ಯೋಗ ಯುವಕ/ಯುವತಿಯರಿಗೆ ಕೌಶಲ್ಯಾಭಿವೃದ್ಧಿ ಕುರಿತು ವಿಶೇಷ ಕಾರ್ಯಕ್ರಮ ಮತ್ತು ಕೆರಿಯರ್ ಗೈಡೆನ್ಸ್ ಕುರಿತು ಕಾರ್ಯಕ್ರಮ ಆಯೋಜಿಸಿ ಮಾರ್ಗದರ್ಶನ ನೀಡಿದರೆ ಜಿಲ್ಲೆಯ ನಿರುದ್ಯೋಗಿಗಳು ಸ್ವಾವಲಂಬಿಯಾಗಿ ಬದುಕುತ್ತಾರೆ ಮತ್ತು ಮಕ್ಕಳಿಗಾಗಿ ಬ್ಯಾಡ್ಮಿಂಟನ್ ಮತ್ತು ಸ್ಕೇಟಿಂಗ್ ನಂತಹ ಕ್ರೀಡೆಗಳನ್ನು ಆಯೋಜಿಸಿದರೆ ಉತ್ತಮವಾಗುತ್ತದೆ ಎಂದರು. ನಿವೃತ್ತ ನ್ಯಾಯಮೂರ್ತಿ ಎಸ್.ಜಿ.ಪಲ್ಲೇದ, ಆರ್.ಡಿ. ಕಡ್ಲಿಕೊಪ್ಪ ಮಾತನಾಡಿದರು. ಕುರುಬರ ಸಂಘದ ಜಿಲ್ಲಾಧ್ಯಕ್ಷ ಫಕೀರಪ್ಪ ಹೆಬಸೂರ ಅಧ್ಯಕ್ಷತೆ ವಹಿಸಿದ್ದರು. ಬಯಲು ಆಂಜನೇಯ ದೇವಸ್ಥಾನ ಸಮಿತಿಯ ಅಧ್ಯಕ್ಷ ಎಸ್.ಕೆ.ಮ್ಯಾಗೇರಿ, ಕಾಳಿದಾಸ ಶಿಕ್ಷಣ ಸಮಿತಿಯ ಅಧ್ಯಕ್ಷ ಬಿ.ಬಿ.ಬಾವಿಕಟ್ಟಿ, ಯಲ್ಲಪ್ಪ ಗುರಿಕಾರ, ಶಶಿಧರ ರೊಳ್ಳಿ, ನಾಗಪ್ಪ ಗುಗ್ಗರಿ, ಆರ್.ಎಂ. ನಿಂಬನಾಯ್ಕರ, ಎಸ್.ಡಿ.ಸಿಂಗಟಾಲಕೇರಿ, ಎಸ್.ಎಸ್. ಮುದಿಯಜ್ಜನವರ ಇತರರಿದ್ದರು. ಕೆ.ಬಿ.ಕಂಬಳಿ ವಂದಿಸಿದರು.

ಗುರಿ, ಸಾಧಿಸುವ ಛಲ ಮುಖ್ಯ: ಬಿಇಒ

ಶಿರಹಟ್ಟಿ: ವಿದ್ಯಾರ್ಥಿ ಜೀವನ ಬಂಗಾರ ಮತ್ತು ಸಮುದ್ರದಲ್ಲಿ ಸಿಗುವ ಮುತ್ತಿನ ಮಾಣಿಕ್ಯದಂತೆ, ಈ ಹಂತದಲ್ಲಿ ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೆ ಕಠಿಣ ಪರಿಶ್ರಮದಿಂದ ಓದಿ ಸಾಧನೆಯ ಶಿಖರ ಏರುವ ಮೂಲಕ ಸಮಾಜದಲ್ಲಿ ಸುಂದರ ಜೀವನ ಕಟ್ಟಿಕೊಳ್ಳಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ನಾಣಕಿ ನಾಯಕ ಹೇಳಿದರು.

ಸ್ಥಳೀಯ ಶಿಕ್ಷಕರ ಸಭಾಭವನದಲ್ಲಿ ಇತ್ತೀಚೆಗೆ ನಿವೃತ್ತ ಶಿಕ್ಷಕರ ಸಂಘದ ವತಿಯಿಂದ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜ್ಞಾನ ವೃದ್ಧಿಗೆ ಅವಿರತವಾಗಿ ಪ್ರಯತ್ನಿಸಬೇಕು, ಕಷ್ಟಪಟ್ಟು ಅಭ್ಯಾಸ ಮಾಡದೇ ಇಷ್ಟಪಟ್ಟು ಅಭ್ಯಾಸ ಮಾಡಬೇಕು. ಸಾಧಿಸುವ ಛಲ, ಸ್ಪಷ್ಟ ಗುರಿ, ಆತ್ಮಸ್ಥೈರ್ಯ ಕಳೆದುಕೊಳ್ಳದೇ ದೊರೆತ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಗುರಿ ಮುಟ್ಟಬೇಕು ಎಂದರು.

ನಿವೃತ್ತ ಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಎಂ. ದೇವಗಿರಿ ಮಾತನಾಡಿದರು. ಎಸ್ಸೆಸ್ಸೆಲ್ಸಿ, ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಸಂತೃಪ್ತಿ ಮಾಬಳಿ, ಯಾಸ್ಮಿನ್ ಮಕಾನದಾರ, ಸ್ನೇಹಾ ಕರ್ಜಗಿ, ಸರೋಜಾ ಹೆಬಲಿ ಸೇರಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ಎಚ್. ನಾಯಕ ಹಾಗೂ ಇತ್ತೀಚೆಗೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶರಣಬಸವ ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಡಿ.ಎಚ್. ಸರಕವಾಸ, ಎ.ಸಿ. ಪಾಟೀಲ, ಆರ್.ಬಿ. ಕಮತ, ಶರಣಬಸವ ಪಾಟೀಲ, ಬಸವರಾಜ ಬೋರಶೆಟ್ಟರ, ಕೆ.ಎಂ. ರಂಜಾನರ, ಪರಸಪ್ಪ ಬಂತಿ ಇತರರಿದ್ದರು.





ರಜತ್ ಪಡೆಗೆ ದ್ವಿತೀಯ ದಿಗ್ವಿಜಯ | ಆರ್‌ಸಿಬಿ ಕಿರೀಟ ಅಚಲ | ಜಿಟಿ ವಿರುದ್ಧ 5 ವಿಕೆಟ್ ಜಯ

ಬೆಂಗ್ಳೂರು ರಾಯಲ್ಸ್ ಮತ್ತೆ ಕಿಂಗ್ಸ್

ಅಹಮದಾಬಾದ್: ಮತ್ತೆ ಅದೆ ಕ್ರೀಡಾಂಗಣ, ಸಹಸ್ರಾರು ಸಂಖ್ಯೆಯಲ್ಲಿ ಬಂದ ಅಭಿಮಾನಿಗಳ ಸಂಭ್ರಮ. ಎಲ್ಲೆಲ್ಲೂ ಒಂದೇ ಧ್ವನಿ, ಒಂದೆ ಕಹಳೆ ಆರ್‌ಸಿಬಿ.. ಆರ್‌ಸಿಬಿ.. ಎಂಬ ಕೂಗಾಟ. ಐಪಿಎಲ್ ಫೈನಲ್ ಪಂದ್ಯದ ವೇಳೆ ಕಳೆದ ಬಾರಿಯ ಇತಿಹಾಸ ಮರುಕಳಿಸಿದಂತಿತ್ತು. ಆದರೆ ಈ ಬಾರಿ ಎದುರಾಳಿ ಗುಜರಾತ್ ಟೈಟಾನ್ಸ್. ಆದರೆ ಪ್ರಾಬಲ್ಯ ಕಳೆದ ಬಾರಿಗಿಂತ ಹೆಚ್ಚು.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ತನ್ನ ಚಾಂಪಿಯನ್ ಪಟ್ಟ ಉಳಿಸಿಕೊಂಡಿರುವ ಆರ್‌ಸಿಬಿ ಗುಜರಾತ್ ಟೈಟಾನ್ಸ್ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿದೆ. ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಗುಜರಾತ್ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 155 ರನ್ ಮಾತ್ರ ಗಳಿಸಿತು. ವಾಷಿಂಗ್ಟನ್ ಸುಂದರ್ 50* ರನ್ ಗಳಿಸಿದರು. ಆರ್‌ಸಿಬಿ ಪರ ರಸೀಖ್ ಸಲಾಂ ಧಾರ್ 3 ವಿಕೆಟ್ ಪಡೆದರೆ, ಭುವನೇಶ್ವರ್ ಕುಮಾರ್, ಹ್ಯಾಜೆಲ್ವುಡ್ ತಲಾ 2 ವಿಕೆಟ್ ಪಡೆದರು. ಕೃಣಾಲ್ 1 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಆರ್‌ಸಿಬಿ 18 ಓವರ್ ಗಳಲ್ಲಿ 5 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿತು. ಕೊಹ್ಲಿ ಅಜೇಯ 75 ರನ್ ಗಳಿಸಿದರು.ರಸೀಖ್ ಸಲಾಂ ಧಾರ್ ಪಂದ್ಯಶ್ರೇಷ್ಠ ಗೆದ್ದುಕೊಂಡರೆ, ವಿರಾಟ್ ಕೊಹ್ಲಿ ಪಂದ್ಯ ಗೆಲ್ಲಿಸಿದ ರೂವಾರಿ ಅನಿಸಿಕೊಂಡರು. ಭುವನೇಶ್ವರ್ ಕುಮಾರ್, ಹ್ಯಾಜೆಲ್ವುಡ್ ಕೂಡ 2 ವಿಕೆಟ್ ಪಡೆದುಕೊಂಡರು. ಗುಜರಾತ್ ಪರ ಬ್ಯಾಟಿಂಗ್ ವೇಳೆ ವಾಷಿಂಗ್ಟನ್ ಆಸರೆಯಾದರೆ, ಬೌಲಿಂಗ್ ವೇಳೆ ರಶೀದ್ ಹೋರಾಡಿದರು.

ವೇಗಿಗಳ ಕೈಚಳಕ: ಬ್ಯಾಟಿಂಗ್‌ಗಿಳಿದ ಗುಜರಾತ್ ಟೈಟಾನ್ಸ್ ಆರಂಭಿಕ ಆಘಾತ ಎದುರಿಸಿತು. ವೇಗಿಗಳಾದ, ಹ್ಯಾಜೆಲ್ವುಡ್, ಭುವಿ ಮತ್ತು ರಸೀಖ್ ದಾಳಿಗೆ ತಂಡದ ಪ್ರಮುಖ ಬ್ಯಾಟಿಗರಾದ ಸಾಯಿ ಸುದರ್ಶನ್ ಮತ್ತು ಶುಭಮನ್ ಗಿಲ್ ಬೇಗನೇ ಪೆವಿಲಿನ್ ದಾರಿ ಹಿಡಿದರು. ಮೂರನೇ ಕ್ರಮಾಂಕದಲ್ಲಿ ಬಂದ ಜಾಸ್ ಬಟ್ಲರ್ ಅಲ್ಪ ಹೊತ್ತು ನಿಂತರೂ ರನ್ ಮಾಡಲಾಗಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಸುಂದರ್ ಉತ್ತಮ ಬ್ಯಾಟಿಂಗ್ ಮಾಡಿದ ನಂತರ ಪವರ್‌ಪ್ಲೇನಲ್ಲಿ ಗುಜರಾತ್ 45 ರನ್ ಗಳಿಸಿತು. ತಂಡದ ಶಕ್ತಿಯಾಗಿದ್ದ ಗಿಲ್ ಮತ್ತು ಸಾಯಿ ಸುದರ್ಶನ್ ವಿಕೆಟ್ ಕಳೆದುಕೊಂಡಿತ್ತು. ಮಧ್ಯಮ ಓವರ್‌ಗಳಲ್ಲಿ ವಾಷಿಂಗ್ಟನ್ ಸುಂದರ್ ಮತ್ತು ಜಾಸ್ ಬಟ್ಲರ್ ಕೊಂಚ ಹೊತ್ತು ಕ್ರೀಜ್‌ಗೆ ಅಂಟಿಕೊಂಡು ನಿಂತರು. 23 ಬಾಲ್‌ಗಳಲ್ಲಿ 19 ರನ್ ಗಳಿಸಿದ ಬಟ್ಲರ್ ಕೃಣಾಲ್ ಪಾಂಡ್ಯಗೆ ವಿಕೆಟ್ ಒಪ್ಪಿಸಿದರು. ಅಲ್ಲಿಂದ ಆರ್‌ಸಿಬಿ ಪಡೆ ಹಿಗ್ಗಿತು. ಬಲಿಷ್ಠ ಬ್ಯಾಟಿಗರು ವಿಕೆಟ್ ಒಪ್ಪಿಸಿದ ನಂತರ ಗುಜರಾತ್ ತತ್ತರಿಸಿತು. ಸುಂದರ್ ಒಂದು ಬದಿಯಲ್ಲಿ ನಿಧಾನವಾಗಿ ಅರ್ಧಶತಕದತ್ತ ಸಾಗಿದರು. ಮಧ್ಯಮ ಓವರ್ ಗಳಲ್ಲಿ ಗುಜರಾತ್ 70 ರನ್ ಗಳಿಸಿತು. ಅಲ್ಲಿ 3 ವಿಕೆಟ್ ಬಿದ್ದವು. ಡೆತ್ ಓವರ್‌ಗಳಲ್ಲಿ ಟೇವಾಟಿಯ 7, ರಶೀದ್ ಖಾನ್ 7 ರನ್‌ಗೆ ವಿಕೆಟ್ ಒಪ್ಪಿಸಿದರು. ಏಕಾಂಗಿ ಹೋರಾಟ ನಡೆಸಿದ ವಾಷಿಂಗ್ಟನ್ ಸುಂದರ್ 37 ಬಾಲ್‌ಗಳಲ್ಲಿ ಔಟಾಗದೆ 50 ರನ್ ಗಳಿಸಿದರು.

ವಿರಾಟ ಆರ್ಭಟ

ಗುರಿ ಬೆನ್ನತ್ತುವಾಗಲೂ ಆರ್‌ಸಿಬಿ ಅದೇ ಜೋಶ್ ಅದೇ ಪ್ರಾಬಲ್ಯದೊಂದಿಗೆ ಮುನ್ನಡೆಯಿತು. ಕಾಲಿಗೆ ಗಾಯವಾದರೂ ವೆಂಕಟೇಶ್ ಅಯ್ಯರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರದ ಆರಂಭದ ಜತೆಗೆ ಗೆಲುವಿನ ಅಡಿಪಾಯ ಹಾಕಿದರು. ವಿರಾಟ್ ಕೊಹ್ಲಿ ಕೂಡ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. 16 ಬಾಲ್‌ಗಳಲ್ಲಿ 32 ರನ್‌ಗಳಿಸಿ ವೆಂಕಟೇಶ್ ವಿಕೆಟ್ ಒಪ್ಪಿಸಿದರು. ಪಡಿಕ್ಕಲ್ ಕೂಡ ಬೇಗನೇ ವಿಕೆಟ್ ಒಪ್ಪಿಸಿದರು. ಪವರ್‌ಪ್ಲೇದಲ್ಲೇ ಆರ್‌ಸಿಬಿ 70 ರನ್ ಬಾರಿಸಿ ಗೆಲುವಿನ ಹಾದಿ ಹಿಡಿದಿತ್ತು. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸಿದ ಕೊಹ್ಲಿ ಅರ್ಧಶತಕದತ್ತ ಸಾಗಿದರು. 9ನೇ ಓವರ್ ಬೌಲಿಂಗ್ ಮಾಡಲು ಬಂದ ರಶೀದ್ ಖಾನ್ ಸರಸರನೇ ಎರಡು ವಿಕೆಟ್ ಕಿತ್ತರು. ಬಳಿಕ ಡೇವಿಡ್ ಸೆಟ್ ಆಗುವ ಯಾವುದೇ ಮುಲಾಜಿಗೆ ಬೀಳದೆ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಆದರೆ 24 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ವಿರಾಟ್ ಕೊಹ್ಲಿ ಒತ್ತಡ ತಡೆದುಕೊಂಡರು. ಉಳಿದ ಪಂದ್ಯವನ್ನು ಮುಗಿಸಿಕೊಂಡೇ ಬಂದರು. ಕೊನೆಯಲ್ಲಿ ಕೊಹ್ಲಿ 75 ರನ್ ಗಳಿಸಿದರೆ ಜಿತೇಶ್ ಶರ್ಮ 11 ರನ್‌ಗಳಿಸಿದರು.



ಸಂಕ್ಷಿಪ್ತ ಸ್ಕೋರ್
ಗುಜರಾತ್ 20 ಓವರ್‌ಗಳಲ್ಲಿ 155/8: ಸುಂದರ್ 50*, ನಿಶಾಂತ್ 20; ರಸೀಖ್ 27/3
ಆರ್‌ಸಿಬಿ 18 ಓವರ್‌ಗಳಲ್ಲಿ 161/5: ಕೊಹ್ಲಿ 75*, ವೆಂಕಟೇಶ್ 32

ಕಮಾಲ್ ಕ್ಯಾಚ್ (ಟಾಪ್ 5)



1. ಮನೀಶ್ ಪಾಂಡೆ
ಕೆಕೆಆರ್-ಆರ್‌ಸಿಬಿ ಪಂದ್ಯದ ವೇಳೆ ಟಿಮ್ ಡೇವಿಡ್ ಬಾರಿಸಿದ ವೇಗದ ಶಾಟ್‌ಗೆ ಪಾಯಿಂಟ್ ನಲ್ಲಿದ್ದ ಮನೀಷ್ ಪಾಂಡೆ ಎಡಭಾಗಕ್ಕೆ ಹಾರುತ್ತಾ ಒಂದು ಕೈಯಲ್ಲಿ ಕ್ಯಾಚ್ ಮಾಡಿದರು.

2. ಶ್ರೇಯಸ್ ಅಯ್ಯರ್
ಮುಂಬೈ ಪಂಜಾಬ್ ಪಂದ್ಯದ ವೇಳೆ ಶ್ರೇಯಸ್ ಅಯ್ಯರ್ ಹಾರ್ದಿಕ್ ಲಾಂಗ್‌ಆನ್‌ನತ್ತ ಬಾರಿಸಿದ ಬಾಲನ್ನು ಗಾಳಿಯಲ್ಲಿ ತೇಲಿ ಬಾರ್ಟಲೆಟ್ ಕೈಗಿತ್ತರು. ಅದು ಕೂಡ ಬೆಸ್ಟ್ ಕ್ಯಾಚ್ ಅನಿಸಿಕೊಂಡಿತು.

3. ಫಿಲ್ ಸಾಲ್ಟ್
ಮೊದಲ ಪಂದ್ಯದಲ್ಲೇ ಬೆಂಗಳೂರಲ್ಲಿ ಫಿಲ್ ಸಾಲ್ಟ್ ಕಮಾಲ್ ಮಾಡಿದರು. ಇಶಾನ್ ಕಿಶನ್ ಬಾರಿಸಿದ ಬಾಲನ್ನು ಒಂದೇ ಕೈಯಲ್ಲಿ ಹಿಡಿದು ಮೆರೆದಾಡಿದರು.

4. ರಿಷಭ್ ಪಂತ್
ರಿಷಭ್ ಪಂತ್ ವಿಕೆಟ್ ಹಿಂದೆ ಮಿಲಿಸೆಕೆಂಡ್‌ಗಳಲ್ಲಿ ಪ್ರತಿಕ್ರಿಯಿಸಿ ಹಿಡಿದ ಕ್ಯಾಚ್ ಹೈಲೈಟ್‌ಗಳಲ್ಲಿ ಸ್ಥಾನ ಪಡೆದಿತು. ಜೈಸ್ವಾಲ್ ಬ್ಯಾಟ್‌ಗೆ ತಾಗಿ ಬಂದ ಬಾಲನ್ನು ನೋಡುತ್ತಾ ಪಂತ್ ಎಲ್‌ಬಿಗೆ ಮನವಿ ಮಾಡಿದರು. ಆದಾಗ್ಯೂ ನಿಂತಲೇ ದಿಕ್ಕು ಬದಲಾಯಿಸಿ ಕ್ಯಾಚ್ ಹಿಡಿದರು.

5. ಸರ್ಫರಾಜ್ ಖಾನ್
ಚೆನ್ನೈ ತಂಡದ ಸರ್ಫರಾಜ್ ಖಾನ್ ದಿಲ್ಲಿಯ ಅಕ್ಷರ್ ಪಟೇಲ್ ವಿರುದ್ಧ ನೆಲಕ್ಕೆ ತಾಕುವ ಮುನ್ನ ಹಿಡಿದ ಕ್ಯಾಚ್ ಅಭಿಮಾನಿಗಳನ್ನು ಅಚ್ಚರಿಗೊಳಿಸಿತು.

ಐಪಿಎಲ್ ವಿಜೇತರ ಪಟ್ಟಿ

ವರ್ಷ	ತಂಡ	ನಾಯಕ
2008	ರಾಜಸ್ಥಾನ ರಾಯಲ್ಸ್	ಶೇನ್ ವಾರ್ನ್
2009	ಡೆಕ್ಕನ್ ಚಾರ್ಜರ್ಸ್	ಏಡಮ್ ಗಿಲ್‌ಕ್ರಿಸ್ಟ್
2010	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2011	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2012	ಕೋಲ್ಕತ್ತಾ ನೈಟ್ ರೈಡರ್ಸ್	ಗೌತಂ ಗಂಭೀರ್
2013	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2014	ಕೋಲ್ಕತ್ತಾ ನೈಟ್ ರೈಡರ್ಸ್	ಗೌತಂ ಗಂಭೀರ್
2015	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2016	ಸನ್‌ರೈಸರ್ಸ್ ಹೈದ್ರಾಬಾದ್	ಡೇವಿಡ್ ವಾರ್ನರ್
2017	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2018	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2019	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2020	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2021	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2022	ಗುಜರಾತ್ ಟೈಟಾನ್ಸ್	ಹಾರ್ದಿಕ್ ಪಾಂಡ್ಯ
2023	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2024	ಕೋಲ್ಕತ್ತಾ ನೈಟ್ ರೈಡರ್ಸ್	ಶ್ರೇಯಸ್ ಅಯ್ಯರ್
2025	ಬೆಂಗಳೂರು	ರಜತ್ ಪಾಟಿದಾರ್
2026	ಬೆಂಗಳೂರು	ರಜತ್ ಪಾಟಿದಾರ್

ದಾಖಲೆಯ ನೋಟ

1.ವೈಭವ್ (ಆರ್‌ಆರ್)
- ಗೇಲ್ 58 ಸಿಕ್ಸರ್ ದಾಖಲೆ ಉಡೀಸ್
- ಅನ್‌ಕ್ಯಾಪ್ಡ್ ಆಟಗಾರರಾಗಿ 700 ರನ್ ದಾಟಿದ ಮೊದಲ ಕ್ರಿಕೆಟಿಗ

2. ವಿರಾಟ್ (ಆರ್‌ಸಿಬಿ)
- ಐಪಿಎಲ್‌ನಲ್ಲಿ 9 ಸಾವಿರ ರನ್ ಪೂರೈಸಿದ ವಿಶ್ವದ ಮೊದಲ ಆಟಗಾರ
- ಟಿ20ಯಲ್ಲಿ 12 ಸಾವಿರ ರನ್ ಪೂರೈಸಿದ ಆಟಗಾರ

3. ರಾಹುಲ್ (ದಿಲ್ಲಿ)
- 152* ರನ್ ಬಾರಿಸಿದ ರಾಹುಲ್ ಐಪಿಎಲ್‌ನಲ್ಲಿ ಭಾರತೀಯರ ಅತಿ ಹೆಚ್ಚು ವೈಯಕ್ತಿಕ ಸ್ಕೋರ್.

4. ಉರ್ವಿಲ್ (ಚೆನ್ನೈ)
- 13 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಉರ್ವಿಲ್ ಐಪಿಎಲ್‌ನ ಅತಿ ವೇಗದ ಅರ್ಧ ಶತಕ ಬಾರಿಸಿದ ಜೈಸ್ವಾಲ್ ದಾಖಲೆ ಸರಿಗಟ್ಟಿದರು.

5. ಪಂಜಾಬ್ ಕಿಂಗ್ಸ್
- ದಿಲ್ಲಿ ವಿರುದ್ಧ 264 ರನ್ ಚೇಸ್ ಮಾಡಿದ ಪಂಜಾಬ್ ಐಪಿಎಲ್‌ನ ಅತಿ ಹೆಚ್ಚು ರನ್ ಗುರಿ ಮುಟ್ಟಿದೆ.

19ನೇ ಆವೃತ್ತಿ 19 ವಿಶೇಷ

1. ಪ್ರತಿ 11.6 ಎಸೆತಕ್ಕೊಮ್ಮೆ 1 ಸಿಕ್ಸರ್ ದಾಖಲಾಗಿದೆ.
2. ಪ್ಲೇಆಫ್‌ಗಳ ಮುನ್ನವೇ 1290ಕ್ಕೂ ಹೆಚ್ಚು ಸಿಕ್ಸರ್‌ಗಳು ಸಿಡಿದವು.
3. ಇತಿಹಾಸದಲ್ಲಿ ಮೊದಲ ಬಾರಿಗೆ ಎಲ್ಲಾ 10 ಫ್ರಾಂಚೈಸಿಗಳ ಪರವೂ ಕನಿಷ್ಠ ಒಬ್ಬ ಬ್ಯಾಟರ್ ಶತಕ ಬಾರಿಸಿದರು.
4. ಒಟ್ಟು 61 ಬಾರಿ 200+ ಸ್ಕೋರ್ ದಾಖಲಾಗಿದೆ.
5. 220+ ಗುರಿಯನ್ನು 9 ಬಾರಿ ಯಶಸ್ವಿಯಾಗಿ ಬೆನ್ನಟ್ಟಲಾಗಿದೆ.
6. ಹಿಂದಿನ 18 ಸೀಸನ್‌ಗಳಲ್ಲಿ ಒಟ್ಟು 5 ಬಾರಿ ಮಾತ್ರ 220+ ಚೇಸ್ ಆಗಿತ್ತು!
7. ಒಟ್ಟು 26,700ಕ್ಕೂ ಹೆಚ್ಚು ರನ್‌ಗಳು ದಾಖಲಾಗಿವೆ.
8. ಟೂರ್ನಿಯ ಸರಾಸರಿ ರನ್‌ರೇಟ್ ಸುಮಾರು 10 ರನ್ ಪ್ರತಿ ಓವರ್.
9. ಕೆ.ಎಲ್. ರಾಹುಲ್ 67 ಎಸೆತಗಳಲ್ಲಿ 152 ರನ್ ಸಿಡಿಸಿ ಐಪಿಎಲ್‌ನಲ್ಲಿ ಭಾರತೀಯ ಬ್ಯಾಟರ್ ಗಳಿಸಿದ ಗರಿಷ್ಠ ವೈಯಕ್ತಿಕ ಸ್ಕೋರ್ ದಾಖಲಿಸಿದರು.
10. ವೈಭವ್ ಸೂರ್ಯವಂಶಿ ಪವರ್‌ಪ್ಲೇ ಓವರ್‌ಗಳಲ್ಲೇ 37 ಸಿಕ್ಸರ್‌ಗಳು ಬಾರಿಸಿ ಮತ್ತೊಂದು ಸರ್ವಕಾಲಿಕ ದಾಖಲೆ ನಿರ್ಮಿಸಿದರು.
11. ಮೊದಲ ಬಾರಿಗೆ ಭಾರತೀಯ ಬ್ಯಾಟರ್‌ಗಳ ಒಟ್ಟಾರೆ ಸ್ಟ್ರೈಕ್‌ರೇಟ್ (156+) ವಿದೇಶಿ ಆಟಗಾರರ ಸ್ಟ್ರೈಕ್‌ರೇಟ್‌ಗಿಂತ (155) ಹೆಚ್ಚು ದಾಖಲಾಗಿದೆ
12. ಮೊದಲ 3 ಓವರ್‌ಗಳ ಒಟ್ಟಾರೆ ರನ್‌ರೇಟ್ 9.52: ಇತಿಹಾಸದಲ್ಲೇ ಗರಿಷ್ಠ.
13. ಗೆಲ್ಲಲು ತಂಡಕ್ಕೆ ಬೇಕಾದದ್ದು ಸರಾಸರಿ 217+ ರನ್, ಇತಿಹಾಸದಲ್ಲೇ ಗರಿಷ್ಠ
14. ಕೈತಪ್ಪಿದ 169 ಕ್ಯಾಚ್‌ಗಳು
15. ಟೂರ್ನಿಯ ಒಟ್ಟು ರನ್‌ಗಳಲ್ಲಿ 65.2% ರನ್‌ಗಳು ಬೌಂಡರಿಗಳಿಂದಲೇ ಬಂದಿವೆ.
16. ಗುಜರಾತ್ ತಂಡದ ಸಾಯಿ ಸುದರ್ಶನ್ ಇತಿಹಾಸದಲ್ಲೇ ಮೊದಲ ಬಾರಿಗೆ ಸಂಭವಿಸಿದ ಅಪರೂಪದ ರೀತಿಯ ಔಟ್‌ಗೆ ಬಲಿಯಾಗಿದ್ದಾರೆ.
17. ಟಾಪ್ ಬ್ಯಾಟರ್‌ಗಳ ಟಾಪ್ 3ರಲ್ಲಿ ಮೂವರೂ ಆರಂಭಿಕರೇ ಹೌದು.
18. ಟಾಪ್ 5 ಬೌಲರ್‌ಗಳಲ್ಲಿ ಸ್ಪಿನ್ನರ್‌ಗಳೇ ಇಲ್ಲ.
19. ಕೆಕೆಆರ್-ಎಲ್‌ಎಸ್‌ಜಿ: ಒಂದೇ ಸೂಪರ್ ಓವರ್

ಸತತ ಎರಡನೇ ಟ್ರೋಫಿ

ಈ ಗೆಲುವಿನೊಂದಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸತತ ಎರಡು ಟ್ರೋಫಿ ಗೆದ್ದ ಮೂರನೇ ತಂಡ ಅನಿಸಿಕೊಂಡಿದೆ. ಈ ಹಿಂದೆ ಈ ಸಾಧನೆಯನ್ನು ಚೆನ್ನೈ 2010-2011ರಲ್ಲಿ ಮಾಡಿತ್ತು. 2019-2020ರಲ್ಲಿ ಮುಂಬೈ ಇಂಡಿಯನ್ಸ್ ತಂಡ ಮಾಡಿತ್ತು.



ಎರಡನೇ ಟ್ರೋಫಿ ಗೆಲ್ಲಿಸಿದ 4ನೇ ನಾಯಕ ರಜತ್ ಪಾಟಿದಾರ್

ಐಪಿಎಲ್ ಇತಿಹಾಸದಲ್ಲಿ 2 ಟ್ರೋಫಿ ಗೆಲ್ಲಿಸಿದ 4ನೇ ನಾಯಕ ಎಂಬ ಪಟ್ಟವನ್ನು ರಜತ್ ಪಾಟಿದಾರ್ ಅಲಂಕರಿಸಿದರು. ಇದಕ್ಕೂ ಮುನ್ನ ಈ ದಾಖಲೆಯನ್ನು ಮಹೇಂದ್ರ ಸಿಂಗ್ ಧೋನಿ, ರೋಹಿತ್ ಶರ್ಮ ಮತ್ತು ಗೌತಂ ಗಂಭೀರ್ ಮಾಡಿದ್ದಾರೆ. ಈ ಪಟ್ಟಿಗೆ ಸೇರಿರುವ ರಜತ್ ಪಾಟಿದಾರ್ ಸತತ ಟ್ರೋಫಿ ಗೆಲ್ಲಿಸಿದ 3ನೇ ನಾಯಕ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಬ್ಯಾಟಿಗರ ಭರಾಟೆ

ಎಂದಿನಂತೆ ಈ ಬಾರಿಯೂ ಐಪಿಎಲ್‌ನಲ್ಲಿ ಬ್ಯಾಟಿಗರದ್ದೇ ಭರಾಟೆ ನಡೆಯಿತು. ವೈಭವ್ ಸೂರ್ಯವಂಶಿ, ಶುಭಮನ್ ಗಿಲ್, ಸಾಯಿ ಸುದರ್ಶನ್ ವಿರಾಟ್ ಕೊಹ್ಲಿ ಸೇರಿದಂತೆ ವಿವಿಧ ಬ್ಯಾಟಿಗರು ರನ್ ಹೊಳೆ ಹರಿಸಿದ್ದಾರೆ. ಹತ್ತಾರು ದಾಖಲೆಗಳನ್ನು ಬರೆದಿದ್ದಾರೆ. ಹಾಗಿದ್ದರೆ ಟಾಪ್ 3 ಬ್ಯಾಟರ್‌ಗಳ್ಯಾರು ಮತ್ತು ಅವರ ಆಟವೇನು?

ವೈಭವ್ ಸೂರ್ಯವಂಶಿ



ಇನ್ನಿಂಗ್ಸ್: 16
ರನ್: 776
ಹೈಸ್ಕೋರ್: 103
ಶತಕ: 1
ಅರ್ಧಶತಕ: 5
ಸ್ಟ್ರೈಕ್‌ರೇಟ್: 237.30

ಈ ಬಾರಿಯ ಐಪಿಎಲ್‌ನಲ್ಲಿ ಸೂರ್ಯವಂಶಿಯದ್ದೇ ಹವಾ. ಲಕ್ಷಾಂತರ ಅಭಿಮಾನಿಗಳನ್ನು ಮೈದಾನಕ್ಕೆ ಸೆಳೆದ ಸೂರ್ಯವಂಶಿ ಮೊದಲನೇ ಪಂದ್ಯದಿಂದಲೂ ಗಮನಾರ್ಹ ಪ್ರದರ್ಶನ ನೀಡಿದ್ದಾರೆ. ಪ್ಲೇಆಫ್‌ಗಳಲ್ಲಿ ಎರಡು ಶತಕ ವಂಚಿತ ಇನ್ನಿಂಗ್ಸ್ ಹೊರತಾಗ್ಯೂ 1 ಶತಕ ಬಾರಿಸಿರುವ ಅವರು, 48.50 ಅವರೇಜ್ ಹೊಂದಿದ್ದಾರೆ.

ಶುಭಮನ್ ಗಿಲ್



ಇನ್ನಿಂಗ್ಸ್: 16
ರನ್: 732
ಹೈಸ್ಕೋರ್: 104
ಶತಕ: 1
ಅರ್ಧಶತಕ: 6
ಸ್ಟ್ರೈಕ್‌ರೇಟ್: 163.2

ಗುಜರಾತ್ ತಂಡದ ನಾಯಕ ಶುಭಮನ್ ಗಿಲ್ ಈ ಬಾರಿ ತಮ್ಮ ಬ್ಯಾಟಿಂಗ್ ಶೈಲಿಯನ್ನೇ ಬದಲಾಯಿಸಿದರು. ವಿಶ್ವಕಪ್ ತಂಡದಲ್ಲಿ ಆಡದೆ ಹಿಂದುಳಿದಿದ್ದ ಅವರು, ಒಂದು ಶತಕವನ್ನೂ ಬಾರಿಸಿದ್ದಾರೆ. 48.13 ಅವರೇಜ್‌ನಲ್ಲಿ ನಾಯಕನಾಟವಾಡಿದ್ದಾರೆ. ಇದಲ್ಲದೆ ವಿವಿಧ ಪಂದ್ಯಗಳಲ್ಲಿ ಪಂದ್ಯಶ್ರೇಷ್ಠವನ್ನೂ ಗೆದ್ದಿದ್ದಾರೆ.

ಸಾಯಿ ಸುದರ್ಶನ್



ಇನ್ನಿಂಗ್ಸ್: 17
ರನ್: 722
ಹೈಸ್ಕೋರ್: 100
ಶತಕ: 1
ಅರ್ಧಶತಕ: 8
ಸ್ಟ್ರೈಕ್‌ರೇಟ್: 157.98

ಎಡಗೈ ದಾಂಡಿಗರಾದ ಸಾಯಿ ಸುದರ್ಶನ್ ಕಳೆದ ಮೂರು ಆವೃತ್ತಿಗಳಲ್ಲಿ ಗಮನಾರ್ಹ ಪ್ರದರ್ಶನ ನೀಡುತ್ತಿದ್ದಾರೆ. ಗುಜರಾತ್ ತಂಡದ ಪ್ರಮುಖ ಬ್ಯಾಟರ್, ಬೌಲರ್‌ಗಳಿಗೆ ದುಸ್ವಪ್ನವಾಗಿ ಕಾಡುತ್ತಾ ಬಂದಿದ್ದಾರೆ. ಈ ಬಾರಿಯೂ 700ರ ಗಡಿ ದಾಟಿರುವ ಅವರು, 47.33 ಅವರೇಜ್ ಹೊಂದಿದ್ದಾರೆ.

ಬೌಲರ್‌ಗಳ ಅಟ್ಟಹಾಸ

ಬ್ಯಾಟಿಗರನ್ನು ಕಡಿವಾಣ ಹಾಕುವುದರಲ್ಲಿ ಬೌಲರ್‌ಗಳು ಕೂಡ ಅಷ್ಟೇ ಮೇಲುಗೈ ಸಾಧಿಸಿದ್ದಾರೆ. ಸ್ಪಿನ್ನರ್‌ಗಳು ಕಡಿಮೆ ಸಾಹಸ ಮಾಡಿದ್ದರೂ ಭುವನೇಶ್ವರ್ ಕುಮಾರ್ ಅಂಥ ಅಪ್ರತಿಮ ವೇಗಿಗಳು ಈ ಬಾರಿಯ ಲೀಗ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದಾರೆ. ಹಾಗಿದ್ದರೆ ಯಾರು ಟಾಪ್ 3 ಬೌಲರ್ಸ್?

ಕಾಗಿಸೋ ರಬಾಡ



ಇನ್ನಿಂಗ್ಸ್: 17
ಓವರ್ಸ್: 64.4
ವಿಕೆಟ್: 29
ಅತ್ಯುತ್ತಮ: 25/3
ಎಕನಾಮಿ: 9.43

ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಕಾಗಿಸೋ ರಬಾಡ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಮಿಂಚಿದರು. ವೇಗದ ಬೌಲಿಂಗ್ ಜತೆಗೆ ವೇರಿಯೇಶನ್‌ಗಳನ್ನು ತಂದ ಅವರು, ಗೆಲುವಿನಲ್ಲಿ ಮಿಂಚಿದ್ದಾರೆ. ಗಮನಾರ್ಹ ಪ್ರದರ್ಶನ ನೀಡಿದ್ದಾರೆ.

ಭುವನೇಶ್ವರ್‌ಕುಮಾರ್



ಇನ್ನಿಂಗ್ಸ್: 16
ಓವರ್ಸ್: 60
ವಿಕೆಟ್: 28
ಅತ್ಯುತ್ತಮ: 17/3
ಎಕನಾಮಿ: 9.31

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಗೆಲುವಿನ ಗುಟ್ಟಾಗಿರುವ ಭುವನೇಶ್ವರ್ ಕುಮಾರ್ ಇಡೀ ಐಪಿಎಲ್‌ನಲ್ಲೇ ಬೆಸ್ಟ್ ಬೌಲರ್ ಅನಿಸಿಕೊಂಡಿದ್ದಾರೆ. ದೊಡ್ಡ ದೊಡ್ಡ ಬ್ಯಾಟಿಗರಿಗೆ ದುಸ್ವಪ್ನವಾಗಿ ಕಾಡಿರುವ ಭುವಿ ಸ್ವಿಂಗ್ ಮೂಲಕವೇ ಮೈದಾನದಲ್ಲಿ ಮತ್ತೊಮ್ಮೆ ಮೆರೆದಾಡಿದ್ದಾರೆ.

ಜೋಫ್ರಾ ಆರ್ಚರ್



ಇನ್ನಿಂಗ್ಸ್: 16
ಓವರ್ಸ್: 61.4
ವಿಕೆಟ್: 28
ಅತ್ಯುತ್ತಮ: 25/3
ಎಕನಾಮಿ: 9.43

ರಾಜಸ್ಥಾನದ ಉತ್ತಮ ಅಭಿಯಾನದ ಪ್ರಮುಖ ಕಾರಣ ಅನಿಸಿರುವ ಜೋಫ್ರಾ ಆರ್ಚರ್ ಟಾಪ್ ಬೌಲರ್‌ಗಳಲ್ಲಿ ಒಬ್ಬರು. ಪ್ರತಿ ಪಂದ್ಯದಲ್ಲೂ ಅವರ ಅತ್ಯುತ್ತಮ ವೇಗದ ದಾಳಿಯೊಂದಿಗೆ ಸ್ವಿಂಗ್ ಮತ್ತು ವೇರಿಯೇಶನ್‌ಗಳೊಂದಿಗೆ ಮಿಂಚಿದ್ದಾರೆ. ಪ್ಲೇಆಫ್ ಹಂತದಲ್ಲೂ ಅವರು ಅತ್ಯುತ್ತಮ ಪ್ರದರ್ಶನವನ್ನೇ ನೀಡಿದ್ದಾರೆ.

ವೈಭವ್ ವಿಸ್ಮಯ

ವಿಶ್ವದ ಕ್ರಿಕೆಟ್ ಅಭಿಮಾನಿಗಳಿಗೆ ಈ ಬಾರಿ ಮನರಂಜಿಸಿ ರೋಮಾಂಚನಗೊಳಿಸಿದವರೆಂದರೆ ವೈಭವ್ ಸೂರ್ಯವಂಶಿ. 14 ವರ್ಷದವರಿದ್ದಾಲೇ ಐಪಿಎಲ್ ಮಹಾ ಕೂಟಕ್ಕೆ ಕಾಲಿಟ್ಟ ಅವರು, ಬಂದ ದಿನದಂದೆ ಐಪಿಎಲ್ ಆಡಿದ ಅತಿ ಕಿರೀಯ ಆಟಗಾರ ಎಂಬ ದಾಖಲೆ ಮಾಡಿದರು, ಮುಂದೆ ಮುಟ್ಟಿದ್ದೆಲ್ಲಾ ಚಿನ್ನ. 15 ವರ್ಷದವರಾಗಿರುವ ವೈಭವ್ ಸೂರ್ಯವಂಶಿ ಈ ವರ್ಷವೂ ತಮ್ಮ ವಯಸ್ಸಿಗೂ ಮಿಗಿಲಾದ ಆಟವಾಡಿದರು. ಅವರ ಇನ್ನಿಂಗ್ಸ್‌ಗಳಲ್ಲಿ ಕೇವಲ ರನ್‌ಗಳಿರಲಿಲ್ಲ, ಸಮಸ್ತ ಭಾರತೀಯರ ಆಸೆ, ಹೆಮ್ಮೆಯಿತ್ತು. ವಿಶ್ವದ ಟಾಪ್ ಸ್ಟಾರ್‌ಗಳಾಡುವ ಈ ಕೂಟದಲ್ಲಿ 15 ವರ್ಷದ ಬಾಲಕ ರಾಜಸ್ಥಾನ ತಂಡವನ್ನು ಸೆಮಿಫೈನಲ್‌ಗೆ ತರುತ್ತಾರೆಂದರೆ ಅದು ವಿಸ್ಮಯ ಅಲ್ಲದೆ ಮತ್ತೇನು? ಪಂದ್ಯಾವಳಿಯುದ್ದಕ್ಕೂ ರನ್ ಮಳೆ, ಪಂದ್ಯಗಳುದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದಿರುವ ವೈಭವ್ ಈ ಬಾರಿಯ ಪ್ರಮುಖ ಆಕರ್ಷಣೆಯಾದರು.



237.30
ಸ್ಟ್ರೈಕ್‌ರೇಟ್

776 ರನ್!

ಐಪಿಎಲ್ ಮಹಾ ಇತಿಹಾಸದಲ್ಲಿ ಯಾವುದೇ ಆಟಗಾರ ಕಿರಿಯ ವಯಸ್ಸಿನಲ್ಲಿ ಮಾಡಲಾಗದ ದಾಖಲೆ ಮಾಡಿದ ವೈಭವ್ ಕೂಟದಲ್ಲಿ ಒಟ್ಟು 776 ರನ್ ಗಳಿಸಿದ್ದಾರೆ. ಇದು ಯಾವುದೇ ಅನ್‌ಕ್ಯಾಪ್ಡ್ ಆಟಗಾರನೂ ಮಾಡದ ಸಾಧನೆ. ಇದರಲ್ಲಿ ಶತಕ, 5 ಅರ್ಧಶತಕಗಳು ಸೇರಿವೆ. ಪ್ಲೇಆಫ್‌ನಲ್ಲಿ ಆಡಿದ ಎರಡು ಪಂದ್ಯಗಳಲ್ಲಿ ವೈಭವ್ ಒಂದು ಸರಿ 97, ಇನ್ನೊಂದು ಸರಿ 96 ರನ್ ಗಳಿಸಿದ್ದರು.

ಅಭಿಮಾನಿಗಳನ್ನು ಮೈದಾನಕ್ಕೆ ತಂದ ಪ್ಲೇಯರ್


ಈ ಬಾರಿ ಬಹುತೇಕ ಅಭಿಮಾನಿಗಳು ವೈಭವ್ ಬ್ಯಾಟಿಂಗ್‌ನಿಂದಲೇ ಮೈದಾನಕ್ಕೆ ಬಂದರು. ಮನೆಯಲ್ಲಿದ್ದವರು ಟಿವಿಯಲ್ಲಿ ನೋಡಿದವರೂ ವೈಭವ್‌ಗಾಗಿಯೇ ನೋಡಿದವರಿದ್ದಾರೆ. ಹಿರಿಯ ಕ್ರಿಕೆಟ್ ಅಭಿಮಾನಿಗಳನ್ನು ಈ ಬಾರಿ ಐಪಿಎಲ್ ನೋಡುವಂತೆ ಮಾಡಿರುವುದರಲ್ಲಿ ವೈಭವ್ ಪಾತ್ರ ದೊಡ್ಡದಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಒಂದೇ ಆವೃತ್ತಿಯಲ್ಲಿ 72 ಸಿಕ್ಸರ್

ವೈಭವ್ ಸೂರ್ಯವಂಶಿ ಮಾಡಿದ ಅದ್ಭುತ ದಾಖಲೆಯೆಂದರೆ ಅದು 72 ಸಿಕ್ಸರ್ ಬಾರಿಸಿದ ಮಹಾ ಸಾಧನೆ. ವಿಶ್ವ ಕ್ರಿಕೆಟ್ ಇತಿಹಾಸದಲ್ಲಿ ಒಂದೇ ಕೂಟದಲ್ಲಿ ಇಷ್ಟೊಂದು ಸಿಕ್ಸರ್ ಯಾರೊಬ್ಬರೂ ಗಳಿಸಿಲ್ಲ. ಕ್ರಿಸ್ ಗೇಲ್ 58 ಸಿಕ್ಸರ್ ಬಾರಿಸಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದ ಆಟಗಾರ ಎಂಬ ದಾಖಲೆ ಮಾಡಿದ್ದರು. ಇದೆಲ್ಲವನ್ನೂ ಮುರಿದು ಹಾಕಿದ ವೈಭವ್ ಇತಿಹಾಸದ ಪುಟಗಳಲ್ಲಿ ಸೇರಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6001

ಎಡದಿಂದ ಬಲಕ್ಕೆ
2.ತನಗೆ ತಾನೆ ವಂಚನೆ ಮಾಡಿಕೊಳ್ಳುವುದು (4)
4.ರೋಗದಿಂದ ಬೆಳೆಯುವ ಗಂಟು (2)
5.ಹಂತ-ಹಂತವಾಗಿ ಹೀಗೆ ತಿರುಗಿ ನಡೆದಿದೆ (3)
6.ಗಲಭೆ ಸಂದರ್ಭ ಪೊಲೀಸರು ನಡೆಸಿದ ಗುಂಡು ಹಾರಾಟ (4)
8.ನಡತೆಗೆಡು ಎಂಬರ್ಥದ ನುಡಿಗಟ್ಟು (4)
10.ಅತ್ತು ಇದರ ನಡುವೆ ನ್ಯಾಯಸ್ಥಾನವಿದೆ (4)
12.ಹಣ್ಣುಗಳ ಮಿಶ್ರಣವೂ ಹೌದು-ವಿಜ್ಞಾನದ ಒಂದು ಶಾಸ್ತ್ರವೂ ಹೌದು (4)
14.ಹೊರನೋಟದ ಅಬ್ಬರ-ಆಡಂಬರ (3)
16. ಕಾಣೆಯಾಗದ ಕೊರಡಿ (2)
17.ರಾತ್ರಿ, ಕರು ತರಲು ಒಡ್ಡಿದ ಆಕ್ಷೇಪಣೆ (4)

ಮೇಲಿನಿಂದ ಕೆಳಕ್ಕೆ
1.ಎಮ್ಮೆ ಜಾತಿಯ ಗಂಡುಜೀವಿ (2)
2.ಬಲವಂತದಿಂದ ವಶಪಡಿಸಿಕೊಂಡದ್ದು (4)
3.ಹರುಷದಿಂದ ಏರಿದ್ದು ಈ ದೋಣಿಯನ್ನು (4)
4.ಕ್ರಯಕ್ಕೆ ತೆಗೆದುಕೊಳ್ಳುವಿಕೆ ತಲೆಕೆಳಗಾಗಿದೆ (3)
7.ಅಕ್ರಮ ಪಾವತಿ-ಲಂಚವಿದು (4)
8.ದಾರದ ನಡುವೆ ಬೆಂಕಿಯಲ್ಲಿ ಸುಟ್ಟು ಶುದ್ಧವಾದದ್ದಿದೆ (4)
9.ಮತದಾನ ಮೂಲಕ ಮಂದಿಯ ಅಭಿಪ್ರಾಯ (4)
11.ಮಾರ್ಗದರ್ಶನ ಮಾಡು-ಉಪಾಯ ತಿಳಿಸು (4)
13.ಹಳ್ಳಿಗಳಲ್ಲಿ ನೆಲಕ್ಕೆ ನೀರು-ಸೆಗಣಿಯ ಲೇಪನಕ್ರಿಯೆ (3)
15.ಹಾಳಾಗು-ಹದಗೆಡುವಿಕೆ (2)

6000 ಉತ್ತರ

ಎಡದಿಂದ ಬಲಕ್ಕೆ:
2.ವಿದ್ಯಮಾನ 4.ಭಾಗ್ಯ
5.ಸಹಾರಾ 6.ಭರವಸೆ
6.ಮಂಗತನ 10.ಶಿರಸ್ತ್ರಾಣ
12.ರಿಯಾಯಿತಿ 14.ಹರಟೆ
16.ರಾಸು 17.ಸಮರಸ

ಮೇಲಿನಿಂದ ಕೆಳಕ್ಕೆ :
1.ದಾಸ 2.ವಿರಾಜಿತ
3.ನರಭಯ 4.ಭಾರ್ಗವ
7.ಸೆಳೆಗುಣ 8.ಮಂಡೋದರಿ
9.ಇತಿಹಾಸ 11.ಸಹಕಾರ
13.ಯಾಚಿಸು 15.ಕೋಟೆ

ಕಿರುಸುದ್ದಿ

ಅಕ್ರಮ ಮರಳು ಸಾಗಾಟ: ದೂರು ದಾಖಲು

ಹಾವೇರಿ: ನದಿ ಪಾತ್ರದಲ್ಲಿ ಅಕ್ರಮವಾಗಿ ಮಾರಾಟ ಮಾಡಲು ಸಂಗ್ರಹಿಸಿಟ್ಟಿದ್ದ ಮರಳನ್ನು ಜಪ್ತಿ ಮಾಡಿರುವ ಘಟನೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಇಬ್ಬರು ಆರೋಪಿಗಳ ವಿರುದ್ಧ ದೂರು ದಾಖಲಿಸಲಾಗಿದೆ. ರಾಣೇಬೆನ್ನೂರ ತಾಲೂಕು ಸೋಮಲಾಪೂರ ಗ್ರಾಮದ ಮೈಲಾರೆಪ್ಪ ಕೋಟಿಹಾಳರ ಹಾಗೂ ಪರಮೇಶ ಮಲ್ಲಪ್ಪ ಗೌಡರ ಎಂಬುವವರ ವಿರುದ್ಧ ಪ್ರತ್ಯೇಕ ದೂರುಗಳು ದಾಖಲಾಗಿವೆ. ಆರೋಪಿತರು ಸೋಮಲಾಪುರ ಬಳಿಯ ತುಂಗಭದ್ರಾ ನದಿ ಪಾತ್ರದಲ್ಲಿ ತಲಾ 20ಸಾವಿರ ಮೌಲ್ಯದ ಸುಮಾರು 50ಮೆಟ್ರಿಕ್ ಟನ್ ಅಕ್ರಮ ಮರಳನ್ನು ಸಂಗ್ರಹಿಸಿಕೊಂಡು ತಮ್ಮ ಲಾಭಕ್ಕೋಸ್ಕರ ಮಾರಾಟ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದ್ದರು. ಖಚಿತ ಮಾಹಿತಿಯಾಧರಿಸಿ ಪೊಲೀಸರು ದಾಳಿ ನಡೆಸಿದಾಗ ಸಿಕ್ಕಿಬಿದ್ದಿದ್ದಾರೆ ಎಂದು ದೂರಿನಲ್ಲಿ ತಿಳಿಸಿದೆ. ರಾಣೇಬೆನ್ನೂರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕವಾಗಿ ಎಫ್ಐಆರ್ ದಾಖಲಾಗಿದೆ.

ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಕುಮಟಾ: ವಿದ್ಯೆ, ಗುಣ, ಸಾಧನೆಯಲ್ಲಿ ತಂದೆ-ತಾಯಿರನ್ನು ಮೀರಿ ದೊಡ್ಡವರಾಗಿ ಯಾರು ಬೆಳೆಯುತ್ತಾರೋ ಅವರೇ ನಿಜವಾದ ವಾರಸುದಾರರು. ಅಂತಹ ಸಾಧನೆ ನಿಮ್ಮಿಂದಾಗಲಿ ಎಂದು ಹಿರಿಯ ಪತ್ರಕರ್ತ ಜಿ. ಯು. ಭಟ್ ಹೇಳಿದರು.

ಹೊಳೆಗದ್ದೆ ನಾಗಮ್ಮ ಪ್ರಕಾಶನದ ಆಶ್ರಯದಲ್ಲಿ ಮನೆಯಂಗಳದಲ್ಲಿ ನಡೆದ ಎಸ್ಎಸ್ಎಲ್‌ಸಿಯಲ್ಲಿ ವಿಶೇಷ ಸಾಧನೆ ಮಾಡಿದ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು.ಮುಖ್ಯ ಅತಿಥಿ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಜಿ.ನಾಯ್ಕ,ಉದ್ಯಮಿ ಸಚಿನ ಎಂ. ನಾಯ್ಕ, ಕೊಂಕಣ ಪ್ರೌಢಶಾಲೆಯ ಪ್ರಾಧ್ಯಾಪಕ ಸುರೇಶ ಹೆಗಡೆ, ಜನತಾ ವಿದ್ಯಾಲಯದ ಪ್ರಾಧ್ಯಾಪಕ ಯೋಗೇಶ ಪಟಗಾರ ಸಂದರ್ಭೋಚಿತವಾಗಿ ಮಾತನಾಡಿದರು.

ಗ್ರಾಪಂ ಮಾಜಿ ಸದಸ್ಯರಾದ ಪಾಂಡು ಪಟಗಾರ, ದೇವೇಂದ್ರ ಶೇರುಗಾರ, ನಾಗಮ್ಮ ನಾಯ್ಕ ಉಪಸ್ಥಿತರಿದ್ದರು. ಎಸ್ಎಸ್ಎಲ್‌ಸಿ ಯಲ್ಲಿ ವಿಶೇಷ ಸಾಧನೆ ಮಾಡಿದ ದೇವಗಿರಿ ಪಂಚಾಯತ ವಲಯದ ಶುಭಂ ಉದಯ ನಾಯ್ಕ, ಶುಶ್ರಾವ್ಯ ಸುದೀಶ ನಾಯ್ಕ,ಧನುಷ ಗಣೇಶ ವೈದ್ಯ, ಸಾಗರ ತಿಮ್ಮಪ್ಪ ಶೆಟ್ಟಿ, ಗಗನ ಶ್ರೀಕಾಂತ ನಾಯ್ಕ, ನಯನಾ ಬಾಬು ನಾಯ್ಕ ಇವರನ್ನು ಪುರಸ್ಕರಿಸಲಾಯಿತು ಹಿರಿಯ ಪತ್ರಕರ್ತರಾದ ಜಿ.ಯು.ಭಟ್, ಜಿಲ್ಲಾ ಶಿಕ್ಷಕ ಸಂಘದ ಅಧ್ಯಕ್ಷರಾದ ಎಂ.ಜಿ.ನಾಯ್ಕ, ತಾಲೂಕಾ ಶಿಕ್ಷಕ ಸಂಘದ ಅಧ್ಯಕ್ಷರಾದ ಸುದೀಶ ನಾಯ್ಕ,ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸುರೇಶ ನಾಯ್ಕರನ್ನು ಪ್ರಕಾಶನದ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು. ಪ್ರಾರಂಭದಲ್ಲಿ ನಾಗಮ್ಮ ಪ್ರಕಾಶನದ ಪಿ. ಆರ್. ನಾಯ್ಕ ಸ್ವಾಗತಿಸಿದರೆ, ಶಿಕ್ಷಕ ಸುರೇಶ ನಾಯ್ಕ ನಿರೂಪಿಸಿ, ವಂದಿಸಿದರು.

ಐಐಟಿ ಮದ್ರಾಸಿಗೆ ಶ್ರೀನಿಧಿ ಆಯ್ಕೆ

ಮೂಡಲಗಿ: ಪಟ್ಟಣದ ಶ್ರೀ ಪಾದಬೋಧ ಸ್ವಾಮೀಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಂತಿಮ ವರ್ಷದ ಬಿ.ಎಸ್ಸಿ ವಿಭಾಗದ ವಿದ್ಯಾರ್ಥಿನಿ ಶ್ರೀನಿಧಿ ಸಣ್ಣಕ್ಕಿ ದೇಶದ ಅತ್ಯಂತ ಪ್ರತಿಷ್ಠಿತ ಪರೀಕ್ಷೆಗಳಲ್ಲಿ ಒಂದಾದ ಸ್ನಾತಕೋತ್ತರ ಜಂಟಿ ಪ್ರವೇಶ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 408 ನೆಯ ಸ್ಥಾನವನ್ನು ಗಳಿಸಿ ಭೌತಶಾಸ್ತ್ರದ ಸ್ನಾತಕೋತ್ತರ ಪದವಿಗೆ ದೇಶದ ಅಗ್ರಗಣ್ಯ



ಸಂಸ್ಥೆಯಾದ ಐಐಟಿ ಮದ್ರಾಸಿಗೆ ಆಯ್ಕೆಯಾಗುವ ಮೂಲಕ ಕಾಲೇಜಿಗೆ ಹಿರಿಮೆ ತಂದಿರುತ್ತಾರೆ. ಪಟ್ಟಣದ ನಿವಾಸಿಗಳಾದ ಸುರೇಖಾ ಮತ್ತು ಶಿವಬಸು ಸಣ್ಣಕ್ಕಿ ಅವರ ಹೆಮ್ಮೆಯ ಪುತ್ರಿ. ವಿದ್ಯಾರ್ಥಿನಿಯ ಈ ಸಾಧನೆಗೆ ಮಹಾವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಅಧ್ಯಕ್ಷ, ಶಾಸಕ ಬಾಲಚಂದ್ರ ಜಾರಕಿಹೊಳಿ, ಸರ್ವ ಸದಸ್ಯರು, ಪ್ರಾಂಶುಪಾಲ ಮಹೇಶ ಕಂಬಾರ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಭಿನಂದನೆಗಳನ್ನು ಕೋರಿರುತ್ತಾರೆ.

ನಿಧನ ಸುದ್ದಿ

ಕರಬಸವ್ವ ಶ್ಯಾವಿ

ರಾಣೇಬೆನ್ನೂರ: ಇಲ್ಲಿಯ ವಿದ್ಯಾನಗರ 4ನೇ ಕ್ರಾಸ್ ನಿವಾಸಿ ಕರಬಸವ್ವ ಶ್ಯಾವಿ(87) ನಿಧನರಾಧರು.



ಮೃತರು ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂದು-ಬಳಗ ಹೊಂದಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಮೇ 30ರಂದು ಮಧ್ಯಾಹ್ನ 12ಗಂಟೆಗೆ ದೇವರಗುಡ್ಡ ರಸ್ತೆಯ ಮುಕ್ತಿಧಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.



ಬ್ಯಾಡಗಿ: ತಾಲೂಕಿನ ಕಜ್ಜರಿ ಗ್ರಾಮದಲ್ಲಿರುವ ಶ್ರೀ ಕಲ್ಮೇಶ್ವರ ದೇವಸ್ಥಾನವನ್ನು ಹಾವೇರಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಮತ್ತು ಬ್ಯಾಡಗಿ ತಾಲೂಕಾ ಬಿಜೆಪಿ ಯುವ ಮೋರ್ಚಾ ವತಿಯಿಂದ ದೇವಸ್ಥಾನದ ಒಳಗಡೆ ಮತ್ತು ಹೊರಗಡೆ ಸ್ವಚ್ಛ ಮಾಡಲಾಯಿತು.

ಬಿಜೆಪಿ ಯುವ ಮೋರ್ಚಾದಿಂದ ದೇವಸ್ಥಾನ ಸ್ವಚ್ಛತಾ ಕಾರ್ಯ

ಬ್ಯಾಡಗಿ: ತಾಲೂಕಿನ ಕಜ್ಜರಿ ಗ್ರಾಮದಲ್ಲಿರುವ ಶ್ರೀ ಕಲ್ಮೇಶ್ವರ ದೇವಸ್ಥಾನವನ್ನು ಹಾವೇರಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಮತ್ತು ಬ್ಯಾಡಗಿ ತಾಲೂಕಾ ಬಿಜೆಪಿ ಯುವ ಮೋರ್ಚಾ ವತಿಯಿಂದ ದೇವಸ್ಥಾನದ ಒಳಗಡೆ ಮತ್ತು ಹೊರಗಡೆ ಸ್ವಚ್ಛ ಮಾಡಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರಾದ ವಿರುಪಾಕ್ಷಪ್ಪ ಬಳ್ಳಾರಿ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿರಣಕುಮಾರ ಕೋಣನವರ, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ವಿವೇಕ್ ರಾಮಗೇರಿ, ಉಪಾಧ್ಯಕ್ಷರುಗಳಾದ ಸತೀಶ್ ಗೌಳಿ, ನಿಜಲಿಂಗಪ್ಪ ಬಿ.ವೈ., ವಿನಯ್ ತಳಗೇರಿ, ಜಿಲ್ಲಾ ಕಾರ್ಯದರ್ಶಿ ಮನೋಜ್ ಜಾಧವ, ಶಂಭು ಪಾಟೀಲ್, ನಿಖಿಲ್ ಡೊಗ್ಗಳ್ಳಿ, ಜಿಲ್ಲಾ ಕಾರ್ಯಕಾರಿ ಸದಸ್ಯರಾದ

ಹನುಮಂತಗೌಡ ಪಾಟೀಲ, ಜಿಲ್ಲಾ ಖಜಾಂಚಿಗಳಾದ ವಿನಯಕುಮಾರ್ ತಹಸೀಲ್ದಾರ, ಜಿಲ್ಲಾ ಸಾಮಾಜಿಕ ಜಾಲತಾಣ ಸಂಚಾಲಕರಾದ ಮೇಘರಾಜ ಹರಿಜನ, ಮೇಘನಾಥ ಯಣ್ಣಿಯವರ, ಬ್ಯಾಡಗಿ ಮಂಡಲ ಯುವ ಮೋರ್ಚಾ ಅಧ್ಯಕ್ಷರಾದ ವರುಣ ಮಲ್ಲಿಗಾರ, ಮಾರುತಿ ಪಾಸಿ, ಮುತ್ತಣ್ಣ ಮುಷ್ಠಿ ಮತ್ತಿತರರು ಉಪಸ್ಥಿತರಿದ್ದರು.



ಕುಮಟಾ: ಹೊಳೆಗದ್ದೆ ನಾಗಮ್ಮ ಪ್ರಕಾಶನದ ಆಶ್ರಯದಲ್ಲಿ ಮನೆಯಂಗಳದಲ್ಲಿ ನಡೆದ ಎಸ್ಎಸ್ಎಲ್‌ಸಿಯಲ್ಲಿ ವಿಶೇಷ ಸಾಧನೆ ಮಾಡಿದ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.

ವಿಭಿನ್ನ ರೀತಿಯಲ್ಲಿ ಮಕ್ಕಳನ್ನು ಸ್ವಾಗತಿಸಲು ಶಿಕ್ಷಕರು ಸಜ್ಜು

ಶಾಲಾ ಆರಂಭಕ್ಕೆ ಸಕಲ ಸಿದ್ಧತೆ

ಹಾವೇರಿ: ಬೇಸಿಗೆ ರಜೆಯ ಮಜಾಕ್ಕೆ ಇದೀಗ ಪೂರ್ಣವಿರಾಮ ಬಿದ್ದಿದ್ದು, ಮಕ್ಕಳು ಮತ್ತೆ ಶಾಲೆಗಳತ್ತ ಮುಖ ಮಾಡಿದ್ದಾರೆ. ಮಕ್ಕಳನ್ನು ಆಹ್ವಾನಿಸಲು ಶಿಕ್ಷಕರು ಸರ್ವಸನ್ನದ್ಧರಾಗಿದ್ದು, ಶಿಕ್ಷಣ ಇಲಾಖೆ ಕೂಡ ಕಳೆದ 2-3ದಿನಗಳ ಅವಿರತ ಶಾಲಾ ಸ್ವಚ್ಛತೆಗೆ ಕ್ರಮ ವಹಿಸಿದ್ದು, ಇದೀಗ ಮಕ್ಕಳು ಶಾಲೆಗೆ ಆಗಮಿಸುತ್ತಿದ್ದಂತೆಯೇ ಅವರನ್ನು ವಿಭಿನ್ನ ರೀತಿಯಲ್ಲಿ ಸ್ವಾಗತಿಸಲು ಸನ್ನದ್ಧರಾಗಿದ್ದಾರೆ.

ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು ಮೇ 29ರಿಂದಲೇ ಶಾಲಾ ಬಾಗಿಲು ತೆರೆದು ಚಿಣ್ಣರು ಮತ್ತು ಮಕ್ಕಳಿಗಾಗಿ ಕಾದಿದ್ದಾರೆ. ಜೂನ್ 1ರಂದು ಭೌತಿಕವಾಗಿ ಶಾಲಾ ಪ್ರಾರಂಭೋತ್ಸವಕ್ಕೆ ಸಕಲ ಸಿದ್ಧತೆ ಮಾಡಿಕೊಂಡಿದ್ದು, ಕೆಲವೆಡೆ ಗುಲಾಬಿ ನೀಡಿದರೆ, ಕೆಲವೆಡೆ ಚಾಕೋಲೆಟ್ ನೀಡಲು ಮತ್ತೆ ಕೆಲವೆಡೆ ಸಿಹಿಯಡುಗೆ ಸಿದ್ಧಪಡಿಸಿಕೊಂಡು ಮಕ್ಕಳನ್ನು ಸ್ವಾಗತಿಸಲು ಕಾದಿದ್ದಾರೆ.

ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಶಿಕ್ಷಣ ಇಲಾಖೆ ಸಿಬ್ಬಂದಿಗಳು, ಅಡುಗೆ ಸಹಾಯಕ ಸಿಬ್ಬಂದಿಯವರು ಸ್ವಚ್ಛತಾ ಕಾರ್ಯವನ್ನು ಪೂರ್ಣಗೊಳಿಸಿದ್ದು, ಸೋಮವಾರದಿಂದಲೇ ಶಾಲಾ ಆವರಣಗಳಲ್ಲಿ ಮಕ್ಕಳ ಕಲರವ ಕೇಳಿ ಬರಲಿದೆ. ಹಲವು ಶಾಲೆಗಳ ಪ್ರವೇಶದ್ವಾರ ತೆಂಗಿನಗರಿ, ಹೂವು ಮಾಲೆ, ಮಾವಿನ ತಳಿರು ತೋರಣಗಳಿಂದ ಶೃಂಗಾರಗೊಂಡಿದ್ದು ಮಕ್ಕಳಲ್ಲಿ ಪುಳಕ ಮೂಡಿಸಲಿವೆ.

ಮುಖ್ಯೋಪಾಧ್ಯಾಯರ ಸಭೆ: ಶಾಲಾ ಪ್ರಾರಂಭೋತ್ಸವ ಕುರಿತಂತೆ ಜಿಲ್ಲೆಯ ಎಲ್ಲಾ ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲೆಗಳ (ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ) ಮುಖ್ಯೋಪಾಧ್ಯಾಯರ ಸಭೆ ನಡೆಸಿ, ಶಾಲೆಗಳ ಸ್ವಚ್ಛತೆ, ಟಿಪ್ಪಣಿ ತಯಾರಿಸುವುದು, ವೇಳಾಪಟ್ಟಿ ಸಿದ್ಧಪಡಿಸುವಿಕೆ, ಶಾಲಾ ಕ್ರಿಯಾಯೋಜನೆ ಸಿದ್ಧಪಡಿಸುವಿಕೆ, ಬಿಸಿಯೂಟ, ಕುಡಿಯುವ ನೀರು, ಪಠ್ಯಪುಸ್ತಕ ವಿತರಣೆ, ಶಾಲಾ ಸಮವಸ್ತ್ರ ವಿತರಣೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಸಿ ಸಮಗ್ರವಾದ ಮಾಹಿತಿ ನೀಡಲಾಗಿದೆ.

ಸಾಂದರ್ಭಿಕ ಚಿತ್ರ



> ಕಳೆದ ಒಂದೂವರೆ ತಿಂಗಳು ಬೇಸಿಗೆ ರಜೆಯ ನಂತರ ಶಾಲೆಗಳು ಪುನಾರಂಭಗೊಳ್ಳುತ್ತಿದ್ದು, ಹಬ್ಬದ ಮಾದರಿಯಲ್ಲಿ ಮಕ್ಕಳನ್ನು ಸ್ವಾಗತಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಜೂ.1ರಿಂದ ತರಗತಿಗಳು ಆರಂಭವಾಗುತ್ತಿದ್ದು, ಶಾಲೆಗಳಲ್ಲಿ ಪಾಲಕರು, ಎಸ್‌ಡಿಎಂಸಿ, ಶಿಕ್ಷಕರ ನೇತೃತ್ವದಲ್ಲಿ ಮಹಾಪೋಷಕ, ಪಾಲಕರ ಸಭೆ ನಡೆಸಿ, ಮಕ್ಕಳಿಗೆ ಪಠ್ಯಪುಸ್ತಕ ವಿತರಿಸಲು ಕ್ರಮವಹಿಸಿದ್ದು, ಮಕ್ಕಳು ಶಾಲೆಗೆ ಹಾಜರಾಗಬೇಕು.
> ■ **ಮೋಹನ್ ದಂಡಿನ,** ಡಿಡಿಪಿಐ, ಹಾವೇರಿ

ಜಿಲ್ಲೆಯಲ್ಲಿ 1861 ಶಾಲೆಗಳು: ಜಿಲ್ಲೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆ ಸೇರಿ 1,283 ಸರ್ಕಾರಿ ಶಾಲೆಗಳು, ಅನುದಾನಿತ ಹಾಗೂ ಅನುದಾನ ರಹಿತ ಸೇರಿ 578 ಶಾಲೆ ಒಳಗೊಂಡಂತೆ ಒಟ್ಟು 1,861 ಶಾಲೆಗಳಿದ್ದು, ಕಳೆದ ವರ್ಷ 1ರಿಂದ 10ನೇ ತರಗತಿವರೆಗೆ 2.70ಲಕ್ಷ ವಿದ್ಯಾರ್ಥಿಗಳಿದ್ದು, ಈ ಬಾರಿಯೂ ಅಂದಾಜು ಇದೇ ಸಂಖ್ಯೆಯನ್ನು ಅಂದಾಜಿಸಲಾಗಿದ್ದು, ಶಾಲೆ ಪ್ರಾರಂಭದ ವಾರದ ನಂತರ ನಿಖರ ಮಾಹಿತಿ ಸಿಗಲಿದೆ. ಈಗಾಗಲೇ ಶೇ.79ರಷ್ಟು ಪುಸ್ತಕಗಳು ಶಾಲೆಗೆ ಸರಬರಾಜಾಗಿದ್ದು, ಹಾವೇರಿ ಮತ್ತು ಹಿರೇಕೆರೂರ ಈ ಎರಡು ತಾಲೂಕಿಗೆ ಮಾತ್ರ ಸಮವಸ್ತ್ರ ಬಂದಿವೆ. ಉಳಿದ ತಾಲೂಕುಗಳಿಗೆ ಸಮವಸ್ತ್ರ, ಶೂ, ಸಾಕ್ಸ್ ಶೀಘ್ರದಲ್ಲೇ ಬರಲಿವೆ ಎಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ.

ಚೆಸ್ ಟೂರ್ನಮೆಂಟ್ ಯಶಸ್ವಿ



ಹಾವೇರಿ: ಜಿಲ್ಲಾ ಚೆಸ್ ಅಸೋಸಿಯೇಶನ್ ಹಾಗೂ ಕಿಂಗ್ಸ್ ಚೆಸ್ ಅಕಾಡೆಮಿ ಆಶ್ರಯದಲ್ಲಿ ಭಾನುವಾರ ಇಲ್ಲಿಯ ಗೆಳೆಯರ ಬಳಗ ಶಾಲೆಯಲ್ಲಿ ಆಯೋಜಿಸಿದ್ದ ಓಪನ್ ರ್ಯಾಪಿಡ್ ಚೆಸ್ ಟೂರ್ನಾಮೆಂಟ್‌ನಲ್ಲಿ ನೂರಾರು ಮಕ್ಕಳು ಪಾಲ್ಗೊಳ್ಳುವ ಮೂಲಕ ಯಶಸ್ವಿಯಾಗಿ ಜರುಗಿತು.ಉತ್ತರ ಕನ್ನಡ, ಬೆಳಗಾವಿ, ಗೋವಾ, ಮಹಾರಾಷ್ಟ್ರ, ದಾವಣಗೆರೆ, ಶಿವಮೊಗ್ಗ, ದಾವಣಗೆರೆ ಸೇರಿದಂತೆ ವಿವಿದೆಡೆಯಿಂದ ನೂರಕ್ಕೂ ಅಧಿಕ ಚೆಸ್ ಆಟಗಾರರು ಆಗಮಿಸಿದ್ದರು. ಮುಕ್ತ, 9, 11 ವರ್ಷದೊಳಗಿನ, 13 ಹಾಗೂ 15 ವರ್ಷದೊಳಗಿನ ಹೀಗೆ ಐದು ವಿಭಾಗದಲ್ಲಿ ಪಂದ್ಯಗಳು ನಡೆದವು. ಪ್ರತಿಯೊಂದು ವಿಭಾಗದಿಂದಲೂ 5 ಸುತ್ತುಗಳಲ್ಲಿ ಪಂದ್ಯಗಳು ನಡೆದವು. ಅಂತಿಮವಾಗಿ ಹೆಚ್ಚು ಅಂಕ ಪಡೆದ ಆಟಗಾರರಿಗೆ ಬಹುಮಾನ ವಿತರಿಸಲಾಯಿತು. ಒಟ್ಟು 31ಸಾವಿರ ರೂಪಾಯಿಗಳ ಮೊತ್ತದ ನಗದು ಬಹುಮಾನ ಇವನ್ನು ನೀಡಲಾಯಿತು. ಮುಖ್ಯ ತೀರ್ಪುಗಾರರಾಗಿ ಕೃಷ್ಣ ಶಿಂಧೆ, ಸಹಾಯಕ ತೀರ್ಪುಗಾರರಾಗೂ ಮಹಾಲಿಂಗಪ್ಪ ಎನ್ .ಸಿ., ತೀರ್ಪುಗಾರ ರಾಗಿ ಆನಂದಸ್ವಾಮಿ ಶಿರಸಿ ಕಾರ್ಯನಿರ್ವಹಿಸಿದರು.

ಪರೀಕ್ಷಾ ಕೇಂದ್ರದ ಸುತ್ತ ನಿರ್ಬಂಧ

ಹಾವೇರಿ: ಕರ್ನಾಟಕ ನರ್ಸಿಂಗ್ ಹಾಗೂ ಅರೆವೈದ್ಯಕೀಯ ಮಂಡಳಿ ಜೂನ-2026ರ ಪೂರಕ ಪರೀಕ್ಷೆಗಳು ದೇವಗಿರಿ ಯಲ್ಲಾಪುರ್ ಹಾವೇರಿ ವಿಜ್ಞಾನಗಳ ಸಂಸ್ಥೆಯಲ್ಲಿ (ಹಿಮ್ಸ್) ಜೂ.2ರಿಂದ 5ರವರೆಗೆ ನಡೆಯಲಿವೆ. ಈ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ ಪ್ರದೇಶವನ್ನು ನಿರ್ಬಂದಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಆದೇಶ ಹೊರಡಿಸಿದ್ದಾರೆ.ಈ ನಿರ್ಬಂಧಿತ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಹಾಗೂ ವ್ಯಕ್ತಿಗಳ ಗುಂಪುಗಳ ಪ್ರವೇಶ ನಿಷೇಧಿಸಲಾಗಿದೆ. ಈ ಪ್ರದೇಶದಲ್ಲಿ ಬರುವ ಝುರಾಕ್ಸ್ ಸೆಂಟರ್ ಹಾಗೂ ಟೈಪಿಂಗ್ ಸೆಂಟರ್ ಗಳನ್ನು ಮುಚ್ಚಲೂ ಆದೇಶಿಸಲಾಗಿದೆ ಹಾಗೂ ಮೊಬೈಲ್ ಪೋನ್ ನಿಷೇಧಿಸಿದೆ. ಈ ಆದೇಶವನ್ನು ಉಲ್ಲಂಘನೆ ಮಾಡಿದವರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲೆಯ ರಕ್ಷಣೆ ನಮ್ಮೆಲ್ಲರ ಹೊಣೆ

ಸಿದ್ದಾಪುರ: ಅಪಾರವಾದ ಜ್ಞಾನ ಸಂಪತ್ತು ಭಾರತೀಯರಾದ ನಮ್ಮ ಆಸ್ತಿ. ಅಮೂಲ್ಯವಾದ ಇದನ್ನು ಬಳಸಿಕೊಂಡು ತಾನೂ ಬೆಳೆಯುತ್ತ ಸಮಾಜವನ್ನೂ ಬೆಳೆಸಬೇಕಾದ ಅನಿವಾರ್ಯತೆ ಇದೆ. ಮುಂದಿನ ಪೀಳಿಗೆ ಸುಖ ಸಮೃದ್ಧಿಯಿಂದ ಇರಬೇಕು ಎಂದಾದರೆ ಅವರನ್ನು ಈ ವರ್ತುಲದೊಳಗೆ ತರುವ ಕೆಲಸವಾಗಬೇಕಿದೆ. ಯಕ್ಷಗಾನವು ಈ ಕೆಲಸವನ್ನು ಮೌನವಾಗಿಯೇ ಮಾಡುತ್ತಿದೆ ಎಂದು ಸಿದ್ದಾಪುರ ತಾಲೂಕು ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷ ಆರ್. ಎಮ್.ಹೆಗಡೆ ಬಾಳೇಸರ ಹೇಳಿದರು.

ತಾಲೂಕಿನ ಇಟಗಿಯ ಕಲಾಭಾಸ್ಕರ ಸಂಘಟನೆ ಬಿದ್ರಕಾನ ಸೇವಾ ಸಹಕಾರಿ ಸಂಘದ ಸಭಾಭವನದಲ್ಲಿ ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯದ ಸಹಕಾರದೊಂದಿಗೆ ಹಮ್ಮಿಕೊಂಡಿದ್ದ ಕವಿ ತಿರುಮಲ ವಿರಚಿತ 'ಕಾರ್ತವೀರ್ಯಾರ್ಜುನ' ಯಕ್ಷಗಾನ ಪ್ರದರ್ಶನದ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಯಕ್ಷಗಾನವು ನಮಗೆ ಎಲ್ಲವನ್ನೂ ಕೊಟ್ಟಿದೆ. ಯಕ್ಷಗಾನ ಪ್ರದರ್ಶನಗಳು ಆಗಾಗ ಆಗುತ್ತಿದ್ದರೆ ಅದಕ್ಕೊಂದು ಅರ್ಥವಿರುತ್ತದೆ. ಸಂಘಟನೆಯ ಕೈಬಲಪಡಿಸುವುದರ ಮೂಲಕ ನಾವೆಲ್ಲರೂ ಈ ಕಲೆಯ ರಕ್ಷಣೆಯ ಹೊಣೆಗಾರರಾಗೋಣ ಎಂದು ಅವರು ಹೇಳಿದರು.

ಸೇವಾ ಸಹಕಾರಿ ಸಂಘದ ಮಾಜಿ ಅಧ್ಯಕ್ಷ ಪಿ.ಎಸ್.ಹೆಗಡೆ ಹುಲಿಮಕ್ಕಿ, ಸಾಮಾಜಿಕ ಕಾರ್ಯಕರ್ತ ಎನ್.ವಿ.ಹೆಗಡೆ ಮುತ್ತಿಗೆ, ಪತ್ರಕರ್ತ ರಮೇಶ ಹಾರ್ಸಿಮನೆ ಉಪಸ್ಥಿತರಿದ್ದರು. ಕಲಾಭಾಸ್ಕರದ ಕಾರ್ಯದರ್ಶಿ ವಿನಾಯಕ ಹೆಡೆ ಸ್ವಾಗತಿಸಿದರು.

ಇಟಗಿ ಮಹಾಬಲೇಶ್ವರ ಭಟ್ಟ ಇವರ ನಿರ್ದೇಶನದಲ್ಲಿ ಕಾರ್ತವೀರ್ಯಾರ್ಜುನ ಯಕ್ಷಗಾನ ನಡೆಯಿತು. ಭಾಗವತರಾಗಿ ಸರ್ವೇಶ್ವರ ಹೆಗಡೆ ಮುರೂರು, ಮದ್ದಳೆ ವಾದನದಲ್ಲಿ ಶರತ್ ಹೆಗಡೆ ಜಾನಕೈ, ಚಂಡೆವಾದನದಲ್ಲಿ ಕೆ.ಎಸ್.ನಾಗಭೂಷಣ ಹೆಗ್ಗೋಡು ಸಹಕರಿಸಿದರು. ರಾವಣನಾಗಿ ಈಶ್ವರ ಭಟ್ಟ ಅಂಸಳ್ಳಿ, ವಿಭೀಷಣನಾಗಿ ಇಟಗಿ ಮಹಾಬಲೇಶ್ವರ, ಪ್ರಹಸ್ತನಾಗಿ ಮಾರ್ಷಲ್ ಫರ್ನಾಂಡಿಸ್, ಕಾರ್ತವೀರ್ಯನಾಗಿ ವಿನಯ ಭಟ್ಟ ಬೇರೊಳ್ಳಿ, ರಾಣಿಯರಾಗಿ ಶಿವಕುಮಾರ ನಾಯ್ಕ ಶಿರಳಗಿ ಹಾಗೂ ರಕ್ಷಿತ್ ಕುಳಿಮನೆ, ಹಾಸ್ಯಪಾತ್ರಗಳಲ್ಲಿ ನಾಗೇಂದ್ರ ಭಟ್ಟ ಮುರೂರು ಪಾಲ್ಗೊಳ್ಳುವುದರ ಮೂಲಕ ಪ್ರದರ್ಶನವು ಅವಿಸ್ಮರಣೀಯವಾಗುವಂತೆ ಮಾಡಿದರು.



ಮೊಬೈಲ್ ಟವರ್ ಸಮಸ್ಯೆಗೆ ಶೀಘ್ರ ಕ್ರಮಕೈಗೊಳ್ಳಿ

ಮುಂಡಗೋಡ: ತಾಲೂಕಿನ ಬೆಡಸಗಾಂವ ಗ್ರಾಮದಲ್ಲಿ ಸಹಕಾರಿ ಸಂಘದ ಆವರಣದಲ್ಲಿರುವ ಬಿಎಸ್ಎನ್ಎಲ್ ಮೊಬೈಲ್ ಟವರ್ ಸಂಪೂರ್ಣ ಜೀರ್ಣಾವಸ್ಥೆಗೆ ತಲುಪಿದ್ದು, ಗಾಳಿ-ಮಳೆಯ ಸಮಯದಲ್ಲಿ ಟವರ್‌ನ ಮೇಲ್ಭಾಗ ಮುರಿದು ಬೀಳುವ ಆತಂಕ ಸಾರ್ವಜನಿಕರನ್ನು ಕಾಡುತ್ತಿದೆ.



ಸುಮಾರು 25 ವರ್ಷಗಳ ಹಿಂದೆ ಪಂಚಾಯತ್ ಮಟ್ಟದಲ್ಲಿ ಬಿಎಸ್ಎನ್ಎಲ್ ಲ್ಯಾಂಡ್ ಲೈನ್ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಈ ಟವರ್ ನಿರ್ಮಿಸಲಾಗಿತ್ತು. ನಂತರ ಲ್ಯಾಂಡ್‌ಲೈನ್ ಸೇವೆಗಳು ಸ್ಥಗಿತಗೊಂಡ ಬಳಿಕ ಇದೇ ಟವರ್‌ಗೆ ಬಿಎಸ್ಎನ್ ಎಲ್ ಮೊಬೈಲ್ ನೆಟ್ವರ್ಕ್ ಉಪಕರಣಗಳನ್ನು ಅಳವಡಿಸಿ, ಬೆಡಸಗಾಂವ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ 2ಜಿ ಸೇವೆಯನ್ನು ಆರಂಭಿಸಲಾಗಿತ್ತು. ಬಳಿಕ ಇದೇ ಟವರ್‌ನಲ್ಲಿ ಜಿಯೋ ಕಂಪನಿಯವರೂ ತಮ್ಮ ನೆಟ್ವರ್ಕ್ ಉಪಕರಣಗಳನ್ನು ಅಳವಡಿಸಿ ಸಾರ್ವಜನಿಕರಿಗೆ ಸೇವೆ ನೀಡುತ್ತಾ ಬಂದಿದೆ.

ಆದರೆ ಪ್ರಸ್ತುತ ಬಿಎಸ್ಎನ್ಎಲ್ ನೆಟ್ವರ್ಕ್ ವಿದ್ಯುತ್ ಇದ್ದಾಗ ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ವಿದ್ಯುತ್ ವ್ಯತ್ಯಯ ಉಂಟಾದಾಗ ಸಂಪೂರ್ಣ ಸಂಪರ್ಕ ಕಡಿತವಾಗುತ್ತದೆ. ಟವರ್‌ಗೆ ಜನರೇಟರ್ ವ್ಯವಸ್ಥೆಯೂ ಇಲ್ಲದಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ರಾಜ್ಯದ ಅನೇಕ ಕಡೆಗಳಲ್ಲಿ ಬಿಎಸ್ಎನ್ಎಲ್ 3ಜಿ 4ಜಿ ಹಾಗೂ 5ಜಿ ಸೇವೆಗಳನ್ನು ನೀಡುತ್ತಿರುವ ಸಂದರ್ಭದಲ್ಲಿ, ಇಲ್ಲಿ ಇನ್ನೂ ಹಳೆಯ 2ಜಿ ಸೇವೆಯೇ ಇದ್ದು ಅದು ಕೂಡ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ.ಅಲ್ಲದೆ ಟವರ್‌ನ ಫೌಂಡೇಶನ್ ಸಹ ಭದ್ರವಾಗಿಲ್ಲವೆಂದು ಹೇಳಲಾಗುತ್ತಿದ್ದು, ಮೇಲ್ಭಾಗದ ಕಂಬಗಳು ಗಾಳಿ-ಮಳೆಯಿಂದ ಸಂಪೂರ್ಣ ದುರ್ಬಲಗೊಂಡಿವೆ. ಜೋರಾಗಿ ಗಾಳಿ ಬೀಸುವಾಗ ಟವರ್‌ನ ಮೇಲ್ಭಾಗ ಅಲುಗಾಡುತ್ತಿರುವುದು ಕಂಡುಬರುತ್ತಿದ್ದು, ಯಾವಕ್ಷಣದಲ್ಲಾದರೂ ಅಪಾಯ ಸಂಭವಿಸಬಹುದೆಂಬ ಆತಂಕ ಸಾರ್ವಜನಿಕರಲ್ಲಿ ಮನೆ ಮಾಡಿದೆ. ಟವರ್ ಸುತ್ತಮುತ್ತ ಬೆಡಸಗಾಂವ ಸೇವಾ ಸಹಕಾರಿ ಸಂಘ, ಸೂಪರ್ ಮಾರ್ಕೆಟ್, ಪಡಿತರ ಅಂಗಡಿ, ಕರ್ನಾಟಕ ಗ್ರಾಮೀಣ ಬ್ಯಾಂಕ್, ಗ್ರಾಪಂ ಕಚೇರಿ ಹಾಗೂ ಬೆಡಸಗಾಂವ-ಮಳಗಿ ಮುಖ್ಯರಸ್ತೆ ಇರುವುದರಿಂದ ದಿನನಿತ್ಯ ನೂರಾರು ಜನರು ಹಾಗೂ ವಾಹನಗಳು ಸಂಚರಿಸುತ್ತಿರುತ್ತವೆ. ಅಕಸ್ಮಾತ್ ಟವರ್ ಕುಸಿದರೆ ಭಾರಿ ಪ್ರಮಾಣದ ಅನಾಹುತ ಸಂಭವಿಸುವ ಸಾಧ್ಯತೆ ಇದೆ ಎಂದು ಸ್ಥಳೀಯರು ಭಯ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸಾರ್ವಜನಿಕರು ಹಲವು ಬಾರಿ ಸಂಬಂಧಪಟ್ಟ ಬಿಎಸ್ಎನ್ಎಲ್ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ, ಕೇವಲ ತಾತ್ಕಾಲಿಕ ದುರಸ್ತಿ ಕಾರ್ಯ ನಡೆಸಿ ಇಲಾಖೆ ನಿರ್ಲಕ್ಷ್ಯ ತೋರಿದೆ ಎಂಬ ಆರೋಪ ಕೇಳಿಬರುತ್ತಿದೆ.

ಸಾಮಾಜಿಕ ಕಾರ್ಯಕರ್ತ ದೇವೇಂದ್ರ ನಾಯ್ಕ,: ಬೆಡಸಗಾಂವ ಗ್ರಾಮಸ್ಥರು ಹಾಗೂ ಮೊಬೈಲ್ ಬಳಕೆದಾರರು ಜೀರ್ಣಾವಸ್ಥೆಗೊಂಡಿರುವ ಈ ಹಳೆಯ ಟವರ್ ಅನ್ನು ತೆರವುಗೊಳಿಸಿ, ಸುರಕ್ಷಿತ ಹಾಗೂ ಆಧುನಿಕ ಸೌಲಭ್ಯಗಳೊಂದಿಗೆ ಹೊಸ ಟವರ್ ನಿರ್ಮಿಸಿ 4ಜಿ ಮತ್ತು 5ಜಿ ಸೇವೆ ಕಲ್ಪಿಸುವಂತೆ ಬಿಎಸ್ಎನ್ಎಲ್ ಮತ್ತು ಜಿಯೋ ಸಂಸ್ಥೆಗಳ ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಥಳೀಯರ ಪರವಾಗಿ ಆಗ್ರಹಿಸುತ್ತೇನೆ.

ಈಶ್ವರ ಖಂಡ್ರೆಗೆ ಉಪಮುಖ್ಯಮಂತ್ರಿ ಸ್ಥಾನ ನೀಡಲು ಒತ್ತಾಯ

ಹಾವೇರಿ: ಸಮುದಾಯದ ಅಭಿವೃದ್ಧಿಗೆ ನಾಲ್ಕು ದಶಕಗಳ ಕಾಲ ದುಡಿದ ಸಮಾಜದ ಪ್ರಮುಖ ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ ಅವರಿಗೆ ರಾಜ್ಯದ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಕಾರ್ಯನಿರ್ವಾಹಕ ಸಮಿತಿ ಸದಸ್ಯ ಶಂಭು ಚಕ್ಕಡಿ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರೈತ, ಕಾರ್ಮಿಕ,



ಸಣ್ಣ ವ್ಯಾಪಾರಿಗಳ ಪರ ನಿರಂತರವಾಗಿ ನಿಂತಿರುವ ಖಂಡ್ರೆ ಅವರಿಗೆ ಉಪಮುಖ್ಯಮಂತ್ರಿ ಜವಾಬ್ದಾರಿ ನೀಡಿದರೆ ಉತ್ತರ ಕರ್ನಾಟಕದ ಹಾಗೂ ದುರ್ಬಲ ವರ್ಗಗಳ ಧ್ವನಿ ಸರ್ಕಾರದಲ್ಲಿ ಮೊಳಗುತ್ತದೆ. ಪ್ರಾದೇಶಿಕ ಸಮತೋಲನದ ದೃಷ್ಟಿಯಿಂದ ಎಐಸಿಸಿ ಹೈಕಮಾಂಡ್, ಮತ್ತು ಸಿಎಲ್‌ಪಿ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ. ಶಿವಕುಮಾರ್ ಅವರು ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ರವೀಂದ್ರ ಭಟ್ಟ ಆಯ್ಕೆ

ಕುಮಟಾ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು, ಕುಮಟಾ ಇದರ ಐದನೇ ವರ್ಷದ ಸವಿನೆನಪಿನ ಅಂಗವಾಗಿ ಜೂನ್ 14ರಂದು ಕುಮಟಾದ ಲಕ್ಷ್ಮೀಬಾಯಿ ಬುರ್ಡೇಕರ್ ಸಭಾಂಗಣದಲ್ಲಿ ನಡೆಯಲಿರುವ ಉತ್ತರ ಕನ್ನಡ ಜಿಲ್ಲಾ 7ನೇ ಹಾಗೂ ಕುಮಟಾ ತಾಲೂಕು 5ನೇ ಜಂಟಿ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಶಿಕ್ಷಕ, ಸಾಹಿತಿ, ಕವಿ, ನಿರೂಪಕ ಹಾಗೂ ಸಂಘಟಕರಾದ ರವೀಂದ್ರ ಭಟ್ಟ ಸೂರಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ಸಮ್ಮೇಳನದ ಆಯೋಜನಾ ಸಮಿತಿಯ ಪದಾಧಿಕಾರಿಗಳು ರವೀಂದ್ರ ಭಟ್ಟ ಸೂರಿಯವರ ನಿವಾಸಕ್ಕೆ ಭೇಟಿ ನೀಡಿ ಅವರನ್ನು ಅಧಿಕೃತವಾಗಿ ಆಹ್ವಾನಿಸಿದರು. ಈ ಸಂದರ್ಭದಲ್ಲಿ ನಡೆದ ಸರಳ ಸಮಾರಂಭದಲ್ಲಿ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ಕುಮಟಾ ಘಟಕದ ಅಧ್ಯಕ್ಷ ಹಾಗೂ ಕಲಾವಿದ ಗಣಪತಿ ಅಡಿಗುಂಡಿ ಪ್ರಾಸ್ತಾವಿಕವಾಗಿ ಮಾತನಾಡಿ ಸಮ್ಮೇಳನದ ಉದ್ದೇಶ ಹಾಗೂ ಮಹತ್ವವನ್ನು ವಿವರಿಸಿದರು.

ಸಮ್ಮೇಳನದ ಯಶಸ್ಸಿನ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿರುವ ಉದ್ಯಮಿ ಮುಕುಂದ ನಾಯ್ಕ ಅವರು ರವೀಂದ್ರ ಭಟ್ಟ ಸೂರಿ ಹಾಗೂ ಗೀತಾ ದಂಪತಿಯನ್ನು ಸನ್ಮಾನಿಸಿ ಗೌರವಿಸಿದರು.



ಸನ್ಮಾನ ಸ್ವೀಕರಿಸಿ ಮಾತನಾಡಿದ ರವೀಂದ್ರ ಭಟ್ಟ ಸೂರಿ, ತಮ್ಮನ್ನು ಸರ್ವಾನುಮತದಿಂದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ಸಮಿತಿಯ ಪದಾಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಆಗಮಿಸಿದ ಎಲ್ಲ ಗಣ್ಯರಿಗೆ ತಮ್ಮ 'ಭಾವಾಂತರಂಗ' ಕೃತಿಯನ್ನು ನೀಡಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಸಮ್ಮೇಳನದ ಮುಖ್ಯ ಪ್ರಾಯೋಜಕರಾದ ಕ್ರಿಶಾ ಫೌಂಡೇಶನ್ ಹೆಗಡೆ ಸಂಸ್ಥೆಯ ಸಂಸ್ಥಾಪಕ ಮುಕುಂದ ರಾಮರಾಯ ನಾಯ್ಕ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ಕುಮಟಾ ಘಟಕದ ಕಾರ್ಯದರ್ಶಿ ಉದಯ ಮಡಿವಾಳ, ಅನಿಲ ಕೆ. ನಾಯ್ಕ, ಪ್ರಕಾಶ ಮಡಿವಾಳ, ಪ್ರವೀಣ ಮಡಿವಾಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶಿಕ್ಷಣದ ಜೊತೆ ಮೌಲ್ಯಗಳ ಕಲಿಕೆಯೇ ಮುಖ್ಯ

ಕುಮಟಾ: ಸರಸ್ವತಿ ಪಿ.ಯು ಕಾಲೇಜು ಕೇವಲ ಅಂಕಗಳಿಕೆಗೆ ಮಾತ್ರ ಶಿಕ್ಷಣ ನೀಡುವುದಿಲ್ಲ, ಬದುಕಿನ ಮೌಲ್ಯಗಳನ್ನು ಕಲಿಸುವ ಕಾರ್ಯ ಮಾಡುತ್ತಿದೆ. ನಾವು ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವ ಸಂಸ್ಥೆಯು ಸದೃಢವಾಗಿ ಬೆಳೆಯಬಲ್ಲದು ಎಂಬುದಕ್ಕೆ ವಿಧಾತ್ರಿಯ ಸರಸ್ವತಿ ಪಿ.ಯು ಕಾಲೇಜು ಸಾಕ್ಷಿ ಎಂದು ಖ್ಯಾತ ವಾಗ್ಮಿ, ವೈದ್ಯ ಹಾಗೂ ಪ್ರೇರಣಾದಾಯಕ ವಕ್ತಾರ ಡಾ. ರಾಹುಲ ದೇವರಾಜ ಅಭಿಪ್ರಾಯಪಟ್ಟರು.

ಅವರು ಕೊಂಕಣ ಎಜ್ಯುಕೇಶನ್ ಟ್ರಸ್ಟ್ ಹಾಗೂ ವಿಧಾತ್ರಿ ಅಕಾಡೆಮಿ ಸಹಭಾಗಿತ್ವದ ಸರಸ್ವತಿ ಪಿ.ಯು ಕಾಲೇಜಿನಲ್ಲಿ ಪ್ರಥಮ ಪಿ.ಯು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ 'ಆರಂಭಮ್' ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ಸೂಕ್ತ ವಾತಾವರಣದ ಅಗತ್ಯತೆಯನ್ನು ವಿವರಿಸಿದ ಅವರು, ಓದುವ ವಿದ್ಯಾರ್ಥಿ ಯಾವುದೇ ಶಾಲೆಗೆ ಹೋದರೂ ಓದುತ್ತಾನೆ ಎನ್ನುವುದನ್ನು ಒಪ್ಪಲು ಸಾಧ್ಯವಿಲ್ಲ. ಗಿಡವೊಂದನ್ನು ಮರುಭೂಮಿಯಲ್ಲಿ ನೆಟ್ಟರೆ ಅದು ಬೆಳೆಯುವುದಿಲ್ಲ. ಉತ್ತಮ ಸಂಸ್ಕೃತಿಯ ಅರಿವು ಮತ್ತು ಸಂಸ್ಕಾರ ನೀಡುವ ಶಿಕ್ಷಣ ಸಂಸ್ಥೆಗೆ ಮಕ್ಕಳನ್ನು ಸೇರಿಸಿದರೆ ಮಾತ್ರ ಅವರ ಭವಿಷ್ಯ ಕಟ್ಟಿಕೊಡಲು ಸಾಧ್ಯ ಎಂದರು.

ಕೊಂಕಣ ಎಜ್ಯುಕೇಶನ್ ಟ್ರಸ್ಟ್ ಕಾರ್ಯದರ್ಶಿ ಮುರಳೀಧರ ಪ್ರಭು ಮಾತನಾಡಿದರು. ವಿಧಾತ್ರಿ ಅಕಾಡೆಮಿಯ ಸಹಸಂಸ್ಥಾಪಕ ಗುರುರಾಜ ಶೆಟ್ಟಿ ಸಂಸ್ಥೆ ಹಾಗೂ ಉಪನ್ಯಾಸಕರ ಪರಿಚಯಿಸಿದರು. ಕೊಂಕಣ ಎಜ್ಯುಕೇಶನ್ ಟ್ರಸ್ಟ್ ಉಪಾಧ್ಯಕ್ಷ ರಮೇಶ ಪ್ರಭು ಮಾತನಾಡಿದರು. ಪ್ರಾಂಶುಪಾಲ ಜಿ.ಎಸ್.ಹೆಗಡೆಕಣ್ಣಿ ಸ್ವಾಗತಿಸಿದರು. ಉಪನ್ಯಾಸಕರುಗಳಾ ಪದ್ಮನಾಭ ಪ್ರಭು ಹಾಗೂ ಪ್ರಸನ್ನ ಹೆಗಡೆ ಶೈಕ್ಷಣಿಕ ಮುನ್ನೋಟ ನೀಡಿದರು. ಗಣೇಶ ಜೋಶಿ ಸಂಕೊಳ್ಳಿ ಕಾರ್ಯಕ್ರಮ ನಿರೂಪಿಸಿದರು. ನಿಶಾ ಬ್ರಿಟೋ ವಂದಿಸಿದರು.

ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ ಅಭಿಪ್ರಾಯ

ಶಿಕ್ಷಣದ ಜೊತೆ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಅಗತ್ಯ

ಹಾವೇರಿ: ಶಿಕ್ಷಣದ ಜತೆಗೆ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕೊಟ್ಟರೆ ಅದು ಆ ವ್ಯಕ್ತಿಗೆ ಚಿನ್ನದ ಕಳಸ ಇಟ್ಟಂತೆ. ಅಂತಹ ಕೆಲಸವನ್ನು 'ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ' ಮಾಡಲಿದೆ ಎಂದು ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ ಹೇಳಿದರು.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಾಲಾ ಕಟ್ಟಡದ ಲೋಕಾರ್ಪಣೆ

ಹಾವೇರಿ ತಾಲೂಕಿನ ದೇವಿಹೊಸೂರ ರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಾಲಾ ಕಟ್ಟಡದ ಲೋಕಾರ್ಪಣೆ, ಅಕ್ಷರಾಭ್ಯಾಸ ಹಾಗೂ ವಿದ್ಯಾರಂಭ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜಿಲ್ಲೆಯ ಇತಿಹಾಸದಲ್ಲಿ ಶೈಕ್ಷಣಿಕವಾಗಿ ಇದೊಂದು ಮಹತ್ತರ ಹೆಜ್ಜೆ ಇರಿಸಿದಂತಾಗಿದೆ. ಗುಣಮಟ್ಟದ ಶಿಕ್ಷಣ, ಒಳ್ಳೆಯ ಸಂಸ್ಕಾರ ಪಡೆದ ವ್ಯಕ್ತಿ ಒಳ್ಳೆಯ ಪ್ರಜೆಯಾಗಿ ದೇಶ ಸೇವೆ ಮಾಡುತ್ತಾರೆ. ಮಕ್ಕಳಿಗೆ ಆಸ್ತಿ ಮಾಡುವ ಬದಲು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಅವರನ್ನೇ ಆಸ್ತಿಯನ್ನಾಗಿ ಮಾಡಿದರೆ ಅವರು ದೇಶದ ಆಸ್ತಿಯಾಗುತ್ತಾರೆ. ಪಡೆದ ವಿದ್ಯೆಗೆ ತೆರಿಗೆ ಕಟ್ಟುವ ಅವಶ್ಯಕತೆ ಇಲ್ಲ, ಶಿಕ್ಷಣ ಬಳಸಿದಂತೆ ಬೆಳೆಯುತ್ತೆ. ನಕ್ಷತ್ರವಾಗಿ ಹೊಳೆಯುತ್ತೆ ವಿನಃ ಕೊಳೆಯುವುದಿಲ್ಲ ಎಂದರು.

ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ.ದಿನೇಶ ಹೆಗ್ಡೆ ಮಾತನಾಡಿ, ರಾಷ್ಟ್ರೋತ್ಥಾನ ಪರಿಷತ್ ವಿವಿಧ ಸೇವಾ ಕಾರ್ಯಗಳನ್ನು ನಿರಂತರವಾಗಿ ಮಾಡುತ್ತಾ ಬಂದಿದೆ. ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಬಡಮಕ್ಕಳಿಗೆ ಐಐಟಿ, ಮೆಡಿಕಲ್ ಕಲಿಯಲು ತರಬೇತಿ ಕೊಡಿಸುವ ಕೆಲಸ ಮಾಡುತ್ತಿದೆ. ಒಂದು ವರ್ಷದ ಹಿಂದೆ ಇಲ್ಲಿ ಭೂಮಿ ಪೂಜೆ ನೆರವೇರಿಸಿ ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲಾ ತರಗತಿ ಆರಂಭಿಸುವುದಾಗಿ ವಾಗ್ದಾನ ಮಾಡಿದ್ದೇವು. ಅನೇಕ ಅಡೆತಡೆಗಳ ನಡುವೆಯೂ ಇಲ್ಲಿನ ಉದ್ಯಮಿ ಪವನ ಬಹದ್ದೂರದೇಸಾಯಿ ಅವರ ಸಹಕಾರದೊಂದಿಗೆ 7ಎಕರೆ ಜಮೀನಿನಲ್ಲಿ 85ಸಾವಿರ ಚದರ ಅಡಿಯಲ್ಲಿ ಕಟ್ಟಡ ನಿರ್ಮಾಣವಾಗಿದೆ. ರಾಷ್ಟ್ರೋತ್ಥಾನದ ಮೇಲಿನ ವಿಶ್ವಾಸದಿಂದ ಈ ವರ್ಷ 560ಕ್ಕೂ ಹೆಚ್ಚು ಮಕ್ಕಳು ಪ್ರವೇಶಾತಿ ಪಡೆದಿದ್ದಾರೆ ಎಂದರು.



ಯೋಗ್ಯ ವ್ಯಕ್ತಿಗಳನ್ನಾಗಿ ನಿರ್ಮಾಣ ಮಾಡುವ ಕೇಂದ್ರ

ಇಂದು ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಸಿಗುತ್ತಿದೆ. ಆದರೆ, ಸಂಸ್ಕಾರ ಸಿಗುತ್ತಿಲ್ಲ. ಈ ಎರಡನ್ನೂ ಒಗ್ಗೂಡಿಸಿ ಇಂಗ್ಲಿಷ್ ಮಾಧ್ಯಮದ ಶಿಕ್ಷಣದ ಜತೆಗೆ ನಮ್ಮ ಸಂಸ್ಕೃತಿ ಸಂಸ್ಕಾರಗಳನ್ನು ನೀಡುವ ವ್ಯವಸ್ಥೆ ರಾಷ್ಟ್ರೋತ್ಥಾನ ಶಾಲೆಗಳಲ್ಲಿದೆ. ಇಲ್ಲಿ ಪ್ರತಿ ಮಗುವಿಗೂ ನಡೆ, ನುಡಿ, ಸ್ವಭಾವಗಳಲ್ಲಿನ ವಿಶೇಷತೆ ಗುರುತಿಸಿ ಯೋಗ್ಯ ವ್ಯಕ್ತಿಗಳನ್ನಾಗಿ ನಿರ್ಮಾಣ ಮಾಡುವ ಕೇಂದ್ರಗಳಾಗಲಿವೆ. ಮುಂದಿನ 10-20 ವರ್ಷಗಳಲ್ಲಿ ಹಾವೇರಿಯನ್ನು ಇದೇ ಮಕ್ಕಳು ಮುನ್ನಡೆಸುವಂತಾಗಲಿ ಎಂದು ಆರ್‌ಎಸ್‌ಎಸ್‌ನ ಉತ್ತರ ಕರ್ನಾಟಕ ಪ್ರಾಂತ ಕಾರ್ಯವಾಹ ರಾಘವೇಂದ್ರ ಕಾಗವಾಡ ಹಾರೈಸಿದರು.

ಶಾಲೆ ಅಂದರೆ ಅದೊಂದು ಕಟ್ಟಡ ಅಲ್ಲ, ಪ್ರತಿಭಾವಂತ ಶಿಕ್ಷಕರನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಅವರಿಗೆ 10ದಿನ ಪಂಚಮುಖಿ ಶಿಕ್ಷಣದ ಬಗ್ಗೆ ದಾವಣಗೆರೆಯಲ್ಲಿ ತರಬೇತಿ ಕೊಟ್ಟಿದ್ದೇವೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣ, ಸಂಸ್ಕೃತಿ, ಸಂಸ್ಕಾರ ಕೊಡುತ್ತೇವೆ. ನಮ್ಮ ಮಕ್ಕಳು ಪ್ರತಿಭಾವಂತರಾಗಿ ದೇಶಕ್ಕೆ ಕೀರ್ತಿ ತರುವ ವಿಶ್ವಾಸವಿದೆ ಎಂದರು.

ಡಿಡಿಪಿಐ ಮೋಹನ್ ದಂಡಿನ್ ಮಾತನಾಡಿ, ಶಿಕ್ಷಣ ಇಲಾಖೆಯ ನಿಯಮಾವಳಿಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿದ ಹಿನ್ನೆಲೆಯಲ್ಲಿ ಒಂದೇ ದಿನಕ್ಕೆ ಅನುಮತಿ ನೀಡಿದ್ದೇವೆ. ಮಕ್ಕಳಲ್ಲಿ ನಕಾರಾತ್ಮಕ ವಿಚಾರಕ್ಕಿಂತ ಹೆಚ್ಚಾಗಿ ಸಕಾರಾತ್ಮಕ ವಿಚಾರಗಳ ಬಗ್ಗೆ ಹೆಚ್ಚು ಹೇಳಬೇಕು ಎಂದರು.

ರಾಷ್ಟ್ರೋತ್ಥಾನ ಪರಿಷತ್ ಸದಸ್ಯರಾದ ಪವನ ಬಹದ್ದೂರದೇಸಾಯಿ, ಪ್ರಧಾನ ಗುರುಮಾತೆ ಶ್ಯಾಮಲಾ ವೇದಿಕೆಮೇಲಿದ್ದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ನಾಗರಾಜ್, ಹಾವೇರಿ ವಿವಿ ಕುಲಪತಿ ಪ್ರೊ.ಸುರೇಶ ಜಂಗಮಶೆಟ್ಟಿ, ಹುಡಾ ಅಧ್ಯಕ್ಷ ಎಸ್‌ಎಫ್‌ಎನ್ ಗಾಜೀಗೌಡ್ರ, ಮಾಜಿ ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ, ಗವಿಸಿದ್ದಪ್ಪ ದ್ಯಾಮಣ್ಣನವರ, ಬಿಇಒ ಮಾರುತಿ, ಎಂ.ಎಚ್. ಪಾಟೀಲ ಇತರರಿದ್ದರು. ರಾಷ್ಟ್ರೋತ್ಥಾನ ಪರಿಷತ್ ಸದಸ್ಯರಾದ ಜಯಣ್ಣ ಸ್ವಾಗತಿಸಿದರು. ದಾವಣಗೆರೆ ಮತ್ತು ಹಾನಗಲ್ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಮಕ್ಕಳು ನೀಡಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು.

ಬಸವಾದಿ ಶಿವಶರಣರ ಹಿಂದೂ ಸಮಾವೇಶ

ಸನಾತನ ಸಂಸ್ಕೃತಿ ಅತ್ಯಂತ ಶ್ರೇಷ್ಠ: ಶ್ರೀಗಳು

ಗದಗ: ನಗರದ ವಿಡಿಎಸ್‌ಟಿಸಿ ಮೈದಾನದಲ್ಲಿ ಭಾನುವಾರ ಸಂಜೆ ಹಿಂದೂ ಸರ್ವ ಸಮಾಜಗಳ ಒಕ್ಕೂಟದ ವತಿಯಿಂದ ಬಸವಾದಿ ಶಿವ ಶರಣರ ವೇದಿಕೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ಹಿಂದೂ ಸಮಾವೇಶ ಹಾಗೂ ಗ್ರಂಥ ಬಿಡುಗಡೆ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು.



ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಆಶೀರ್ವಚನ ನೀಡಿದ ಮುಂಡರಗಿ ಅನ್ನದಾನೀಶ್ವರ ಮಠದ ಜಗದ್ಗುರು ಡಾ.ಅನ್ನದಾನೇಶ್ವರ ಸ್ವಾಮೀಜಿ ಮಾತನಾಡಿ, ಭಾರತ ದೇಶವು ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ಒಂದು ಸುಂದರ ಶಾಂತಿಯ ತೋಟವಾಗಿದೆ. ಭಾರತ ಎಂಬ ಪವಿತ್ರ ಶಬ್ದದಲ್ಲೇ ವಿಶೇಷವಾದ ಆಧ್ಯಾತ್ಮಿಕತೆಯ ಶಕ್ತಿಯಿದೆ. ನಮ್ಮ ಸನಾತನ ಸಂಸ್ಕೃತಿಯು ಅತ್ಯಂತ ಶ್ರೇಷ್ಠ ಹಾಗೂ ವಿಶಾಲವಾದುದಾಗಿದ್ದು, ಇಂತಹ ಉನ್ನತ ಹಿಂದುತ್ವದ ತತ್ವಗಳನ್ನು ಮುಂದಿನ ಪೀಳಿಗೆಗೆ ಬೆಳೆಸಿಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಸಂಸ್ಕೃತಿಯನ್ನು ಸರಿಯಾಗಿ ಅರಿತುಕೊಂಡಾಗ ಮಾತ್ರ ಮನುಷ್ಯನಲ್ಲಿ ಸಭ್ಯತೆ ಮೂಡಲು ಸಾಧ್ಯ. ಮಾನವನ ದೈನಂದಿನ ಸನ್ನಡತೆಯೇ ಆತನ ನಿಜವಾದ ಸಂಸ್ಕೃತಿಯನ್ನು ಜಗತ್ತಿಗೆ ತಿಳಿಸುತ್ತದೆ ಎಂದು ಶ್ರೀಗಳು ಮಾರ್ಮಿಕವಾಗಿ ನುಡಿದರು.

ಇದೇ ವೇಳೆ ಕಾಡಸಿದ್ದೇಶ್ವರ ಶ್ರೀಗಳ ಕಾರ್ಯವನ್ನು ಶ್ಲಾಘಿಸಿದ ಮುಂಡರಗಿ ಶ್ರೀಗಳು, ಕಾಡಸಿದ್ದೇಶ್ವರ ಶ್ರೀಗಳ ಮಠದಲ್ಲಿ ಎಲ್ಲ ಜಾತಿಯ ಗೋವುಗಳನ್ನು ಅತ್ಯಂತ ಪ್ರೀತಿಯಿಂದ ಸಾಕಿ ಸಲಹಲಾಗುತ್ತಿದೆ. ಅವರು ಪ್ರಸ್ತುತ ದಿನಗಳಲ್ಲಿ ಭೂಮಿಯ ಫಲವತ್ತತೆಯನ್ನು ಕಾಪಾಡುವ ಸಾವಯವ ಕೃಷಿಗೆ ಅತಿ ಹೆಚ್ಚಿನ ಒತ್ತು ನೀಡುತ್ತಿದ್ದಾರೆ ಎಂದರು.

ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದರಿಂದ ಮಾತ್ರ ಭೂಮಿತಾಯಿಯ ಗುಣಮಟ್ಟವನ್ನು ಉತ್ತಮವಾಗಿ ಇಡಲು ಸಾಧ್ಯವಿದ್ದು, ರೈತರ ಸರ್ವಾಂಗೀಣ ಬೆಳವಣಿಗೆಯಲ್ಲಿ ಕಾಡಸಿದ್ದೇಶ್ವರ ಶ್ರೀಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇದರ ಜೊತೆಗೆ ಹಿಂದೂ ಸಂಸ್ಕೃತಿಯನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ರಾಜ್ಯದ ನಾನಾ ಭಾಗಗಳಲ್ಲಿ ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಮಾಡುತ್ತಿರುವುದು ಪ್ರಶಂಸನೀಯ ಎಂದರು.

ಜಗದ್ಗುರು ಬಸವಣ್ಣನವರು ಶೈವ ಧರ್ಮದಿಂದಲೇ ಹಿಂದುತ್ವವನ್ನು ಕಂಡಿದ್ದರು. ನಾವೆಲ್ಲರೂ ಧರ್ಮ ಮತ್ತು ಶರಣರ ಉಪದೇಶಗಳನ್ನು ಕಲಿತು, ಅದರಲ್ಲಿನ ಸತ್ಸಂಸ್ಕೃತಿಯನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಚಂದ್ರು ಬಾಳಿಹಳ್ಳಿಮಠ ಮಾತನಾಡಿದರು. ಸಮಿತಿಯ ಗೌರವಾಧ್ಯಕ್ಷರಾದ ವಸಂತಗೌಡ ಪೊಲೀಸ ಪಾಟೀಲ ಸ್ವಾಗತಿಸಿದರು. ಐತಿಹಾಸಿಕ ಸಮಾವೇಶದಲ್ಲಿ ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ 300ಕ್ಕೂ ಹೆಚ್ಚಿನ ಶ್ರೀಗಳು ಉಪಸ್ಥಿತರಿದ್ದು ಆಶೀರ್ವದಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಸಿ.ಸಿ.ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ರಾಜು ಖಾನಪ್ಪನವರ, ಕಿರಣ ಭೂಮಾ ಸೇರಿದಂತೆ ಸಮಾಜದ ಪ್ರಮುಖರು ಹಾಗೂ ಸಹಸ್ರಾರು ಸಂಖ್ಯೆಯ ಭಕ್ತಾದಿಗಳು ಉಪಸ್ಥಿತರಿದ್ದರು.

ಡಾ.ಉಪಾಧ್ಯ ರಚಿಸಿರುವ ಬಸವ ಶೈವದಲ್ಲಿ ಹಿಂದುತ್ವ ಹಾಗೂ ಬೆಂಗಳೂರಿನ ಡಾ.ಸಿ.ಶಿವಕುಮಾರ ರಚಿಸಿರುವ ವಚನಾನುಸಂಧಾನ ಎಂಬ ಎರಡು ಮಹತ್ವದ ಕೃತಿಗಳನ್ನು ಲೋಕಾರ್ಪಣೆಗೊಳಿಸಿದರು.

ಪರ್ಷಿಯನ್ ಬೋಟು ಮುಳುಗಡೆ: ಲಕ್ಷಾಂತರ ರೂ.ಹಾನಿ



ಕಾರವಾರ: ಮೀನುಗಾರಿಕೆಗೆ ತೆರಳಿದ್ದ ಪರ್ಷಿಯನ್ ಬೋಟು ಮುಳುಗಡೆಯಾಗಿ ಲಕ್ಷಾಂತರ ರೂಪಾಯಿ ಹಾನಿ ಸಂಭವಿಸಿದೆ ಬೋಟಿನಲ್ಲಿದ್ದ ಏಳು ಜನ ಮೀನುಗಾರರನ್ನು ಇತರ ಬೋಟುಗಳ ಮೀನುಗಾರರು ರಕ್ಷಣೆ ಮಾಡಿದ್ದಾರೆ.

ಅಂಕೋಲಾ ತಾಲೂಕಿನ ಬೆಳಂಬಾರದಿಂದ ಬೆಳಗ್ಗೆ 6 ಗಂಟೆಗೆ ಮೀನುಗಾರಿಕೆಗೆ ತೆರಳಿದ್ದ ನವರತ್ನ ಹೆಸರಿನ ಮೀನುಗಾರಿಕೆ ಬೋಟು ಮಧ್ಯಾಹ್ನ 12 ಗಂಟೆ ಸುಮಾರಿಗೆ ಹೊನ್ನಾವರ ತಾಲೂಕಿನ ತಾರಿಬಾಗಿಲ ಬಳಿ ಸಮುದ್ರದಲ್ಲಿ ಹಾನಿಗೊಳಗಾಗಿ ಒಳಗೆ ನೀರು ನುಗ್ಗಿ ಮುಳುಗಡೆಯಾಗಿದ್ದು, ಬೋಟಿನ ಇಂಜಿನ್, ಬಿಡಿಭಾಗ,

ಮೀನುಗಾರಿಕೆ ಬಲೆ ಇನ್ನಿತರ ವಸ್ತುಗಳು ಸೇರಿದಂತೆ ಸುಮಾರು 80 ಲಕ್ಷ ರೂಪಾಯಿಗಳಷ್ಟು ಹಾನಿ ಸಂಭವಿಸಿದೆ.

ಬೋಟು ಮುಳುಗಡೆ ಆಗುತ್ತಿರುವ ಸುದ್ದಿ ತಿಳಿಯುತ್ತಿದ್ದಂತೆ ಕಾಸರಕೋಡಿನ ದರಿಯಾ ದೌಲತ್ ಬೋಟ್ ಮಾಲಿಕ ಅಬ್ದುಲ್ ಗಫೂರ್ ಮತ್ತಿತರರು ತಮ್ಮ ಬೋಟಿನಲ್ಲಿ ಬಂದು ಮುಳುಗುತ್ತಿರುವ ಬೋಟಿನಲ್ಲಿದ್ದ ಅಂಕೋಲಾ ತಾಲೂಕಿನ ಬೆಳಂಬಾರದ ವೆಂಕಟೇಶ ಖಾರ್ವಿ, ನಾಗಪ್ಪ ಖಾರ್ವಿ,ಸಂದೀಪ ಖಾರ್ವಿ, ವಿಕಾಸ ಖಾರ್ವಿ,ವಿಘ್ನೇಶ ಖಾರ್ವಿ, ಲತೇಶ್ ಖಾರ್ವಿ ಮತ್ತು ರಜತ ಬಾನಾವಳಿಕರ ಎನ್ನುವವರನ್ನು ರಕ್ಷಿಸಿ ಸುರಕ್ಷಿತವಾಗಿ ಕಡಲ ತೀರಕ್ಕೆ ಕರೆ ತಂದಿದ್ದಾರೆ. ಈ ಬಾರಿಯ ಮೀನುಗಾರಿಕೆ ಋತುವಿನ ಕೊನೆಯ ದಿನ ಯಾಂತ್ರೀಕೃತ ಮೀನುಗಾರಿಕೆ ನಿಷೇಧಿತ ಅವಧಿಯ ಒಂದು ದಿನದ ಪೂರ್ವದಲ್ಲಿ ದುರ್ಘಟನೆ ಸಂಭವಿಸಿದೆ.



ಹುಬ್ಬಳ್ಳಿಯ ವಿದ್ಯಾನಗರದಲ್ಲಿರುವ ಅಖಿಲ ಭಾರತ ಮಾಧ್ವ ಮಹಾಮಂಡಳ ವಿದ್ಯಾರ್ಥಿ ನಿಲಯದಲ್ಲಿ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿಗಳಾದ ಪರಮ ಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಹಾಗೂ ಪೇಜಾವರ ಶ್ರೀ ಅದೋಕ್ಷಜ ಮಠದ ಪೀಠಾಧಿಪತಿಗಳಾದ ಪರಮ ಪೂಜ್ಯ ಶ್ರೀ 1008 ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಸಂಸ್ಥಾನ ಪೂಜೆಯನ್ನು ಭಕ್ತಿಭಾವದಿಂದ ನೆರವೇರಿಸಿದರು.

ಎಲ್‌ಟಿಟಿ-ದಿಬ್ರುಗಢ ಎಕ್ಸ್‌ಪ್ರೆಸ್ ರೈಲಿನಲ್ಲಿ ಗಂಡು ಮಗು ಜನನ

ಕಲಬುರಗಿ: ಕೇಂದ್ರ ರೈಲ್ವೆಯ ರನ್ನಿಂಗ್ ಸಿಬ್ಬಂದಿ ಮತ್ತು ಸಹ ಪ್ರಯಾಣಿಕರ ತ್ವರಿತ ಸ್ಪಂದನೆ ಹಾಗೂ ಮಾನವೀಯ ಸೇವೆಯಿಂದ ಚಲಿಸುತ್ತಿದ್ದ ರೈಲಿನಲ್ಲೇ ಗರ್ಭಿಣಿ ಮಹಿಳೆಯೊಬ್ಬರು ಸುರಕ್ಷಿತವಾಗಿ ಗಂಡು ಮಗುವಿಗೆ ಜನ್ಮ ನೀಡಿದ ಘಟನೆ ನಡೆದಿದೆ.

ಮೇ 30ರಂದು ರೈಲು ಸಂಖ್ಯೆ 15945 ಲೋಕಮಾನ್ಯ ತಿಲಕ್ ಟರ್ಮಿನಸ್-ದಿಬ್ರುಗಢ ಎಕ್ಸ್‌ಪ್ರೆಸ್‌ನಲ್ಲಿ ಈ ಘಟನೆ ನಡೆದಿದ್ದು, ಭೂಸಾವಲ್ ಮತ್ತು ಇಟಾರ್ಸಿ ನಡುವಿನ ಪ್ರಯಾಣದ ವೇಳೆ ಗರ್ಭಿಣಿ ಜ್ಯೋತಿ ಚೌಧರಿಗೆ ತೀವ್ರ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಈ ಕುರಿತು ಅವರ ಪತಿ ರವಿ ಚೌಧರಿ ಸಂಜೆ 5.25ರ ಸುಮಾರಿಗೆ ರೈಲು ಕಂಡಕ್ಟರ್ ಎಸ್.ಪಿ. ಫಿರ್ಕೆ ಹಾಗೂ ಟಿಕೆಟ್ ಪರೀಕ್ಷಕ ಅಂಬರೀಶ್ ಕುಮಾರ್ ತಿವಾರಿಯವರನ್ನು ಸಂಪರ್ಕಿಸಿ ಸಹಾಯ ಕೋರಿದರು.

ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಸಿಬ್ಬಂದಿ ತಕ್ಷಣ ಕಾರ್ಯಪ್ರವೃತ್ತರಾಗಿ, ಬಿ-6 ಕೋಚ್‌ನ ಗ್ಯಾಲರಿಯಲ್ಲಿ ಕಂಬಳಿ ಹಾಗೂ ಬೆಡ್‌ಶೀಟ್‌ಗಳ ಸಹಾಯದಿಂದ ಸ್ವಚ್ಛ ಮತ್ತು ಸುರಕ್ಷಿತ ಸ್ಥಳವನ್ನು ಸಿದ್ಧಪಡಿಸಿದರು. ಜೊತೆಗೆ ಗರ್ಭಿಣಿ ಮಹಿಳೆಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಿದರು. ಸಂಜೆ 5.28ಕ್ಕೆ ಭೋಪಾಲ್ ನಿಯಂತ್ರಣ ಕೇಂದ್ರಕ್ಕೆ ಮಾಹಿತಿ ನೀಡಿದ ಸಿಬ್ಬಂದಿ, ಹರ್ದಾ ರೈಲು ನಿಲ್ದಾಣದಲ್ಲಿ ವೈದ್ಯರು ಹಾಗೂ ಆಂಬ್ಯುಲೆನ್ಸ್ ವ್ಯವಸ್ಥೆ ಮಾಡುವಂತೆ ಮನವಿ ಮಾಡಿದರು. ನಿಯಂತ್ರಣ ಕೇಂದ್ರವು ತುರ್ತು ವೈದ್ಯಕೀಯ ನೆರವು ಸಿದ್ಧವಾಗಿರಲಿದೆ ಎಂದು ತಿಳಿಸಿತು.

ಈ ನಡುವೆ ಮಹಿಳಾ ಪ್ರಯಾಣಿಕರ ಸಹಕಾರದೊಂದಿಗೆ ರನ್ನಿಂಗ್ ಸಿಬ್ಬಂದಿ ಜ್ಯೋತಿ ಚೌಧರಿಗೆ ಹೆರಿಗೆ ಮಾಡಿಸಲು ನೆರವಾದರು. ಸಂಜೆ 5.40ರ ಸುಮಾರಿಗೆ ಅವರು ಆರೋಗ್ಯವಂತ ಗಂಡು ಮಗುವಿಗೆ ಜನ್ಮ ನೀಡಿದರು. ನವಜಾತ ಶಿಶುವಿನ ಮೊದಲ ಅಳು ಕೋಚ್‌ನಲ್ಲಿದ್ದ ಪ್ರಯಾಣಿಕರಲ್ಲಿ ಸಂತಸ ಮತ್ತು ನಿರಾಳತೆಯನ್ನು ಮೂಡಿಸಿತು.

ರೈಲು ಸಂಜೆ 6.07ಕ್ಕೆ ಹರ್ದಾ ನಿಲ್ದಾಣ ತಲುಪಿದಾಗ, ಆರ್‌ಪಿಎಫ್ ಸಿಬ್ಬಂದಿ, ನಿಲ್ದಾಣದ ಅಧಿಕಾರಿಗಳು, ಮಹಿಳಾ ಕಾನ್‌ಸ್ಟೆಬಲ್ ಹಾಗೂ ವೈದ್ಯಕೀಯ ತಂಡ ಸಿದ್ಧವಾಗಿತ್ತು. ಹೊಕ್ಕುಳಬಳ್ಳಿ ಇನ್ನೂ ಕತ್ತರಿಸದಿದ್ದ ಕಾರಣ ತಾಯಿ ಮತ್ತು ನವಜಾತ ಶಿಶುವನ್ನು ಹೆಚ್ಚಿನ ಚಿಕಿತ್ಸೆಗಾಗಿ ತಕ್ಷಣ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು.

ತಾಯಿ ಹಾಗೂ ಮಗು ಇಬ್ಬರ ಆರೋಗ್ಯವೂ ಸ್ಥಿರವಾಗಿದ್ದು, ಸುರಕ್ಷಿತವಾಗಿದ್ದಾರೆ ಎಂದು ಕೇಂದ್ರ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ.ಸ್ವಪ್ನಿಲ್ ನೀಲಾ ತಿಳಿಸಿದ್ದಾರೆ.

ಓವರ್ ಲೋಡ್ ಸಾಗಾಟ: 17 ಲಾರಿ ವಶಕ್ಕೆ

ಹೊನ್ನಾವರ: ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಮಿತಿಗಿಂತ ಹೆಚ್ಚು ಭಾರ ತುಂಬಿಕೊಂಡು ಹೋಗುತ್ತಿದ್ದ ಬರೋಬ್ಬರಿ 17 ಲಾರಿಗಳನ್ನು ವಶಕ್ಕೆ ಪಡೆದಿದ್ದಾರೆ.

ಮಂಗಳೂರಿನ ಪಣಂಬೂರಿನಿಂದ ಹೊನ್ನಾವರದ ಕಡೆಗೆ ಬರುತ್ತಿದ್ದ ಈ ವಾಹನಗಳನ್ನು ಮಾರ್ಗಮಧ್ಯೆ ತಡೆದು ಅಧಿಕಾರಿಗಳು ತೀವ್ರ ವಿಚಾರಣೆ ಮತ್ತು ತಪಾಸಣೆ ನಡೆಸಿದಾಗ ಈ ಓವರ್ ಲೋಡ್ ಸಾಗಾಟದ ಅಕ್ರಮ ಬೆಳಕಿಗೆ ಬಂದಿದೆ.

ವಶಪಡಿಸಿಕೊಂಡ ಎಲ್ಲಾ 17 ವಾಹನಗಳಲ್ಲಿ ಭಾರೀ ಗಾತ್ರದ ಶಿಲೆ ಕಲ್ಲುಗಳನ್ನು ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿ ಓವರ್ ಲೋಡ್ ಮಾಡಿ ಸಾಗಿಸಲಾಗುತ್ತಿತ್ತು. ಮೂಲಗಳ ಪ್ರಕಾರ, ಹೊನ್ನಾವರದ ಕಾಸರಕೋಡದಲ್ಲಿ ನಿರ್ಮಾಣವಾಗುತ್ತಿರುವ ಖಾಸಗಿ ವಾಣಿಜ್ಯ ಬಂದರು ವಿಸ್ತರಣೆ ಮತ್ತು ನಿರ್ಮಾಣ ಕಾಮಗಾರಿಗೆ ಬಳಸಲು ಈ ಬೃಹತ್ ಕಲ್ಲುಗಳನ್ನು ತರಲಾಗುತ್ತಿತ್ತು ಎಂಬ ನಿಖರ ಮಾಹಿತಿ ಲಭ್ಯವಾಗಿದೆ.



ಸಾರ್ವಜನಿಕ ರಸ್ತೆಗಳಲ್ಲಿ ಅಪಾಯಕಾರಿ ರೀತಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಬೃಹತ್ ಗಾತ್ರದ ಕಲ್ಲುಗಳನ್ನು ಸಾಗಿಸುತ್ತಿದ್ದ ಕಾರಣಕ್ಕೆ ಅಧಿಕಾರಿಗಳು ಈ ಕಠಿಣ ಕ್ರಮ ಕೈಗೊಂಡಿದ್ದಾರೆ. ಸದ್ಯ ಕಾರ್ಯಾಚರಣೆ ವೇಳೆ ಜಪ್ತಿ ಮಾಡಲಾದ ಎಲ್ಲ 17 ವಾಹನಗಳನ್ನು ಹೊನ್ನಾವರ ಪೊಲೀಸ್ ಮೈದಾನದಲ್ಲಿ ಸುರಕ್ಷಿತವಾಗಿ ನಿಲ್ಲಿಸಲಾಗಿದ್ದು, ಅಧಿಕಾರಿಗಳು ಮುಂದಿನ ಕಾನೂನು ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ.

ಜನ್ಮದಿನದ ಹಾರ್ದಿಕ ಶುಭಾಶಯಗಳು 70ನೇ

ನಮ್ಮ ತಂದೆ ಹಾಗೂ ಮಾರ್ಗದರ್ಶಕರಾದ

ಶ್ರೀ ವೀರಭದ್ರಪ್ಪ ಶಂಕರೆಪ್ಪ ಪಾವಡದ

ಅವರಿಗೆ 70ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು

ದೇವರು ನಿಮಗೆ ಇನ್ನೂ ಹೆಚ್ಚಿನ ಆಯುರಾರೋಗ್ಯ, ಯಶಸ್ಸು ನೀಡಲೆಂದು ಶುಭ ಹಾರೈಕೆ.

ಶುಭಾಶಯ ಕೋರುವವರು

ಪ್ರಶಾಂತ್ ವೀರಭದ್ರಪ್ಪ ಪಾವಡದ, ಪ್ರದೀಪ್ ವೀರಭದ್ರಪ್ಪ ಪಾವಡದ ಮತ್ತು ಸಹೋದರ, ಸಹೋದರಿಯರು ಹಾಗೂ ಸಮಸ್ತ ಕುಟುಂಬ ವರ್ಗ.

ಸಹೋದರಿ ಜೊತೆ ತಿರುಗಾಟ: ಯುವಕನ ಕೊಲೆ

ಬೀಳಗಿ: ತಮ್ಮ ಸಹೋದರಿ ಜೊತೆ ತಿರುಗಾಡುತ್ತಿದ್ದ ಯುವಕನನ್ನು ಆಕೆಯ ಸಹೋದರರು ಕೊಲೆ ಮಾಡಿ ಆತನ ಶವವನ್ನು ಗೋಣಿ ಚೀಲದಲ್ಲಿ ಹಾಕಿ ಘಟಪ್ರಭಾ ನದಿಗೆ ಎಸೆದ ಘಟನೆ ತಡವಾಗಿ ಬೆಳಕಿಗೆ ಬಂದಿದೆ.



ಸೇಲ್ಸ್ ಮ್ಯಾನೇಜರ್ ಆಗಿದ್ದ ತಾಲೂಕಿನ ಗಿರಿಸಾಗರ ಗ್ರಾಮದ ವಿಕಾಸ ಸಂಗಪ್ಪ ದಳವಾಯಿ (18) ಕೊಲೆಯಾದ ಯುವಕ. ಅದೇ ಗ್ರಾಮದ ರವಿ ಹಣಮಂತ ಗುಡದಿನ್ನಿ (26), ರಾಜು ಹಣಮಂತ ಗುಡದಿನ್ನಿ (25) ಹಾಗೂ ಅವರ ಗೆಳೆಯ ಕೃಷ್ಣಾ ಸಾಬಣ್ಣ ಕಾಕನೂರ (25) ಕೊಲೆ ಆರೋಪಿಗಳಾಗಿದ್ದಾರೆ.

ಘಟನೆ ಹಿನ್ನೆಲೆ: ತಮ್ಮ ಸಹೋದರಿ ಜೊತೆಗೆ ಯುವಕ ವಿಕಾಸ ತಿರುಗಾಡುತ್ತಿದ್ದುದ್ದನ್ನು ಸಹಿಸಲಾಗದೆ ಇಬ್ಬರು ಸಹೋದರರು ಓರ್ವ ಗೆಳೆಯನ ಸಹಾಯದೊಂದಿಗೆ ಈ ದುಷ್ಕೃತ್ಯ ಎಸೆಗಿದ್ದಾರೆ ಎನ್ನಲಾಗಿದೆ.

ಆರೋಪಿ ರವಿ ಗುಡದಿನ್ನಿಯ ಸಲಹೆಯಂತೆ ಆತನ ಸಹೋದರ ರಾಜು ಗುಡದಿನ್ನಿ ಹಾಗೂ ಗೆಳೆಯ ಕೃಷ್ಣಾ ಕಾಕನೂರ ಸೇರಿ ಮೇ 20ರಂದು ಗ್ರಾಮದ ಜಾತ್ರೆಯ ದಿನ ರಾತ್ರಿ 10 ಗಂಟೆಗೆ ದೂರದ ಹೊಲಕ್ಕೆ ವಿಕಾಸನನ್ನು ಬೈಕ್‌ನಲ್ಲಿ ಕರೆದೊಯ್ದಿದ್ದಾರೆ.

ಆರೋಪಿಗಳು ಅಲ್ಲಿ ವಿಕಾಸನ ಕತ್ತಿಗೆ ಉಡದಾರ ಬಿಗಿದು ಕೊಲೆ ಮಾಡಿದ್ದಾರೆ. ನಂತರ ಸಾಕ್ಷ್ಯ ನಾಶಪಡಿಸಲು ವಿಕಾಸನ ಕಳೇಬರವನ್ನು ಗೋಣಿ ಚೀಲದಲ್ಲಿ ಕಲ್ಲು ಸಮೇತ ಹಾಕಿ ಅನಗವಾಡಿ ಸೇತುವೆ ಮೇಲಿಂದ ಘಟಪ್ರಭಾ ನದಿಗೆ ಎಸೆದಿದ್ದಾರೆ.

ವಿಕಾಸನ ಮನೆಯವರು ಎರಡು ದಿನದ ನಂತರ ಬೀಳಗಿ ಪೊಲೀಸ್ ಠಾಣೆಯಲ್ಲಿ ಕಾಣೆಯಾದ ಬಗ್ಗೆ ದೂರು ನೀಡಿದ್ದಾರೆ. ಯುವಕನ ಪತ್ತೆಗೆ ಪೊಲೀಸರು ಕಾರ್ಯಾಚರಣೆ ಕೈಗೊಂಡಾಗ ಮೇ 26ರಂದು ನದಿಯಲ್ಲಿ ಶವ ಪತ್ತೆಯಾಗಿದೆ. ಯುವಕ ಕೊಲೆಯಾಗಿರುವುದು ಮೇಲ್ನೋಟದಲ್ಲೇ ಗೊತ್ತಾದ ತಕ್ಷಣ ಪೊಲೀಸರು ತನಿಖೆ ಚುರುಕುಗೊಳಿಸಿ ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿಯಾಗಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಜಗದೀಶ ಹಾಗೂ ಪೊಲೀಸ್ ಉಪ ಅಧೀಕ್ಷಕ ಗಜಾನನ ಸುತಾರ ಮಾರ್ಗದರ್ಶನದಲ್ಲಿ ಬೀಳಗಿ ಸಿಪಿಐ ಹಣಮಂತ ಸಣಮನಿ ಹಾಗೂ ತಂಡ ಪ್ರಕರಣ ಭೇದಿಸಿದೆ.

ಸುವರ್ಣ ಉದ್ಯೋಗ ಅವಕಾಶ

BHIMAKRISHNA CHEMICAL AND FERTILIZER PVT. LTD.

ಕೃಷಿ ಅಭಿವೃದ್ಧಿಗೆ ನಮ್ಮ ಬದ್ಧತೆ, ನಿಮ್ಮ ಬೆಳವಣಿಗೆ ನಮ್ಮ ಗುರಿ

ತಕ್ಷಣವೇ ಡೀಲರ್‌ಗಳು ಹಾಗೂ ಮ್ಯಾನೇಜರ್‌ಗಳು ಬೇಕಾಗಿದ್ದಾರೆ

100 ಮಂದಿ ಯುವಕರು ಹಾಗೂ ಯುವತಿಯರಿಗೆ ಹೆಚ್ಚಿನ ಆದ್ಯತೆ.

ಅರ್ಹತೆ: SSLC, PUC ಮತ್ತು ಯಾವುದೇ ಪದವಿ | ವೇತನ: ₹20,000 ರಿಂದ ₹40,000 ವರೆಗೆ | ವಸತಿ ಸೌಲಭ್ಯ: ವಸತಿ ಸೌಲಭ್ಯ ಲಭ್ಯ

ಉತ್ತಮ ಕೆಲಸ ವಾತಾವರಣ | ಭವಿಷ್ಯದ ಬೆಳವಣಿಗೆಗೆ ಅವಕಾಶ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 8861510542 / 9880935243

Head Office : Nandur Industrial Area, Kalburgi.

Branch Office : Shimoga Road, Channagiri.

ಹೊಸ ದಿಗಂತ

ಜೋಳದ ಎನ್‌ಕ್ಲೇವ್, ನೈರುತ್ಯ ರೈಲ್ವೇ ಕಚೇರಿ ಎದುರು, ಎಸ್‌ಬಿಐ ಪಕ್ಕ ಕೇಶ್ವಾಪುರ , ಹುಬ್ಬಳ್ಳಿ

ಜನ್ಮದಿನದ ಶುಭಾಶಯಗಳು

ಸಾಮಾಜಿಕ ಕಾರ್ಯಗಳಲ್ಲಿ ಸದಾ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಹಲ್ಯಾಳ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರು ಹಾಗೂ ಶ್ರೀ ಶಿವಯೋಗಿ ಗುರುಸಿದ್ಧೇಶ್ವರ ಕೋ.ಆಫ್ ಕ್ರೆಡಿಟ್ ಸೊಸೈಟಿ ಹಲ್ಯಾಳ ಇದರ ನಿರ್ದೇಶಕರಾದ

ಶ್ರೀ ಮುದಕಣ್ಣ ಶೇಗುಣಶಿ

ಅವರಿಗೆ 44ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು.

"ನಿಮ್ಮ ಜನಸೇವೆಯ ಪಯಣ ಇನ್ನಷ್ಟು ಯಶಸ್ವಿಯಾಗಲಿ, ನಿಮ್ಮ ಕನಸುಗಳು ನನಸಾಗಲಿ."

ತಮ್ಮ ಸರಳ ವ್ಯಕ್ತಿತ್ವ, ಜನಪರ ಸೇವೆ ಹಾಗೂ ಸಮಾಜಮುಖಿ ಚಟುವಟಿಕೆಗಳ ಮೂಲಕ ಜನರ ಪ್ರೀತಿ ಮತ್ತು ಗೌರವಕ್ಕೆ ಪಾತ್ರರಾಗಿರುವ ತಮಗೆ ಆರೋಗ್ಯ, ಆಯುಷ್ಯ, ಸುಖ, ಸಂತೋಷ ಮತ್ತು ಇನ್ನಷ್ಟು ಸಮಾಜಸೇವೆಯನ್ನು ಮಾಡುವ ಶಕ್ತಿ ಲಭಿಸಲಿ ಎಂದು ಹಾರೈಸುತ್ತೇವೆ.

ಶುಭ ಕೋರುವವರು :

ಕುಟುಂಬದವರು, ಸ್ನೇಹಿತರು, ಹಿತೈಷಿಗಳು & ಅಭಿಮಾನಿ ಬಳಗ.

ಜನ್ಮದಿನದ ಶುಭಾಶಯಗಳು

ರಾಷ್ಟ್ರೋತ್ಥಾನ ಶಿಕ್ಷಣ ಸಂಸ್ಥೆ ಅವರಖೋಡ ಇದರ ಸಂಸ್ಥಾಪಕ ಅಧ್ಯಕ್ಷರಾದ

ಶ್ರೀ ಶಿವಬಸು ನಾಯಿಕ

ಅವರಿಗೆ 40ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು

ನಿಮ್ಮ ಸಮಾಜದ ಅಭಿವೃದ್ಧಿ, ಜನಸೇವಾ ಮನೋಭಾವ, ಸಮಾಜಮುಖಿ ಕಾರ್ಯಗಳು ಮತ್ತು ಯುವಕರಿಗೆ ನೀಡುತ್ತಿರುವ ಪ್ರೋತ್ಸಾಹ ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಸೇವಾ ಮನೋಭಾವ ಇನ್ನಷ್ಟು ವಿಸ್ತರಿಸಲಿ. ಉತ್ತಮ ಆರೋಗ್ಯ, ಆಯುಷ್ಯ, ಸುಖ-ಸಮೃದ್ಧಿ ಮತ್ತು ಯಶಸ್ಸು ಸದಾ ನಿಮ್ಮದಾಗಿರಲಿ ಎಂದು ಹಾರೈಸುತ್ತೇವೆ.

ಶ್ರೀಮತಿ ಮಾಲತಿ ಶಿವಬಸವ ನಾಯಿಕ ಕಾರ್ಯದರ್ಶಿಗಳು

ಶುಭ ಕೋರುವವರು

ರಾಷ್ಟ್ರೋತ್ಥಾನ ಶಿಕ್ಷಣ ಸಂಸ್ಥೆ ಸಮಸ್ತ ಸಿಬ್ಬಂದಿ ವರ್ಗದವರು ಮತ್ತು ಅಭಿಮಾನಿಗಳು

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ತಿಮ್ಮಾಪುರಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿ



ರಾಯಬಾಗ: ರಾಜ್ಯದ ನೂತನ ಸರ್ಕಾರದಲ್ಲಿ ಹಿರಿಯ ನಾಯಕ, ಮಾಜಿ ಸಚಿವ ಆರ್.ಬಿ.ತಿಮ್ಮಾಪುರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಆರ್‌ಸಿಸಿ ತಂಡದಿಂದ ಒತ್ತಾಯಿಸಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಪ್ರಬಲ ಅಹಿಂದ ನಾಯಕರಾಗಿ ಗುರುತಿಸಿಕೊಂಡಿರುವ ತಿಮ್ಮಾಪುರ ಅವರು ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ವಿಶೇಷ ಒತ್ತು ನೀಡುತ್ತಾ ಬಂದಿದ್ದಾರೆ. ಅತ್ಯಂತ ಅನುಭವಿ ರಾಜಕಾರಣಿಯಾಗಿರುವ ಅವರು, ಎಡಗೈ ಸಮುದಾಯದ ಉತ್ತರ ಕರ್ನಾಟಕದ ಪ್ರಮುಖ ನಾಯಕರಾಗಿದ್ದಾರೆ. ಬಾಗಲಕೋಟೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ ಅವರ ಗೆಲುವಿನ ಹಿಂದೆ ತಿಮ್ಮಾಪುರ ಅವರ ಚಾಣಾಕ್ಷ ನಡೆ ಹಾಗೂ ರಾಜಕೀಯ ತಂತ್ರಗಾರಿಕೆ ಪ್ರಮುಖ ಪಾತ್ರ ವಹಿಸಿದೆ. ಅವರಿಗೆ ಸೂಕ್ತ ಸ್ಥಾನಮಾನ ನೀಡುವುದರಿಂದ ಪಕ್ಷದ ಸಂಘಟನೆಗೆ ಆನೆ ಬಲ ಬಂದಂತಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಆರ್‌ಸಿಸಿ ತಂಡದ ವಿಜಯ ಜಿ, ನಂದು ಮಾನೆ, ಮುದ್ದಾಸಿರ ಅಂಕಲೆ, ಮನ್ನು ದೇಸಾಯಿ, ಪ್ರಜ್ವಲ ಹಿರೇಮಠ, ಮನಸುರ ಮುಲ್ಲಾ, ಬಸು ಪಾಟೀಲ, ಚೇತನ ಪೋತದಾರ ಸೇರಿ ಇದ್ದರು.

ಐಐಟಿ ಮದ್ರಾಸಿಗೆ ಶ್ರೀನಿಧಿ ಆಯ್ಕೆ



ಮೂಡಲಗಿ: ಪಟಣ್ಣದ ಶ್ರೀ ಪಾದಬೋಧ ಸ್ವಾಮೀಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಂತಿಮ ವರ್ಷದ ಬಿ.ಎಸ್ಸಿ ವಿಭಾಗದ ವಿದ್ಯಾರ್ಥಿನಿ ಶ್ರೀನಿಧಿ ಸಣ್ಣಕ್ಕಿ ದೇಶದ ಅತ್ಯಂತ ಪ್ರತಿಷ್ಠಿತ ಪರೀಕ್ಷೆಗಳಲ್ಲಿ ಒಂದಾದ ಸ್ನಾತಕೋತ್ತರ ಜಂಟಿ ಪ್ರವೇಶ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 408 ನೆಯ ಸ್ಥಾನವನ್ನು ಗಳಿಸಿ ಭೌತಶಾಸ್ತ್ರದ ಸ್ನಾತಕೋತ್ತರ ಪದವಿಗೆ ದೇಶದ ಅಗ್ರಗಣ್ಯ ಸಂಸ್ಥೆಯಾದ ಐಐಟಿ ಮದ್ರಾಸಿಗೆ ಆಯ್ಕೆಯಾಗುವ ಮೂಲಕ ಕಾಲೇಜಿಗೆ ಹಿರಿಮೆ ತಂದಿರುತ್ತಾರೆ. ಪಟ್ಟಣದ ನಿವಾಸಿಗಳಾದ ಸುರೇಖಾ ಮತ್ತು ಶಿವಬಸು ಸಣ್ಣಕ್ಕಿ ಅವರ ಹೆಮ್ಮೆಯ ಪುತ್ರಿ. ವಿದ್ಯಾರ್ಥಿನಿಯ ಈ ಸಾಧನೆಗೆ ಮಹಾವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಅಧ್ಯಕ್ಷ, ಶಾಸಕ ಬಾಲಚಂದ್ರ ಜಾರಕಿಹೊಳಿ, ಸರ್ವ ಸದಸ್ಯರು, ಪ್ರಾಂಶುಪಾಲ ಮಹೇಶ ಕಂಬಾರ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಭಿನಂದನೆಗಳನ್ನು ಕೋರಿರುತ್ತಾರೆ.

ಸಂರಕ್ಷಣಾಧಿಕಾರಿಯಾಗಿ ಬಸವರಾಜ ಅಧಿಕಾರ ಸ್ವೀಕಾರ



ಖಾನಾಪುರ: ಪಟ್ಟಣದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯಲ್ಲಿ ನೂತನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಬಸವರಾಜ ವಾಳದ ಅಧಿಕಾರ ಸ್ವೀಕರಿಸಿದರು. ಈ ಮೊದಲು ಈ ಹುದ್ದೆಯಲ್ಲಿದ್ದ ಸುನೀತಾ ನಿಂಬರಗಿ ಅವರನ್ನು ಇಲಾಖೆ ಧಾರವಾಡ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ವರ್ಗಾವಣೆಗೊಳಿಸಿದ್ದರಿಂದ ಸುನೀತಾ ನಿಂಬರಗಿ ಅವರು ಬಸವರಾಜ ವಾಳದಗೆ ಅಧಿಕಾರ ಹಸ್ತಾಂತರಿಸಿದರು. ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ಜೂಜಾಟ: ನಾಲ್ವರ ಬಂಧನ

ಹಿರೇಬಾಗೇವಾಡಿ: ಸಮೀಪದ ಧಾಮಣೆ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಭಾನುವಾರ ಜೂಜಾಟದಲ್ಲಿ ತೊಡಗಿದ್ದ ನಾಲ್ವರನ್ನು ಹಿರೇಬಾಗೇವಾಡಿ ಪೊಲೀಸರು ಬಂಧಿಸಿದ್ದಾರೆ. ಬಸ್ತವಾಡ ಗ್ರಾಮದ ಭರಮಪ್ಪ ಗಂಗಪ್ಪ ಗುಡೆಪ್ಪಗೋಳ ಮತ್ತು ಬುದ್ದಿರಾಜ ಶಾಂತಿನಾಥ ಬಾಗನ್ನವರ, ನಾಗೇರಹಾಳದ ಸಿದ್ದಪ್ಪ ಶಿವಾಜಿ ಪಾಟೀಲ ಹಾಗೂ ಸಾಂಬ್ರಾ ಗ್ರಾಮದ ಉಮೇಶ ಹೊಳೆಪ್ಪ ಶಹಪುರಕರ ಇವರನ್ನು ಪಿಎಸ್‌ಐ ಬಸವರಾಜ್ ಮಿಟಗಾರ ಹಾಗೂ ಸಿಬ್ಬಂದಿ ದಾಳಿ ನಡೆಸಿ ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ.



ಬೆಳಗಾವಿ: ಇಲ್ಲಿನ ಚನ್ನಮ್ಮ ವೃತ್ತದ ಬಳಿ ಇರುವ ಗಣಪತಿ ದೇಗುಲದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ನೇತೃತ್ವದಲ್ಲಿ ಅನೇಕ ಕಾರ್ಯಕರ್ತರು ಸೇರಿ ಭಾನುವಾರ ಗಣಪತಿ ದೇವರಿಗೆ ಹಂಗಾಮಿ ಮುಖ್ಯಮಂತ್ರಿ ಡಿಕೆ ಶಿವಕುಮಾರ ಹಾಗೂ ಸಚಿವ ಸತೀಶ ಜಾರಕಿಹೊಳಿ ಹೆಸರಿನಲ್ಲಿ 100 ತೆಂಗಿನಕಾಯಿ ಒಡೆದು ವಿಶೇಷ ಪೂಜೆ ಸಲ್ಲಿಸಿದರು.

ಸತೀಶಗೆ ಕೆಪಿಸಿಸಿ ಅಧ್ಯಕ್ಷ ಹುದ್ದೆ ಸಿಗಲಿ ಎಂದು ವಿಶೇಷ ಪೂಜೆ

ಬೆಳಗಾವಿ: ಇಲ್ಲಿನ ಚನ್ನಮ್ಮ ವೃತ್ತದ ಬಳಿ ಇರುವ ಗಣಪತಿ ದೇಗುಲದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ನೇತೃತ್ವದಲ್ಲಿ ಅನೇಕ ಕಾರ್ಯಕರ್ತರು ಸೇರಿ ಭಾನುವಾರ ಗಣಪತಿ ದೇವರಿಗೆ ಹಂಗಾಮಿ ಮುಖ್ಯಮಂತ್ರಿ ಡಿಕೆ ಶಿವಕುಮಾರ ಹಾಗೂ ಸಚಿವ ಸತೀಶ ಜಾರಕಿಹೊಳಿ ಹೆಸರಿನಲ್ಲಿ 100 ತೆಂಗಿನಕಾಯಿ ಒಡೆದು ವಿಶೇಷ ಪೂಜೆ ಸಲ್ಲಿಸಿದರು.

ನಂತರ ಕಾಂಗ್ರೆಸ್ ಜಿಲ್ಲಾಧ್ಯಕ್ಷ ವಿನಯ ನಾವಲಗಟ್ಟಿ ಮಾತನಾಡಿ, ಮುಂಬರುವ ದಿನಗಳಲ್ಲಿ ಅವರಿಗೆ ಕೆಪಿಸಿಸಿ ಸಾರಥ್ಯವನ್ನು ನೀಡಬೇಕು ಎಂದು ಪಕ್ಷದ ವರಿಷ್ಠರಲ್ಲಿ ಮನವಿ ಮಾಡುತ್ತೇವೆ ಎಂದು ಒತ್ತಾಯಿಸಿದರು. ಅವರ ಸೇವೆ, ಪಕ್ಷ ನಿಷ್ಠೆ ಮತ್ತು ಹಿರಿತನವನ್ನು ಪರಿಗಣಿಸಿ ಜಾರಕಿಹೊಳಿ ಅವರನ್ನು ಕಾಂಗ್ರೆಸ್ ಪಕ್ಷದ ವರಿಷ್ಠರು ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು ಹಾಗೂ ಅಪಾರ ಸಂಖ್ಯೆ ಕೈಕಾರ್ಯಕರ್ತರು ಉಪಸ್ಥಿತರಿದ್ದು, ಸತೀಶ್ ಜಾರಕಿಹೊಳಿ ಪರವಾಗಿ ಘೋಷಣೆ ಕೂಗಿದರು.

ಈ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ವಿನಯ ನಾವಲಗಟ್ಟಿ, ಹಲವು ಕಾಂಗ್ರೆಸ್ ಕಾರ್ಯಕರ್ತರು ಸೇರಿದಂತೆ ಇತರರು ಇದ್ದರು.



ಖಾನಾಪುರ: ಸ್ಥಳೀಯ ತಹಶೀಲ್ದಾರ್ ಕಾರ್ಯಾಲಯದಲ್ಲಿ ಕಳೆದ 38 ವರ್ಷಗಳಿಂದ ಗ್ರಾಮ ಸಹಾಯಕ ಹುದ್ದೆ ನಿರ್ವಹಿಸುತ್ತಿದ್ದ ಪಟ್ಟಣದ ಕಡೋಲ್ಕರ್ ಗಲ್ಲಿ ನಿವಾಸಿ ವೀರಭದ್ರ ಜವಳಿ ವಯೋನಿವೃತ್ತಿ ಹೊಂದಿದರು. ಈ ಹಿನ್ನೆಲೆಯಲ್ಲಿ ತಹಶೀಲ್ದಾರ್ ಕಚೇರಿ ಗ್ರೇಡ್-2 ತಹಶೀಲ್ದಾರ್ ಎಸ್.ಕೆ ತಂಗೊಳ್ಳಿ ವೀರಭದ್ರ ಅವರನ್ನು ಆತ್ಮೀಯವಾಗಿ ಸತ್ಕರಿಸಿ ಬೀಳ್ಕೊಟ್ಟರು. ಶಿರಸ್ತೇದಾರ ವಿ.ಆರ್.ಮ್ಯಾಗೇರಿ, ತಹಶೀಲ್ದಾರ್ ಕಚೇರಿ ಸಿಬ್ಬಂದಿ ಇದ್ದರು.

ಗೊಬ್ಬರದ ಬೇಡಿಕೆ ಜೊತೆಗೆ ಬೆಲೆ ಏರಿಕೆ ಆತಂಕದಲ್ಲಿ ಅನ್ನದಾತ

ಜಿಲ್ಲಾದ್ಯಂತ ಬಿತ್ತನೆ ಚುರುಕು

ದಿಗಂತ ವಿಶೇಷ

ಬಾಳಗೌಡ ಪಾಟೀಲ

ಬೆಳಗಾವಿ: ಜಿಲ್ಲೆಯಲ್ಲಿ ಕೆಲ ತಾಲೂಕುಗಳಲ್ಲಿ ಉತ್ತಮವಾದ ಮಳೆಯಾಗಿದ್ದು, ಪೂರ್ವ ಮುಂಗಾರು ಮಳೆ ಚೆನ್ನಾಗಿ ಆಗಿರುವ ಪರಿಣಾಮ ಆ ತಾಲೂಕುಗಳಲ್ಲಿ ಮುಂಗಾರು ಬಿತ್ತನೆ ಚುರುಕುಗೊಂಡಿದೆ. ಜಿಲ್ಲೆಯಾದ್ಯಂತ ಕೃಷಿ ಚಟುವಟಿಕೆಗಳು ಜೋರಾಗಿಯೇ ನಡೆಯುತ್ತಿವೆ. ಈ ಬಾರಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ 7,52,312 ಹೆಕ್ಟೇರ್ ಬಿತ್ತನೆ ಗುರಿ ಇಟ್ಟುಕೊಳ್ಳಲಾಗಿದ್ದು, ಇದಕ್ಕಾಗಿ 37,543 ಕ್ವಿಂಟಾಲ್ ವಿವಿಧ ಬೀಜಗಳು ಹಾಗೂ 30.05 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರದ ಬೇಡಿಕೆ ಇದೆ.

ಜಿಲ್ಲೆಯಲ್ಲಿ 86 ಮಿಮೀ ವಾಡಿಕೆ ಮಳೆಆಗಬೇಕಿತ್ತು. ಆದರೆ, 109 ಮಿಮೀ ಮಳೆ ಆಗಿದೆ. ಇದರಿಂದ ಶೇ.28ರಷ್ಟು ಅಧಿಕ ಮಳೆ ದಾಖಲಾಗಿದೆ. ಹಾಗೆಯೇ ಇನ್ನು ಕೆಲ ತಾಲೂಕುಗಳಿಗೆ ಮುಂಗಾರು ಬೆಳೆ ಕೊರತೆಯಿಂದ ರೈತರು ಮಳೆಗಾಗಿ ಕಾಯುತ್ತಿದ್ದಾರೆ.

ನಿಪ್ಪಾಣಿ, ಹುಕ್ಕೇರಿ, ಸವದತ್ತಿ ಸೇರಿ ಕೆಲವು ತಾಲೂಕುಗಳಲ್ಲಿ ಕಡಿಮೆ ಮಳೆ ಆಗಿದ್ದು, ಯರಗಟ್ಟಿ, ಬೈಲಹೊಂಗಲ, ಗೋಕಾಕ, ಕಾಗವಾಡ, ಬೆಳಗಾವಿ, ಖಾನಾಪುರ ಸೇರಿ ಮತ್ತಿತರ ತಾಲೂಕುಗಳಲ್ಲಿ ಪೂರ್ವ ಮುಂಗಾರು ಮಳೆ ಉತ್ತಮವಾಗಿದೆ. ಹೀಗಾಗಿ, ಈ ತಾಲೂಕುಗಳ ನೆಲ ಹಸಿ ಇರುವುದರಿಂದ ಬಿತ್ತನೆಯಲ್ಲಿ ರೈತರು ಬಿಜಿಯಾಗಿದ್ದಾರೆ. ಮಳೆ ಕಡಿಮೆ ಆಗಿರುವ ಕಡೆ ಟ್ರ್ಯಾಕ್ಟರ್ ಮತ್ತು ಎತ್ತುಗಳಿಂದ ಬಿತ್ತನೆಗೆ ಹೊಲಗಳನ್ನು ಹದ ಮಾಡಿಕೊಳ್ಳುತ್ತಿದ್ದಾರೆ.

ಈ ವರ್ಷ 30.05 ಲಕ್ಷ ಟನ್ ರಸಗೊಬ್ಬರಕ್ಕೆ ರೈತರಿಂದ ಬೇಡಿಕೆ ಬಂದಿದೆ. ಮೇ 30 ರವರೆಗೆ 11.41 ಲಕ್ಷ ಟನ್ ಮಾತ್ರ ಸಂಗ್ರಹವಾಗಿದೆ. ಇದರಲ್ಲಿ ಯೂರಿಯಾ, ಡಿಎಪಿ, ಕಾಂಪ್ಲೆಕ್ಸ್, ಪೊಟ್ಯಾಷ್, ಸೂಪರ್ ಫಾಸ್ಪೇಟ್ ಇತರ ಗೊಬ್ಬರಗಳೂ ಸೇರಿವೆ. ಸದ್ಯಕ್ಕೆ 18.64 ಲಕ್ಷ ಟನ್ ಕೊರತೆ ಕಾಡುತ್ತಿದೆ.



> ಮಳೆ ಆಗುತ್ತದೆ ಅಂತಾ ದೇವರ ಮೇಲೆ ಭಾರ ಹಾಕಿ ಭತ್ತ ಬಿತ್ತುತ್ತಿದ್ದೇವೆ. ಗೊಬ್ಬರ, ಕೂಲಿ ಆಳು ಹೆಚ್ಚಾಗಿದೆ. 1 ಗೊಬ್ಬರ ಚೀಲದ ಬೆಲೆ 2,250 ರೂ. ಆಗಿದೆ. ಮೊದಲು 1,700 ರೂ.ಗೆ ಸಿಗುತ್ತಿತ್ತು. 4 ಚೀಲ ಗೊಬ್ಬರ ಹಾಕುವಲ್ಲಿ 1 ಚೀಲ ಹಾಕುತ್ತಿದ್ದೇವೆ. ಗೊಬ್ಬರ ಸೇರಿ ದಿನನಿತ್ಯದ ವಸ್ತುಗಳ ಬೆಲೆ ಏರಿಕೆ ಮಾಡಿದ್ದಾರೆ. ಪೆಟ್ರೋಲ್, ಡೀಸೆಲ್ ದರ ಒಂದು ತಿಂಗಳಲ್ಲಿ ಮೂರು ಸಲ ದರ ಹೆಚ್ಚಿಗೆ ಮಾಡಿದ್ದಾರೆ ಹಿಂಗೆ ಆದರೆ ರೈತರು ಹೆಂಗೆ ಕೃಷಿ ಮಾಡುವುದು.
>
> ■ **ಮಹಾದೇವ ಕಾರೇಕರ್**, ಕೋಳಿಕೊಪ್ಪದ ರೈತ

> ಜಿಲ್ಲೆಯಲ್ಲಿ ಒಟ್ಟು 35 ರೈತ ಸಂಪರ್ಕ ಕೇಂದ್ರಗಳಿವೆ. ಇದರೊಂದಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನೂ ಬಳಸಿಕೊಳ್ಳುತ್ತಿದ್ದೇವೆ. ಒಟ್ಟು 172 ಕೇಂದ್ರಗಳಲ್ಲಿ ಅಗತ್ಯ ಬೀಜ ಹಾಗೂ ಗೊಬ್ಬರ ದಾಸ್ತಾನು ಮಾಡಿಕೊಳ್ಳಲಾಗಿದ್ದು, ಈಗಾಗಲೇ ಬೀಜ, ಗೊಬ್ಬರ ವಿತರಿಸಲು ಚಾಲನೆ ನೀಡಲಾಗಿದೆ. ಸದ್ಯ 1.25 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಸಂಗ್ರಹ ಇದೆ. ಎಂ.ಆರ್.ಪಿ. ದರದಂತೆ ಸಮರ್ಪಕ ಗೊಬ್ಬರ ವಿತರಿಸುವಂತೆ ಎಲ್ಲ ಡೀಲರ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.
>
> ■ **ಹೆಚ್. ಡಿ. ಕೋಳೇಕರ್**, ಕೃಷಿ ಇಲಾಖೆ ಜಂಟಿ ನಿರ್ದೇಶಕ

ಭಾರತಕ್ಕೆ ಚೀನಾದಿಂದ ರಸಗೊಬ್ಬರ ರಫ್ತು ಸ್ಥಗಿತಗೊಂಡಿದೆ. ಪಶ್ಚಿಮ ದೇಶಗಳಾದ ಒಮಾನ್, ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ), ಜೋರ್ಡಾನ್, ಇಸ್ರೇಲ್ ದೇಶಗಳನ್ನೇ ರಾಜ್ಯ ರಸಗೊಬ್ಬರಕ್ಕಾಗಿ ಅವಲಂಬಿಸಿದೆ. ಅಲ್ಲಿ ಯುದ್ಧದ ಪರಿಣಾಮ ಇಲ್ಲಿ ಸಮಸ್ಯೆ ಉಂಟಾಗಿದೆ.

ಒಟ್ಟಾರೆಯಾಗಿ ಜಿಲ್ಲಾದ್ಯಂತ ಮುಂಗಾರು ಮಳೆಗಾಗಿ ಕೆಲ ತಾಲೂಕಿನ ರೈತರು ದಾರಿ ಕಾಯುತ್ತಿದ್ದರೆ ಇನ್ನು ಕೆಲ ತಾಲೂಕುಗಳಲ್ಲಿ ಬಿತ್ತನೆಯ ಕಾರ್ಯದಲ್ಲಿ ಅನ್ನದಾತರು ಬಿಜಿಯಾಗಿದ್ದಾರೆ. ಏನೇ ಯಾಗಲಿ ಕಷ್ಟಪಟ್ಟು ಬೆಳೆದ ಬೆಳೆಗಳಿಗೆ ಉತ್ತಮವಾದ ಬೆಲೆ ಸಿಗಲಿ ಎನ್ನುವುದು ನಮ್ಮ ಆಸೆಯ.

ಸಚಿವ ಸತೀಶ ಜಾರಕಿಹೊಳಿ ಅಭಿಮಾನಿಗಳಿಂದ ವಿಶೇಷ ಪೂಜೆ

ಯಮಕನಮರಡಿ: ಸತೀಶ ಜಾರಕಿಹೊಳಿಗೆ ಕೆಪಿಸಿಸಿ ಅಧ್ಯಕ್ಷ ಹಾಗೂ ಡಿಸಿಎಂ ಸ್ಥಾನ ದೊರೆಯಲಿ ಎಂದು ದೇವಿಗೆ ಹರಕೆ ಮಾಡಿಕೊಂಡ ಮಹಾಲಿಂಗ ಸಿರುಗುಪ್ಪಿ ಬಡಕುಂದ್ರಿ ಹೊಳೆಯಮ್ಮ ದೇವಿಗೆ ಸತೀಶ ಜಾರಕಿಹೊಳಿ ಅಭಿಮಾನಿಗಳಿಂದ ವಿಶೇಷ ಪೂಜೆ ಸಲ್ಲಿಸಿದರು.

ರಾಜ್ಯದಲ್ಲಿ ಸಿದ್ದರಾಮಯ್ಯ ಬಿಟ್ರೇ ಅಹಿಂದ ನಾಯಕ ನಮ್ಮ ಸತೀಶ ಜಾರಕಿಹೊಳಿ ಮಾಹಾಲಿಂಗ ಶಿರಗುಪ್ಪಿ ಮುಂದಾಳತ್ವದಲ್ಲಿ ವಿಶೇಷ ಪೂಜೆ ರಾಜ್ಯ ರಾಜಕಾರಣದ ಬದಲಾದ ರಾಜಕೀಯದಲ್ಲಿ ಹೊಸ ಸರ್ಕಾರ ಅವರಂಭಗೊಂಡಿದೆ.

ಡಿಕೆ ಶಿವಕುಮಾರ್ ಸರ್ಕಾರ. ಈ ಸರ್ಕಾರದಲ್ಲಿ ಯಾರಿಗೆ ಡಿಸಿಎಂ ಸ್ಥಾನ ನೀಡಬೇಕು ಅನ್ನೋದು ಹೈ ಕಮಾಂಡ್ ದೊಡ್ಡ ತಲೆ ನೋವು ಆಗಿದ್ದೆ. ಆದ್ರೆ ಅಭಿಮಾನಿಗಳು ಮಾತ್ರ ನಮ್ಮ ನಾಯಕರಿಗೆ ಡಿಸಿಎಂ ಸ್ಥಾನ ನೀಡಬೇಕು ಅಂತ ಪಟ್ಟು ಹಿಡಿದಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಸ್ಥಾನ ಹಾಗೂ ಡಿಸಿಎಂ ಹುದ್ದೆ ಸಾಹುಕಾರ್ ಸತೀಶ ಜಾರಕಿಹೊಳಿ ಅವರಿಗೆ ದೊರೆಯಲಿ ಎಂದು ಅಭಿಮಾನಿಗಳು ವಿಶೇಷ ಪೂಜೆ ಸಲ್ಲಿಸಿದ್ದಾರೆ. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಹಿರಣ್ಯಕೇಶಿ ನದಿ ದಡದಲ್ಲಿರುವ ಹೊಳೆಮ್ಮಾ ದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಹುಣ್ಣಿಮೆ ದಿನದ ಅಂಗವಾಗಿ ಯಮಕನಮರಡಿ ಕ್ಷೇತ್ರದ ಅಭಿಮಾನಿಗಳು ಹೊಳೆಮ್ಮಾ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಶ್ರೀದೇವಿಯ ಆಶೀರ್ವಾದದಿಂದ ಸಾಹುಕಾರ್ ಸತೀಶ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಹಾಗೂ ಡಿಸಿಎಂ ಹುದ್ದೆ ದೊರೆಯಲಿ ಎಂಬುದು ನಮ್ಮ ಪ್ರಾರ್ಥನೆ. ಈ ಸಂದರ್ಭದಲ್ಲಿ ಕ್ಷೇತ್ರ ಹೊಳೆಮ್ಮ ದೇವಿ ಪ್ರಧಾನ ಅರ್ಚಕ ಎಚ್.ಎಲ್.ಪೂಜೇರಿ ಇದ್ದರು.

ಕಾಂಗ್ರೆಸ್ ಯುವ ಮುಖಂಡರು ಹಾಗೂ ಮನಗುತ್ತಿ ಗ್ರಾಪಂ ಸದಸ್ಯರಾದ ಮಹಾಲಿಂಗ ಸಿರುಗುಪ್ಪಿ, ಸದಾಶಿವ ಸಂಭಾಜಿ, ದುರ್ಗಪ್ಪ ಗೋಳ, ರಾಜಕೀಯ ಧುರೀಣರು ರಮೇಶ ಪಾಟೀಲ, ಶಿವಣ್ಣನವರ ನಾಗೇಶ ಹತ್ತರಿಕಿ, ಮಹಾದೇವ ಜಿಪಿ ಪಾಟೀಲ, ವಿನಾಯಕ ಗಡದಿ, ನಾಗೇಶ ಗಡದಿ ಹಾಗೂ ಸತೀಶ ಜಾರಕಿಹೊಳಿ ಅಭಿಮಾನಿ ಬಳಗದ ಗುರುಹಿರಿಯರು ಮುಖಂಡರು ಯುವಕರು ಉತ್ಸಾಹದಿಂದ ಪಾಲ್ಗೊಂಡಿದ್ದರು.



ಐಪಿಎಲ್: ನಗರಾದ್ಯಂತ ಭಾರಿ ಬಿಗಿ ಬಂದೋಬಸ್ತ್

ಬೆಳಗಾವಿ: ಐಪಿಎಲ್ ಫೈನಲ್ ಪಂದ್ಯ ಹಿನ್ನೆಲೆಯಲ್ಲಿ ಬೆಳಗಾವಿ ನಗರದ ಸಾರ್ವಜನಿಕ ಸ್ಥಳಗಳಲ್ಲಿ ಅನಗತ್ಯ ಗುಂಪುಗೂಡುವಿಕೆ, ಗಲಾಟೆ ಹಾಗೂ ಅಹಿತಕರ ಘಟನೆಗಳು ನಡೆಯದಂತೆ ನಗರದಾದ್ಯಂತ ವಿಶೇಷ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ ಆದೇಶಿಸಿದ್ದಾರೆ.



ಭಾನುವಾರ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಐಪಿಎಲ್ ಫೈನಲ್ ಬಳಿಕ ಅಭಿಮಾನಿಗಳು ಸಂಭ್ರಮಾಚರಣೆ ನಡೆಸುವ ನೆಪದಲ್ಲಿ ನಗರದ ಪ್ರಮುಖ ವೃತ್ತಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಸಾಧ್ಯತೆ ಇದೆ. ಚನ್ನಮ್ಮ ವೃತ್ತ, ಆರ್‌ಪಿಡಿ ವೃತ್ತ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಜನಸಂದಣಿ ಉಂಟಾಗುವ ನಿರೀಕ್ಷೆ ಇರುವುದರಿಂದ ಸಾರ್ವಜನಿಕ ಸುರಕ್ಷತೆ ದೃಷ್ಟಿಯಿಂದ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಕೆಲವರು ಮದ್ಯಪಾನ ಮಾಡಿ ವಾಹನ ಚಾಲನೆ ನಡೆಸುವುದು, ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವುದು ಹಾಗೂ ಗಲಾಟೆಗಳಿಗೆ ಕಾರಣವಾಗುವ ಘಟನೆಗಳು ಈ ಹಿಂದೆ ನಡೆದಿರುವ ಹಿನ್ನೆಲೆಯಲ್ಲಿ ಈ ಬಾರಿ ಮುನ್ನೆಚ್ಚರಿಕಾ ಕ್ರಮವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರೀತಿಯ ಸಂಭ್ರಮಾಚರಣೆಗೆ ಅನುಮತಿ ನೀಡಲಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಮದ್ಯಪಾನ ಮಾಡಿ ವಾಹನ ಚಲಾಯಿಸಿದರೆ ಕಠಿಣ ಕ್ರಮ: ನಗರದ ಪ್ರಮುಖ ರಸ್ತೆ, ವೃತ್ತಗಳು ಹಾಗೂ ಜನಸಂದಣಿ ಪ್ರದೇಶಗಳಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದ್ದು, ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ವಿರುದ್ಧ ತಪಾಸಣೆ ನಡೆಸಲಾಗುವುದು. ಮದ್ಯಪಾನ ಮಾಡಿ ಸಾರ್ವಜನಿಕ ಶಾಂತಿ ಭಂಗ ಮಾಡುವವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ನಗರದಲ್ಲಿ ಯಾವುದೇ ಅಹಿತಕರ ಘಟನೆಗಳು, ಹಲ್ಲೆ ಅಥವಾ ಚಾಕು ಇರಿತದಂತಹ ಪ್ರಕರಣಗಳು ನಡೆಯದಂತೆ ನಿಗಾವಹಿಸಲಾಗಿದೆ. ಅನುಮಾನಾಸ್ಪದ ಚಟುವಟಿಕೆಗಳ ಮೇಲೆ ನಿಗಾ ವಹಿಸಲಿದೆ ಎಂದರು.

ಪಂದ್ಯ ಫಲಿತಾಂಶದ ಹಿನ್ನೆಲೆಯಲ್ಲಿ ಅಭಿಮಾನಿಗಳು ಸಂಭ್ರಮಾಚರಣೆ ನಡೆಸುವ ವೇಳೆ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಾರದು. ಸಾರ್ವಜನಿಕ ರಸ್ತೆಯಲ್ಲಿ ಬೈಕ್‌ಗಳ ಮೇಲೆ ಅಪಾಯಕಾರಿ ಸ್ಟಂಟ್‌ಗಳು, ಅತೀವೇಗದ ವಾಹನ ಚಾಲನೆ, ಪಟಾಕಿ ಸಿಡಿಸುವುದು, ಗಲಾಟೆ ಮಾಡುವುದು ಅಥವಾ ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ಯಾವುದೇ ಕೃತ್ಯಗಳನ್ನು ಸಹಿಸಲಾಗುವುದಿಲ್ಲ ಎಂದು ಪೊಲೀಸ್ ಆಯುಕ್ತರು ಎಚ್ಚರಿಕೆ ನೀಡಿದ್ದಾರೆ.

ಸೇವಾ ನಿವೃತ್ತಿ: ಚಂದ್ರಕಾಂತ ಪಾಟೀಲ ಬೀಳ್ಕೊಡುಗೆ ಸಮಾರಂಭ

ಐಗಳಿ: ಇಲ್ಲಿನ ಬಸವೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಸತತ 26 ವರ್ಷ ಸೇವೆ ಸಲ್ಲಿಸಿ ಸೇವಾ ನಿವೃತ್ತಿ ಹೊಂದಿದ ಚಂದ್ರಕಾಂತ ಈಶ್ವರಗೌಡ ಪಾಟೀಲ ಇವರನ್ನು ಸತ್ಕರಿಸಿ ಬೀಳ್ಕೊಡಲಾಯಿತು.



ರವಿವಾರ ಇಲ್ಲಿನ ಸಂಘದ ಕಾರ್ಯಾಲಯದಲ್ಲಿ ನಡೆದ ಸರಳ ಸಮಾರಂಭದಲ್ಲಿ ಹಿರಿಯ ಸಹಕಾರಿ ದುರೀಣರಾದ ಸಿ.ಎಸ್.ನೇಮಗೌಡ, ಬಿ.ಎಸ್.ಬಿರಾದಾರ, ಶಿವಾನಂದ ಸಿಂದೂರ, ಜಗದೀಶ ತೆಲಸಂಗ, ಹಣಮಂತ ಮಿರ್ಜಿ, ಜಗದೀಶ ಕೊರಬು ಮಾತನಾಡಿ, ಸರಳತೆ, ತಾಳ್ಮೆ ಸ್ವಭಾವದಿಂದ ಸಂಘದ ಸರ್ವ ಸದಸ್ಯರ ಹಿತಕ್ಕಾಗಿ ಕಾರ್ಯದರ್ಶಿಯಾಗಿ ಕೆಲಸ ಮಾಡಿ ಎಲ್ಲರ ಪ್ರೀತಿ ವಿಶ್ವಾಸ ಗಳಿಸಿ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದ ಚಂದ್ರಕಾಂತ ಪಾಟೀಲ ಸೇವೆ ಸ್ಮರಣೆಯ ಎಂದು ಹೇಳಿದರು.

ಬಸವೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಿಂದ ಅಧ್ಯಕ್ಷ-ಉಪಾಧ್ಯಕ ಹಾಗು ನಿರ್ದೇಶಕ ಮತ್ತು ಸಿಬ್ಬಂದಿಯವರು ಫಲಪುಷ್ಪ ನೀಡಿ ಸತ್ಕರಿಸಿದರು.

ಈ ವೇಳೆ ಐಗಳಿ ಪ್ರಾಥಮಿಕ ಸಹಕಾರಿ ಸಂಘದ ಪದಾಧಿಕಾರಿಗಳು, ಗ್ರಾಮದ ಹಿರಿಯರು, ಸ್ನೇಹಿರನೇಕರು ಸತ್ಕರಿಸಿ ಅವರ ಸೇವಾ ನಿವೃತ್ತಿ ಜೀವನ ಸುಖಕರವಾಗಿರಲೆಂದು ಹಾರೈಸಿದರು.

ಸಂಘದ ಮುಂದಿನ ಕಾರ್ಯದರ್ಶಿಯನ್ನಾಗಿ ಸದಾಶಿವ ಪಡಸಲಗಿ ಯವರನ್ನು ಆಯ್ಕೆ ಮಾಡಿ ಸ್ವಾಗತಿಸಿಕೊಳ್ಳಲಾಯಿತು. ದುಂಡಪ್ಪ ದೊಡ್ಡನಿ ಸ್ವಾಗತಿಸಿ, ವಂದಿಸಿದರು.

ಸಂಘದ ಅಧ್ಯಕ್ಷ ಬಸವರಾಜ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕ ಅಪ್ಪಾಸಾಬ ತೆಲಸಂಗ, ಅಪ್ಪು ಮಾಳಿ, ಚೇತನ ನೇಮಗೌಡ, ಮಲ್ಲು ನೇಮಗೌಡ, ಶಿವಪ್ಪ ಸನದಿ, ಮಹಾಂತೇಶ ಬಳೋಳ್ಳಿ, ಮಾಜಿ ಅಧ್ಯಕ್ಷರಾದ ಎಂ.ಬಿ.ನೇಮಗೌಡ, ಆರ್.ಆರ್.ತೆಲಸಂಗ, ಎಂ.ಪಿ. ಮಾಕಾಣಿ, ಹಿರಿಯರಾದ ಎ.ಎಸ್.ಪಾಟೀಲ, ಮಲ್ಲು ಡಂಗಿ, ಸಿದ್ದಪ್ಪ ಬಳೋಳ್ಳಿ, ಪ್ರಕಾಶ ಪಾಟೀಲ, ಮಲ್ಲಪ್ಪ ಮುದಗೌಡ, ಪ್ರಲ್ಹಾದ ಪಾಟೀಲ, ಪ್ರದೀಪ ಸಾಠೆ ಸೇರಿದಂತೆ ಸಂಘದ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ಉಪಸ್ಥಿತರಿದ್ದರು.

ಮರಾಠಿ ಮಾಧ್ಯಮ, ಕೆಪಿಎಸ್ ಶಾಲೆಗಳ ಲೋಕಾರ್ಪಣೆ ಇಂದು

ಖಾನಾಪುರ: ಪಟ್ಟಣದ ಶಾಸಕರ ಮಾದರಿ ಹಿರಿಯ ಕನ್ನಡ ಪ್ರಾಥಮಿಕ ಶಾಲೆ ಮತ್ತು ತಾಲೂಕಿನ ಗುಂಜಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಮರಾಠಿ ಶಾಲೆಯಲ್ಲಿ ಇದೇ ಶೈಕ್ಷಣಿಕ ವರ್ಷದಿಂದ ಆರಂಭಗೊಳ್ಳುತ್ತಿರುವ ಕರ್ನಾಟಕ ಪಬ್ಲಿಕ್ ಶಾಲೆ ಲೋಕಾರ್ಪಣೆ ಮತ್ತು ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಮಾಧ್ಯಮದೊಂದಿಗೆ ಮರಾಠಿ ಮಾಧ್ಯಮದ ಉದ್ಘಾಟನಾ ಸಮಾರಂಭ ಸೋಮವಾರ ಜೂ.1ರಂದು ನೆರವೇರಲಿದೆ ಎಂದು ಬಿಇಒ ಪಿ.ರಾಮಪ್ಪ ವಿವರಿಸಿದರು.



ಪಟ್ಟಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಡಿ, ಶಾಸಕ ವಿಠ್ಠಲ ಹಲಗೇಕರ ಅವರು ಸೋಮವಾರ ಬೆಳಗ್ಗೆ 10ಕ್ಕೆ ಶಾಲೆ ಉದ್ಘಾಟಿಸಲಿದ್ದಾರೆ. ಬೆಳಗ್ಗೆ 11ಕ್ಕೆ ಸರ್ಕಾರಿ ಪ್ರೌಢಶಾಲೆಯಲ್ಲಿ ಮರಾಠಿ ಮಾಧ್ಯಮ ಬೋಧನೆಗೆ ಚಾಲನೆ ನೀಡಲಿದ್ದು, ಮಧ್ಯಾಹ್ನ 12ಕ್ಕೆ ಗುಂಜಿ ಕೆಪಿಎಸ್ ಶಾಲೆ ಲೋಕಾರ್ಪಣೆಗೊಳಿಸಲಿದ್ದಾರೆ. ಈ ಕಾರ್ಯಕ್ರಮಗಳಲ್ಲಿ ಡಿಡಿಪಿಐ ಲೀಲಾವತಿ ಹಿರೇಮಠ, ತಹಸೀಲ್ದಾರ್ ಕೋಮಾರ, ತಾಪಂ ಇಒ ರಮೇಶ ಮೇತ್ರಿ ಸೇರಿದಂತೆ ಇಲಾಖೆಯ ಅಧಿಕಾರಿಗಳು, ಶಿಕ್ಷಣ ತಜ್ಞರು, ಶಿಕ್ಷಕರು, ಪಾಲಕರು, ವಿದ್ಯಾರ್ಥಿಗಳು ಮತ್ತು ಶಾಲಾಭಿವೃದ್ಧಿ ಸಮಿತಿಯವರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮಂಜುನಾಥ ಹತ್ತಿ, ವಿನಾಯಕ ಜಕಾತಿ, ಶಂಕರ ಕಮ್ಮಾರ, ಬಸವರಾಜ ಜನಕಟ್ಟಿ ಹಾಗೂ ಇತರರು ಇದ್ದರು.

ನೀರಿನಿಂದ ಹೊರಗೆ ಬಂದ ಹುನ್ನೂರು ವಿಠ್ಠಲರಾಯ

ಯಮಕನಮರಡಿ: ಹುಕ್ಕೇರಿ ತಾಲೂಕಿನ ಹಿಡಕಲ್ ಜಲಾಶಯದಲಿ ಪ್ರತಿ ವರ್ಷದಂತೆ ಜಲಾವೃತಿ ಆಗುವ ಆರಾಧ್ಯದೇವ ವಿಠ್ಠಲ ರಾಯನು ಅಪಾರ ಭಕ್ತರಿಗೆ ದರ್ಶನ ನೀಡುವುದಕ್ಕಾಗಿ ಘಟಪ್ರಭಾ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದಿದ್ದ ವಿಠ್ಠಲ ರಾಯನು ಈ ವರ್ಷ ಭಕ್ತರ ದರ್ಶನಕ್ಕೆ ಸಿದ್ದನಾಗಿದ್ದಾನೆ. ಸುಮಾರು 40 ವರ್ಷಗಳ ಕಾಲ ಈ ದೇವಾಲಯವು ಹಿಡಕಲ್ ಜಲಾಶಯದ ಹಿನ್ನೀರಿನಲ್ಲಿ ಮುಳುಗುತ್ತದೆ ಆದರೆ ದೇವಾಲಯವು ನೀರಿನ ರಭಸದಿಂದ ಯಾವುದೇ ತರದ ಹಾನಿಯಾಗಿರುವುದಿಲ್ಲ ಇದಕ್ಕೆ ಸಾಕ್ಷಿಯಾಗಿರುವುದು ವಿಠಲ ರಾಯನ ಶಕ್ತಿಯೇ ಕಾರಣ ಎಂದು ಹೇಳಲು ತಪ್ಪಾಗಲಾರದು. ಇದಕ್ಕೆ ಸಾಕ್ಷಿ ಆದಂತಾಗಿದೆ ಪ್ರತಿ ವರ್ಷವೂ ದೇವಸ್ಥಾನವು ಮುಳುಗುತ್ತಿದ್ದಂತೆ ಅಲ್ಲಿಯ ಅಪಾರ ಭಕ್ತರು ನಿರಂತರ ಪೂಜೆ ಸಲ್ಲಿಸಿ ಕೊನೆಗೆ ಹಿನ್ನಿರು ಬರುತ್ತಿದ್ದಂತೆ ಕೊನೆಯ ಪೂಜೆಯನ್ನು ಭಕ್ತರು ಅಚಲವಾದ ಭಕ್ತಿಯಿಂದ ಪೂಜಿಸಿ ಗರ್ಭಗುಡಿಯಲ್ಲಿಯ ಶಿಲಾಮೂರ್ತಿಗೆ ಕಂಬಳಿಯನ್ನು ಹಾಕಿ ಬರುತ್ತಾರೆ. ನಂತರ ಸುಮಾರು ಆರು ಏಳು ತಿಂಗಳವರೆಗೆ ದೇವಸ್ಥಾನವು ನೀರಿನಲ್ಲಿ ಮುಳುಗಿದ್ದು ಇರುತ್ತದೆ.



ಶಿಲಾಮೂರ್ತಿ ಮೇಲೆ ಹಾಕಿರುವ ಕಂಬಳಿಯು ಸಹಿತ ಹಾಗೆ ಇರುತ್ತದೆ ಮತ್ತೆ ದೇವಸ್ಥಾನವು ಭಕ್ತರ ದರ್ಶನಕ್ಕೆ ನೀರಿನಿಂದ ಹೊರ ಬಂದಾಗ ಮೂರ್ತಿಗೆ ಏರಿಸಲಾದ ಕಂಬಳಿ ಶಾಶ್ವತವಾಗಿ ಉಳಿದಿರುವುದೊಂದು ಪವಾಡವಾಗಿದೆ.

ಹಿಡಕಲ್ ಜಲಾಶಯಕ್ಕೆ ನೀರು ತುಂಬುತ್ತಿದ್ದಂತೆ ಭಕ್ತರು ಕೊನೆಯ ಭಕ್ತಿ ನಮನ ಸಲ್ಲಿಸಿ ಬಿಟ್ಟಿರುತ್ತಾರೆ. ಮತ್ತೆ ಪ್ರತಿ ವರ್ಷದಂತೆ ನೀರಿನಿಂದ ಕಾಣಲ್ಪಡುತ್ತಿರುವ ಮಂದಿರದ ಪೂಜೆ ಸುಮಾರು ತಿಂಗಳವರೆಗೆ ನಡೆಯುತ್ತಾ ಬಂದಿರುವ ಒಂದು ಸಂಪ್ರದಾಯ ಆಗಿರುತ್ತದೆ. ವಿಠ್ಠಲರಾಯನ ದರ್ಶನಕ್ಕೆ ಬೆಳಗಾವಿ ಜಿಲ್ಲೆ ಸೇರಿದಂತೆ ಬೇರೆಬೇರೆ ಜಿಲ್ಲೆಗಳಿಂದ ಅಪಾರಭಕ್ತಾದಿಗಳು ತಮ್ಮ ಹರಿಕೆ ಮುಟ್ಟಿಸುತ್ತಾರೆ.

ವಿದೇಶದಲ್ಲೂ ಕೆಎಲ್‌ಇ ಪ್ರಸಿದ್ಧಿ: ಅಂದಾನಿ

ಗೋಕಾಕ: ಸಪ್ತರ್ಷಿಗಳಿಂದ ಸ್ಥಾಪಿತವಾದ ಕೆಎಲ್‌ಇ ಸಂಸ್ಥೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತ ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿದೆ ಎಂದು ನಗರದ ಕೆಎಲ್‌ಇ ಸಿಎಸ್ ಅಂಗಡಿ ಪಿಯು ಕಾಲೇಜ್ ಆಡಳಿತಾಧಿಕಾರಿ ಜಿ.ಎಂ.ಅಂದಾನಿ ಹೇಳಿದರು.

ಅವರು, ಇತ್ತೀಚಿಗೆ ನಗರದ ಕೆಎಲ್‌ಇ ಸಿಎಸ್.ಅಂಗಡಿ ಪದವಿ ಪೂರ್ವ ಮಹಾವಿದ್ಯಾಲಯದ ವಾಣಿಜ್ಯ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿಗಳ ಹಾಗೂ ಪಾಲಕರ ಅಭಿಶಿಕ್ಷಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ನಗರದಲ್ಲಿ ಕೆಎಲ್‌ಇ ನಿರ್ದೇಶಕ ಜಯಾನಂದ ಮುನವಳ್ಳಿಯವರ ನೇತೃತ್ವದಲ್ಲಿ ಆರೋಗ್ಯ ಹಾಗೂ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ವಾಣಿಜ್ಯ ವಿದ್ಯಾರ್ಥಿಗಳಿಗೆ ಜಗತ್ತಿನಾದ್ಯಂತ ಹೆಚ್ಚಿನ ಅವಕಾಶಗಳಿವೆ. ಕಠಿಣ ಪರಿಶ್ರಮದಿಂದ ಗುರುಗಳ ಮಾರ್ಗದರ್ಶನದಲ್ಲಿ ಪ್ರಯತ್ನಶೀಲರಾಗಿರಿ. ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರವಂತರಾಗಿ. ಸಂಸ್ಥೆಯ ಸೌಲಭ್ಯಗಳ ಸದುಪಯೋಗದಿಂದ ಸಾಧಕರಾಗಿ ತಮ್ಮ ಬದುಕನ್ನು ರೂಪಿಸಿಕೊಂಡು ತಂದೆ-ತಾಯಿ ಹಾಗೂ ಸಂಸ್ಥೆಗೆ ಕೀರ್ತಿತನ್ನಿರೆಂದು ಹಾರೈಸಿದರು. ಸ್ಥಳೀಯ ಆಡಳಿತ ಮಂಡಳಿ ಅಧ್ಯಕ್ಷ ಎಂಡಿ ಚುನಮರಿ ಉದ್ಘಾಟಿಸಿದರು.

ಈ ವೇಳೆ ಪ್ರಾಚಾರ್ಯ ಎಂ. ಎನ್. ಕೌಜಲಗಿ, ಅಮೃತ ಜಕ್ಕಲಿ, ಎಂ.ಎ.ಪಾಟೀಲ, ಪಾಲಕ ಸದಾಶಿವ ಗುದಗೋಳ, ಜ್ಯೋತಿ ಕೋಟ್ಯಾನ, ಲಕ್ಷ್ಮೀ ಕಬ್ಬೂರ ಇದ್ದರು.



ಕೃಷಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಿ: ವೆಂಕಟೇಶ್ವರ

ರಾಮದುರ್ಗ: ಕೃಷಿ ಲಾಭದಾಯಕವಾಗಲು ಆಧುನಿಕ ತಂತ್ರಜ್ಞಾನ ರೈತರಿಗೆ ತಲುಪುವಂತಾಗಲು ಕೃಷಿ ಪದವಿದಾರರು ಸತತ ಪ್ರಯತ್ನದ ಮೂಲಕ ಶ್ರಮಿಸುವ ಅಗತ್ಯವಿದೆ ರೈತರು ಕೂಡಾ ಹೊಸ ಹೊಸ ತಂತ್ರ ಜ್ಞಾನ ಅಳವಡಿಸಿಕೊಳ್ಳಲು ಮುಂದಾಗಬೇಕು ಎಂದು ತೊಂಡಿಕಟ್ಟಿಯ ಗಾಳೇಶ್ವರ ಮಠದ ಅಭಿನವ ವೆಂಕಟೇಶ್ವರ ಮಹಾರಾಜರು ಹೇಳಿದರು.

ಗೊಡಚಿಯಲ್ಲಿ ಇತ್ತಿಚಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ ಕಿತ್ತೂರ ರಾಣಿ ಚೆನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ ಅರಭಾವಿಯ ತೋಟಗಾರಿಕೆ ವಿದ್ಯಾರ್ಥಿಗಳ 2025-2026 ನೇ ಸಾಲಿನ ಗ್ರಾಮೀಣ ತೋಟಗಾರಿಕೆ ಕಾರ್ಯಾನುಭವ ಶಿಬಿರದ ಸಮಾರೋಪ ಹಾಗೂ ತೋಟಗಾರಿಕಾ ವಸ್ತು ಪ್ರದರ್ಶನ (ನೇಗಿಲ ನೆರಳು) ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಕೃಷಿ ಪದವಿ ಪಡೆದ ನೂತನ ವಿಜ್ಞಾನಿಗಳು ಪದವಿ ಸದುಪಯೋಗವಾಗಲು ಸರ್ಕಾರಿ ನೌಕರಿ ಅವಲಂಭಿಸದೆ ಕೃಷಿಯಲ್ಲಿ ಸಂಶೋಧನೆ ಮಾಡುವ ಮುಖಾಂತರ ರೈತರಿಗೆ ನೆರವಾಗಬೇಕು. ರೈತರು ಭೂಮಿಗೆ ರಾಸಾಯನಿಕ ಗೊಬ್ಬರ ಬಳಸದೆ ಸಾವಯವ ಗೊಬ್ಬರ ಬಳಕೆ ಮಾಡುವ ಮೂಲಕ ಭೂಮಿಗೆ ವಿಷ ನೀಡುವದನ್ನು ಬಿಡಬೇಕೆಂದು ಸಲಹೆ ನೀಡಿದರು.



ತೋಟಗಾರಿಕಾ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕ ತಮ್ಮಯ್ಯ ಎನ್. ಮಾತನಾಡಿ, ಕೃಷಿ ಪದವಿದಾರರು ಆಧುನಿಕ ಸಂಶೋಧನೆ ಕೈಗೊಂಡು ದೇಶದ ಮೆಚ್ಚುವ ಕೃಷಿ ವಿಜ್ಞಾನಿಗಳಾಬೇಕೆಂದು ಹೇಳಿದರು.

ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕಾ ಮಹಾವಿದ್ಯಾಲಯದ ಡೀನ್ ಡಾ.ಆನಂದ ಬ.ಮಾಸ್ತಿಹೊಳಿ ಅಧ್ಯಕ್ಷತೆ ವಹಿಸಿಸರು. ಶ್ರೀನಾಥ ಚಿಮ್ಮಲಗಿ, ಪ್ರಕಾಶ ಮುಗಳ ಕೋಡ ಮತ್ತು ಮಂಜುನಾಥ ದೇವರಡ್ಡಿ ಉಪಸ್ಥಿತರಿದ್ದರು.

ಈ ವೇಳೆ ತೋಟಗಾರಿಕೆ ವಸ್ತು ಪ್ರದರ್ಶನ, ನೂತನ ಕೃಷಿ ತಂತ್ರಜ್ಞಾನಗಳ ಪರಿಚಯ , ಸಮಗ್ರ ಕೀಟ ಹಾಗೂ ರೋಗ ನಿರ್ವಹಣಾ ಕ್ರಮಗಳು ಕುರಿತು ಪ್ರದರ್ಶಿಸಿಸಲಾಯಿತು. ಶಂಕರಗೌಡ ಮತ್ತು ಸುನಿತಾ ನಿರೂಪಿಸಿದರು. ಜ್ಯೋತಿ ಸ್ವಾಗತಿಸಿದರು. ಇಮ್ರಾನ್ ವಂದಿಸಿದರು.

ಕಿರುಸುದ್ದಿ

ಡಿಸಿಎಂ ಸ್ಥಾನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್‌ನ್ನು ಆಯ್ಕೆ ಮಾಡಿ: ಶ್ರೀಗಳು

ಹಿರೇಬಾಗೇವಾಡಿ: ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಲಿಂಗಾಯತರಿಗೂ ಅಗ್ರ ಸ್ಥಾನಮಾನ ನೀಡಬೇಕೆಂದು ಆಗ್ರಹಿಸಿರುವ ಸಮೀಪದ ಅರಳಿ ಕಟ್ಟಿ ತೋಂಟದಾರ್ಯ ವಿರಕ್ತಮಠದ ಶಿವಮೂರ್ತಿ ಸ್ವಾಮಿಗಳು ಉಪಮುಖ್ಯಮಂತ್ರಿ ಸ್ಥಾನಕ್ಕೆ (ಡಿಸಿಎಂ) ಬೆಳಗಾವಿ ಗ್ರಾಮೀಣ ಕ್ಷೇತ್ರದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಆಯ್ಕೆ ಮಾಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಲಕ್ಷ್ಮಿ ಹೆಬ್ಬಾಳ್ಕರ್ ಈಗಾಗಲೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆಯಾಗಿ ರಾಜ್ಯದ ಜನಪರ ನಾಯಕಿಯಾಗಿ ಉತ್ತಮ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದು ಅವರು ಉಪಮುಖ್ಯಮಂತ್ರಿ ಸ್ಥಾನಕ್ಕೆ ಯೋಗ್ಯ ಅಭ್ಯರ್ಥಿ ಎಂದಿದ್ದಾರೆ.




ರೈತರಿಂದ ಅರ್ಜಿ ಆಹ್ವಾನ

ಬೆಳಗಾವಿ: ತೋಟಗಾರಿಕೆ ಇಲಾಖೆ ವತಿಯಿಂದ 2026–27 ನೇ ಸಾಲಿನ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ತಾಳೆ–ಬೆಳೆ ಯೋಜನೆಯಡಿ ತಾಳೆ ಬೆಳೆ ಪ್ರದೇಶ ವಿಸ್ತರಣೆ ಮತ್ತು ವಿವಿಧ ಘಟಕಗಳಿಗೆ ಸಹಾಯ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ರೈತರು ಅರ್ಜಿ ಸಲ್ಲಿಸಲು ಮತ್ತು ಹೆಚ್ಚಿನ ಮಾಹಿತಿಗಾಗಿ ಜಿಲ್ಲೆಯ ತಾಳೆ ಬೆಳೆಯ ನೂಡಲ್ ಅಧಿಕಾರಿ ಪವನ ಬೂದಿಹಾಳ (7022605430) ಸ.ತೋ.ನಿ (ತಾಳೆ ಬೆಳೆ) ಹಾಗೂ ಆಯಾ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. ಹಾಗೂ ಸರ್ಕಾರದಿಂದ ಅನುಮೋದಿತ 3F Oil Palm Pvt. Ltd ಕಂಪನಿಯ ಪ್ರತಿನಿಧಿಯ (ಕೃಷ್ಣಾ 9916907678) ಹಾಗೂ ತಾಳೆ ಬೆಳೆ ಪ್ರಗತಿ ಪರ ರೈತ ಸುರೇಶ ಹುಬ್ಬಳ್ಳಿ (8095295901), ಹೋಬಳಿ, ತಾಲೂಕು ಮಟ್ಟದ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸುವುದು ಎಂದು ತೋಟಗಾರಿಕೆ ಜಂಟಿ ನಿರ್ದೇಶಕರು (ಜಿಪಂ) ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಬನಶಂಕರಿ ದೇವಿಗೆ ಮಹಾಪೂಜೆ



ಯಮಕನಮರಡಿ: ಸ್ಥಳೀಯ ಬನಶಂಕರಿ ಹಾಗೂ ಆನಂದಪುರ ಬನಶಂಕರಿ ದೇವಸ್ಥಾನಗಳಲ್ಲಿ ಅಧಿಕಮಾಸದ ಹುಣ್ಣಿಮೆ ಅಂಗವಾಗಿ ಅಲಂಕಾರ ಮಹಾಪೂಜೆ ನೆರವೇರಿಸಲಾಗಿತ್ತು. ಈ ಸಂದರ್ಭದಲ್ಲಿ ಗ್ರಾಮಸ್ಥರು ದೇವಾಂಗ ಸಮಾಜದ ಕುಲಬಾಂಧವರು ಉಪಸ್ಥಿತರಿದ್ದು ಶ್ರೀದೇವಿಯ ಕೃಪೆಗೆ ಪಾತ್ರರಾದರು.

ಈಶ್ವರ ಖಂಡ್ರೆಗೆ ಡಿಸಿಎಂ ಸ್ಥಾನ ನೀಡಲು ಒತ್ತಾಯ

ಹಾವೇರಿ: ಸಮುದಾಯದ ಅಭಿವೃದ್ಧಿಗೆ ನಾಲ್ಕು ದಶಕಗಳ ಕಾಲ ದುಡಿದ ಸಮಾಜದ ಪ್ರಮುಖ ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ ಅವರಿಗೆ ರಾಜ್ಯದ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಕಾರ್ಯನಿರ್ವಾಹಕ ಸಮಿತಿ ಸದಸ್ಯ ಶಂಭು ಚಕ್ಕಡಿ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರೈತ, ಕಾರ್ಮಿಕ, ಸಣ್ಣ ವ್ಯಾಪಾರಿಗಳ ಪರ ನಿರಂತರವಾಗಿ ನಿಂತಿರುವ ಖಂಡ್ರೆ ಅವರಿಗೆ ಉಪಮುಖ್ಯಮಂತ್ರಿ ಜವಾಬ್ದಾರಿ ನೀಡಿದರೆ ಉತ್ತರ ಕರ್ನಾಟಕದ ಹಾಗೂ ದುರ್ಬಲ ವರ್ಗಗಳ ಧ್ವನಿ ಸರ್ಕಾರದಲ್ಲಿ ಮೊಳಗುತ್ತದೆ. ಪ್ರಾದೇಶಿಕ ಸಮತೋಲನದ ದೃಷ್ಟಿಯಿಂದ ಎಐಸಿಸಿ ಹೈಕಮಾಂಡ್, ಮತ್ತು ಸಿಎಲ್‌ಪಿ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ. ಶಿವಕುಮಾರ್ ಅವರು ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.



ಬೆಳಗಾವಿ: ಇಲ್ಲಿನ ಚನ್ನಮ್ಮ ವೃತ್ತದ ಬಳಿ ಇರುವ ಗಣಪತಿ ದೇಗುಲದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ನೇತೃತ್ವದಲ್ಲಿ ಅನೇಕ ಕಾರ್ಯಕರ್ತರು ಸೇರಿ ಭಾನುವಾರ ಗಣಪತಿ ದೇವರಿಗೆ ಸಚಿವ ಸತೀಶ ಜಾರಕಿಹೊಳಿ ಹೆಸರಿನಲ್ಲಿ 100 ತೆಂಗಿನಕಾಯಿ ಒಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ವಿನಯ ನಾವಲಗಟ್ಟಿ, ಹಲವು ಕಾಂಗ್ರೆಸ್ ಕಾರ್ಯಕರ್ತರು ಸೇರಿದಂತೆ ಇತರರು ಇದ್ದರು.

ಬಿಜೆಪಿ ಯುವ ಮೋರ್ಚಾದಿಂದ ದೇವಸ್ಥಾನ ಸ್ವಚ್ಛತಾ ಕಾರ್ಯ

ಬ್ಯಾಡಗಿ: ತಾಲೂಕಿನ ಕಜ್ಜರಿ ಗ್ರಾಮದಲ್ಲಿರುವ ಶ್ರೀ ಕಲ್ಮೇಶ್ವರ ದೇವಸ್ಥಾನವನ್ನು ಹಾವೇರಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಮತ್ತು ಬ್ಯಾಡಗಿ ತಾಲೂಕಾ ಬಿಜೆಪಿ ಯುವ ಮೋರ್ಚಾ ವತಿಯಿಂದ ದೇವಸ್ಥಾನದ ಒಳಗಡೆ ಮತ್ತು ಹೊರಗಡೆ ಸ್ವಚ್ಛ ಮಾಡಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರಾದ ವಿರೂಪಾಕ್ಷಪ್ಪ ಬಳ್ಳಾರಿ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿರಣಕುಮಾರ ಕೋಣನವರ, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ವಿವೇಕ್ ರಾಮಗೇರಿ, ಉಪಾಧ್ಯಕ್ಷರುಗಳಾದ ಸತೀಶ್ ಗೌಳಿ, ನಿಜಲಿಂಗಪ್ಪ ಬಿ.ವೈ., ವಿನಯ್ ತಳಗೇರಿ, ಜಿಲ್ಲಾ ಕಾರ್ಯದರ್ಶಿ ಮನೋಜ್ ಜಾಧವ, ಶಂಭು ಪಾಟೀಲ್, ನಿಖಿಲ್ ಡೊಗ್ಗಳ್ಳಿ, ಜಿಲ್ಲಾ ಕಾರ್ಯಕಾರಿ ಸದಸ್ಯರಾದ ಹನುಮಂತಗೌಡ ಪಾಟೀಲ, ಜಿಲ್ಲಾ ಖಜಾಂಚಿಗಳಾದ ವಿನಯಕುಮಾರ್ ತಹಸೀಲ್ದಾರ, ಜಿಲ್ಲಾ ಸಾಮಾಜಿಕ ಜಾಲತಾಣ ಸಂಚಾಲಕರಾದ ಮೇಘರಾಜ ಹರಿಜನ, ಮೇಘನಾಥ ಯಣ್ಣಿಯವರ, ಬ್ಯಾಡಗಿ ಮಂಡಲ ಯುವ ಮೋರ್ಚಾ ಅಧ್ಯಕ್ಷರಾದ ವರುಣ ಮಲ್ಲಿಗಾರ, ಮಾರುತಿ ಪಾಸಿ, ಮುತ್ತಣ್ಣ ಮುಷ್ಠಿ ಮತ್ತಿತರರು ಉಪಸ್ಥಿತರಿದ್ದರು.



ಕುಮಟಾ: ಹೊಳೆಗದ್ದೆ ನಾಗಮ್ಮ ಪ್ರಕಾಶನದ ಆಶ್ರಯದಲ್ಲಿ ಮನೆಯಂಗಳದಲ್ಲಿ ನಡೆದ ಎಸ್‌ಎಸ್‌ಎಲ್‌ಸಿಯಲ್ಲಿ ವಿಶೇಷ ಸಾಧನೆ ಮಾಡಿದ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.

ವಿಶ್ವ ತಂಬಾಕು ವಿರೋಧಿ ದಿನ | ಹರೀಶ ಹೇಳಿಕೆ

ದುಶ್ಚಟಗಳಿಗೆ ಬಲಿ ಆಗದಿರಿ

ರಾಯಬಾಗ: ಆಡು ಮುಟ್ಟದ ಸೊಪ್ಪಿಲ್ಲ ಧರ್ಮಸ್ಥಳ ಸಂಸ್ಥೆ ಪ್ರವೇಶಿಸದ ಕ್ಷೇತ್ರವಿಲ್ಲ. ಸಮಾಜದ ಪ್ರತಿಯೊಂದು ಕ್ಷೇತ್ರಕ್ಕೂ ಧರ್ಮಸ್ಥಳ ಸಂಸ್ಥೆ ತನ್ನದೇ ಆದಂತಹ ಅಪಾರ ಕೊಡುಗೆ ನೀಡುತ್ತಾ ಬಂದಿದೆ. ಇಂದಿನ ಯುವ ಪೀಳಿಗೆ ದುಶ್ಚಟಗಳಿಗೆ ಬಲಿಯಾಗಿ ತಮ್ಮ ಉಜ್ವಲವಾದ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿರುವುದು ವಿಷಾದನೀಯ ಸಂಗತಿ ಎಂದು ತಾಲೂಕು ಯೋಜನಾಧಿಕಾರಿ ಹರೀಶ ಅವರು ಹೇಳಿದರು.

ಇತ್ತೀಚಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿಸಿ ಟ್ರಸ್ಟ್ (ರಿ) ರಾಯಬಾಗ ವತಿಯಿಂದ ತಾಲೂಕಿನ ನಿಡಗುಂದಿ ಗ್ರಾಮದಲ್ಲಿ ವಿಶ್ವ ತಂಬಾಕು ವಿರೋಧಿ ದಿನದ ಅಂಗವಾಗಿ ತಂಬಾಕು ವಿರೋಧ ಕಾರ್ಯಕ್ರಮದಲ್ಲಿ ಮಾತನಾಡಿ, ಇಂದಿನ ಯುವಜನತೆ ದುಶ್ಚಟಗಳಿಗೆ ದಾಸರಾಗಿ ತಮ್ಮ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ನಿಮ್ಮ ಮನಸ್ಸು ನಿಯಂತ್ರಣದಲ್ಲಿ ಇಟ್ಟುಕೊಂಡು ಧೂಮಪಾನ, ಮದ್ಯಪಾನಗಳಂತಹ ಚಟಗಳಿಂದು ದೂರವಿದ್ದು, ಭವಿಷ್ಯದಲ್ಲಿ ಉತ್ತಮ ಜೀವನ ಕಟ್ಟಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಜನ ಜಾಗೃತಿ ವೇದಿಕೆ ಉಪಾಧ್ಯಕ್ಷ ಜಿನೇಂದ್ರ.ಜೆ. ಖೇಮಲಾಪುರೆ, ಗ್ರಾಪಂ ಅಧ್ಯಕ್ಷೆ ಸುಶೀಲಾ ಐಹೊಳೆ, ಸಂಸ್ಥೆ ತಾಲೂಕು ಯೋಜನಾಧಿಕಾರಿ ಹರೀಶ ಅವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಬಸವರಾಜ ಕೋಳಿ ಮಾತನಾಡಿ, ಇಂದಿನ ಯುವ ಪೀಳಿಗೆ ತಾನು ತಪ್ಪು ಮಾಡುತ್ತೇನೆ ಎಂದು ತಿಳಿದಿದ್ದರೂ ಮಾದಕ ವಸ್ತುವಿನ ವ್ಯಾಮೋಹಕ್ಕೆ ಒಳಗಾಗಿ ಹಂತ ಹಂತವಾಗಿ ತನ್ನನ್ನು ತಾನೇ ನಾಶ ಮಾಡಿಕೊಳ್ಳುತ್ತಿದ್ದಾನೆ. ಆದ್ದರಿಂದ ದುಶ್ಚಟಗಳಿಂದ ದೂರವಾಗಿ ಗೌರವದಿಂದ ಜೀವನ ನಡೆಸಿ ಎಂದು ಹೇಳಿದರು.

ಜಿಲ್ಲಾ ಜನಜಾಗೃತಿ ಉಪಾಧ್ಯಕ್ಷ ಜಿನೇಂದ್ರ ಖೇಮಲಾಪುರೆ ಮಾತನಾಡಿ, ಧರ್ಮಸ್ಥಳ ಸಂಸ್ಥೆಯ ಒಟ್ಟಿಗೆ ಪೂಜ್ಯರ ಕಲ್ಪನೆಯಲ್ಲಿ ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳು ನಮ್ಮೂರಿಗೆ ಬಂದಿರುವುದು ನಮ್ಮೆಲ್ಲರ ಸೌಭಾಗ್ಯ. ಪೂಜ್ಯರ ದೂರ ದೃಷ್ಟಿ ಬೆಲೆ ಕಟ್ಟಲಾಗದ ಆಸ್ತಿ ಎಂದರು.

ಈ ವೇಳೆ ಒಕ್ಕೂಟದ ಅಧ್ಯಕ್ಷರು, ವಲಯದ ಮೇಲ್ವಿಚಾರಕರು ಸಾವಿತ್ರಿ ಜಾಡರ, ಸಂಸ್ಥೆ ತಾಲೂಕು ಕೃಷಿ ಅಧಿಕಾರಿ ಚನ್ನಪ್ಪ, ಸ್ಥಳೀಯ ಸೇವಾ ಪ್ರತಿನಿಧಿಗಳು, ಸ್ವಸಹಾಯ ಸಂಘದ ಪಾಲುದಾರ, ಸದಸ್ಯರು ಭಾಗವಹಿಸಿದ್ದರು.



> ಧರ್ಮಸ್ಥಳ ಸಂಸ್ಥೆಯ ಒಟ್ಟಿಗೆ ಪೂಜ್ಯರ ಕಲ್ಪನೆಯಲ್ಲಿ ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳು ನಮ್ಮೂರಿಗೆ ಬಂದಿರುವುದು ನಮ್ಮೆಲ್ಲರ ಸೌಭಾಗ್ಯ. ಪೂಜ್ಯರ ದೂರ ದೃಷ್ಟಿ ಬೆಲೆ ಕಟ್ಟಲಾಗದ ಆಸ್ತಿ.
> ■ ಜಿನೇಂದ್ರ ಖೇಮಲಾಪುರೆ, ಜಿಲ್ಲಾ ಜನಜಾಗೃತಿ ಉಪಾಧ್ಯಕ್ಷ

> ಇಂದಿನ ಯುವ ಪೀಳಿಗೆ ತಾನು ತಪ್ಪು ಮಾಡುತ್ತೇನೆ ಎಂದು ತಿಳಿದಿದ್ದರೂ ಮಾದಕ ವಸ್ತುವಿನ ವ್ಯಾಮೋಹಕ್ಕೆ ಒಳಗಾಗಿ ಹಂತ ಹಂತವಾಗಿ ತನ್ನನ್ನು ತಾನೇ ನಾಶ ಮಾಡಿಕೊಳ್ಳುತ್ತಿದ್ದಾನೆ.
> ■ ಬಸವರಾಜ ಕೋಳಿ

ಜಾನಪದ ಸಾಹಿತ್ಯ ಜನರ ಜೀವನಾಡಿ

ಮೂಡಲಗಿ: ಜಾನಪದ ಸಾಹಿತ್ಯವು ಒಂದು ನಾಡಿನ ಜನರ ಜೀವನಾಡಿ, ಸಂಸ್ಕೃತಿ ಕನ್ನಡಿ. ಲಿಖಿತ ರೂಪದಲ್ಲಿಲ್ಲದಿದ್ದರೂ ಬಾಯಿಂದ ಬಾಯಿಗೆ ತಲೆಮಾರುಗಳಿಂದ ಹರಿದು ಬಂದಿರುವ ಈ ಸಾಹಿತ್ಯವು ನಮ್ಮ ಮಣ್ಣಿನ ಅಪ್ಪಟ ಸೌರಭವನ್ನು ಉಳಿಸಿಕೊಂಡಿದೆ. ಆದರೆ ಇಂದು ಕಾಲ ಉರುಳಿದಂತೆ ಜಾನಪದ ಸಾಹಿತ್ಯದ ಸ್ವರೂಪ, ಪ್ರಾಮುಖ್ಯತೆ ಮತ್ತು ಅಸ್ತಿತ್ವದಲ್ಲಿ ಭಾರಿ ಬದಲಾವಣೆಗಳಾಗಿವೆ ಎಂದು ಸಾಹಿತಿ ರಮೇಶ ಬಿರಾದಾರ ಹೇಳಿದರು

ಕನ್ನಡ ಸಾಹಿತ್ಯ ಪರಿಷತ್ ಮತ್ತು ಜ್ಞಾನದೀಪ್ತಿ ಫೌಂಡೇಶನ್ಸ್ ಮೂಡಲಗಿ ಇವುಗಳ ಸಹಯೋಗದಲ್ಲಿ 51ನೇ ಬೆಳದಿಂಗಳ ಸಾಹಿತ್ಯ ಚಿಂತನ ಮಂಥನ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಆಗಮಿಸಿ ಮಾತನಾಡಿದರು.

ನಿವೃತ್ತ ಪ್ರಾಚಾರ್ಯ ಎಸ್.ಡಿ.ತಳವಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಳೆಯ ದಿನಗಳಲ್ಲಿ ಜಾನಪದ ಸಾಹಿತ್ಯ ಎಂಬುದು ಕೇವಲ ಮನರಂಜನೆಯಾಗಿರಲಿಲ್ಲ, ಅದು ಜನರ ದೈನಂದಿನ ಜೀವನದ ಉಸಿರಾಗಿತ್ತು. ಜಾನಪದ ಸಾಹಿತ್ಯವು ಅಂದು ಹಳೆಯ ಜನರ ಅಜ್ಞಾತ ಸೃಷ್ಟಿಯಾಗಿ ಅವರ ಸುಖ ದುಃಖಗಳ ಒಡನಾಡಿಯಾಗಿತ್ತು .ಇಂದು ಅದು ನಮ್ಮ ಅಸ್ಮಿತೆ ನೆನಪಿಸುವ ಐತಿಹಾಸಿಕ ಮತ್ತು ಸಂಸ್ಕೃತಿಕ ಆಸ್ತಿಯಾಗಿದೆ. ನಮ್ಮ ಸಾಂಸ್ಕೃತಿಕ ಬೇರುಗಳನ್ನು ಗಟ್ಟಿಯಾಗಿಟ್ಟುಕೊಳ್ಳಲು ಜಾನಪದ ಸಾಹಿತ್ಯ ಕೇವಲ ವೇದಿಕೆಗಳಿಗೆ ಸೀಮಿತಗೊಳಿಸದೆ ನಮ್ಮ ಮನಸ್ಸುಗಳಿಗೆ ಜೀವಂತವಾಗಿಡುವ ಕೆಲಸಗಳನ್ನು ಮಾಡುತ್ತಿರುವ ಕನ್ನಡ ಸಾಹಿತ್ಯ ಪರಿಷತ್‌ನ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಈ ವೇಳೆ ಕಸಾಪ ಅಧ್ಯಕ್ಷ ಡಾ.ಸಂಜಯ ಶಿಂದಿಹಟ್ಟಿ , ಮಕ್ಕಳ ಸಾಹಿತಿ, ನಿವೃತ್ತ ಪ್ರಾಚಾರ್ಯ ಸಂಗಮೇಶ ಗುಜಗೊಂಡ, ಉಪನ್ಯಾಸಕ ಸುರೇಶ ಲಂಕೆಪ್ಪನವರ, ಬಿ.ವೈ.ಶಿವಾಪುರ, ಮಹಾದೇವ ಜಿಡ್ಡಿಮನಿ, ಬಿ.ಎಂ.ನಂದಿ, ಎ.ಜೆ.ಶರಣಾರ್ಥಿ, ಶಿವರಾಜ ಕಾಂಬಳೆ, ಅಯ್ಯನಗೌಡರ, ಶೈಲಜಾ ಬಡಿಗೇರ, ಗೋದಾವರಿ ದೇಶಪಾಂಡೆ, ಬಾಲೇಶ ತುಬಾಕಿ ಉಪಸ್ಥಿತರಿದ್ದರು.

ಶಿಕ್ಷಕ ಆರ್.ಎಂ.ಕಾಂಬಳೆ ಪ್ರಾರ್ಥನೆಯನ್ನು, ಕಸಾಪ ಗೌರವ ಕಾರ್ಯದರ್ಶಿ ಬಿ ಆರ್ ತರಕಾರ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.



ವಿಠ್ಠಲರಾವ್ ಕಾರ್ಯ ಶ್ಲಾಘನೀಯ: ಪ್ರಕಾಶ

ಸಂಕೇಶ್ವರ: ಹಗಲಿರುಳು ದುಡಿಯುವ ಪತ್ರಕರ್ತರ ಕಾರ್ಯವು ಸೈನಿಕರ ಕಾರ್ಯಕ್ಕೆ ಸಮಾನವಾದದ್ದು, ಪತ್ರಕರ್ತರ ಅವಿಶ್ರಾಂತ ಕೆಲಸಕ್ಕೆ ಸಮಾನವಾದ ಪ್ರತಿಫಲ ಅವರಿಗೆ ದೊರೆಯಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ ಹುಕ್ಕೇರಿ ತಾಲೂಕ ಘಟಕದ ಅಧ್ಯಕ್ಷ ಪ್ರಕಾಶ ಅವಲಕ್ಕಿ ಹೇಳಿದರು.

ಪಟ್ಟಣದಲ್ಲಿ ಹಿರಿಯ ಪತ್ರಕರ್ತ ದಿವಂಗತ ವಿಠ್ಠಲರಾವ್ ಪಾಟೀಲ ಅವರ 7ನೇ ಪುಣ್ಯಸ್ಮರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಪತ್ರಕರ್ತ ವಿಠ್ಠಲರಾವ್ ಪಾಟೀಲ ಅವರು ಕೈಗಾರಿಕಾ ಘಟಕ ನಡೆಸುತ್ತಲೇ ಪತ್ರಿಕಾ ರಂಗಕ್ಕೂ ಕಾಲಿಟ್ಟು 25 ವರ್ಷಗಳ ಕಾಲ ವಿಶೇಷ ವರದಿಗಳನ್ನು ಬರೆಯುವ ಮೂಲಕ ಸಮಾಜ ಹಾಗೂ ಸರ್ಕಾರವನ್ನು ಎಚ್ಚರಿಸುವ ಕಾರ್ಯವನ್ನು ಮಾಡಿದರು. ಅವರ ಬರವಣಿಗೆ ಇಂದಿನ ಕಾಲದ ಯುವ ಪತ್ರಕರ್ತರಿಗೆ ಮಾದರಿಯಾಗಿದೆ. ಗಡಿ ಭಾಗದಲ್ಲಿ ಪತ್ರಕರ್ತರು ಕನ್ನಡ ಮತ್ತು ಮರಾಠಿ ಭಾಷೆಗಳ ನಡುವೆ ಸೇತುವೆಯಂತೆ ಕೆಲಸ ಮಾಡುತಿದ್ದಾರೆ. ಅವರ ಕಾರ್ಯ ಶ್ಲಾಘನೀಯ ಎಂದರು.

ಇದೇ ಸಂದರ್ಭದಲ್ಲಿ ಈ ಭಾಗದ ಪ್ರಥಮ ವಿಮಾನ ಪೈಲೆಟ್ ಗೌರವ ಭರಮಾಜಿ ಪಾಟೀಲ ಹಾಗೂ ಸ್ಥಳಿಯ ಪತ್ರಕರ್ತರನ್ನು ಹಾಗೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರನ್ನು ಸತ್ಕರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನರೇಶ ಪಾಟೀಲ ಅವರು ಬರುವ ವರ್ಷದಿಂದ ಸಂಕೇಶ್ವರ ಗಡಿ ಭಾಗದಲ್ಲಿ ಸಮಾಜ ಸೇವೆ ಮಾಡುವರಿಗೆ ಪತ್ರಕರ್ತ ದಿವಂಗತ ವಿಠ್ಠಲರಾವ್ ಪಾಟೀಲ ಅವರ ಹೆಸರಿನಲ್ಲಿಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ಈ ಸಂಧರ್ಭದಲ್ಲಿ ಡಾ.ನಂದಕುಮಾರ ಹಾವಳ, ಡಾ.ವಿನೋದ ಗಾಯಕವಾಡ, ಡಾ.ಮಂದಾರ ಹಾವಳ, ಸಂಕೇಶ್ವರ ಬ್ಲಾಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸಂತೋಷ ಮುಡಸಿ, ಹುಕ್ಕೇರಿ ವಿದ್ಯುತ್ ಸಹಕಾರಿ ಸಂಘದ ನಿರ್ದೇಶಕ ಸುಭಾಷ ಕಾಸರಕರ, ಮುಖಂಡರಾದ ಅಪ್ಪಾ ಮೋರೆ, ಜಯಪ್ರಕಾಶ ಸಾವಂತ, ಹಿರಣ್ಯಕೇಶಿ ಪತ್ರಕರ್ತರ ಸಂಘದ ಅಧ್ಯಕ್ಷ ಆನಂದ ಶಿಂಧೆ, ಉಪಾಧ್ಯಕ್ಷ ಸಚಿನ ಕಾಂಬಳೆ, ಹಿರಿಯ ಪತ್ರಕರ್ತರಾದ ಸುರೇಶ ಮಂಜರಗಿ, ಎಂ.ಕೆ.ಮೋಮಿನ, ಪಾರೇಶ ಭೋಸಲೆ, ಪಾಂಡುರಂಗ ಪಾಟೀಲ, ಸಚಿನ ಸಾವಂತ, ಮುಂತಾದವರು ಹಾಜರಿದ್ದರು. ಪುಷ್ಪರಾಜ ಮಾನೆ ಸ್ವಾಗತಿಸಿ, ಆನಂದ ಶಿಂಧೆ ವಂದಿಸಿದರು.



ನೋಂದಣೆ ಪ್ರಕ್ರಿಯೆ ಆರಂಭಿಸಲು ಸರ್ಕಾರಕ್ಕೆ ಮನವಿ

ಬೆಳಗಾವಿ: ಕರ್ನಾಟಕ ವೃತ್ತಿಪರ ನಾಗರಿಕ ಅಭಿಯಂತರರ ಕಾಯ್ದೆ ತ್ವರಿತವಾಗಿ ಸಂಪೂರ್ಣ ಅನುಷ್ಠಾನಗೊಳಿಸಿ, ವೃತ್ತಿಪರ ನಾಗರಿಕ ಅಭಿಯಂತರರ ನೋಂದಣಿ ಪ್ರಕ್ರಿಯೆ ಆರಂಭಿಸಬೇಕು ಎಂದು ಬೆಳಗಾವಿ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಅಸೋಸಿಯೇಷನ್ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ನಗರದ ಕನ್ನಡ ಸಾಹಿತ್ಯ ಭವನದಲ್ಲಿ, ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಾಯ್ದೆಯಡಿ ಕರ್ನಾಟಕ ವೃತ್ತಿಪರ ನಾಗರಿಕ ಅಭಿಯಂತರರ ಮಂಡಳಿ ರಚನೆಯಾಗಿದ್ದು, ಮಂಡಳಿ ಕಾರ್ಯಾರಂಭಕ್ಕೆ ಸಂಪೂರ್ಣ ಸಿದ್ಧವಾಗಿದೆ. ಆದರೆ ಕಾಯ್ದೆ ಜಾರಿಯಾಗಿ ಸುಮಾರು 20 ತಿಂಗಳುಗಳು ಕಳೆದಿದ್ದರೂ ವೃತ್ತಿಪರ ನಾಗರಿಕ ಅಭಿಯಂತರರ ನೋಂದಣಿ ಪ್ರಕ್ರಿಯೆ ಇನ್ನೂ ಆರಂಭವಾಗಿಲ್ಲ. ನಿಯಮಾವಳಿ ಅಂತಿಮಗೊಳಿಸುವಿಕೆ ಹಾಗೂ ಅಗತ್ಯ ಆಡಳಿತಾತ್ಮಕ ಅನುಮೋದನೆಗಳಲ್ಲಿ ಉಂಟಾಗಿರುವ ವಿಳಂಬವೇ ಇದಕ್ಕೆ ಪ್ರಮುಖ ಕಾರಣವಾಗಿದೆ ಎಂದರು.

ಕಾಯ್ದೆಯಲ್ಲಿ ಮಂಡಳಿಗೆ ಕಚೇರಿ ಸೌಲಭ್ಯ ಒದಗಿಸುವ ಬಗ್ಗೆ ಸ್ಪಷ್ಟ ಉಲ್ಲೇಖವಿದ್ದರೂ, ಇದುವರೆಗೆ ಅಗತ್ಯ ಕಚೇರಿ ವ್ಯವಸ್ಥೆ ಕಲ್ಪಿಸದಿರುವುದು ವಿಷಾದನೀಯವಾಗಿದೆ. ಮಂಡಳಿ ನೋಂದಣಿ ಪ್ರಕ್ರಿಯೆ ಆರಂಭಿಸಲು ಬೇಕಾದ ಎಲ್ಲ ಪೂರ್ವಸಿದ್ಧತೆ ಪೂರ್ಣಗೊಳಿಸಿದ್ದು, ಸರ್ಕಾರದ ಅನುಮೋದನೆಗಾಗಿ ಕಾಯುತ್ತಿದೆ ಎಂದರು.

ಕರ್ನಾಟಕ ವೃತ್ತಿಪರ ನಾಗರಿಕ ಅಭಿಯಂತರರ ಮಂಡಳಿ ಪರಿಣಾಮಕಾರಿ ಕಾರ್ಯನಿರ್ವಹಣೆಯಿಂದ ಸಾರ್ವಜನಿಕರಿಗೆ ಸುರಕ್ಷಿತ ಕಟ್ಟಡಗಳು ಮತ್ತು ಮೂಲಸೌಕರ್ಯಗಳು ಲಭ್ಯವಾಗಲಿದ್ದು, ನಿರ್ಮಾಣ ಕ್ಷೇತ್ರದಲ್ಲಿ ವೃತ್ತಿಪರ ಹೊಣೆಗಾರಿಕೆ ಹೆಚ್ಚಲಿದೆ. ಅಲ್ಲದೆ ಅನರ್ಹ ವ್ಯಕ್ತಿಗಳು ಹಾಗೂ ನಕಲಿ ವೃತ್ತಿಪರರ ಹಾವಳಿಗೆ ಕಡಿವಾಣ ಬೀಳಲಿದ್ದು, ಸುಸ್ಥಿರ ಅಭಿವೃದ್ಧಿ ಮತ್ತು ಸಮಾಜದ ಹಿತಾಸಕ್ತಿ ಕಾಪಾಡಲು ನೆರವಾಗಲಿದೆ ಎಂದು ಅಭಿಪ್ರಾಯಪಟ್ಟರು.



ರಾಜ್ಯ ಸರ್ಕಾರವು ಈ ವಿಷಯ ಅತ್ಯಂತ ಆದ್ಯತೆಯಿಂದ ಪರಿಗಣಿಸಿ, ಕರ್ನಾಟಕ ವೃತ್ತಿಪರ ನಾಗರಿಕ ಅಭಿಯಂತರರ ಕಾಯ್ದೆ–2024ರ ಸಂಪೂರ್ಣ ಅನುಷ್ಠಾನಕ್ಕೆ ಅಗತ್ಯ ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕು ಎಂದು ಬೆಳಗಾವಿ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಅಸೋಸಿಯೇಷನ್ ಆಗ್ರಹಿಸಿತು.

ಈ ವೇಳೆ ಇಂಜಿನಿಯರ್ಗಳಾದ ಅಜಿತ್ ಕುಮಾರ ಎಸ್.ಮಗದುಮ್, ರಮೇಶ ತುಬಚಿ, ಎಸ್.ಎ. ಪಾಟೀಲ, ಅರುಣ ಶಿರಾಪುರ, ಆದರ್ಶ ಪಿ.ಎಸ್. ಹಿರೇಮಠ ಹಾಗೂ ಅಜಯ ಪಾಟೀಲ ಸೇರಿದಂತೆ ಇತರರು ಇದ್ದರು.

ಚೆಸ್ ಟೂರ್ನಮೆಂಟ್‌ಯಶಸ್ವಿ

ಹಾವೇರಿ: ಜಿಲ್ಲಾ ಚೆಸ್ ಅಸೋಸಿಯೇಶನ್ ಹಾಗೂ ಕಿಂಗ್ಸ್ ಚೆಸ್ ಅಕಾಡೆಮಿ ಆಶ್ರಯದಲ್ಲಿ ಭಾನುವಾರ ಇಲ್ಲಿಯ ಗೆಳೆಯರ ಬಳಗ ಶಾಲೆಯಲ್ಲಿ ಆಯೋಜಿಸಿದ್ದ ಓಪನ್ ರ್‍ಯಾಪಿಡ್ ಚೆಸ್ ಟೂರ್ನಾಮೆಂಟ್‌ನಲ್ಲಿ ನೂರಾರು ಮಕ್ಕಳು ಪಾಲ್ಗೊಳ್ಳುವ ಮೂಲಕ ಯಶಸ್ವಿಯಾಗಿ ಜರುಗಿತು.ಉತ್ತರ ಕನ್ನಡ, ಬೆಳಗಾವಿ, ಗೋವಾ, ಮಹಾರಾಷ್ಟ್ರ, ದಾವಣಗೆರೆ, ಶಿವಮೊಗ್ಗ, ದಾವಣಗೆರೆ ಸೇರಿದಂತೆ ವಿವಿದೆಡೆಯಿಂದ ನೂರಕ್ಕೂ ಅಧಿಕ ಚೆಸ್ ಆಟಗಾರರು ಆಗಮಿಸಿದ್ದರು. ಮುಕ್ತ, 9, 11 ವರ್ಷದೊಳಗಿನ, 13 ಹಾಗೂ 15 ವರ್ಷದೊಳಗಿನ ಹೀಗೆ ಐದು ವಿಭಾಗದಲ್ಲಿ ಪಂದ್ಯಗಳು ನಡೆದವು. ಪ್ರತಿಯೊಂದು ವಿಭಾಗದಿಂದಲೂ 5 ಸುತ್ತುಗಳಲ್ಲಿ ಪಂದ್ಯಗಳು ನಡೆದವು. ಅಂತಿಮವಾಗಿ ಹೆಚ್ಚು ಅಂಕ ಪಡೆದ ಆಟಗಾರರಿಗೆ ಬಹುಮಾನ ವಿತರಿಸಲಾಯಿತು. ಒಟ್ಟು 31ಸಾವಿರ ರೂಪಾಯಿಗಳ ಮೊತ್ತದ ನಗದು ಬಹುಮಾನ ಇವನ್ನು ನೀಡಲಾಯಿತು.



ಮುಖ್ಯ ತೀರ್ಪುಗಾರರಾಗಿ ಕೃಷ್ಣ ಶಿಂಧೆ, ಸಹಾಯಕ ತೀರ್ಪುಗಾರರಾಗೊ ಮಹಾಲಿಂಗಪ್ಪ ಎನ್.ಸಿ., ತೀರ್ಪುಗಾರ ರಾಗಿ ಆನಂದಸ್ವಾಮಿ ಶಿರಸಿ ಕಾರ್ಯನಿರ್ವಹಿಸಿದರು.

ಕಾರ್ಯಾಧ್ಯಕ್ಷರಾಗಿ ಡಾ.ಸೋನಾಲಿ ಸರ್ನೋಬತ್ ಆಯ್ಕೆ

ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ

ಬೆಳಗಾವಿ: ಕರ್ನಾಟಕ ಹೋಮಿಯೋಪಥಿಕ್ ಮೆಡಿಕಲ್ ಅಸೋಸಿಯೇಷನ್ ಬೆಳಗಾವಿ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ವೈಜ್ಞಾನಿಕ ಸಮ್ಮೇಳನವು ಭಾನುವಾರ ನಗರದ ಗಾಂಧಿ ಭವನದಲ್ಲಿ ಯಶಸ್ವಿಯಾಗಿ ನೆರವೇರಿತು.

ಕರ್ನಾಟಕ ಹೋಮಿಯೋಪಥಿಕ್ ಮೆಡಿಕಲ್ ಅಸೋಸಿಯೇಷನ್‌ನ ರಾಜ್ಯಾಧ್ಯಕ್ಷ ಡಾ.ವೀರಬ್ರಹ್ಮಾಚಾರಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಡಾ. ಶ್ರೀಕಾಂತ್ ಕೊಂಕಣಿ, ಉಪಾಧ್ಯಕ್ಷರು, ಆಯುಷ್ ಫೆಡರೇಷನ್ ಆಫ್ ಇಂಡಿಯಾ (ಕರ್ನಾಟಕ ಘಟಕ) ಹಾಗೂ ಡಾ.ಎಂ.ಎ.ಉದಚಂಕರ, ನಿರ್ದೇಶಕರು (ಆಡಳಿತ), ಕೆಎಲ್‌ಇ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜು, ಬೆಳಗಾವಿ ಉಪಸ್ಥಿತರಿದ್ದರು.

ಅತಿಥಿ ಗಣ್ಯರಾಗಿ ಬಿವಿವಿ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜ್ ಪ್ರಾಂಶುಪಾಲ ಡಾ.ಅರುಣ ಹೂಳಿ, ಎಸ್‌ಎಸ್‌ಬಿಜೆ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜ್ ಪ್ರಾಂಶುಪಾಲ ಡಾ.ದಶರಥ ಬಾಮನೆ, ಭಾರತೇಶ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜ್ ಪ್ರಾಂಶುಪಾಲ ಡಾ.ಅರುಣಕುಮಾರ ಜಮದಾಡೆ, ಎ.ಎಂ. ಶೇಖ್ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜ್ ಪ್ರಾಂಶುಪಾಲ ಡಾ. ಕಿರಣ ಎನ್.ಪಾಟೀಲ, ಬೆಳಗಾವಿ ಕೆಎಲ್‌ಇ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜ್ ಪ್ರಾಂಶುಪಾಲ ಡಾ. ರೂಪಾಲಿ ತೆಲಂಗ್ ಉಪಸ್ಥಿತರಿದ್ದರು.

ಡಾ.ಎ.ರಾಜೇಶ, ಕಾರ್ಯಾಧ್ಯಕ್ಷರು, ಕೆಎಚ್‌ಎಂಎ ಕರ್ನಾಟಕ ಹಾಗೂ ಡಾ. ಜ್ಯೋತಿಷ ಖೋತ್, ಕರ್ನಾಟಕ ಹೋಮಿಯೋಪಥಿಕ್ ಸಿಸ್ಟಮ್ ಆಫ್ ಮೆಡಿಸಿನ್ ಮಂಡಳಿ ಆಯ್ಕೆಯಾದ ಸದಸ್ಯರು ಭಾಗವಹಿಸಿದ್ದರು.

ಕೆಎಚ್‌ಎಂಎ ಬೆಳಗಾವಿ ಘಟಕ ಅಧ್ಯಕ್ಷ ಡಾ.ವಿವೇಕಾನಂದ ವರ್ನೇಕರ್ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ನೂತನ ಪದಾಧಿಕಾರಿಗಳಾಗಿ ಡಾ. ವಿವೇಕಾನಂದ ವರ್ನೇಕರ್ (ಅಧ್ಯಕ್ಷರು), ಡಾ. ಸೋನಾಲಿ ಸರ್ನೋಬತ್ (ಕಾರ್ಯಾಧ್ಯಕ್ಷರು), ಡಾ. ಶ್ರೇಯಸ್ ಜಿನ್ರಾಳ್ಕರ್ (ಕಾರ್ಯದರ್ಶಿ) ಹಾಗೂ ಡಾ.ಸಂತೋಷ ಮಗದುಮ್ (ಸಂಘಟನಾ ಕಾರ್ಯದರ್ಶಿ) ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು.



ಡಾ.ಸೋನಾಲಿ ಸರ್ನೋಬತ್ ಸ್ವಾಗತ ಭಾಷಣ ಮಾಡಿದರು. ಹೋಮಿಯೋಪಥಿಯ ಜನಕ ಡಾ. ಸ್ಯಾಮುಯೆಲ್ ಹ್ಯಾನಿಮನ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಡಾ.ಜಯಂತ್ ಎ.ಬಿ., ಉಪಾಧ್ಯಕ್ಷರು, ಕೆಎಚ್‌ಎಂಎ, ಹ್ಯಾನಿಮನ್ ಅವರ ಜೀವನ ಹಾಗೂ ಸಾಧನೆಗಳ ಕುರಿತು ಪರಿಚಯ ನೀಡಿದರು. ನಂತರ ನಡೆದ ವೈಜ್ಞಾನಿಕ ಸಮ್ಮೇಳನದಲ್ಲಿ ಪ್ರೊ.ಡಾ.ಸಂತೋಷ ಎಂ.ರಾಣಡೆ ಉಪನ್ಯಾಸ ನೀಡಿದರು. ಡಾ. ನರೇಂದ್ರ ಪಾಟೀಲ, ಗಡಹಿಂಗ್ಲಜ್ , ಪ್ರಾಂಶುಪಾಲ ಪ್ರೊ.ಡಾ.ಕಿರಣ್ ಎನ್. ಪಾಟೀಲ ಮಾತನಾಡಿದರು.

ವೈದ್ಯರು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ವೈಜ್ಞಾನಿಕ ಅಧಿವೇಶನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಡಾ.ಸಂತೋಷ ಮಗದುಮ್ ವಂದನಾರ್ಪಣೆ ಸಲ್ಲಿಸಿದರು.

ಅಕ್ರಮ ಮರಳು ಸಾಗಾಟ: ದೂರು ದಾಖಲು

ಹಾವೇರಿ: ನದಿ ಪಾತ್ರದಲ್ಲಿ ಅಕ್ರಮವಾಗಿ ಮಾರಾಟ ಮಾಡಲು ಸಂಗ್ರಹಿಸಿಟ್ಟಿದ್ದ ಮರಳನ್ನು ಜಪ್ತಿ ಮಾಡಿರುವ ಘಟನೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಇಬ್ಬರು ಆರೋಪಿಗಳ ವಿರುದ್ಧ ದೂರು ದಾಖಲಿಸಲಾಗಿದೆ. ರಾಣೇಬೆನ್ನೂರ ತಾಲೂಕು ಸೋಮಲಾಪೂರ ಗ್ರಾಮದ ಮೈಲಾರೆಪ್ಪ ಕೋಟಿಹಾಳರ ಹಾಗೂ ಪರಮೇಶ ಮಲ್ಲಪ್ಪ ಗೌಡರ ಎಂಬುವವರ ವಿರುದ್ಧ ಪ್ರತ್ಯೇಕ ದೂರುಗಳು ದಾಖಲಾಗಿವೆ. ಆರೋಪಿತರು ಸೋಮಲಾಪುರ ಬಳಿಯ ತುಂಗಭದ್ರಾ ನದಿ ಪಾತ್ರದಲ್ಲಿ ತಲಾ 20ಸಾವಿರ ಮೌಲ್ಯದ ಸುಮಾರು 50ಮೆಟ್ರಿಕ್ ಟನ್ ಅಕ್ರಮ ಮರಳನ್ನು ಮಾರಾಟ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದ್ದರು. ಖಚಿತ ಮಾಹಿತಿಯಾಧರಿಸಿ ಪೊಲೀಸರು ದಾಳಿ ನಡೆಸಿದಾಗ ಸಿಕ್ಕಿಬಿದ್ದಿದ್ದಾರೆ.

ಮನುಷ್ಯರ ಭಾವನೆಯಲ್ಲಿ ದೇವರ ನೆಲೆ: ಯಲ್ಲಪ್ಪ

ಚಿಂಚಲಿ: ದೇವರ ವಾಸ ಆಕಾಶವಲ್ಲ, ಗುಡಿಯೂ ಅಲ್ಲ, ಮನುಷ್ಯರ ಭಾವನೆಯೇ ಅದರ ನೆಲೆ ಎಂದು ಬೆಳಗಾವಿ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಅಧ್ಯಕ್ಷ ಡಾ.ಯಲ್ಲಪ್ಪ ಹಿಮ್ಮಡಿ ಹೇಳಿದರು.

ಚಿಂಚಲಿ ಪಟ್ಟಣದ ಮಾಲಿನಿ ಪಾಟೀಲ ಭವನದಲ್ಲಿ ಶ್ರೀ ಮಹಾಕಾಳಿ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದ 1992–93ನೇ ಸಾಲಿನ ವಿದ್ಯಾರ್ಥಿ ಬಳಗ ತಮ್ಮ ಶಿಕ್ಷಕ ವರ್ಗದವರಿಗೆ ಹಮ್ಮಿಕೊಂಡಿದ್ದ ಗುರುವಂದನೆ ಹಾಗೂ ಸ್ನೇಹ ಸಮ್ಮೇಳನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಬಸವಣ್ಣ ದೇವರನ್ನು ದೇಹದಲ್ಲಿ ಕಂಡರೆ, ಅಂಬೇಡ್ಕರ್ ಅವರು ವಿದ್ಯೆಯಲ್ಲಿ ಕಂಡರು. ವರನಟ ರಾಜಕುಮಾರ ಅವರು ಅಭಿಮಾನಿಗಳಲ್ಲಿ ಕಂಡರೆ, ವಿದ್ಯಾರ್ಥಿಗಳಾದ ತಾವು ಅಕ್ಷರ ಕಲಿಸಿದ ಗುರುಗಳಲ್ಲಿ ದೇವರನ್ನು ಕಾಣುತ್ತಿರುವುದು ವೈಚಾರಿಕ ನೋಟದ ವಿಸ್ತಾರಣೆಯಾಗಿದೆ ಎಂದರು.



ಸ್ಥಳೀಯ ಮಲ್ಲಿಕಾರ್ಜುನ ಗುರುದೇವ ಆಶ್ರಮದ ಸಿದ್ಧಪ್ರಸಾದ ಶ್ರೀಗಳು ಸಾನ್ನಿಧ್ಯ ವಹಿಸಿದರು.

ಸನ್ಮಾನಿತರಾದ ಎಸ್.ಬಿ.ಈರಗಾರ, ಎಂ.ಎಚ್.ಪಾಟೀಲ, ಡಿ.ಎನ್ .ಪಾಟೀಲ, ಧನ್ಯಕುಮಾರ ಕಾಂಬಳೆ ಕೃತಜ್ಞತಾ ನುಡಿಗಳನ್ನಾಡಿದರು. ಶಿಕ್ಷಕ ಎಸ್.ಎ.ಲಕ್ಷ್ಮೇಶ್ವರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಚಂದ್ರಕಾಂತ ಪಟ್ಟೇಕರಿ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಸಂಚಾಲಕರಾದ ಮಚ್ಚೇಂದ್ರ ಶಿಂದೆ, ಮಹಿಬೂಬ ತರಡೆ, ಧರೆಪ್ಪಾ ಖಿಲಾರೆ, ಆರತಿ ಇನಾಮದಾರ, ನಿರ್ಮಲಾ ರೆಂಟೆ ಸನ್ಮಾನ ನೆರವೇರಿಸಿದರು.

ಮಲ್ಲಪ್ಪ ಕಸರಡ್ಡಿ, ಶಿವಾನಂದ ಕಲ್ಲಟ್ಟಿ, ದೌಲತರಾವ ಪಾಟೀಲ, ಖಲೀಲ ಮುಲ್ಲಾ, ಅಶೋಕ ಹೊನಮಾನೆ, ಬಸನಗೌಡಾ ಪಾಟೀಲ, ಅನಿಲ ಉಪಾಧ್ಯೆ, ನಾರಾಯಣ ಮಾಂಗ, ಸಂಜು ಚೌಗುಲೆ, ನಿವೃತ್ತಿ ಖೋತ, ವೀರೇಂದ್ರ ಹಿಡಕಲ, ಗಂಗೂತಾಯಿ ಪೂಜೇರಿ, ಆಖೀಲಾ ಸಗರೆ, ರಂಜನಾ ಜಾಧವ, ವಿನೋದ ಪಾಟೀಲ, ದತ್ತಾತ್ರೇಯ ಕರಾಡಕರ, ರಾಜು ವಡ್ಡರ ಇತರರು ಉಪಸ್ಥಿತರಿದ್ದರು.

ಜಿತೇಂದ್ರ ಕಾಂಬಳೆ, ಕೀರ್ತಿ ಪಟ್ಟೇಕರಿ ಮತ್ತು ಸಂಗಡಿಗರು ಪ್ರಾರ್ಥನೆ ಗೀತೆ ಪ್ರಸ್ತುತ ಪಡಿಸಿದರೆ ಪುಟ್ಟಕ್ಕ ಜಲಾಲಪುರೆ ಮತ್ತು ಸಂಗಡಿಗರು ಸ್ವಾಗತ ಗೀತೆ ಹಾಡಿದರು. ವೈಶಾಲಿ ಪಾಟೀಲ ಸ್ವಾಗತಿಸಿದರು. ರೇಖಾ ಅಲಗೂರೆ ನಿರೂಪಿಸಿದರು. ಬಸವಂತ ಕವಳೆ ವಂದಿಸಿದರು.

ಕಿರುಸುದ್ದಿ

ತಾಲೂಕಿನಲ್ಲಿ ಬಿತ್ತನೆ ಬೀಜ, ಗೊಬ್ಬರದ ಕೊರತೆ ಇಲ್ಲ

ಗುಳೇದಗುಡ್ಡ: ಈಬಾರಿ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆ ಇದ್ದು, ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಹೆಸರು, ತೊಗರಿ, ಮೆಕ್ಕೆಜೋಳ, ಸೂರ್ಯಕಾಂತಿ, ಸಜ್ಜೆ ಮತ್ತು ಹೈಬ್ರಿಡ್ ಜೋಳದ ಬೀಜಗಳು ದಾಸ್ತಾನು ಮಾಡಲಾಗಿದೆ. ತಾಲೂಕಿನಲ್ಲಿ ಬೇಕಾದಷ್ಟು ರಸಗೊಬ್ಬರ ದಾಸ್ತಾನು ಮಾಡಲಾ ಗಿದ್ದು, ಬೀಜ ಮತ್ತು ಗೊಬ್ಬರದ ಕೊರತೆ ಇರುವುದಿಲ್ಲ ಎಂದು ಕೃಷಿ ಅಧಿಕಾರಿ ಆನಂದಗೌಡ ಗೌಡರ ತಿಳಿಸಿದ್ದಾರೆ. ಬಿತ್ತುವಾಗ ಮಣ್ಣಿನಲ್ಲಿ ಸಾಕಷ್ಟು ಹಸಿ ಇದ್ದರೆ ಮಾತ್ರ ಬಿತ್ತನೆ ಕಾರ್ಯ ಮಾಡಿ. ರಸಗೊಬ್ಬರ ಅಂದಾಕ್ಷಣ ಕೇವಲ ಯೂರಿಯಾ, ಡಿಎಪಿ, ಪೊಟ್ಯಾಷಿಯಂ ಅಷ್ಟೇ ರಸಗೊಬ್ಬರಗಳಲ್ಲ, ಇವುಗಳನ್ನು ಬಿಟ್ಟು ಪರ್ಯಾಯ ರಸಗೊಬ್ಬರಗಳನ್ನು ಬಳಸಬೇಕು. ಅತಿಯಾದ ಯೂರಿಯಾ ಬಳಕೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದರಿಂದ ಯೂರಿಯಾ ಗೊಬ್ಬರವನ್ನು ಒಂದು ತಿಂಗಳಿಗೆ, ಒಂದು ಎಕರೆಗೆ ಒಂದು ಚೀಲವನ್ನು ಕೆ-ಕಿಸಾನ್ ತಂತ್ರಾಂಶದ ಮೂಲಕ ವಿತರಿಸಲಾಗುತ್ತಿದೆ. ಎಫ್ಐಡಿ ಕಾರ್ಡ್ ಕಡ್ಡಾಯಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಚಿಮ್ಮನಕಟ್ಟಿಗೆ ಸಚಿವ ಸ್ಥಾನ ನೀಡಲು ಮನವಿ

ಬಾದಾಮಿ: ಶಾಸಕ ಬೀಮಸೇನ ಚಿಮ್ಮನಕಟ್ಟಿ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಯುವ ಮುಖಂಡ, ಚಿಕ್ಕಮುಚ್ಚಳಗುಡ್ಡ ಗ್ರಾಮದ ಸರ್ಕಾರಿ ಆದರ್ಶ ವಿದ್ಯಾಲಯದ ಎಸ್‌ಡಿಎಂಸಿ ಅಧ್ಯಕ್ಷ ಶಿವಯ್ಯ ವೀರಯ್ಯ ಹಿರೇಮಠ ಮತ್ತು ಮಾಜಿ ಗ್ರಾಪಂ ಸದಸ್ಯ, ಪಿಕೆಪಿಎಸ್ ಸದಸ್ಯ ಚಿದಾನಂದ ರಾಮಪ್ಪ ತಳವಾರ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಯುವನಾಯಕ, ಹಿಂದುಳಿದ ವರ್ಗಗಳ ದಿನದಲಿತರ ಸರ್ವ ಸಮಾಜದ ಹಿತ ಕಾಪಾಡುವ ಶಾಸಕರಾಗಿದ್ದಾರೆ. ಐತಿಹಾಸಿಕ ಚಾಲುಕ್ಯ ಉತ್ಸವ ಆಯೋಜನೆ ಮಾಡಿದ್ದಾರೆ. ಪ್ರವಾಸೋದ್ಯಮ ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಯುವ ನಾಯಕನನ್ನು ಸಚಿವರನ್ನಾಗಿ ಮಾಡಿ ಈ ಭಾಗದ ಅಭಿವೃದ್ಧಿಗೆ ಅನುಕೂಲ ಮಾಡಬೇಕು ಎಂದು ಕಾಂಗ್ರೆಸ್ ಹೈಕಮಾಂಡ ನಾಯಕರನ್ನು ಆಗ್ರಹಿಸಿದ್ದಾರೆ.

ತಿಮ್ಮಾಪುರಗೆ ಡಿಸಿಎಂ ಸ್ಥಾನ ನೀಡಲು ಆಗ್ರಹ

ರನ್ನ ಬೆಳಗಲಿ: ರಾಜ್ಯದ ನೂತನ ಸರ್ಕಾರದಲ್ಲಿ ಹಿರಿಯ ನಾಯಕ, ಮಾಜಿ ಸಚಿವ ಆರ್.ಬಿ.ತಿಮ್ಮಾಪುರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಮುಧೋಳ ತಾಲೂಕು ಕಾಂಗ್ರೆಸ್ ಹಿಂದುಳಿದ ವರ್ಗಗಳ ಅಧ್ಯಕ್ಷ ಸಂಗಪ್ಪ ಅಮಾತಿ ಒತ್ತಾಯಿಸಿದ್ದಾರೆ. ಪಟ್ಟಣದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಪ್ರಬಲ ಅಹಿಂದ ನಾಯಕರಾಗಿ ಗುರುತಿಸಿಕೊಂಡಿರುವ ತಿಮ್ಮಾಪುರ ಅವರು ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುತ್ತಾ ಬಂದಿದ್ದಾರೆ. ನಮ್ಮೂರಿನ ರನ್ನ ವೈಭವದ ಹರಿಕಾರರಾಗಿ,ಅತ್ಯಂತ ಅನುಭವಿ ರಾಜಕಾರಣಿಯಾಗಿರುವ ಅವರು, ಎಡಗೈ ಸಮುದಾಯದ ಉತ್ತರ ಕರ್ನಾಟಕದ ಏಕೈಕ ಪ್ರಮುಖ ನಾಯಕರಾಗಿದ್ದಾರೆ ಎಂದರು.

ಉದಪುಡಿಗೆ ಎಂಎಲ್‌ಸಿ ಸ್ಥಾನ ನೀಡಲು ಮನವಿ

ಲೋಕಾಪುರ: ಹಲವು ದಶಕಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕತರಾಗಿ ಸೇವೆ ಸಲ್ಲಿಸುತ್ತಾ, ಬಿಡಿಸಿಸಿ ಬ್ಯಾಂಕ ಉಪಾಧ್ಯಕ್ಷರಾಗಿ ಸಹಕಾರಿ ಕ್ಷೇತ್ರದಲ್ಲಿ ಸೇವೆ ಮಾಡುತ್ತಾ ವಿವಿಧ ಹಂತದ ಜನಸೇವೆ ಮಾಡಿ ಅಪಾರ ರಾಜಕೀಯ ಅನುಭವ ಹೊಂದಿರುವ ಶಿವಾನಂದ ಲೋಕಣ್ಣ ಉದಪುಡಿಯವರನ್ನು ಎಂಎಲ್‌ಸಿ ನಾಮನಿರ್ದೇಶನ ಮಾಡಬೇಕೆಂದು ಅಭಿಮಾನಿಗಳ ಏಕಮತದ ಅಭಿಪ್ರಾಯವಾಗಿದೆ. ಮುಧೋಳ ತಾಲೂಕು ಕಾಂಗ್ರೆಸ್ ಮುಖಂಡರು ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಕರ್ನಾಟಕ ಕಾಂಗ್ರೆಸ್ ಹೈಕಮಾಂಡ್, ಮುಖ್ಯಮಂತ್ರಿಗಳು, ಹಿರಿಯ ನಾಯಕತ್ವಕ್ಕೆ ನಮ್ಮ ಬಲವಾದ ಮನವಿ ಹಾಗೂ ಶಿಫಾರಸ್ಸು ಸಲ್ಲಿಸುತ್ತಿದ್ದೇವೆ ಎಂದರು. ಲೋಕಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕಿವಡಿ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾ ಕೆಎಂಎಫ್ ನಿರ್ದೇಶಕ ಲಕ್ಷ್ಮಣ ಮಾಲಗಿ, ಕಾಂಗ್ರೆಸ್ ಮುಖಂಡರಾದ ಉದಯಸಿಂಗ್ ಪಡತಾರೆ, ಪಿಕೆಪಿಎಸ್ ಮಾಜಿ ಅಧ್ಯಕ್ಷ ಆನಂದ ಹಿರೇಮಠ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ರಫೀಕ ಬೈರಕದಾರ, ವೆಂಕಟೇಶ ಅಂಕಲಗಿ, ಬೀರಪ್ಪ ಮಾಯಣ್ಣವರ, ಹೊಳಬಸು ದಂಡಿನ, ರವಿ ಬೋಳಿಶೆಟ್ಟಿ, ಷಣ್ಮುಖಪ್ಪ ಕೊಲ್ಹಾರ, ನಾರಾಯಣ ಶಿಂಧೆ, ಬಸವರಾಜ ಕಾತರಕಿ, ಕೃಷ್ಣಾ ಜಟ್ಟೆನ್ನವರ, ಗಣಪತಿ ಗಸ್ತಿ, ಅಬ್ದುಲ್ ರೆಹೆಮಾನ ತೊರಗಲ್, ಮುತ್ತಪ್ಪ ಚೌಧರಿ, ಕುಮಾರ ಕಾಳಮ್ಮನವರ, ರವಿ ರೊಡ್ಡಪ್ಪನವರ, ಉಮೇಶ ಗಸ್ತಿ, ಸಂಗಣ್ಣ ಕಟಗೇರಿ, ಸುಲ್ತಾನ ಕಲಾದಗಿ ಇದ್ದರು.



ಗುಳೇದಗುಡ್ಡ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬೆಂಗಳೂರಿನ ಬ್ಯಾಂಡ್ ಸ್ಟ್ಯಾಂಡ್ ಕಬ್ಬನ್ ಪಾರ್ಕ್ ಉದ್ಯಾನವನದಲ್ಲಿ ಉದಯರಾಗ ಕಾರ್ಯಕ್ರಮದಲ್ಲಿ ಪಟ್ಟಣದ ಸಂಗೀತ ಶಿಕ್ಷಕ ಬಸವರಾಜ ಸಿಂದಗಿಮಠ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಮತ್ತು ಸುಗಮ ಸಂಗೀತ ಭಾನುವಾರ ನಡೆಯಿತು. ಶಾಸ್ತ್ರೀಯ ಸಂಗೀತವನ್ನು ಬಿಬಾಸ್ ರಾಗದೊಂದಿಗೆ ಆರಂಭವಾಗಿ ತರಾನ ಗಾಯನ, ವಚನ ಗಾಯನ, ತತ್ವಪದಗಳು ಕೇಳುಗರ ಮನ ಸೆಳೆಯಿತು. ಹಾರ್ಮೋನಿಯಂ ಭೀಮಪ್ಪ ಹಳ್ಳಿಗೋಳ, ತಬಲಾ ಸಂಗೀತ ಶಿಕ್ಷಕ ಶ್ರೀಕಾಂತ ಚಿಮಲ, ಬಸವರಾಜ ಜಿಡಗಿ, ರಿದಮಪ್ಯಾಡ್, ಕಿರಣ ಪಾಂಡವಪುರ ಸಾಥ್ ನೀಡಿದರು.

ಆರ್.ಬಿ.ತಿಮ್ಮಾಪುರಗೆ ಡಿಸಿಎಂ ಸ್ಥಾನ ನೀಡಿ

ಮುಧೋಳ: ರಾಜ್ಯದ ನೂತನ ಸಚಿವ ಸಂಪುಟದಲ್ಲಿ ಹಿರಿಯ ಕಾಂಗ್ರೆಸ್ ನಾಯಕ ಆರ್.ಬಿ.ತಿಮ್ಮಾಪುರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನದೊಂದಿಗೆ ಪ್ರಮುಖ ಖಾತೆ ನೀಡಬೇಕೆಂದು ಮುಧೋಳ-ಲೋಕಾಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ಒತ್ತಾಯಿಸಿದೆ. ನಗರದಲ್ಲಿ ಮುಧೋಳ ಲೋಕಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕಿವಡಿ, ಸದ್ದುಗೌಡ ಪಾಟೀಲ, ಮತ್ತು ನಗರ ಘಟಕದ ಅಧ್ಯಕ್ಷ ರಘುನಾಥ ಮೊಕಾಶಿ ಜಂಟಿಯಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಪಕ್ಷದ ಹೈಕಮಾಂಡ್ ನಾಯಕರಿಗೆ ಮನವಿ ಸಲ್ಲಿಸಿದ್ದಾರೆ. ಆರ್.ಬಿ.ತಿಮ್ಮಾಪುರ ಅವರು ಸರಳತೆ, ಸಜ್ಜನಿಕೆ ಮತ್ತು ಸೌಮ್ಯ ಸ್ವಭಾವಕ್ಕೆ ಹೆಸರಾದವರು. ಆಲಮಟ್ಟಿ ಜಲಾಶಯದ ರೈತರ ಹಿತ ಕಾಯುವ ನಾಯಕರಾಗಿ ಅವರು ಗುರುತಿಸಿಕೊಂಡಿದ್ದಾರೆ. ಪಕ್ಷದ ಎಲ್ಲ ಕಾರ್ಯಕರ್ತರನ್ನು ಮತ್ತು ಸಾರ್ವಜನಿಕರನ್ನು ಸಮಾನವಾಗಿ, ಗೌರವದಿಂದ ಜೊತೆಗೂಡಿಸಿಕೊಂಡು ಹೋಗುವ ಗುಣ ಹೊಂದಿರುವ ಅವರಿಗೆ ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ಸಿಗಲೇಬೇಕು ಎಂದು ನಾಯಕರು ಪ್ರತಿಪಾದಿಸಿದರು. ಪ್ರಮುಖ ಮುಖಂಡರಾದ ದಾನೇಶ ತಡಸಲೂರ, ಲಕ್ಷ್ಮಣ ಮಾಲಗಿ, ಗೋವಿಂದಪ್ಪ ಕೌಲಗಿ, ಸಂತೋಷ ಪಾಲೋಜಿ, ಎಸ್.ಪಿ.ದಾನಪ್ಪ ಗೋಳ, ಕೃಷ್ಣಪ್ಪ ಕನಕರೆಡ್ಡಿ, ಈರಪ್ಪ ಕಿತ್ತೂರ ಪ್ರವೀಣ ಪಾಟೀಲ ಶಿವಾನದ ಉದುಪುಡಿ, ಭೀಮನಗೌಡ ಪಾಟೀಲ ವೆಂಕಣ್ಣ ಹುಣಸುಕಟ್ಟಿ ಮಹಮ್ಮದ ಗೌಸ್ ಮೂರನಾಳ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಹಕ್ಕೊತ್ತಾಯ ಮಂಡಿಸಿದರು.



ಯಲಬುರ್ಗಾ: ತಾಲೂಕಿನ ತಾಳಕೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಲಭಾವಿ ಗ್ರಾಮದಲ್ಲಿ 2026-27ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡಿರುವ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ತಾಪಂ ಸಹಾಯಕ ನಿರ್ದೇಶಕ ಹನಮಂತಗೌಡ ಪೊಲೀಸ್ ಪಾಟೀಲ ಭೇಟಿ ನೀಡಿ ಪರಿಶೀಲಿಸಿದರು.

ರೈತರಿಗೆ ಶಾಪವಾದ ವೆಂಕಟೇಶ್ವರ ಏತ ನೀರಾವರಿ ಯೋಜನೆ

ಮಲ್ಲಿಕಾರ್ಜುನ ತುಂಗಳ

ದಿಗಂತ ವಿಶೇಷ

ರಬಕವಿ-ಬನಹಟ್ಟಿ: ತಾಲೂಕಿನ ವೆಂಕಟೇಶ್ವರ ಏತ ನೀರಾವರಿ ಯೋಜನೆಯು 174.42 ಕೋಟಿ ರೂ.ಗಳ ವೆಚ್ಚದಲ್ಲಿ 2017-18ರಲ್ಲಿ ಪ್ರಾರಂಭಗೊಂಡು ಜನೇವರಿ 2024 ರಲ್ಲಿ ನೂರಕ್ಕೆ ನೂರರಷ್ಟು ಮುಕ್ತಾಯಗೊಂಡು ಬರೋಬ್ಬರಿ ಎರಡುವರೆ ವರ್ಷಗಳಾಗಿವೆ. ಇಂದಿಗೂ ಸಾವಿರಾರು ರೈತರ ಪಾಲಿಗೆ ಶಾಪವಾಗಿರುವದು ಖೇದಕರ ಸಂಗತಿ.

ಬಾಗಲಕೋಟೆ ಜಿಲ್ಲೆಯ ಮಹತ್ತರ ನೀರಾವರಿ ಯೋಜನೆಯಲ್ಲಿ ಒಂದಾಗಿರುವ 'ವೆಂಕಟೇಶ್ವರ ಏತ ನೀರಾವರಿಯು ರೈತರಿಗೆ ವರದಾನವಾಗಬೇಕಿತ್ತು. ಇದೀಗ ರೈತರ ಕೆಂಗಣ್ಣಿಗೆ ಗುರಿಯಾಗಿ ಜಗದಾಳ-ನಾವಲಗಿ ಸುತ್ತಲಿರುವ ಮುಖ್ಯ ಹಾಗೂ ಉಪ ಕಾಲುವೆಗಳನ್ನು ಸ್ವಯಂಪ್ರೇರಿತ ರೈತರೇ ಮುಚ್ಚಿದ್ದಾರೆ.

ಬರಪೀಡಿತ ಪ್ರದೇಶಗಳಿಗೆ ನೀರಾವರಿ ಸೌಲಭ್ಯಕ್ಕೆ ಕುಲಹಳ್ಳಿ ಗ್ರಾಮದ ಕೃಷ್ಣಾ ನದಿಯಿಂದ 0.75 ಟಿಎಂಸಿಯಷ್ಟು ನೀರನ್ನು ಬಳಕೆ ಮಾಡಿಕೊಂಡು ಒಟ್ಟು 17.991 ಎಕರೆ(ಸುಮಾರು 7,200 ಹೆಕ್ಟೇರ್) ಭೂಮಿಗೆ ನೀರುಣಿಸುವ ಗುರಿಯಾಗಿದೆ.

ರೈತರ ಜಮೀನುಗಳಿಗೆ ನೀರು ಬಾರದೆ ಮತ್ತು ಪರಿಹಾರ ಧನವೂ ಬಾರದಿರುವದರಿಂದ ಈ ಭಾಗದ ಬಹುತೇಕ ಕಡೆಗಳಲ್ಲಿ ರೈತರು ತಮ್ಮ ಜಮೀನುಗಳಲ್ಲಿ ಹಾಯ್ದು ಹೋಗಿರುವ ಕಾಲುವೆಗಳನ್ನು ವ್ಯವಸ್ಥಿತವಾಗಿ ಮುಚ್ಚಿ ಅದರ ಮೇಲೆ ಬೆಳೆಗಳನ್ನು ಬೆಳೆದಿದ್ದಾರೆ.

ಯೋಜನೆಯ ಮುಖ್ಯ ಕಾಲುವೆಯ 5.05 ಕಿ.ಮೀ. ಉದ್ದವಾಗಿದ್ದು, ಇದರ ಸಿದ್ದಾಪೂರ ವಲಯದ ಕಾಲುವೆಯು 18.85 ಕಿ.ಮೀ. ಮತ್ತು ನಾವಲಗಿ ವ್ಯಾಪ್ತಿಯಲ್ಲಿ 15.50 ಕಿ.ಮೀ. ಉದ್ದವಾಗಿದೆ.



> 'ಭೂಸ್ವಾಧೀನವಾಗಿಲ್ಲ. ಕೆಲ ರೈತರು ಸಹಕರಿಸಿದ್ದು ಇನ್ನಷ್ಟು ರೈತರ ಸಹಕರಿಸಬೇಕಿದೆ. ಮೂರ್ನಾಲ್ಕು ತಿಂಗಳಲ್ಲಿ ಪರಿಹಾರ ಒದಗಿಸುವ ಕಾರ್ಯ ನಡೆಯಲಿದೆ.
> ■ **ಪ್ರದೀಪ ಪಾಟೀಲ, ಸಹಾಯಕ ಅಭಿಯಂತರ, ನೀರಾವರಿ ಇಲಾಖೆ**

> ಜಮೀನುಗಳಲ್ಲಿ ಕಾಲುವೆ ಹಾಯ್ದು ಹೋದರೂ ಹನಿ ನೀರೂ ಬಂದಿಲ್ಲ, ಪರಿಹಾರ ಒದಗಿಸಿ ನೀರು ಬರುವಂತೆ ಮಾಡಬೇಕಾದ ನಿಟ್ಟಿನಲ್ಲಿ ಅಧಿಕಾರಿಗಳು ಗಮನಹರಿಸಬೇಕು. ಅಲ್ಲಿಯವರೆಗೂ ಕಾಲುವೆ ಮೇಲೆ ಬೇಸಾಯ ನಡೆಸುವದು ಎಲ್ಲ ರೈತರದ್ದಾಗಿದೆ.
> ■ **ಮಲ್ಲಿಕಾರ್ಜುನ ಜನವಾಡ, ರೈತ, ನಾವಲಗಿ**

> ಪರಿಹಾರಕ್ಕಾಗಿ ಇಲಾಖೆಗಳಿಗೆ ಅಲೆದು ಸಾಕಾಗಿದೆ. ಎಷ್ಟೇ ವಿನಂತಿಸಿಕೊಂಡರೂ ಪ್ರಯೋಜನವಾಗಿಲ್ಲ, ಕೇಳಿದಾಗೊಮ್ಮೆ ಭರವಸೆಗಳೇ ಬೇಸರವಾಗಿವೆ.
> ■ **ಶಿವು ಭದ್ರನ್ನವರ, ರೈತ, ಬನಹಟ್ಟಿ**

ರಬಕವಿ-ಬನಹಟ್ಟಿ ಸಮೀಪದ ಕುಲಹಳ್ಳಿ ಬಳಿ ಜಾಕವೆಲ್‌ಗೆ ನೀರು ಪೂರೈಕೆ ಮಾಡುವ ಸ್ಥಳವಾಗಿದ್ದು, ರೈತರ ಪರಿಹಾರ ಮಾತ್ರ ಇನ್ನೂ ಒದಗಿಸಿಲ್ಲ.

ಒಂದು ಹನಿಯೂ ನೀರಿಲ್ಲ, ಪರಿಹಾರವೂ ಇಲ್ಲ; ಕಲಹಳ್ಳಿ, ಹುಲ್ಯಾಳ, ಮರೆಗುದ್ದಿ, ಬುದ್ನಿ, ಮಾಲಾಪುರ, ಚಿಮ್ಮಡ, ಜಗದಾಳ, ನಾವಲಗಿ ಗ್ರಾಮಗಳ ಭಾಗದ ರೈತರು ಇದುವರೆಗೆ ಪರಿಹಾರ ಧನದಿಂದ ವಂಚಿತರಾಗಿದ್ದಾರೆ.

ವೀರಣ್ಣ ಚರಂತಿಮಠ ಜನ್ಮದಿನ ರೋಗಿಗಳಿಗೆ ಹಾಲು ಹಣ್ಣು ವಿತರಣೆ

ಬಾಗಲಕೋಟೆ: ವೀರಣ್ಣ ಚರಂತಿಮಠ ಅವರು ಬಿವಿವಿ ಸಂಘದಡಿ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳನ್ನು, ಅತ್ಯಾಧುನಿಕ ಆಸ್ಪತ್ರೆಗಳನ್ನು ಮತ್ತು ಕೌಶಲ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಿ ರಾಜ್ಯ ಹಾಗೂ ದೇಶದ ಅಭಿವೃದ್ಧಿಗೆ ಮಹತ್ವಪೂರ್ಣ ಕೊಡುಗೆ ಸಲ್ಲಿಸುತ್ತಿರುವರು ಎಂದು ಬಿವಿವಿ ಸಂಘದ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ) ಹೇಳಿದರು.

ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಸಿ.ಚರಂತಿಮಠ ಅವರ ಜನ್ಮದಿನದ ಪ್ರಯುಕ್ತ ಕುಮಾರೇಶ್ವರ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು, ಹಾಲು ಮತ್ತು ಬ್ರೆಡ್ ವಿತರಿಸಿ ಮಾತನಾಡಿದ ಅವರು, ಶಿಕ್ಷಣ ಸಂಸ್ಥೆಗಳು ಮತ್ತು ಅತ್ಯಾಧುನಿಕ ಆಸ್ಪತ್ರೆಗಳ ಮೂಲಕ ಬಿ.ವಿ.ವಿ ಸಂಘ ರಾಜ್ಯ ಮತ್ತು ದೇಶದ ಪ್ರತಿಷ್ಠಿತ ಸಂಸ್ಥೆ ಎನ್ನುವ ಗೌರವಕ್ಕೆ ಭಾಜನವಾಗಿದೆ. ಕರ್ನಾಟಕ ಮಾತ್ರವಲ್ಲದೆ ದೇಶದ ವಿವಿಧ ರಾಜ್ಯಗಳಿಂದ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿರುವರು. ಬಿವಿವಿ ಸಂಘದ ಈ ಬೆಳವಣಿಗೆಗೆ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಅವರ ಪರಿಶ್ರಮ ಮತ್ತು ದೂರದೃಷ್ಟಿಯೇ ಕಾರಣ ಎಂದರು.

ಎಸ್.ಎನ್.ಮೆಡಿಕಲ್ ಕಾಲೇಜ್ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ ಮಾತನಾಡಿ, ವೀರಣ್ಣ ಚರಂತಿಮಠ ಅವರು ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸಿ ಬಾಗಲಕೋಟೆ ಹಾಗೂ ನೆರೆಯ ಜಿಲ್ಲೆಗಳ ಸಾರ್ವಜನಿಕರಿಗೆ ಅತ್ಯುತ್ತಮ ವೈದ್ಯಕೀಯ ಸೇವೆ ಕೈಗೆಟುಕುವ ದರದಲ್ಲಿ ದೊರೆಯುವಂತೆ ಮಾಡಿರುವರು. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಆರೋಗ್ಯ ಯೋಜನೆಗಳಡಿ ಜನರಿಗೆ ಬಿ.ವಿ.ವಿ ಸಂಘದ ಆಸ್ಪತ್ರೆಗಳಲ್ಲಿ ಕೆಲವು ವೈದ್ಯಕೀಯ ಚಿಕಿತ್ಸೆಗಳು ನಗದುರಹಿತವಾಗಿ ಮತ್ತು ರಿಯಾಯಿತಿ ದರದಲ್ಲಿ ದೊರೆಯುತ್ತಿವೆ. ಜಿಲ್ಲೆಯ ಆರೋಗ್ಯಕರ ಸಮಾಜ ನಿರ್ಮಾಣಕ್ಕಾಗಿ ಶ್ರೀಯುತರು ನೀಡುತ್ತಿರುವ ಕೊಡುಗೆ ಗಮನಾರ್ಹವಾದದ್ದು ಎಂದರು.

ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಮೆಡಿಕಲ್ ಕಾಲೇಜ್ ಉಪಪ್ರಾಚಾರ್ಯ ಡಾ.ಸಿ.ಎಸ್.ಹಿರೇಮಠ, ಡೆಂಟಲ್ ಕಾಲೇಜ್ ಪ್ರಾಚಾರ್ಯ ಡಾ.ರವಿರಾಜ ದೇಸಾಯಿ, ಸಜ್ಜಲಶ್ರೀ ನರ್ಸಿಂಗ್ ಕಾಲೇಜ್ ಪ್ರಾಚಾರ್ಯ ಡಾ.ದಿಲೀಪ ನಾಟೇಕರ್, ಇತರ ಕಾಲೇಜುಗಳ ಪ್ರಾಚಾರ್ಯರು, ವೈದ್ಯರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.



ಸರ್ಕಾರದ ಜಾಗೆ ಮಾರಾಟ: ಆರೋಪ

ಲೋಕಾಪುರ: ಪಟ್ಟಣದ ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಕಚೇರಿಗಾಗಿ ಮೀಸಲಿಟ್ಟ ಜಾಗೆಯನ್ನು ಹಣದ ಆಸೆಗೆ ಮತ್ತು ಕಾನೂನು ಗಾಳಿಗೆ ತೂರಿ ಮುಧೋಳ ತಾಪಂ ಇಒ ಮಲ್ಲಿಕಾರ್ಜುನ ಅಂಬಿಗೇರ ಜಾಗೆಯನ್ನು ನೀಡಿದ್ದಾರೆ ಎಂದು ಸ್ಥಳೀಯ ಬಿಜೆಪಿ ಮುಖಂಡರು ಆರೋಪಿಸಿದ್ದಾರೆ.

ಬಿಜೆಪಿ ಮುಖಂಡ ಲೋಕಣ್ಣ ಕತ್ತಿ ಮಾತನಾಡಿ, ಸಾರ್ವಜನಿಕರ ಅನುಕೂಲಕ್ಕಾಗಿ ಮಿನಿವಿಧಾನಸೌಧ, ಸಬ್ ರಜಿಸ್ಟರ್ ಆಫೀಸ್, ಕಂದಾಯ ಇಲಾಖೆ ಕಚೇರಿಗಳು ಇದೇ ಜಾಗೆಯಲ್ಲಿ ನಿರ್ಮಿಸುವುದರಿಂದ ಪಟ್ಟಣ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಜಿಲ್ಲಾಧಿಕಾರಿಗಳು ಮಧ್ಯ ಪ್ರವೇಶಿಸಿ, ಸರಕಾರದ ಜಾಗೆಯನ್ನು ಮರಳಿ ತಾಪಂ ಪಡೆದುಕೊಳ್ಳಬೇಕು. ಸರಕಾರದ ಆಸ್ತಿಯನ್ನು ಉಳಿಸಲು ಕ್ರಮ ಕೈಗೊಳ್ಳಲು ಒತ್ತಾಯಿಸಿ, ಸರಕಾರಿ ಜಾಗೆಯನ್ನು ನೀಡಿದ ತಾಲೂಕಾ ಪಂಚಾಯತ ಅಧಿಕಾರಿಗಳ ಮಲ್ಲಿಕಾರ್ಜುನ ಅಂಬಿಗೇರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲು ಒತ್ತಾಯಿಸಿದರು. ಸಂಗಮ-ಸಂಕೇಶ್ವರ ರಾಜ್ಯ ಹೆದ್ದಾರಿಯ ಲೋಕಾಪುರದಿಂದ ಯಾದವಾಡಕ್ಕೆ ಹೋಗುವ ಮಾರ್ಗದಲ್ಲಿ ರಸ್ತೆಯ ಅಗಲೀಕರಣದ ನೆಪದಲ್ಲಿ ಕಳೆದ ಐದಾರು ಆರು ತಿಂಗಳಿನಿಂದ ಡಾಂಬರೀಕರಣಗೊಳ್ಳದೇ ಹಾಗೆ ಬಿಟ್ಟಿರುವುದರಿಂದ ಕಲ್ಲಿನ ಖಡಿಗಳ ಮೇಲೆ ಬೈಕ ಸವಾರರು ಅಪಘಾತ ಸಂಭವಿಸುತ್ತಿದ್ದು ಶೀಘ್ರವೇ ಸಂಭಂದಪಟ್ಟ ಅಧಿಕಾರಿಗಳು ಡಾಂಬರಿಕರಣ ಮಾಡಿ ಮುಂದೆ ಆಗುವ ಅನಾಹುತಗಳನ್ನು ತಪ್ಪಿಸಬೇಕೆಂದು ಒತ್ತಾಯಿಸಿದರು.

ಸ್ಥಳೀಯ ಬಿಜೆಪಿ ಮುಖಂಡರಾದ ಲೋಕಣ್ಣ ಭೀ ಕತ್ತಿ, ವಿ.ಎಂ.ತೆಗ್ಗಿ, ಎಂ.ಎಂ.ವಿರಕ್ತಮಠ, ಯಮನಪ್ಪ ಹೊರಟ್ಟಿ, ಸಿದ್ರಾಮಪ್ಪ ದೇಸಾಯಿ, ವಿರೇಶ ಪಂಚಕಟ್ಟಿಮಠ, ಬಿ.ಎಲ್.ಬಬಲಾದಿ, ಶ್ರೀನಿವಾಸ ಹೂಗಾರ, ವಸಂತಗೌಡ ಪಾಟೀಲ, ಶಶಿಧರ ಕಂಟೆಪ್ಪಗೋಳ, ರಮೇಶ ದೇವರಡ್ಡಿ, ಕಾಶಲಿಂಗ ಮಾಳಿ, ಆನಂದ ಹವಳಖೋಡ, ಸೂರಜ ಅಂಗಡಿ, ಗುರುರಾಜ ಪಂಚಕಟ್ಟಿಮಠ, ಅರುಣ ಮುಧೋಳ, ಒತ್ತಾಯಿಸಿದ್ದಾರೆ.

> ತಾಲೂಕು ಪಂಚಾಯತಿ ವ್ಯಾಪ್ತಿಗೆ ಬರುವ ಜಾಗೆಯನ್ನು ಟೆಂಡರ್ ಮೂಲಕವೇ ಕೊಡಲಾಗಿದೆ. ಸ್ಥಳೀಯ ಪತ್ರಿಕೆಯಲ್ಲಿ ಟೆಂಡರ್ ಕರೆದು ಬಾಡಿಗೆ ನೀಡಿದ್ದೇವೆ ಕಾನೂನು ಮೀರಿ ಯಾವುದೇ ಕೆಲಸ ಮಾಡಿರುವುದಿಲ್ಲಾ.
> ■ **ಮಲ್ಲಿಕಾರ್ಜುನ ಅಂಬಿಗೇರ, ತಾಪಂ ಇಒ, ಮುಧೋಳ**



ಶಾಸಕ ಚಿಮ್ಮನಕಟ್ಟಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಬಾದಾಮಿ: ನೂತನ ಸಿಎಂ ಡಿ.ಕೆ.ಶಿವಕುಮಾರ ಅವರ ಸಂಪುಟದಲ್ಲಿ ಬಾದಾಮಿ ಮತಕ್ಷೇತ್ರದ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು ಎಂದು ಮಾಜಿ ಪುರಸಭೆ ಸದಸ್ಯರು ಆಗ್ರಹಿಸಿದರು.

ಈ ಕುರಿತು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಪುರಸಭೆ ಅಧ್ಯಕ್ಷ ಪಾಂಡಪ್ಪ ಕಟ್ಟೀಮನಿ, ಮಂಜುನಾಥ ಹೊಸಮನಿ ಮಾಜಿ ಪುರಸಭೆ ಸದಸ್ಯರು ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಯುವಕರು, ಹಿಂದುಳಿದ ವರ್ಗಗಳ ನಾಯಕರಾಗಿದ್ದು, ಅವರಿಗೆ ನೂತನ ಸಂಪುಟದಲ್ಲಿ ಅವಕಾಶ ನೀಡಬೇಕು ಎಂದು ಹೇಳಿದರು.ಹಿರಿಯ ಮುಖಂಡ ಅಶೋಕ ಕೋಟನಕರ, ಮಾಜಿ ಪುರಸಭೆ ಸದಸ್ಯ ಇಲಿಯಾಸ್ ಜಮಾದಾರ, ಮುಖಂಡ ಹನಮಂತ ಜೋಗಿನ ಮಾತನಾಡಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 2018 ರಲ್ಲಿ ರಾಜಕೀಯ ಪುನರ್ಜನ್ಮ ನೀಡಿದ್ದು, ಐತಿಹಾಸಿಕ ಬಾದಾಮಿ ಪ್ರವಾಸೋದ್ಯಮ ತಾಣವಾಗಿದ್ದು, ಸರ್ವತೋಮುಖ ಅಭಿವೃದ್ಧಿಗೆ ಭೀಮಸೇನ ಚಿಮ್ಮನಕಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಹೇಳಿದರು.

ಮುಖಂಡರಾದ ಉಮೇಶ ಮಾದರ, ರಜಾಕ ರಾಜೂರ, ಶಂಕರ ಕನಕಗಿರಿ, ಭೀಮಸಿ ಕಮ್ಮಾರ, ತೇರಪ್ಪ ಬೇಲೂರಪ್ಪನ್ನವರ, ಜಬ್ಬಾರ ಖಾಜಿ, ಬಾಳು ಕಾಗಿ, ರವಿ ದಶವಂತರ, ಶ್ರೀನಿವಾಸ ಧಾರವಾಡಕರ, ಮಹಮ್ಮದ ಅಲಿ ಖಲಿಫ ಹಾಜರಿದ್ದರು.



ರಾಷ್ಟ್ರೀಯ ಪ್ರತಿಷ್ಠಿತ ಪ್ರಶಸ್ತಿ ಪ್ರದಾನ



ಬೀಳಗಿ: ತಾಲೂಕಿನ ಅನಗವಾಡಿ ಗ್ರಾಮದ ಬನಶಂಕರಿದೇವಿ ವಿದ್ಯಾ ಸಂಸ್ಥೆಯ ನಿರ್ದೇಶಕ ವಿಕ್ರಮಕುಮಾರ ಬಸವರಾಜ ಖೋತ ಅವರ ಶೈಕ್ಷಣಿಕ ಕ್ಷೇತ್ರದಲ್ಲಿ ವಿವಿಧ ಚಟುವಟಿಗೆಳನ್ನು ಗುರುತಿಸಿ ಹುಬ್ಬಳ್ಳಿಯ ಪ್ರತಿಷ್ಠಿತ ಗ್ಲೋಬಲ್ ರಿಸರ್ಚ್ ಆ್ಯಂಡ್ ಫೌಂಡೇಶನ್ ಅವರು ರಾಷ್ಟೀಯ ಪ್ರತಿಷ್ಠಿತ ಪ್ರಶಸ್ತಿ-2026 ಪ್ರಶಸ್ತಿಯನ್ನು ಶನಿವಾರ ಪ್ರದಾನ ಮಾಡಿ ಗೌರವಿಸಿದರು. ಸಂಸ್ಥೆಯ ಅಧ್ಯಕ್ಷ ಬಸವರಾಜ ಬ. ಖೋತ, ಸಂಸ್ಥೆಯ ಪ್ರಾಚಾರ್ಯ ಸುರೇಶ ಹವಾಲ್ದಾರ ಅವರು, ಪ್ರಶಸ್ತಿಗೆ ಭಾಜನರಾದ ವಿಕ್ರಮಕುಮಾರ ಬ. ಖೋತ ಅವರ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿ, ಪ್ರಶಸ್ತಿ ದೊರಕಿರುವುದು ಸಂತೋಷದ ಸಂಗತಿಯೆಂದು ತಿಳಿಸಿದ್ದಾರೆ. ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

ತಿಮ್ಮಾಪುರಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಲು ಒತ್ತಾಯ



ಲೋಕಾಪುರ: ಉತ್ತರ ಕರ್ನಾಟಕದ ಹಿರಿಯ ಮುಖಂಡರು, ಬಡವರ ಆಶಾಕಿರಣ, ದಿನದಲಿತರ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸದಾ ಕಾಳಜಿ ಹೊಂದಿರುವ ಆರ್.ಬಿ. ತಿಮ್ಮಾಪೂರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಪಟ್ಟಣದ ಜಿಲ್ಲಾ ವಕ್ಫ್ ಬೋರ್ಡ್ ಸದಸ್ಯ ಅಬ್ದುಲ್‌ರಹಿಮಾನ ತೊರಗಲ್ ಒತ್ತಾಯಿಸಿದ್ದಾರೆ.

ಆರ್.ಬಿ.ತಿಮ್ಮಾಪುರ ಅವರು ತಮ್ಮ ರಾಜಕೀಯ ಜೀವನದಲ್ಲಿ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳನ್ನು ಅನುಸರಿಕೊಂಡು ಪಕ್ಷಕ್ಕಾಗಿ ಹಗಲಿರುಳು ಶ್ರಮಿಸಿದ್ದಾರೆ. ಈ ಭಾಗದ ಎಲ್ಲ ವರ್ಗದ ಜನರ ಜೊತೆ ಒಳ್ಳೆಯ ಒಡನಾಟ ಹೊಂದಿ, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ಅಪಾರ ಕೊಡುಗೆ ನೀಡಿದ್ದಾರೆ ಹಾಗೂ ಮುಧೋಳ ಮತಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ರಾಜ್ಯದ ನೂತನ ಸಚಿವ ಸಂಪುಟದಲ್ಲಿ ಆರ್.ಬಿ.ತಿಮ್ಮಾಪುರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ತಿಳಿಸಿದ್ದಾರೆ.

ವೀರಣ್ಣ ಚರಂತಿಮಠ ಜನ್ಮ ದಿನಾಚರಣೆ: ರಕ್ತದಾನ

ಬಾಗಲಕೋಟೆ: ರಕ್ತದಾನ ಮಾಡುವುದರಿಂದ ಆರೋಗ್ಯ ಮತ್ತಷ್ಟು ಉತ್ತಮವಾಗುತ್ತದೆ ಎಂದು ಬಿವಿವಿಎಸ್ ಆಯುಷ್ ಕಾಲೇಜುಗಳ ಆಡಳಿತ ಮಂಡಳಿಯು ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ ಹೇಳಿದರು.

ಬಿವಿವಿಎಸ್ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಬವಿವ ಸಂಘದ ಕಾರ್ಯಾಧ್ಯಕ್ಷ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ರವರ ಜನ್ಮ ದಿನಾಚಾರಣೆ ಅಂಗವಾಗಿ ಆಯೋಜಿಸಿದ್ದ ಸ್ವಯಂಪ್ರೇರಿತ ರಕ್ತದಾನ ಶಿಬಿರ ಉದ್ಘಾಟನೆ ಮಾಡಿ ಮಾತನಾಡಿದರು. ದಾನಗಳಲ್ಲಿ ಶ್ರೇಷ್ಠ ದಾನ ಎಂದರೆ ಅದು ರಕ್ತದಾನ. ರಕ್ತದಾನಕ್ಕೆ ಯಾರೂ ಬೆಲೆ ಕಟ್ಟಲು ಸಾಧ್ಯವಿಲ್ಲ. ರಕ್ತದಾನ ಮಾಡಿದರೆ ಆರೋಗ್ಯ ಲಾಭಗಳಿವೆ. ಹಾಗಾಗಿ ಯುವಕರು ಹಾಗೂ ಆರೋಗ್ಯವಂತರು ಹೆಚ್ಚಾಗಿ ರಕ್ತದಾನ ಮಾಡುವ ಮೂಲಕ ಇತರರ ಪ್ರಾಣವನ್ನು ಕಾಪಾಡಬೇಕು. ಕೆಲವು ಸಂದರ್ಭದಲ್ಲಿ ಎಷ್ಟೇ ಕೋಟಿ ಇದ್ದರೂ ಸಹ ನಮಗೆ ಬೇಕಾದ ರಕ್ತ ಸಿಗುವುದಿಲ್ಲ. ಆ ಕಾರಣ ರಕ್ತವು ಬಹಳ ಅಮೂಲ್ಯ. ಇತ್ತೀಚಿನ ದಿನಗಳಲ್ಲಿ ಕೆಲ ಯುವಕರು ಮದ್ಯ ಸೇವನೆ ಸೇರಿದಂತೆ ಅನೇಕ ದುಶ್ಚಟಗಳಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಚಟಗಳಿಗೆ ಬಲಿಯಾಗದೆ ಆರೋಗ್ಯವಂತರಾಗಿ ಬಾಳಬೇಕು ಎಂದರು.



ಬವಿವ ಸಂಘದ ಹಾನಗಲ್ಲ ಕುಮಾರೇಶ್ವರ ರಕ್ತ ಭಂಡಾರದ ಮುಖ್ಯ ವೈದ್ಯಾಧಿಕಾರಿ ಡಾ.ಕೇಶವ ಕುಲಕರ್ಣಿ ರಕ್ತದಾನದ ಕುರಿತು ವಿವರವಾಗಿ ಮಾತನಾಡಿ ಮಾನವ ದೇಹದ ಎಲ್ಲ ಭಾಗಗಳನ್ನು ಕೃತಕವಾಗಿ ನಿರ್ಮಿಸಬಹುದು. ಆದರೆ ಇಲ್ಲಿಯವರೆಗೆ ರಕ್ತವನ್ನು ಕೃತಕವಾಗಿ ನಿರ್ಮಿಸಲು ಸಾಧ್ಯವಾಗಿಲ್ಲ ಕಾರಣ ಯುವ ಜನತೆ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಲು ಮುಂದೆ ಬರಬೇಕು ಎಂದರು.ಪ್ರಾಚಾರ್ಯ ಡಾ.ಅರುಣ ಹೂಲಿ ಮಾತನಾಡಿ, ಈ ಭಾಗದ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಡಾ.ವೀರಣ್ಣ ಚರಂತಿಮಠರ ಕೊಡುಗೆ ಅಪಾರ-ಅನನ್ಯ, ಇವರ ಹುಟ್ಟುಹಬ್ಬದ ಸಂದರ್ಭದಲ್ಲಿ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿ ಅರ್ಥಪೂರ್ಣವಾಗಿ ಆಚರಿಸಿದ ಎಲ್ಲ ದಾನಿಗಳಿಗೆ ಗೌರವಿಸಿ ಅಭಿನಂದಸಿದರು.

ಪ್ರಾಧ್ಯಾಪಕ ಡಾ.ರವಿ. ಕೋಟೆಣ್ಣವರ, ವಿವಿಧ ವಿಭಾಗ ಮುಖ್ಯಸ್ಥರಾದ ಡಾ.ಅಖಿಲಾ ಹುಲ್ಲೂರ, ಡಾ.ಫಾತಿಮಾ ಬಾಲಸಿಂಗ, ಡಾ.ಕೆ.ಪ್ರದೀಪ, ಡಾ. ಸುಧೀರ ಬೆಟಗೇರಿ, ಡಾ. ವಿಜಯಲಕ್ಷ್ಮೀ ಪೂಜಾರ, ಡಾ. ಮಂಜುನಾಥ ಪಾಟೀಲ, ವೈದ್ಯಾಧಿಕಾರಿ ಡಾ.ಮೇಘಾ, ಡಾ.ಸಹನಾ, ಡಾ.ಸ್ಫೂರ್ತಿ ಪ್ರಯೋಗ ಶಾಲಾ ತಂತ್ರಜ್ಞ ಶ್ರವಣ ಹುದ್ದಾರ, ಶಿಲ್ಪಾ ಮಂಜುನಾಥ

ವಿದ್ಯಾರ್ಥಿಗಳು ಸರ್ಕಾರದ ಯೋಜನೆ ಸದುಪಯೋಗ ಪಡೆಯಲಿ

ಬೀಳಗಿ: ಇಂದಿನ ಮಕ್ಕಳಿಗೆ ಶಿಕ್ಷಣ ಕಲಿಯಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಿರಿ ಎಂದು ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಡಾ.ಮುರುಗೇಶ ನಿರಾಣಿ ಕರೆ ನೀಡಿದರು.

ತಾಲೂಕಿನ ರಾಷ್ಟೀಯ ಹೆದ್ದಾರಿ ಸುನಗ ಮತ್ತು ತೋಳಮಟ್ಟಿ ಬೈಪಾಸ್ ರಸ್ತೆ ಸಮೀಪದ ರಾಮಣ್ಣ ಕಾಳಪ್ಪಗೋಳ ತೋಟದಲ್ಲಿ ಭಾನುವಾರ ನಡೆದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ, ಪಾಲಕರು ಇಂದು ತಮ್ಮ ಮಕ್ಕಳಿಗೆ ಪ್ರಾಮಾಣಿಕವಾಗಿ ಶಿಕ್ಷಣ ಕೊಡುತ್ತಿದ್ದಾರೆ. ಶಿಕ್ಷಣಕ್ಕೆ ಇಂದು ಹೆಚ್ಚು ಮಹತ್ವ ಬಂದಿದೆ. ತಮ್ಮ ಉಜ್ವಲ ಭವಿಷ್ಯಕ್ಕಾಗಿ ಉನ್ನತ ಶಿಕ್ಷಣ ಪಡೆಯಲು ಶ್ರಮಿಸಿ. ಮಕ್ಕಳು ವಿದ್ಯೆಯ ಜೊತೆಗೆ ಸಂಸ್ಕಾರ ಪಡೆಯಬೇಕು. ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿದ ಪ್ರಗತಿಪರ ರೈತ ರಾಮಣ್ಣ ಕಾಳಪ್ಪಗೋಳ ಕೈಗೊಂಡ ಈ ಕಾರ್ಯ ಶ್ಲಾಘನೀಯ ಎಂದು ಹೇಳಿದರು.



> ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಶೇ.95ಕ್ಕಿಂತ ಹೆಚ್ಚು ಅಂಕ ಪಡದ ವಿದ್ಯಾರ್ಥಿಗಳಿಗೆ ನಮ್ಮ ನಿರಾಣಿ ಫೌಂಡೇಶನ್‌ದಿಂದ ಉಚಿತವಾಗಿ ಬುಕ್, ಡ್ರೆಸ್ ಸೇರಿದಂತೆ ಅವರು ಪದವಿಯವರೆಗೂ ಕಲೆಯುವ ಸಂಪೂರ್ಣ ಶಿಕ್ಷಣ ವೆಚ್ಚ ಬರೆಸುತ್ತೇವೆ. ಕಲಿಯುವ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಹಣದ ಕಷ್ಟ ಇದ್ದರೆ ನೇರವಾಗಿ ನಮಗೆ ಕಾಲ್ ಮಾಡಿ ನಾವು ನಿಮ್ಮ ಪಾಲಕರಾಗಿ ಸಹಾಯ ಮಾಡುತ್ತೇವೆ.
> ■ **ಡಾ. ಮುರುಗೇಶ ನಿರಾಣಿ, ಮಾಜಿ ಸಚಿವರು**

ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ವಿಧಾನ ಪರಿಷತ್‌ಸದಸ್ಯರಾದಎಚ್.ಆರ್.ನಿರಾಣಿ,ಪಿ.ಎಚ್ .ಪೂಜಾರಿ, ಸಿಪಿಐ ಹನಮಂತ ಸಣಮನಿ, ಹುಚ್ಚಪ್ಪ ಕುಂಬಾರ, ಧಾರವಾಡ ಜಿಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ಮಾತನಾಡಿದರು.

ಕೋಲ್ಹಾರದ ಕಲ್ಲಿನಾಥ ದೇವರು ಹಾಗೂ ನಾಗರಾಳದ ಶೇಷಪ್ಪಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಪ್ರಗತಿಪರ ರೈತ ದೊಡ್ಡಣ್ಣ ಕಾಳಪ್ಪಗೋಳ ಅಧ್ಯಕ್ಷತೆ ವಹಿಸಿದ್ದರು. ರಾಮಣ್ಣ ಕಾಳಪ್ಪಗೋಳ, ರಾಮನಗೌಡ ಜಕ್ಕನಗೌಡ, ಹೊಳಬಸು ಬಾಳಶೆಟ್ಟಿ, ಮಲ್ಲಿಕಾರ್ಜುನ ಅಂಗಡಿ, ಮುತ್ತು ಬೋರ್ಜಿ, ಶಿವಪ್ಪ ಅವಟಿ, ಗುಂಡಪ್ಪ ಕಾಳಪ್ಪಗೋಳ, ಗುರುರಾಜ ಲೂತಿ ಮತ್ತಿತರಿದ್ದರು.



ಸಿಂದಗಿ: ನಗರದ ಮನಗೂಳಿ ಆಸ್ಪತ್ರೆಯ ವೈದ್ಯ, ಪುರಸಭೆ ಮಾಜಿ ಅಧ್ಯಕ್ಷ ಡಾ.ಶಾಂತವೀರ ಮನಗೂಳಿ ಅವರ ತಮ್ಮ 50ನೇ ಹುಟ್ಟುಹಬ್ಬದ ನಿಮಿತ್ತ ಇತ್ತೀಚೆಗೆ ಆಲಮೇಲ ತಾಲೂಕಿನ ಮೋರಟಗಿ ಗ್ರಾಮದಲ್ಲಿ ಮನೆಯ ಮೇಲ್ಛಾವಣಿ ಕುಸಿದು ಒಂದೇ ಕುಟುಂಬದಲ್ಲಿ ನಾಲ್ವರು ಅಸುನಿಗಿರುವ ಘಟನೆ ಜರುಗಿತ್ತು. ಆ ಹಿನ್ನೆಲೆಯಲ್ಲಿ ಆ ಕುಟುಂಬಕ್ಕೆ ಸಾಂತ್ವನ ಹೇಳಿ ಕುಟುಂಬಸ್ಥರಿಗೆ ಆರ್ಥಿಕ ಧನಸಹಾಯ ನೀಡಿದರು. ಜಿಪಂ ಮಾಜಿ ಸದಸ್ಯ ನರಸಿಂಹ ಪ್ರಸಾದ ತಿವಾರಿ, ಬಸವರಾಜ ಸಜ್ಜನ್, ಸಂಗಯ್ಯ ಹಿರೇಮಠ, ಪ್ರವೀಣ ಬಿರಾದಾರ ಉಪಸ್ಥಿತರಿದ್ದರು.

ಶೇಖರ ಕುರ್ತಕೋಟಿ ಬೀಳ್ಕೊಡುಗೆ ಸಮಾರಂಭ

ಝಳಕಿ: ರೈತರ ಜೊತೆ ಹಾಗೂ ಅಧಿಕಾರಿಗಳ ಜೊತೆ ಅವಿನಾಭಾವ ಸಂಬಂಧ ಇಟ್ಟುಕೊಂಡು ಜನಪರ ರೈತರ ಸೇವೆ ನಿರ್ವಹಿಸಿ ಕಾರ್ಯ ನಿರ್ವಹಿಸಿದ್ದಾರೆ. ಅವರು ಎಲ್ಲರ ಮೆಚ್ಚುಗೆ ಪಾತ್ರಗಿದ್ದಾರೆ ಎಂದು ಬಿಜೆಪಿ ಯುವ ಮುಖಂಡ ರಾಘವೇಂದ್ರ ಸಾಹುಕಾರ ಕಾಪಸೆ ಹೇಳಿದರು. ಸ್ಥಳೀಯ ಕೆಬಿಜಿಎಲ್ ಆವರಣದಲ್ಲಿ ನಡೆದ ವಯೋನಿವೃತ್ತಿ ಹೊಂದಿರುವ ಶೇಖರ ಬಿ.ಕುರ್ತಕೋಟಿ(ಬೆರಳಚ್ಚುಗಾರರು) ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾಸಿ ಮಾತನಾಡಿದ ಅವರು, ಶೇಖರ ಕುರ್ತಕೋಟಿ ಅವರು 30 ವರ್ಷ ಇಲ್ಲಿನ ಜನರೊಂದಿಗೆ ರೈತರೊಂದಿಗೆ, ಹಾಗೂ ಅಧಿಕಾರಗಳೊಂದಿಗೆ ಅವಿನಾಭಾಕ ಸಂಮಂಧ ಇಟ್ಟುಕೊಂಡು ಕಾರ್ಯ ನಿರ್ವಹಿಸುದ್ದಾರೆ ಎಂದು ಹೇಳಿದರು. ಕೆಬಿಜಿಎಲ್ ಮೇಲಾಧಿಕಾರಿ ಮನೋಜಕುಮಾರ ಗಡಬಳ್ಳಿ ಮಾತನಾಡಿ, ಶೇಖರ ಕುರ್ತಕೋಟಿಯವರು 30 ವರ್ಷ ಒಂದೆ ಸ್ಥಳದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ನಮ್ಮ ಎಲ್ಲರ ಮೆಚ್ಚುಗೆ ಪಾತ್ರಗಿದ್ದಾರೆ. ಇಂತಹ ಒಳ್ಳೆಯ ವ್ಯಕ್ತಿ ಅವರ ವೃತ್ತಿ ಜೀವನ ಒಳ್ಳೆಯ ನಡಸಲಿ ಎಂದು ಹಾರೈಸಿದರು. ಶೇಖರ ಕುರ್ತಕೋಟಿ ಮಾತನಾಡಿದರು. ಕಾರ್ಯಪಾಲಕ ಅಭಿಯಂತರು ಶ್ರೀಮಂತ ಜಿ.ಅಂಗಡಿ, ಸಿ.ಎಸ್.ಕೋಳಿ, ಗ್ರಾಪಂ ಮಾಜಿ ಅಧ್ಯಕ್ಷ ಅಶೋಕ ಕಾಪಸೆ, ಅಣ್ಣಪ್ಪ ತಳವಾರ, ಬಾಪುರಾಯ ಲೋಣಿ, ರಮೇಶಗೌಡ ಪಾಟೀಲ, ಹಣಮಂತ ಕೋಳಿ, ಸುನೀಲ ಹೂಗಾರ, ಸಿದ್ದಾರಾಮ ಸಾಹುಕಾರ ಕಾಪಸೆ, ರವಿ ತೇಲಿ, ರೇವಣ್ಣ ತಳವಾರ, ಪ್ರಕಾಶಗೌಡ ಬಿರಾದಾರ ರರವಿ ಹೂಗಾರ, ರಾಜು ಕಾಸರ, ಪರಸರಾಮ ತಳವಾರ, ಗ್ರಾಮಸ್ಥರು, ಸಿಬ್ಬಂದಿ ಉಪಸ್ಥಿತರಿದ್ದರು.



ಝಳಕಿ: ಸ್ಥಳೀಯ ಕೆಬಿಜಿಎಲ್ ಆವರಣದಲ್ಲಿ ನಡೆದ ವಯೋನಿವೃತ್ತಿ ಹೊಂದಿರುವ ಶೇಖರ ಬಿ.ಕುರ್ತಕೋಟಿ(ಬೆರಳಚ್ಚುಗಾರರು) ಬೀಳ್ಕೊಡುಗೆ ಸಮಾರಂಭ ನಡೆಯಿತು. ಬಿಜೆಪಿ ಯುವ ಮುಖಂಡ ರಾಘವೇಂದ್ರ ಸಾಹುಕಾರ ಕಾಪಸೆ, ಕೆಬಿಜಿಎಲ್ ಮೇಲಾಧಿಕಾರಿ ಮನೋಜಕುಮಾರ ಗಡಬಳ್ಳಿ, ಶ್ರೀಮಂತ ಜಿ.ಅಂಗಡಿ, ಸಿ.ಎಸ್. ಕೋಳಿ, ಗ್ರಾಪಂ ಮಾಜಿ ಅಧ್ಯಕ್ಷ ಅಶೋಕ ಕಾಪಸೆ, ಅಣ್ಣಪ್ಪ ತಳವಾರ, ಬಾಪುರಾಯ ಲೋಣಿ ಇದ್ದರು.

ಕಿರುಸುದ್ದಿ

ರಾಹುಲ್ ಗಾಂಧಿಗೆ ದಲಿತರ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ: ಯತ್ನಾಳ

ವಿಜಯಪುರ: ಸಿದ್ದರಾಮಯ್ಯನವರಿಗೆ, ಸಂಗೊಳ್ಳಿ ರಾಯಣ್ಣನವರಿಗೆ ಜೊತೆಗಿದ್ದವರು ಬೆನ್ನಿಗೆ ಚೂರಿ ಹಾಕಿದರು. ಹಿಂದೆ ವೀರೇಂದ್ರ ಪಾಟೀಲ ಅವರದ್ದು ಹೀಗೆ ಆಯಿತು ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಯಾವ ರಾಜ್ಯದಲ್ಲಿ ಇದೆ ಅಲ್ಲೆಲ್ಲ ಮೇಲು



ಜಾತಿಯವರೇ ಮುಖ್ಯಮಂತ್ರಿ ಇದ್ದಾರೆ. ರಾಹುಲ್ ಗಾಂಧಿಗೆ ಹಿಂದುಳಿದವರ ದಲಿತರ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ ಎಂದರು. ಚಡಚಣ ತಾಲೂಕಿನಲ್ಲಿ 6 ಜನರ ಬರ್ಬರ ಕೊಲೆ ಪ್ರಕರಣ ಕುರಿತು ಪ್ರತಿಕ್ರಿಯಿಸಿ, ಹಿಂದೆ ಪ್ರತಾಪ್ ರೆಡ್ಡಿ ಅವರು ಎಸ್ ಪಿ ಇದ್ದಾಗ ಇಂತಹವುಗಳನ್ನು ಕಂಟ್ರೋಲ್ ಮಾಡಿದ್ದರು. ಈಗಿನ ಎಸ್ ಪಿ ಅವರು ಸಹಿತ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೇ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಈ ಘಟನೆ ನೋಡಿದರೆ ಪೊಲೀಸರ ಬಗ್ಗೆ ಭಯ ಇಲ್ಲದಂತಾಗುತ್ತದೆ. ರಾಜ್ಯದಲ್ಲಿ ಆಡಳಿತ ವೈಫಲ್ಯ ಹೆಚ್ಚಾಗಿದೆ ಎಂದರು. ಆಳಂದದಲ್ಲಿ ಶಿವಲಿಂಗದ ಮೇಲೆ ಮೂತ್ರ ವಿಸರ್ಜನೆ ಮಾಡುವರಿಗೆ ಬಿಡುತ್ತಾರೆ. ಭೀಮಾ ತೀರದಲ್ಲಿ ಇರುವ ರೌಡಿಗಳ ಮೇಲೆ ನಿಗಾ ಇಡಬೇಕು. ಆರು ಜನರ ಕೊಲೆ ನೋಡಿದರೆ ಭಯದ ವಾತಾವರಣ ನಿರ್ಮಾಣ ಆಗುತ್ತದೆ. ಎಸ್ ಪಿ ಅವರ ಬಗ್ಗೆ ವಿಶ್ವಾಸ ಇದೆ ಅವರು ಕ್ರಮ ಜರುಗಿಸದಿದ್ದರೆ ನಮ್ಮ ಕ್ರಮ ನಾವು ಮಾಡುತ್ತೇವೆ ಎಂದರು.

ಸಂಭ್ರಮದ ಮಂಗಮ್ಮದೇವಿ ಜಾತ್ರಾ ಮಹೋತ್ಸವ

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದ ಸಮೀಪದ ಬಸವನಬಾಗೇವಾಡಿ ರಸ್ತೆಯ ಸಮೀಪದ ಮಂಗಮ್ಮದೇವಿಯ ಜಾತ್ರಾ ಮಹೋತ್ಸವ ಶುಕ್ರವಾರ ಮುಂಜಾನೆ ವಿಶೇಷ ಪೂಜಾದೊಂದಿಗೆ ಸಂಭ್ರಮದಿಂದ ಜರುಗಿತು. ನಂತರ ಉಡಿ ತುಂಬುವ ಕಾರ್ಯಕ್ರಮ, ಡೊಳ್ಳಿನ ಪದಗಳು ಜರುಗಿದವು, ಭಕ್ತಾದಿಗಳಿಗೆ ಮಹಾಪ್ರಸಾದ



ವ್ಯವಸ್ಥೆ ಮಾಡಿದರು, ಪಟ್ಟಣ ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ ಭಕ್ತರು ಶ್ರದ್ಧಾ, ಭಕ್ತಿಯಿಂದ ದೇವಿ ದರ್ಶನ ಪಡೆದುಕೊಂಡು ಅನ್ನಪ್ರಸಾದ ಸ್ವೀಕರಿಸಿ ಭಕ್ತಿ ಭಾವದಿಂದ ಮಂಗಮ್ಮದೇವಿ ಜಾತ್ರೆಯನ್ನು ಸಂಭ್ರಮದಿಂದ ಆಚರಿಸಿದರು. ಪಟ್ಟಣದ ಹಿರಿಯರಾದ ಸುಭಾಸಗೌಡ ಪಾಟೀಲ, ಅಪ್ಪುಗೌಡ ಪಾಟೀಲ, ವಿಶ್ವನಾಥಗೌಡ ಪಾಟೀಲ, ಜ್ಯೋತೆಪ್ಪ ಯರನಾಳ, ಬಸನಗೌಡ ಅಗ್ನಿ, ದ್ಯಾಮಣ್ಣ ರೊಳ್ಳಿ, ಶರಣಪ್ಪ ರೊಳ್ಳಿ, ಸದು ಬಡಿಗೇರ, ಶಿವಾನಂದ ನುಚ್ಚಿ, ಸಿದ್ದು ನಾಟೀಕಾರ, ಬಸವರಾಜ ಆರಳೆಪ್ಪನವರ, ಮುತ್ತು ಅಗಸರ, ಯಮನೂರಿ ರೊಳ್ಳಿ, ಸಿದ್ದು ರೊಳ್ಳಿ, ಮೌನೇಶ ಬಡಿಗೇರ, ಅರವಿಂದ ಬಡಿಗೇರ ಸೇರಿದಂತೆ ಇತರರು ಇದ್ದರು.

ಪೂರ್ವಭಾವಿ ಸಭೆ ಇಂದು

ತಾಳಿಕೋಟೆ: ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟ ಗ್ರಾಮದ ದಲಿತ ಯುವಕ ರವಿಚಂದ್ರ ದೇವಪ್ಪ ಮಾದರ ಎಂಬುವವರ ನಿಗೂಢ ಸಾವು ಹಾಗೂ ಆರೋಪಿಗಳ ಬಂಧನ ವಿಳಂಬವನ್ನು ಖಂಡಿಸಿ, ಮುಂದಿನ ಹೋರಾಟದ ರೂಪುರೇಷೆ ಸಿದ್ಧಪಡಿಸಲು ಜೂ.1ರಂದು ತಾಳಿಕೋಟೆಯಲ್ಲಿ ದಲಿತಪರ ಸಂಘಟನೆಗಳ ಒಕ್ಕೂಟದ ವತಿಯಿಂದ ತುರ್ತು ಪೂರ್ವಭಾವಿ ಸಭೆ ಕರೆಯಲಾಗಿದೆ.

ನಾಗರಬೆಟ್ಟ ಗ್ರಾಮದ ದಲಿತ ಯುವಕ ರವಿಚಂದ್ರ ಮಾದರ ಎಂಬ ಯುವಕನನ್ನು ಕೆಲವು ದುಷ್ಕರ್ಮಿಗಳು ಮಾರಣಾಂತಿಕ ಹಲ್ಲೆ ನಡೆಸಿ ಕೊಲೆಗೈದಿದ್ದಾರೆ. ತದನಂತರ ಇದನ್ನು ಆತ್ಮಹತ್ಯೆ ಎಂದು ಬಿಂಬಿಸಲು ಶವವನ್ನು ನೇಣು ಹಾಕಲಾಗಿದೆ ಎಂದು ಒಕ್ಕೂಟ ಆರೋಪಿಸಿದೆ. ಘಟನೆ ನಡೆದು ಇಷ್ಟು ದಿನಗಳಾದರೂ ಕೊಲೆಗೈದ ಆರೋಪಿಗಳನ್ನು ಪೊಲೀಸರು ಇದುವರೆಗೂ ಬಂಧಿಸದೇ ಇರುವುದನ್ನು ಖಂಡಿಸಿ ಈ ಸಭೆ ಆಯೋಜಿಸಲಾಗಿದೆ ಜೂ.1ರಂದು ಸೋಮವಾರ ಬೆಳಗ್ಗೆ 10 ಗಂಟೆಗೆ ಸ್ಥಳೀಯ ಡಾ.ಬಿ.ಆರ್.ಅಂಬೇಡ್ಕರ್ ಭವನ, ತಾಳಿಕೋಟೆಯಲ್ಲಿ ತಾಲೂಕಿನ ಎಲ್ಲಾ ಗ್ರಾಮಗಳ ದಲಿತ ಸಮುದಾಯದ ಮುಖಂಡರು, ವಿವಿಧ ದಲಿತಪರ ಸಂಘಟನೆಗಳ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ನ್ಯಾಯಕ್ಕಾಗಿ ನಡೆಯುವ ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿಸಲಾಗಿದೆ. ಈ ಪ್ರಕಟಣೆಯನ್ನು ವಿವಿಧ ದಲಿತ ಪರ ಸಂಘಟನೆ ಒಕ್ಕೂಟದ ತಾಲ್ಲೂಕು ಅಧ್ಯಕ್ಷ ಮುತ್ತಪ್ಪ ಚಮಲಾಪುರ, ಡಿಎಸ್ಎಸ್ ವಿಭಾಗೀಯ ಸಂಚಾಲಕರಾದ ದೇವೇಂದ್ರ ಹಾದಿಮನಿ, ದಲಿತ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಂಚಾಲಕ ನಾಗೇಶ ಕಟ್ಟಿಮನಿ ಹಾಗೂ ತಾಲೂಕು ಸಂಚಾಲಕ ಮಹೇಶ ಚಲವಾದಿ ಜಂಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧೆಡೆ ಸಿಸಿ ರಸ್ತೆ ಕಾಮಗಾರಿಗಳಿಗೆ ಶಾಸಕ ರಾಜುಗೌಡ ಭೂಮಿಪೂಜೆ

ದೇವರಹಿಪ್ಪರಗಿ: ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದು, ಗ್ರಾಮಸ್ಥರ ಬೇಡಿಕೆಯಂತೆ ಹಂತ, ಹಂತವಾಗಿ ಅಗತ್ಯ ಮೂಲಸೌಕರ್ಯಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಹೇಳಿದರು.

ಮತಕ್ಷೇತ್ರದ ಪಡಗಾನೂರತಾಂಡಾ,ಹರನಾಳ, ಹಿಟ್ನಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಒಟ್ಟು 2 ಕೋಟಿ ವೆಚ್ಚದ ಸಿಸಿ ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು,ಗ್ರಾಮೀಣ ಭಾಗದ ಅಭಿವೃದ್ಧಿಯೇ ನಿಜವಾದ ಅಭಿವೃದ್ಧಿ ಜನರು ಎದುರಿಸುತ್ತಿರುವ ರಸ್ತೆ, ಸಿ ಸಿ ರಸ್ತೆ,ಒಳಚರಂಡಿ, ಶಿಕ್ಷಣ, ವಿದ್ಯುತ್, ನೀರಾವರಿ, ಆರೋಗ್ಯ, ಸಾರಿಗೆ, ಕುಡಿಯುವ ನೀರಿನ ಸಮಸ್ಯೆ ಹಾಗೂ ಸಂಪರ್ಕ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವುದು ನಮ್ಮ ಮುಖ್ಯ ಗುರಿ. ಯಾವುದೇ ಗ್ರಾಮವೂ ಅಭಿವೃದ್ಧಿಯಿಂದ ಹಿಂದೆ ಉಳಿಯಬಾರದು ಎಂಬ ಉದ್ದೇಶದಿಂದ ಈ ಕಾಮಗಾರಿಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ತಾಲೂಕಿನ ಪಡಗಾನೂರ ತಾಂಡಾ ಗ್ರಾಮದಲ್ಲಿ ಸುಮಾರು 50ಲಕ್ಷ,ಹರನಾಳ ಗ್ರಾಮದಲ್ಲಿ 50ಲಕ್ಷ ಹಾಗೂ ಹಿಟ್ನಳ್ಳಿ ಗ್ರಾಮದಲ್ಲಿ ಸುಮಾರು 100 ಲಕ್ಷ ರೂ.ವೆಚ್ಚದ ಅನುದಾನದಲ್ಲಿ ನಿರ್ಮಾಣವಾಗಲಿರುವಸಿ.ಸಿರಸ್ತೆತಮ್ಮಅಧಿಕಾರದ ಅವಧಿಯಲ್ಲಿ ಗುಣಮಟ್ಟದ ವಿಚಾರದಲ್ಲಿ ರಾಜಿ ಇಲ್ಲ ಆದ್ದರಿಂದ ಕಾಮಗಾರಿಯಲ್ಲಿ



ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳಲು ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು. ವಿರೋಧ ಪಕ್ಷದ ಶಾಸಕನಾಗಿ ಯಾವುದೇ ರೀತಿಯ ರಾಜಕೀಯ ಮಾಡದೆ ನಿರಂತರವಾಗಿ ಅಭಿವೃದ್ಧಿ ಕೆಲಸ ಮಾಡುತ್ತಿದ್ದೇನೆ. ತಮ್ಮೆಲ್ಲರ ಸಹಕಾರದಿಂದ ಕ್ಷೇತ್ರದ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ ಎಂದು ಹೇಳಿದರು.

ಗುರುರಾಜ ಆಕಳವಾಡಿ, ಸಂಗನಗೌಡ ಬಿರಾದಾರ ಮಾತನಾಡಿ, ಕಳೆದ 50 ವರ್ಷಗಳಿಂದ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಣದ ಕುಗ್ರಾಮಗಳಿಗೂ ಶಾಸಕರು ಕೋಟಿ,ಕೋಟಿ ಅನುದಾನ ತಂದು ಅಭಿವೃದ್ಧಿಪಡಿಸಿದ್ದಾರೆ. ಬರುವಂತ ದಿನಗಳಲ್ಲಿ ನಾವೆಲ್ಲರೂ ಅವರಿಗೆ ಸಹಕಾರ ನೀಡೋಣ ಎಂದರು.

ವಿವಿಧ ಗ್ರಾಮಗಳ ಗ್ರಾಮಸ್ಥರು ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಅವರಿಗೆ ಕೃತಜ್ಞತೆ ಸಲ್ಲಿಸಿ, ಅವರನ್ನು ಸತ್ಕರಿಸಿದರು. ಗ್ರಾಪಂ ಮಾಜಿ ಅಧ್ಯಕ್ಷ ಸುರೇಶ ರಾಠೋಡ, ಮುಖಂಡರುಗಳಾದ ಶಂಕರ ರಾಠೋಡ, ಶ್ರೀಶೈಲ ಮಳಜಿ, ನಿಂಗನಗೌಡ ಹಲಸಗುಂದ, ಸಂಗನಗೌಡ ಬಿರಾದಾರ, ಸಿದ್ದನಗೌಡ ಜಲಪೂರ, ಪರಶುರಾಮ ವಡ್ಡರ, ಶರಣು ತುಂಬಗಿ ಉಪಸ್ಥಿತರಿದ್ದರು.

ಅಹಲ್ಯಾಬಾಯಿ ಆಡಳಿತದ ಕಾಲ ಸುವರ್ಣ ಯುಗ

ವಿಜಯಪುರ: ನಗರದಲ್ಲಿ ಸಂಗೊಳ್ಳಿ ರಾಯಣ್ಣ ಅವರ ಕಂಚಿನ ಮೂರ್ತಿಯನ್ನು ಪ್ರತಿಷ್ಠಾಪಿಸಿ, ರಾಜ್ಯದಲ್ಲಿಯೇ ದಾಖಲೆ ಆಗುವ ರೀತಿಯಲ್ಲಿ ಜನಸ್ತೋಮ ಸೇರಿ ಅನಾವರಣ ಮಾಡಲಾಗುವುದು ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಭರವಸೆ ನೀಡಿದರು.

ನಗರದ ಅಹಲ್ಯಾಬಾಯಿ ಹೋಳ್ಕರ್ ವೃತ್ತದಲ್ಲಿ ಭಾನುವಾರ ರಾಜಮಾತಾ ಅಹಿಲ್ಯಾಬಾಯಿ ಹೋಳ್ಕರ್ ಜಯಂತ್ಯುತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಈಗಾಗಲೇ ನಗರದಲ್ಲಿ ಮಹಾರಾಷ್ಟ್ರಕ್ಕೆ ಸೀಮಿತವಾಗಿದ್ದ ಹಿಂದೂ ಧರ್ಮ ರಕ್ಷಕಿ ಅಹಿಲ್ಯಾಬಾಯಿ ಹೋಳ್ಕರ್ ಅವರ ಇತಿಹಾಸ ರಾಜ್ಯದಲ್ಲಿಯೂ ಪ್ರಚುರಪಡಿಸಲು ಅವರ ವೃತ್ತ ಸೇರಿದಂತೆ ಅನೇಕ ಮಹಾಪುರುಷರ, ಸ್ವಾತಂತ್ರ್ಯ ಹೋರಾಟಗಾರರ, ನಾಡಿಗಾಗಿ ಸೇವೆ ಸಲ್ಲಿಸಿದ ಮಹನೀಯರ ವೃತ್ತಗಳ ಸ್ಥಾಪನೆ, ರಸ್ತೆಗಳಿಗೆ ಹೆಸರು ನಾಮಕರಣ ಮಾಡಲಾಗಿದೆ.

ರಾಯಣ್ಣನವರ ಮೂರ್ತಿ ಬಾಕಿಯಿದ್ದು, 2027ರ ಆ.15ರಂದು ಅದನ್ನೂ ಮಾಡುವುದಾಗಿ ತಿಳಿಸಿದರು.

ಭಾರತದ ಇತಿಹಾಸದಲ್ಲಿ ರಾಜಮಾತಾ ಅಹಿಲ್ಯಾಬಾಯಿ ಹೋಳ್ಕರ್ ಅವರು ನಡೆಸಿದ 35 ವರ್ಷಗಳ ಸುಧೀರ್ಘ ಆಡಳಿತ ಕಾಲವನ್ನು ಸುವರ್ಣ ಯುಗ ಎಂದು ಕರೆಯಲಾಗುತ್ತದೆ. ಅಹಿಲ್ಯಾಬಾಯಿ ಅವರು ಸಮರ್ಥ ಆಡಳಿತಗಾರರಾಗಿದ್ದರು. ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿ, ಮಹಿಳಾ ಸೈನ್ಯವನ್ನು ಕಟ್ಟಿದರು. ಅವರ ಜನಪರ ಹಾಗೂ ದೈವಿಕ ಕಾರ್ಯಗಳನ್ನು ಪರಿಗಣಿಸಿ 'ಲೋಕಮಾತಾ' ಎಂದು ಗೌರವದಿಂದ ಕರೆಯಲಾಗುತ್ತದೆ ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಸದಸ್ಯರಾದ ರಾಜಶೇಖರ ಕುರಿಯವರು ನೇತೃತ್ವ ವಹಿಸಿದ್ದರು. ಮಹಾನಗರ ಪಾಲಿಕೆ ಮೇಯರ್ ಎಂ.ಎಸ್.ಕರಡಿ, ಸದಸ್ಯರಾದ ಪ್ರೇಮಾನಂದ ಬಿರಾದಾರ, ಜವಾಹರ ಗೋಸಾವಿ, ರಾಹುಲ್ ಜಾಧವ, ಮಾಜಿ ಉಪಮೇಯರ್ ರಾಜೇಶ ದೇವಗಿರಿ, ಮುಖಂಡರಾದ ಅಶೋಕ ಬೆಲ್ಲದ, ರಮೇಶ ಪಡಸಲಗಿ, ರಮೇಶ ವೀರಕರ, ಸೋಮು ರಣದೇವಿ, ರಾಜಶೇಖರ ಭಜಂತ್ರಿ, ನಾಗರಾಜ ಮುಳವಾಡ, ಶಂಕರ ಬಾಡಗಂಡಿ, ಮಾಂತೇಶ ಒಣರೊಟ್ಟಿ, ಗಿರೀಶ ಕೆಳಗಡೆ, ಕಾರ್ಯಕರ್ತರು, ಉಪಸ್ಥಿತರಿದ್ದರು.



ಶಿವಾನಂದಗೆ ಡಿಸಿಎಂ ಸ್ಥಾನ ನೀಡಲು ಒತ್ತಾಯ

ಬಸವನಬಾಗೇವಾಡಿ: ಸಚಿವರಾದ ಶಿವಾನಂದ ಪಾಟೀಲ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಒತ್ತಾಯಿಸಿ ಪಟ್ಟಣ ಸೇರಿದಂತೆ ಮತಕ್ಷೇತ್ರದ ವಿವಿಧ ಕಡೆಗಳಿಂದ ಆಗಮಿಸಿದ ಅಭಿಮಾನಿ ಕಾರ್ಯಕರ್ತರು ಶನಿವಾರ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಹಕ್ಕೊತ್ತಾಯ ಮಾಡಿದರು.

ನೇತೃತ್ವ ವಹಿಸಿದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಈರಣ್ಣ ಪಟ್ಟಣಶೆಟ್ಟಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ಪ್ರಚಾರ ಸಮಿತಿ ಬ್ಲಾಕ್ ಅಧ್ಯಕ್ಷರಾದ ಶಂಕರಗೌಡ ಬಿರಾದಾರ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಚಂದ್ರಶೇಖರಗೌಡ ಪಾಟೀಲ ಮಾತನಾಡಿ ಕಳಂಕ ರಹಿತ ಹಿರಿಯ ನಾಯಕನಿಗೆ ಸೂಕ್ತ ಸ್ಥಾನಮಾನ ಸಿಗಲಿ ಉತ್ತರ ಕರ್ನಾಟಕದ ಪ್ರಬಲ ಲಿಂಗಾಯತ ಪಂಚಮಸಾಲಿ ಸಮುದಾಯದ ಮುಂಚೂಣಿ ನಾಯಕರಾಗಿರುವ ಶಿವಾನಂದ ಪಾಟೀಲರು ಈಗಾಗಲೇ 6ಬಾರಿ ಶಾಸಕರಾಗಿ, 2ಬಾರಿ ಸಚಿವರಾಗಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಅಪಾರವಾಗಿ ಶ್ರಮಿಸಿದ್ದಾರೆ. ಯಾವುದೇ ಕಳಂಕವಿಲ್ಲದೆ ಅತ್ಯಂತ ದಕ್ಷ ಹಾಗೂ ಉತ್ತಮ ಸಚಿವರಾಗಿ ಕಾರ್ಯನಿರ್ವಹಿಸಿದ ದೀರ್ಘ ಅನುಭವ ಹೊಂದಿರುವ ಅವರಿಗೆ ಡಿಸಿಎಂ ಸ್ಥಾನಮಾನ ನೀಡುವುದು ಸೂಕ್ತ ಎಂದು ಒತ್ತಾಯಿಸಿದರು.

ಒಂದು ವೇಳೆ ಹೈಕಮಾಂಡ ಉಪಮುಖ್ಯಮಂತ್ರಿ ಸ್ಥಾನ ನೀಡಿದಲ್ಲಿ, ಮುಂಬರುವ ಚುನಾವಣೆಗಳಲ್ಲಿ ವಿಜಯಪುರ ಜಿಲ್ಲೆಯ ಎಲ್ಲಾ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಭರ್ಜರಿ ಜಯಭೇರಿ ಬಾರಿಸುವುದು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ರುಕ್ಮಿಣಿ ರಾಠೋಡ, ಪ್ರ.ಕಾರ್ಯದರ್ಶಿ ರವಿ ರಾಠೋಡ, ಎಂ.ಜಿ.ಆದಿಗೊಂಡ, ಸುರೇಶಗೌಡ ಪಾಟೀಲ, ಸಂತೋಷ ಗಣಾಚಾರಿ, ಮಾಂತೇಶ ಸಾಸಾಬಾಳ, ಯಲ್ಲಪ್ಪ ಮನಗೂಳಿ ಮಾತನಾಡಿದರು

ಬಸವರಾಜ ಹಾರಿವಾಳ, ಬಾಲಚಂದ್ರ ಮುಂಜಾನೆ, ಶೇಖರಗೌಡ ಪಾಟೀಲ,ಶೇಖರ ಗೊಳಸಂಗಿ, ವಿಶ್ವನಾಥಗೌಡ ಪಾಟೀಲ, ಬಸವರಾಜ ಕೋಟಿ, ಬಸವರಾಜ ಸೋಂಪುರ, ಸಂಗಯ್ಯ ಕಾಳಹಸ್ತೇಶ್ವರಮಠ, ಬಸವರಾಜ ರಾಯಗೊಂಡ, ಪ್ರೇಮಕುಮಾರ ಮ್ಯಾಗೇರಿ, ನಿಸಾರ ಚೌದ್ರಿ, ರಮೇಶ ಯಳಮೇಲಿ, ಬಾಬು ಚವ್ಹಾಣ, ದೇವೇಂದ್ರ ನಾಯಕ, ಬಸವರಾಜ ತುಂಬಗಿ ಸೇರಿದಂತೆ ಪಕ್ಷದ ನೂರಾರು ಮುಖಂಡರು, ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಸರ್ಕಾರದ ವಿವಿಧ ಇಲಾಖೆಗಳ ನಾಮನಿರ್ದೇಶಿತ ಸದಸ್ಯರು ಸೇರಿ ಮಸೂತಿ, ಮುಸಬಿನಾಳ, ಮುತ್ತಗಿ, ಮನಗೂಳಿ ಸೇರಿ ಕಾರ್ಯಕರ್ತರು ಪಾಲ್ಗೊಂಡಿದ್ದರು.



ಗುರು ಶಿಷ್ಯರ ಬಾಂಧವ್ಯ ಗಟ್ಟಿಗೊಳಿಸುವ ಗುರುವಂದನಾ ಕಾರ್ಯಕ್ರಮ

ಆಲಮೇಲ: ವಿದ್ಯೆಗೆ ಬದುಕು ನೀಡಿದ ಗುರುಗಳನ್ನು ಸನ್ಮಾನಿಸಿ, ಕೃತಜ್ಞತೆ ಸಲ್ಲಿಸುವ ಪವಿತ್ರ ಕಾರ್ಯಕ್ರಮ ಏರ್ಪಡಿಸುವ ಮೂಲಕ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲದೊಂದಿಗೆ ಗುರು ಶಿಷ್ಯರ ಬಾಂಧವ್ಯ ಗಟ್ಟಿಗೊಳಿಸಿ, ಹಳೆಯ ನೆನಪುಗಳನ್ನು ಮೆಲಕು ಹಾಕುವಂತೆ ಈ ವೇದಿಕೆಯನ್ನು ಅತ್ಯಂತ ಪ್ರಮುಖವಾಗಿದೆ ಏರ್ಪಡಿಸಿದ ವಿದ್ಯಾರ್ಥಿಗಳ ಕಾರ್ಯ ಮೆಚ್ಚುವಂತಹದು ಎಂದು ಎ.ಕೆ.ನಂದಿ ಪಪೂ ಕಾಲೇಜಿನ ಪ್ರಾಚಾರ್ಯ ಪ್ರೊ.ಎನ್.ಎಸ್.ದೇವರಮನಿ ಹೇಳಿದರು.

ಪಟ್ಟಣದಲ್ಲಿ ಭಾನುವಾರ 2005-06ನೇ ಸಾಲೀನ ವಿದ್ಯಾರ್ಥಿಗಳು ಏರ್ಪಡಿಸಿದ ಗುರು ವಂದನಾ ಕಾರ್ಯಕ್ರಮ ಉದ್ಘಾಟಿಸಿ ವಿದ್ಯಾರ್ಥಿಗಳಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಶಿಕ್ಷಕರಾದ ಜಿ.ಜಿ.ಕಿಣಗಿ, ಸಿ.ಕೆ.ಸಿಂಪಿ, ಎಸ್.ಎಸ್.ಬಿರಾದಾರ, ಆರ್.ಎನ್.ಮಸಳಿ, ಎನ್.ಎಸ್.ದೇವರಮನಿ, ಎಮ್.ಎಸ್.ಬಬಲೇಶ್ವರ, ಎ.ಜಿ.ವಾಲಿ, ಎಸ್.ಎಸ್.ಮಹೀಂದ್ರಕರ, ಶರಣಗೌಡ.ಬಿ.ಪಾಟೀಲ, ಸಿ.ಎಮ್.ಬಂಡಗರ, ವಿ.ಎಸ್.ತೇರದಾಳ ಕೆ.ವಿ.ಹಾಬಾಳ, ಎಮ್.ಆರ್.ಮಹಾಜನ, ಎನ್.ಜಿ.ಮೊಕಾಶಿ, ಎಂ.ಜಿ.ಹಿರೇಮಠ, ಎಸ್.ಎಸ್.



ಹಳೆಮನಿ, ಸಿ.ಎಂ.ಕೊಟ್ಟಲಗಿ, ಶ್ರೀಶೈಲ ಮಠಪತಿ ಅವರನ್ನು ಸನ್ಮಾಗಿಸಿ ಗೌರವಿಸಲಾಯಿತು.

ಅಳ್ಳೋಳ್ಳಿಮಠದ ಶ್ರೀಶೈಲಯ್ಯಾ ಅಳ್ಳೋಳ್ಳಿಮಠ, ಅರ್ಜುಣಗಿ ಹಿರೇಮಠದ ಷ.ಬ್ರ.ಸಂಗನಬಸವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದರು. ಪಿಂಟು ನಾಯ್ಕೋಡಿ, ವಿವೇಕ ಸದ್ಲಾಪೂರ, ಶಿವು ತಳವಾರ, ಅಮೃತ ಕೊಟ್ಟಲಗಿ, ವಿನಾಯಕ ಕಲಶಟ್ಟಿ ವಿಶ್ವನಾಥ ಹಿರೇಮಠ, ಜೈಭೀಮ ಮಾಡ್ಯಾಳ, ಜಹೀರ ದೇವರಮನಿ, ವಿಜಯಕುಮಾರ ಕೆಳಗಿನಮನಿ, ಅಂಬರೀಷ ದರ್ಶನಕರ, ಸುಮೀತ ನಾರಾಯಣಕರ ಇದ್ದರು.

ಈರಣ್ಣ ಕೊಣ್ಣೂರ ಸೇವೆ ಶ್ಲಾಘನೀಯ

ನಾಲತವಾಡ: ಸುಮಾರು 2 ವರ್ಷಗಳಿಂದಲೂ ಪಟ್ಟಣದ ಸಾರ್ವಜನಿಕರೊಂದಿಗೆ ಸಹಕರಿಸಿ ವಿವಿಧ ಸಮಸ್ಯೆಗಳನ್ನು ಬಗೆಹರಿಸು ಮೂಲಕ ಹಾಗೂ ಆಡಳಿತ ಮಂಡಳಿಯವರೊಂದಿಗೆ ಸ್ಪಂದಿಸಿ ಸೇವೆಗೈದು ವಯೋನಿವೃತ್ತಿ ಹೊಂದಿದ ಈರಣ್ಣ ಕೊಣ್ಣೂರ ಅವರ ಸೇವೆ ಶ್ಲಾಘನೀಯ ಎಂದು ಪಪಂ ಅಧ್ಯಕ್ಷೆ ಲಲಿತಾ ಗೊರಬಾಳ ಹೇಳಿದರು.

ಇಲ್ಲಿಯ ಪಪಂ ಸಭಾಭವನದಲ್ಲಿ ಭಾನುವಾರ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ಪೃಥ್ವಿರಾಜ್ ನಾಡಗೌಡ ಅವರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪ.ಪಂ ಮುಖ್ಯಾಧಿಕಾರಿ ಹುದ್ದೆಯಿಂದ ನಿವೃತ್ತಿ ಹೊಂದಿದ ಈರಣ್ಣ ಕೊಣ್ಣೂರ ದಂಪತಿಗಳ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಪಪಂ ಮುಖ್ಯ ಅಧಿಕಾರಿ ಈರಣ್ಣ ಗಂ.ಕೊಣ್ಣೂರ ಮಾತನಾಡಿ, ಶರಣ ವೀರೇಶ್ವರ ನಾಡಿನಲ್ಲಿ ಸೇವೆ ಸಲ್ಲಿಸಿದ್ದೆ ನನ್ನ ಒಂದು ಭಾಗ್ಯ ಏಕೆಂದರೆ ಶರಣರ ನೆಲೆಯಾದ ನಾಲತವಾಡದಲ್ಲಿ ಗುರಿಯರ ದಣಿಗಳ ಸಮ್ಮುಖದಲ್ಲಿ ಯಾವುದೇ ರೀತಿ ತೊಂದರೆ ಆಗದಂತೆ ಎಲ್ಲರ ಸಹಕಾರದೊಂದಿಗೆ ಎರಡು ವರ್ಷ ಸೇವೆ ಮಾಡಲು ಅವಕಾಶ ಸಿಕ್ಕಿದೆ ಎಂದರು.

ಶಿರೂರ ಪಪಂ ವ್ಯವಸ್ಥಾಪಕ ವರದಪ್ಪನವರು, ಪಪಂ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮೀ ಮೇ ಇಲಕಲ್, ಈರಣ್ಣ ಕೊಣ್ಣೂರ, ಹಿರಿಯ ಸಿಬ್ಬಂದಿ



ಅನಿಲ್ ಚೆಟ್ಟರ, ಬಸವರಾಜ ಹುಡೇದ ಮಾತನಾಡಿದರು.


ಗುತ್ತಿಗೆದಾರರಾದ ಹನಮಂತ ಕುರಿ, ಬಬಲು ಮೇತ್ರಿ, ಮಹಾಂತಯ್ಯ ಮೆನೆದಾಳಮಠ, ಮೈಬೂಬ್ ಹಳ್ಳೂರ್, ಅಬ್ದುಲ ರಕ್ಕಸಗಿ, ಗುಂಡಪ್ಪ ಚಲವಾದಿ, ಬಸವರಾಜ ಹಳ್ಳಿ, ಪಪಂ ಸಿಬ್ಬಂದಿ, ಪೌರ ಕಾರ್ಮಿಕರು ಹಾಗೂ ಪಪಂ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ಇಲಕಲ್ಲ ಕುಟುಂಬದವರು ಸನ್ಮಾನಿಸಿ ಗೌರವಿಸಿದರು.

ಪಪಂ ಅಧ್ಯಕ್ಷೆ ಲಲಿತಾ ಗೊರಬಾಳ, ಮಾಜಿ ಹಂಗಾಮಿ ಅಧ್ಯಕ್ಷರು ಹಾಲಿ ಉಪಾಧ್ಯಕ್ಷ ಬಸವರಾಜ ಗಂಗನಗೌಡ್ರ, ಸಂಗಣ್ಣ ಬಾರಡ್ಡಿ, ಅಮರಪ್ಪ ಸೀರಿ, ಬಾಬು ಕ್ಷತ್ರಿ, ಮುತ್ತುಗೌಡ ಗೊರಬಾಳ, ಮಹ್ಮದ ನಾಡದಾಳ, ಯಮನವ್ವ ಗೌಂಡಿ, ನಾಮನಿರ್ದೇಶಿತ ಸದಸ್ಯರಾದ ಬಡಿಗೇರ, ಶರಣಪ್ಪ ಇಲಕಲ್ ಇತರರು ಇದ್ದರು.

ಕೆ.ಕೆ.ಚವ್ಹಾಣ ಅವರ ಸೇವೆ ಎಲ್ಲರಿಗೂ ಮಾದರಿ: ಸಿಇಒ

ವಿಜಯಪುರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸುಮಾರು 32 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಕೆ.ಕೆ.ಚವ್ಹಾಣ ಅವರಿಗೆ ಇಲ್ಲಿನ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ವಿವಿಧ ಇಲಾಖೆ ಅಧಿಕಾರಿ, ಸಿಬ್ಬಂದಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಆತ್ಮೀಯವಾಗಿ ಸನ್ಮಾನಿಸಿ ಶುಭ ಹಾರೈಸಿದರು.

ಈ ವೇಳೆ ಜಿಲ್ಲಾ ಪಂಚಾಯತಿ ಸಿಇಒ ರಿಷಿ ಆನಂದ ಮಾತನಾಡಿ, ಸೇವಾ ನಿವೃತ್ತಿ ಹೊಂದುತ್ತಿರುವ ಕೆ.ಕೆ.ಚವ್ಹಾಣ ಅವರು ಸಂಘಟಿತ ಆಡಳಿತ ಮತ್ತು ಎಲ್ಲರನ್ನೂ ಒಳಗೊಳ್ಳುವ ಅದ್ಭುತ ಸ್ವಭಾವವನ್ನು ಹೊಂದಿದ್ದರು. ಎಂತಹ ಕೆಲಸದ ಒತ್ತಡದ ಕ್ಲಿಷ್ಟಕರ ಹಾಗೂ ಕಷ್ಟದ ಪರಿಸ್ಥಿತಿಯಲ್ಲೂ ತಮ್ಮ ಅಧೀನ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ, ಕಾರ್ಯ ನಿರ್ವಹಣೆಯನ್ನು ಸುಗಮಗೊಳಿಸುತ್ತಿದ್ದರು. ಅತ್ಯಂತ ಸೌಮ್ಯ ಸ್ವಭಾವದೊಂದಿಗೆ ಕಾನೂನು ಪರಿಪಾಲನೆಗೆ ಆದ್ಯತೆ ನೀಡಿ, ಅವರ ಕಾರ್ಯವೈಖರಿ ನಿಜಕ್ಕೂ ಮೆಚ್ಚುವಂತದ್ದು ಎಂದು ಶ್ಲಾಘಿಸಿದರು.



ಸನ್ಮಾನ ಸ್ವೀಕರಿಸಿ ಮಾತನಾಡಿದ ಕೆ.ಕೆ.ಚವ್ಹಾಣ ಅವರು, ನನ್ನ ಸುದೀರ್ಘ ವೃತ್ತಿ ಜೀವನದಲ್ಲಿ ಇಲಾಖೆಯ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಹೆಗಲಿಗೆ ಹೆಗಲು ಕೊಟ್ಟು ಸಹಕರಿಸಿದ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ಸಹಕಾರ ಅನನ್ಯವಾದದ್ದು, ಸೇವೆ ಸಲ್ಲಿಸಿದ್ದು ನನ್ನ ಬದುಕಿನಲ್ಲಿ ಅತ್ಯಂತ ಖುಷಿ ತಂದಿದೆ ಎಂದರು.

ಜಿಲ್ಲಾ ನಿರೂಪಣಾಧಿಕಾರಿ ನಿರ್ಮಲಾ ಸುರಪುರ ಕೆ.ಕೆ.ಚವ್ಹಾಣ ಅವರ ಸುದೀರ್ಘ ಸೇವೆ ಸ್ಮರಿಸಿ, ಕಿರು ಪರಿಚಯ ಮಾಡಿಕೊಟ್ಟರು. ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅರವಿಂದ ಹಾಗರಗಿ, ಜಿಪಂ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ, ಜಿಪಂ ಮುಖ್ಯ ಲೆಕ್ಕಾಧಿಕಾರಿ ರಾಮಣ್ಣ ಅಥಣಿ, ಮುಖ್ಯ ಯೋಜನಾ ನಿರ್ದೇಶಕ ಸಿ.ಬಿ.ಕುಂಬಾರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ದೀಪಾ ಕಾಳೆ, ಕ್ರೀಡಾಧಿಕಾರಿ ರಾಜಶೇಖರ ಧೈವಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ವಾರ್ತಾಧಿಕಾರಿ ಅಮರೇಶ ದೊಡಮನಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ದೀಪಾಕ್ಷಿ ಜಾನಕಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬಸವರಾಜ ಜಿಗಳೂರ, ಗೀತಾ ಗುತ್ತರಗಿಮಠ, ಎಸ್.ಸಿ.ಮ್ಯಾಗೇರಿ, ಶಿವಕುಮಾರ ಕುಂಬಾರ, ಸಾಹೇಬ್ ಗೌಡ, ಅನಿಲ್ ಹಳ್ಳಿ, ಶಿಲ್ಪಾ ಹಿರೇಮಠ ಉಪಸ್ಥಿತರಿದ್ದರು.

ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಯುವಜನತೆ ಮುಂದಾಗಲಿ

ಬಸವನಬಾಗೇವಾಡಿ: ತಂಬಾಕು ಸೇವನೆಯಿಂದ ನಾವು ಕ್ಯಾನ್ಸರ್ ನಂತ ಅನೇಕ ಕಾಯಿಲೆಗಳಿಗೆ ಬಲಿಯಾಗುತ್ತೇವೆ, ತಂಬಾಕು ಸೇವನೆ ಒಂದು ಚಟ ಮಾತ್ರ ಆದ್ದರಿಂದ ಮುಕ್ತರಾಗಿ ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡಲು ಯುವಜನತೆ ಮುಂದಾಗಬೇಕೆಂದು ಪ್ರಧಾನ ಸಿವಿಲ್ ನ್ಯಾಯಾಧೀಶ ಅಮಿತ್ ಘಟ್ಟಿ ಹೇಳಿದರು.

ಸ್ಥಳೀಯ ಪೊಲೀಸ್ ಠಾಣೆ ಆವರಣದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ, ನ್ಯಾಯವಾದಿಗಳ ಸಂಘ ಹಾಗೂ ಪೊಲೀಸ್ ಇಲಾಖೆ ಇವರ ಸಹಯೋಗದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ ಹಾಗೂ ಕಾನೂನು ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಂಬಾಕು ತಿನ್ನಬೇಕು ಎಂದು ಎನ್ನಿಸಿದರೆ ನೀರನ್ನು ಕುಡಿಯಬೇಕು ಆದಾಗ ಮಾತ್ರ ತಂಬಾಕು ತಿನ್ನಬೇಕು ಎನ್ನುವ ಬಯಕೆ ಬರುವುದಿಲ್ಲ, ತಂಬಾಕಿನಿಂದ ಬಹಳಷ್ಟು ಜನರು ಪ್ರಾಣವನ್ನೇ ಕಳೆದುಕೊಳ್ಳುತ್ತಿದ್ದಾರೆ, ನಾವು ತಂಬಾಕು ಚಟಕ್ಕೆ ಮಾರು ಹೋಗದೆ ಉತ್ತಮ ಹವ್ಯಾಸ ಬೆಳೆಸಿಕೊಂಡು ಸುಂದರ ಬದುಕು ನಡೆಸಬೇಕೆಂದು ಹೇಳಿದರು.

ಜಿಲ್ಲಾ ಮನೋರೋಗ ತಜ್ಞ ಹಾಗೂ ನಶಾ ಮುಕ್ತ ತಜ್ಞ ಡಾ.ಮಂಜುನಾಥ ಮಸಳಿ ಉಪನ್ಯಾಸ



ನೀಡಿ, ಶೇ. 80ರಷ್ಟು ಜನರು ತಂಬಾಕಿನಿಂದ ಸಾವನ್ನಪ್ಪುತ್ತಿದ್ದಾರೆ, ತಂಬಾಕಿನಂತ ಮಾದಕ ವಸ್ತುಗಳನ್ನು ಸೇವನೆ ಮಾಡುವುದ್ದರಿಂದ ಅವು ನಮ್ಮ ಮೆದುಳನ್ನು ಆವರಿಸಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತವೆ, ಈ ಚಟಕ್ಕೆ ಹೆಚ್ಚು ಯುವಜನರು ಬಲಿಯಾಗುತ್ತಿದ್ದಾರೆ, ಯುವಜನರ ಮೇಲೆ ದೇಶ ನಿಂತಿದೆ ಎನ್ನವುದು ಮರೆಯಬಾರದು, ಪ್ರತಿಯೊಬ್ಬರು ಒಳ್ಳೇದನ್ನು ಹೆಚ್ಚು ಪ್ರಚಾರ ಪಡಿಸಬೇಕು, ಮಾದಕ ವಸ್ತುಗಳ ಸೇವನೆ ಬಿಟ್ಟು ಕ್ರೀಡೆ, ಯೋಗ, ವ್ಯಾಯಾಮ, ನ್ಯೂಸ್ ಪೇಪರ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕೆಂದು ಹೇಳಿದರು.

ಡಿವೈಎಸ್ಪಿ ಚಂದ್ರಕಾಂತ ನಂದರೆಡ್ಡಿ ಮಾತನಾಡಿ, ನಮ್ಮ ಸಮಾಜ, ಕುಟುಂಬ ಚನ್ನಾಗಿ ಇರಬೇಕೆಂದರೆ ತಂಬಾಕು ಸೇವನೆ ಅಂತಹ ದುಶ್ಚಟಗಳನ್ನು ದೂರು ಮಾಡಿ ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡಲು ಎಲ್ಲರೂ ಕೈಜೋಡಿಸಬೇಕೆಂದು ಹೇಳಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಪ್ರಕಾಶ ಗೊಟಖಿಂಡ್ಕಿ, ಪೊಲೀಸ್ ಇನ್ಸಪೆಕ್ಟರ್ ಗುರುಶಾಂತ ದಾಶ್ಯಾಳ, ಸಹಾಯಕ ಸರಕಾರಿ ಅಭಿಯೋಜಕ ರಾಜೇಶ್ವರಿ ಸುತ್ತಾರ, ನ್ಯಾಯವಾದಿ ವೈ.ಎನ್. ಲಂಕೇನವರ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಎಸ್.ಮೇಟಿ ಇದ್ದರು.

ಕಿರುಸುದ್ದಿ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮ



ಕೊಪ್ಪಳ: ಗಂಗಾವತಿ ವಿಧಾನಸಭಾ ಕ್ಷೇತ್ರದ ಹೊಸಳ್ಳಿ ರಸ್ತೆಯಲ್ಲಿರುವ ಜೈ ಭೀಮ್ ನಗರದಲ್ಲಿ ಭಾರತ ರತ್ನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿ ಹಾಗೂ 2570ನೇ ಗೌತಮ ಬುದ್ಧ ಜಯಂತಿ ಪ್ರಯುಕ್ತ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಭಾಗವಹಿಸಿದರು. ಮುಖಂಡ ನವೀನ್ ಮಾಲಿಪಾಟೀಲ್, ನಾಗರಾಜ್ ನಂದಾಪುರ, ಡಾ.ಆರ್.ಬಿ.ಪಾಟೀಲ, ದೊಡ್ಡ ಭೋಜಪ್ಪ, ಕೆ.ಅಂಬಣ್ಣ ಚಲವಾದಿ, ಸಣ್ಣ ಭೋಜಪ್ಪ, ಬಿ.ಅಶೋಕಪ್ಪ, ಹುಲುಗಪ್ಪ, ತಿಮ್ಮಣ್ಣ ಇದ್ದರು.

ಸದಸ್ಯರಾಗಿ ಎನ್. ಸತ್ಯನಾರಾಯಣ ನೇಮಕ

ಸಿಂಧನೂರು: ಕರ್ನಾಟಕ ಸರ್ಕಾರವು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರನ್ನಾಗಿ ಎನ್.ಸತ್ಯನಾರಾಯಣ ಶ್ರೇಷ್ಠಿ ಅವರನ್ನು ಮುಂದಿನ ಮೂರು ವರ್ಷಗಳ ಅವಧಿಗೆ ನೇಮಕ ಮಾಡಿ ಆದೇಶ ಹೊರಡಿಸಿದೆ. ಈ ನೇಮಕಾತಿ ಆದೇಶ ಹೊರಬಿದ್ದ



ಬೆನ್ನಲ್ಲೇ ಸಿಂಧನೂರು ಸೇರಿದಂತೆ ವಿವಿಧ ಭಾಗಗಳಲ್ಲಿ ಅವರ ಸ್ನೇಹಿತರು, ಸಮಾಜ ಸೇವಕರು, ಆಕ್ಸ್‌ಫರ್ಡ್ ಸಮೂಹ ಸಂಸ್ಥೆಗಳ ವಿದ್ಯಾರ್ಥಿಗಳು, ಪ್ರಾಚಾರ್ಯರು, ಶಿಕ್ಷಕರು ಹಾಗೂ ಬಂಧು-ಬಳಗದವರು ಸಾಮಾಜಿಕ ಜಾಲತಾಣಗಳ ಮೂಲಕ ಅಭಿನಂದನೆಗಳು ಹಾಗೂ ಶುಭಾಶಯಗಳನ್ನು ಸಲ್ಲಿಸುತ್ತಿದ್ದಾರೆ. ಹಾಗೂ ಸಾಮಾಜಿಕ,ಶೈಕ್ಷಣಿಕ ಹಾಗೂ ಜನಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಎನ್.ಸತ್ಯನಾರಾಯಣ ಶ್ರೇಷ್ಠಿ ಅವರು ಹಲವು ವರ್ಷಗಳಿಂದ ಸಮಾಜಮುಖಿ ಕಾರ್ಯಗಳ ಮೂಲಕ ಜನರ ಮೆಚ್ಚುಗೆ ಗಳಿಸಿದ್ದಾರೆ,ಮಕ್ಕಳ ಕಲ್ಯಾಣ,ಶಿಕ್ಷಣ ಹಾಗೂ ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳಲ್ಲಿ ತಮ್ಮದೆಯಾದ ಕೊಡುಗೆಯನ್ನು ನೀಡಿರುವ ಅವರು, ವಿವಿಧ ಸಂಘ- ಸಂಸ್ಥೆಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ. ಅವರ ಸೇವಾ ಮನೋಭಾವ,ಸರಳ ವ್ಯಕ್ತಿತ್ವ ಹಾಗೂ ಸಮಾಜದ ವಿವಿಧ ವರ್ಗಗಳೊಂದಿಗೆ ಹೊಂದಿರುವ ಆತ್ಮೀಯ ಸಂಬಂಧದಿಂದಾಗಿ ಈ ನೇಮಕಾತಿ ಪ್ರದೇಶದ ಜನರಲ್ಲಿ ಸಂತಸ ಮೂಡಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಸಾವಿರಾರು ಜನರು ಶುಭಾಶಯ ಸಂದೇಶಗಳನ್ನು ಹಂಚಿಕೊಳ್ಳುತ್ತಿದ್ದಾರೆ.

ಸರ್ಕಾರಿ ಕಾಲೇಜ್‌ಗಳಲ್ಲಿ ಪ್ರವೇಶ ಪಡೆಯಿರಿ

ಸಿಂಧನೂರು: ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ನಿರ್ದೇಶನದಂತೆ ಬಡ ಮತ್ತು ಮಧ್ಯಮ ವರ್ಗದವರು ಗುಣಮಟ್ಟದ ಶಿಕ್ಷಣಕ್ಕಾಗಿ ಸರ್ಕಾರಿ ಪಿಯು ಕಾಲೇಜುಗಳಲ್ಲಿ ಪ್ರವೇಶ ಪಡೆಯಬೇಕು ಎಂದು ಪ್ರಾಚಾರ್ಯ ಡಾ.ಎಸ್.ಶಿವರಾಜ ಅವರು ಮನವಿ ಮಾಡಿದ್ದಾರೆ. ತಾಲೂಕಿನಲ್ಲಿ 8 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿದ್ದು, ಇಬ್ಬರು ಪ್ರಾಚಾರ್ಯರು ಹಾಗೂ 48 ಖಾಯಂ ಉಪನ್ಯಾಸಕರು ಇದ್ದಾರೆ. ಇನ್ನೂ 8 ಹುದ್ದೆಗಳು ಖಾಲಿಯಿವೆ. ಪ್ರಸ್ತುತ ಸಿಂಧನೂರು ನಗರದಲ್ಲಿ ಆದರ್ಶ ವಿಜ್ಞಾನ ಪದವಿ ಪೂರ್ವ ಕಾಲೇಜು ಮತ್ತು ತಿಡಿಗೋಳ ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಆರಂಭಗೊಂಡಿವೆ. 10 ಪಿಯು ಕಾಲೇಜುಗಳಿಗೆ ಸ್ವಂತ ಕಟ್ಟಡ,ಆಟದ ಮೈದಾನಗಳಿವೆ. ಎಸ್ಸಿ-ಎಸ್ಟಿ ವಿದ್ಯಾರ್ಥಿಗಳಿಗೆ 270 ರೂ., ಕಲಾ ಮತ್ತು ವಾಣಿಜ್ಯ ವಿದ್ಯಾರ್ಥಿಗಳಿಗೆ 811 ರೂ. ಹಾಗೂ ವಿಜ್ಞಾನ ವಿದ್ಯಾರ್ಥಿಗಳಿಗೆ 961 ರೂ. ಅತ್ಯಂತ ಕಡಿಮೆ ಶುಲ್ಕ ನಿಗದಿ ಪಡಿಸಲಾಗಿದೆ ಎಂದರು. ಪ್ರಾಚಾರ್ಯ ಶೇಖರಯ್ಯಸ್ವಾಮಿ ಮಾತನಾಡಿದರು. ಪ್ರಾಚಾರ್ಯರಾದ ಬಸಪ್ಪ ಕೆ.ಹೊಸಮನಿ, ಚನ್ನಬಸಮ್ಮ, ಉಪನ್ಯಾಸಕರಾದ ಡಾ.ಹುಸೇನಪ್ಪ ಅಮರಾಪುರ,ಹುಡಸಪ್ಪ ಹುಡಸೂರು,ಶಾಂತಿ,ಸಿದ್ದನಗೌಡ,ಬಸವರಾಜ ಯಲಬುರ್ಗಿ,ಶರಣಪ್ಪ ಹೊಸಳ್ಳಿ,ಕಾಳಿಂಗ ರೆಡ್ಡಿ,ವೆಂಕಟೇಶ ಬುಕ್ಕನಹಟ್ಟಿ,ಶಿವರಾಜ ಗೋನಾಳ,ರವಿಕುಮಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಕುಕನೂರು: ತಾಲೂಕಿನ ಗೊರ್ಲೆಕೊಪ್ಪ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿದ ವಿಜಯ ಜಿ.ಹಿರೇಮಠ ಗುರುಗಳಿಗೆ ಹಾಗೂ ಸೇವಾ ನಿವೃತ್ತಿ ಹೊಂದುತ್ತಿರುವ ಮುಖ್ಯ ಗುರುಗಳಿಗೆ ಗೌರವ ಸಮರ್ಪಣೆ ಹಾಗೂ ಬೀಳ್ಕೊಡುಗೆ ಕಾರ್ಯಕ್ರಮ ನಡೆಯಿತು. ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಮಹೇಶ್ ಸಬರದ್, ಮಾಂತೇಶ ತಳವಾರ್, ಹನುಮರಡ್ಡಿ ಬಿ., ಶ್ರೀಶೈಲ ಅರಕಲ್, ಚನ್ನಪ್ಪಗೌಡ ಪಾಟೀಲ, ಶಿಕ್ಷಕ ಈರಣ್ಣ ಕೊನಾರಿ ಹಾಗೂ ಇತರರಿದ್ದರು.

ನಾಲಾ ಹೂಳೆತ್ತುವ ಸ್ಥಳಕ್ಕೆ ತಾಪಂ ಎಡಿ ಭೇಟಿ

ಯಲಬುರ್ಗಾ: ತಾಲೂಕಿನ ತಾಳಕೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಲಭಾವಿ ಗ್ರಾಮದಲ್ಲಿ 2026-27ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡಿರುವ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ತಾಪಂ ಸಹಾಯಕ ನಿರ್ದೇಶಕ ಹನಮಂತಗೌಡ ಪೊಲೀಸ್ ಪಾಟೀಲ ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಕೂಲಿಕಾರರನ್ನುದ್ದೇಶಿಸಿ ಮಾತನಾಡಿದ ಅವರು, ನರೇಗಾ ಯೋಜನೆಯಡಿ ಎರಡು ತಿಂಗಳ ನಿರಂತರ ಕೆಲಸ ಕೊಡುತ್ತಿದ್ದು, ಈ ಎರಡು ತಿಂಗಳಲ್ಲಿ ಶೇಕಡಾ 80ರಷ್ಟು ಮಾನವ ದಿನಗಳ ಸದುಪಯೋಗ ಪಡೆಯಬೇಕು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಅಳತೆಗೆ ತಕ್ಕಂತೆ ವೇತನ. ಗಂಡು ಹೆಣ್ಣಿಗೆ ಸಮಾನ ವೇತನ ನೀಡಲಾಗುತ್ತಿದೆ ಎಂದರು.

ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಿ ಆರ್ಥಿಕವಾಗಿ ಸಬಲರಾಗಬೇಕಿದೆ. ಸರ್ಕಾರದಿಂದ ಮಹಿಳೆಯರಿಗೆ ವಿಶೇಷ ಯೋಜನೆಗಳನ್ನು ನೀಡುತ್ತಿವೆ. ಸಾಕಷ್ಟು ಅವಕಾಶಗಳನ್ನು ಕಲ್ಪಿಸುತ್ತಿದ್ದು, ಗ್ರಾಮ ಪಂಚಾಯತಿಗಳು ಮಹಿಳಾ ಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಾ ಆರ್ಥಿಕವಾಗಿ ಸಬಲರನ್ನಾಗಿಸುವಲ್ಲಿ ಸಾಕಷ್ಟು ಪ್ರಯತ್ನ ಮಾಡುತ್ತಿವೆ ಎಂದು ಹೇಳಿದರು. ತಾಪಂ ತಾಂತ್ರಿಕ ಸಂಯೋಜಕರಾದ ಸಂತೋಷ ನಂದಾಪುರ, ಐಇಸಿ ಸಂಯೋಜಕರು, ಗ್ರಾಪಂ ಪಿಡಿಒರಾದ ರಾಮಣ್ಣ, ಡಿಇಒ, ಟಿಎಇ, ಬಿಎಫ್ ಟಿ, ಗ್ರಾಪಂ ಸಿಬ್ಬಂದಿ, ಕಾಯಕ ಬಂಧುಗಳು, ಕೂಲಿಕಾರರು ಇದ್ದರು.



ಯಲಬುರ್ಗಾ: ತಾಲೂಕಿನ ತಾಳಕೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಲಭಾವಿ ಗ್ರಾಮದಲ್ಲಿ 2026-27ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡಿರುವ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ತಾಪಂ ಸಹಾಯಕ ನಿರ್ದೇಶಕ ಹನಮಂತಗೌಡ ಪೊಲೀಸ್ ಪಾಟೀಲ ಭೇಟಿ ನೀಡಿ ಪರಿಶೀಲಿಸಿದರು.

213ನೇ ದಿನಕ್ಕೆ ಬಲ್ಡೋಟ ವಿರೋಧಿ ಧರಣಿ

ಕೊಪ್ಪಳ: ನಗರಸಭೆ ಮುಂದೆ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ನೇತೃತ್ವದಲ್ಲಿ ನಡೆಯುತ್ತಿರುವ 213ನೇ ದಿನದ ಧರಣಿ ಯಶಸ್ವಿಯಾಯಿತು.



ನಗರಕ್ಕೆ ಹೊಂದಿಕೊಂಡು 54 ಸಾವಿರ ಕೋಟಿ ಹೂಡಿಕೆಯಲ್ಲಿ ಬಲ್ಡೋಟ ಕಂಪನಿ ಇಂಟಿಗ್ರೇಟೆಡ್ ಸ್ಟೀಲ್, ಕಲ್ಲಿದ್ದಲು ಸುಟ್ಟು ವಿದ್ಯುತ್ ಮತ್ತು ಡಾಂಬರು ತಯಾರಿಸುವ ಕಾರ್ಖಾನೆ ಸ್ಥಾಪನೆ ಮಾಡಲು ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುತ್ತಿದ್ದಂತೆ, ಈ ಕುರಿತು ಎಚ್ಚೆತ್ತುಕೊಂಡ ಗವಿಶ್ರೀಗಳು ಧರ್ಮಾದೇಶ ಮಾಡಿ, ಈ ಬೃಹತ್ ಹೂಡಿಕೆ ಅವಳಿ ನಗರ ಮತ್ತು ಸುತ್ತಲಿನ ಹಳ್ಳಿಗಳ ಜನರ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮ ತಡೆಯಬೇಕಾದರೆ ಈ ಒಡಂಬಡಿಕೆ ರದ್ದುಗೊಳಿಸಿದ ಆದೇಶಪತ್ರವನ್ನು ಜನಪ್ರತಿನಿಧಿಗಳುತರಬೇಕೆಂದು, ನಗರದ ಪೂರ್ವ ಭಾಗದಲ್ಲಿ 2011ರಿಂದ ಬಲ್ಡೋಟ ಮಾಲಿಕತ್ವದ ಎಂಎಸ್ಪಿಎಲ್ ಪೆಲ್ಲೆಟ್ ಘಟಕದ ಕಂದು ಧೂಳು ನಗರದ ಅರ್ಧ ಭಾಗ ಬಾಧಿಸುತ್ತಿದೆ. ನಗರದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಆಗುತ್ತಿದ್ದು ಈ ಘಟಕ ಬಂದ್ ಮಾಡಿ ಜನರ ಆರೋಗ್ಯ ಕಾಪಾಡಬೇಕೆಂದು, ಬಲ್ಡೋಟ ಕಂಪನಿಯು ಬಸಾಪುರ ಗ್ರಾಮದ ಸಾರ್ವಜನಿಕ ಕೆರೆಯನ್ನು ಅನಧಿಕೃತವಾಗಿ ವಶಪಡಿಸಿಕೊಂಡಿದ್ದು, ಕೆರೆಯ ಸುತ್ತ ಕಂಪನಿ ಹಾಕಿದ ಕಾಂಪೌಂಡ್ ತೆರವು ಮಾಡಿ ಜಾನುವಾರು ನೀರು ಕುಡಿಯಲು ಅವಕಾಶ ಮಾಡಿಕೊಡಬೇಕೆಂದು, ತುಂಗಭದ್ರಾ ನೀರು ವಿಷಗೊಳಿಸುತ್ತಿರುವ ಮಾಲಿನ್ಯಕಾರಿ ಕಾರ್ಖಾನೆಗಳನ್ನು ಮುಚ್ಚಬೇಕು. ಹಿರೇಬಗನಾಳ, ಅಲ್ಲಾನಗರ ಪಕ್ಕದ ಸ್ಪಾಂಜ್ ಐರನ್ ಕಾರ್ಖಾನೆಗಳನ್ನು ಕೇಂದ್ರ ಪರಿಸರ ಇಲಾಖೆ ವರದಿಯ ಶಿಫಾರಸಿನಂತೆ ನಿರ್ಜನ ಪ್ರದೇಶಕ್ಕೆ ಸ್ಥಳಾಂತರಿಸಬೇಕೆಂದು, ಸರ್ಕಾರ ಕಾರ್ಖಾನೆ ಧೂಳು ಬಾಧಿತ 22 ಹಳ್ಳಿಗಳ ಪುನರುಜ್ಜೀವನ ಮಾಡಲು ವಿಶೇಷ ಪ್ಯಾಕೇಜ್ ಘೋಷಿಸಬೇಕೆಂದು, ಎ.ಐ.ಐ.ಎಂ.ಎಸ್ ಸಂಸ್ಥೆ ಮತ್ತು ಐ.ಐ.ಎಸ್.ಸಿ ಸಂಸ್ಥೆಯಿಂದ ಜನರ ಆರೋಗ್ಯ ಮತ್ತು ಪರಿಸರ ಹಾನಿಯ ಸಮೀಕ್ಷೆ ನಡೆಸಬೇಕೆಂದು ಸರ್ಕಾರವನ್ನು ಆಗ್ರಹಿಸಿ ಅನಿರ್ದಿಷ್ಟಾವಧಿ ಧರಣಿ ನಡೆಯುತ್ತಿದೆ.

ಧರಣಿಯಲ್ಲಿ ನಿವೃತ್ತ ಪ್ರಾಚಾರ್ಯ ಎಲ್. ಎಫ್.ಪಾಟೀಲ, ಸಂಚಾಲಕ ಮಲ್ಲಿಕಾರ್ಜುನ ಬಿ. ಗೋನಾಳ, ರಾಜಶೇಖರ ಏಳುಬಾವಿ, ರಂಗಕರ್ಮಿ ಲಕ್ಷ್ಮಣ ಪೀರಗಾರ, ಶರಣು ಶೆಟ್ಟರ್, ಮಹಾದೇವಪ್ಪ ಮಾವಿನಮಡು, ಬಸವರಾಜಪ್ಪ ಶೆಟ್ಟರ್, ಭೀಮಪ್ಪ ಯಲಬುರ್ಗಾ, ಶಿವಪ್ಪ ಜಲ್ಲಿ, ಮುತ್ತುರಾಜ ತೋಟದ, ರತ್ನಮ್ಮ ಓಲಿ, ನೀಲವ್ವ ಹಿರೇಮಠ, ಕಾವ್ಯಾ ಹಿರೇಮಠ, ಇದ್ದರು.

ಜನರ ಕೈ ಹಿಡಿದ ಗ್ಯಾರಂಟಿ ಯೋಜನೆ

ಕುಷ್ಟಗಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದ ಹಿನ್ನೆಲೆ ಜನರಿಗೆ ಸಮರ್ಪಕವಾಗಿ ಅನುಷ್ಠಾನಗೊಳಿಸಿದ ಪಂಚ್ ಯೋಜನೆಗಳು ಸಂಪೂರ್ಣವಾಗಿ ಅನುಕೂಲವಾಗಿದೆ ಎಂದು ದಿಶಾ ಸಮಿತಿ ಸದಸ್ಯ ದೊಡ್ಡಬಸವನಗೌಡ ಪಾಟೀಲ ಬಯ್ಯಾಪುರ ಹೇಳಿದರು.

ಪಟ್ಟಣದ ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪುರ ನಿವಾಸದಲ್ಲಿ ಬಿಎಲ್ಒ-2 ಪಟ್ಟಣದ ಹಾಗೂ ತಾಲೂಕಿನ ಮುಖಂಡರ ಸಭೆ ಯಲ್ಲಿ ಭಾಗವಹಿಸಿ ಭಾನುವಾರ ಮಾತನಾಡಿದರು.

ಬೂತ್ ಮಟ್ಟದ ಕೆಲಸ ಮಾಡಬೇಕಿದೆ. ಪಂಚಾಯತ್ ಹಂತದಲ್ಲಿ ಯುವಕರನ್ನು ನೇಮಕ ಮಾಡಿ ಕಾಂಗ್ರೆಸ್ ಪಕ್ಷದ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಈಗಿನಿಂದ ಕಾರ್ಯ ಶುರುಮಾಡಬೇಕಿದೆ ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಕಾಡಾ ಅಧ್ಯಕ್ಷ ಮಾಜಿ ಶಾಸಕ ಹಸನಸಾಬ್ ದೋಟಿಹಾಳ ಮಾತನಾಡಿ, ಪಕ್ಷದ ಬೆಳವಣಿಗೆ ತಳಹಂತದಲ್ಲಿ ಕಾರ್ಯಕರ್ತರು ಶ್ರಮಿಸಬೇಕಿದೆ. ಬರುವ ದಿನಗಳಲ್ಲಿ ಆಯಾ ವಾರ್ಡ್‌ಗಳಲ್ಲಿ ಮತದಾರರನ್ನು ಸೇರ್ಪಡೆ ಮಾಡುವಂತಹ ಕೆಲಸವಾಗಲಿ. ರಾಜ್ಯದ ನಾನಾ ಭಾಗಗಳಲ್ಲಿ ಈಗಾಗಲೇ ವಾರ್ಡ್ ಹಾಗೂ ಬೂತ್ ಮಟ್ಟದಲ್ಲಿ ಕಾರ್ಯಕರ್ತರನ್ನು ಹುರಿದುಂಬಿಸುವ ಮೂಲಕ ಪಕ್ಷದ ಏಳ್ಗೆಗೆ ಶ್ರಮಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಧುರೀಣರಾದ ಶೇಖರಗೌಡ ಮಾಲಿಪಾಟೀಲ್, ಮಾಲತಿ ನಾಯಕ ಲಾಡ್ಲೇಮಶಾಕ್ ದೋಟಿಹಾಳ್ ,ಮಾತನಾಡಿದರು. ಈ ವೇಳೆ ಮುಖಂಡರಾದ ಹನುಮಸಾಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಲ್ಲಪ್ಪ ತಳವಾರ ಮೈನುದ್ದೀನ್ ಮುಲ್ಲಾ ,ಶಾರದಾ ಕಟ್ಟಿಮನಿ,ವಿರೇಶ್ ಗುರಿಕಾರ ಯಲ್ಲಪ್ಪ ಬಾಗಲಿ,ಮೆಹಬೂಬ್ ಬೀ,ಕೇದರನಾಥ ಕುಲಕರ್ಣಿ ಶಕುಂತಲಾ ಹಿರೇಮಠ ಇಮಾಮಸಾಬ ಗರಡಿಮನಿ, ಹಾಗೂ ಕಾರ್ಯಕರ್ತರು, ಪಕ್ಷದ ಮುಖಂಡರು ಇದ್ದರು.



ವಿಜಯ ಹಿರೇಮಠಗೆ ಬೀಳ್ಕೊಡುಗೆ

ಕುಕನೂರು: ನೈತಿಕತೆಯ ಶಿಕ್ಷಣದ ಅಭಿರುಚಿಯನ್ನು ಹುಣಬಡಿಸಿದ ವ್ಯಕ್ತಿ ವಿಜಯ ಜಿ.ಹಿರೇಮಠ ಗುರುಗಳು ಎಂದು ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಮಹೇಶ್ ಸಬರದ್ ಹೇಳಿದರು.

ತಾಲೂಕಿನ ಗೊರ್ಲೆಕೊಪ್ಪ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿದ ವಿಜಯ ಜಿ.ಹಿರೇಮಠ ಗುರುಗಳಿಗೆ ಹಾಗೂ ಸೇವಾ ನಿವೃತ್ತಿ ಹೊಂದುತ್ತಿರುವ ಮುಖ್ಯ ಗುರುಗಳಿಗೆ ಗೌರವ ಸಮರ್ಪಣೆ ಹಾಗೂ ಬೀಳ್ಕೊಡುಗೆ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು, ಇಂದಿನ ಶಿಕ್ಷಣದಲ್ಲಿ ನೈತಿಕತೆಯ ಶಿಕ್ಷಣ ಮರೆಯಾಗುತ್ತಿದೆ ಅಂತಹ ಶಿಕ್ಷಣವನ್ನು ಉಣಬಡಿಸಿದವರು ವಿಜಯ ಗುರುಗಳು ಅಂತಹ ಕಾರ್ಯ ನಿಜಕ್ಕೂ ಶ್ಲಾಘನೀಯವಾದದ್ದು ಎಂದು ಹೇಳಿದರು.

ನಂತರ ನಿವೃತ್ತ ಶಿಕ್ಷಕ ಹಂಚ್ಯಾಳಪ್ಪ ತಳವಾರ್ ಮಾತನಾಡಿ, ಗುರುವಿಲ್ಲದೆ ಅರಿವಿಲ್ಲಾ ಅಂತಹ ಗುರುವಿನ ಕಾರ್ಯವನ್ನು ಮೆಚ್ಚಿ ಬೀಳ್ಕೊಡುಗೆ ಸಂದರ್ಭದಲ್ಲಿ ಅವರಿಗೆ ಗೌರವ ಸಮರ್ಪಣೆ ಮಾಡುವುದು ನಿಜಕ್ಕೂ ಶ್ಲಾಘನೀಯವಾದದ್ದು, ಕಲಿಕೆಯ ರೂವಾರಿಯಾಗಿದ್ದರು ವಿಜಯ ಶಿಕ್ಷಕರು ಎಂದು ಹೇಳಿದರು.

ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಮಹೇಶ್ ಸಬರದ್, ಮಾಂತೇಶ ತಳವಾರ್, ಹನುಮರಡ್ಡಿ ಬಿ., ಶ್ರೀಶೈಲ ಅರಕಲ್, ಚನ್ನಪ್ಪಗೌಡ ಪಾಟೀಲ, ಶಿಕ್ಷಕ ಈರಣ್ಣ ಕೊನಾರಿ ಹಾಗೂ ಇತರರಿದ್ದರು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಸುರಪುರ: ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಎರಡು ಕಣ್ಣುಗಳು ದೇವರು ನೀಡಿದ್ರೆ ಅರಿವು ಎನ್ನುವ ಮೂರನೇ ಕಣ್ಣು ಕೊಡುವುದೇ ಶಿಕ್ಷಣ ಎಂದು ಕಕ್ಕೆರಾ ಪ್ರೌಢ ಶಾಲೆ ಮುಖ್ಯ ಗುರುಗಳಾದ ಬಸಯ್ಯ ಹಿರೇಮಠ ಹೇಳಿದರು.

ಕಕ್ಕೇರಾ ಪಟ್ಟಣದಲ್ಲಿ ಜರುಗಿದ ಅಖಿಲ ಕರ್ನಾಟಕ ಹೆಳವ ಸಮಾಜ ಯಾದಗಿರಿ ಜಿಲ್ಲಾ ಘಟಕದ ವತಿಯಿಂದ ಹೆಳವ ಸಮಾಜದ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಪ್ರತಿಭಾ ಪುರಸ್ಕಾರದಲ್ಲಿ ಅವರು ಮಾತನಾಡಿದರು.

ಸೌರಾಷ್ಟ್ರ ಅಧಿಪತಿ ಸೋಮನಾಥ ದೇವಸ್ಥಾನದ ನಂದಣಪ್ಪ ಪೂಜಾರಿ ಹಾಗೂ ಹೆಳವ ಸಮಾಜ ದುಮ್ಮನಸೂರ ಮಠದ ಶಂಕರಲಿಂಗ ಸ್ವಾಮಿಗಳು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

2025-26ನೇಸಾಲಿನಲ್ಲಿಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ 18 ವಿದ್ಯಾರ್ಥಿಗಳನ್ನು ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ 6 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಜೊತೆಗೆ ಪ್ರಸ್ತುತ 10 ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು 20 ವಿದ್ಯಾರ್ಥಿಗಳಿಗೆ ನಿಂಗಣ್ಣ ಬಿಳೆಬಾವಿಯವರು ಉಚಿತವಾಗಿ ನೀಡಿರುವ 2000 ರೂಪಾಯಿ ಮುಖಬೆಲೆಯ 3 ಪುಸ್ತಕಗಳನ್ನು ನೀಡಲಾಯಿತು.

ಕೆಪಿಸಿಸಿ ಸದಸ್ಯರಾದ ಗುಂಡಪ್ಪ ಸೊಲ್ಲಾಪುರ, ಯಾದಗಿರಿ ಜಿಲ್ಲಾಧ್ಯಕ್ಷರಾದ ಹಣಮಂತರಾಯ ಹಳಿಸಗರ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಾದ ಸದಾಶಿವ ನಾರಾಯಣಕರ, ಪುರಸಭೆ ಅಧ್ಯಕ್ಷರಾದ ಪರಮಣ್ಣ ಕಮತಗಿ, ಪುರಸಭೆ ಉಪಾಧ್ಯಕ್ಷರಾದ ಜಟ್ಟೆಪ್ಪ ದಳಾರ, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಧಿಕಾರಿ ಯಂಕಣ್ಣ ಟಣಕೆದಾರ,ಯುವ ಮುಖಂಡರಾದ ಯಮುನಪ್ಪ ದೊರೆ ರಾಜನಕೋಳೂರು, ಮಲ್ಲಿಕಾರ್ಜುನ ಬಿ.ಹೆಚ್ ಹೆಳವರ ಕಲಬುರಗಿ, ವಾಲ್ಮೀಕಿ ಸಮಾಜದ ಅಧ್ಯಕ್ಷರಾದ ಚಂದ್ರ ವಜ್ಜಲ, ಹಾಗೂ ಉಪಾಧ್ಯಕ್ಷರಾದ ಸಿದ್ದಪ್ಪ ದಳಾರ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಹಿರಿಯರಾದ ಎಚ್.ಎನ್.ಗೋಗಿ, ಶಿವಶರಣಪ್ಪ ಕನ್ನೊಳ್ಳಿ, ಶ್ರೀಮಂತ ಸೌಂದರ್ಗೆ, ಸಿದ್ದರಾಮ ಬೈರಾಮಡಗಿ, ಸಾಯಬಣ್ಣ ಹೆಳವರ ಕಲಬುರಗಿ, ಬಾಬು ಹೆಳವರ ಮುದ್ದೇಬಿಹಾಳ, ಬಸವರಾಜ ಯಾಳಗಿ, ಮಲ್ಲಣ್ಣ ಕಡಿಮನಿ, ಶ್ರೀಕಾಂತ್ ಯಾಳಗಿ, ಪರಶುರಾಮ್ ಮುದನೂರ, ರಮೇಶ ಹೆಳವರ ಮುದನೂರ, ಮಡಿವಾಳಪ್ಪ ವಜ್ಜಲ,ನೆಹರೂ ಹಳಿಸಗರ, ಯಲ್ಲಪ್ಪ ಕೋರಿ,ಅಂಬ್ರೇಶ್ ಯಾದಗಿರಿ, ಚಂದಪ್ಪ ಕಕ್ಕೇರಿ ಇತರರಿದ್ದರು.



ಜೂ.3ರಂದು ಶರಣು ಹೆಸರಿನ ನೂತನ ಕಚೇರಿ ಉದ್ಘಾಟನೆ

ಯಲಬುರ್ಗಾ: ಕಷ್ಟದಲ್ಲಿವರಿಗೆ ಸಹಾಯ, ಸಹಕಾರ, ಸಮಾಜಮುಖಿ ಸೇವೆಯಲ್ಲಿ ನಿಸ್ವಾರ್ಥ ಸೇವಾ ಮನೋಭಾವದಿಂದ ಮಾಡುವ ಕಾರ್ಯದಲ್ಲಿ ಸಿಗುವಂತಹ ಸಂತೃಪ್ತಿ ನನಗೆ ಸಮಾಜ ಸೇವೆಯಲ್ಲಿ ದೊರೆತಿದೆ ಎಂದು ಸಮಾಜ ಸೇವಕರು, ತಾಪಂ ಮಾಜಿ ಉಪಾಧ್ಯಕ್ಷ ಕಳಕಪ್ಪ ಕಂಬಳಿ ಹೇಳಿದರು.



ಪಟ್ಟಣದ ಸರ್ಕಿಟ್ ಹೌಸ್‌ನಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಮಾತನಾಡಿ ನಮ್ಮ ಕುಟುಂಬ ಹಲವಾರು ವರ್ಷಗಳಿಂದಲೂ ನೊಂದು ಬಂದವರಿಗೆ ಸದಾ ಸಹಾಯ ಮಾಡುವ ಮನೋಭಾವನೆಯನ್ನು ನಾವು ಬೆಳೆಸಿಕೊಂಡು ಬಂದಿದ್ದೇವೆ. ಇದರ ಹಿಂದೆ ಯಾವ ಸ್ವಾರ್ಥವು ಇಲ್ಲ,ನಿಸ್ವಾರ್ಥ ಸೇವೆಯೇ ನಮಗೆ ಮುಖ್ಯವಾಗಿದೆ ಎಂದರು.

ಯಲಬುರ್ಗಾ ವಿಧಾನಸಭಾ ಕ್ಷೇತ್ರದ 144 ಹಳ್ಳಿಗಳಲ್ಲಿ ಬಡವರಿಗೆ, ನೊಂದು ಬಂದವರಿಗೆ, ಕಷ್ಟದಲ್ಲಿದ್ದವರು, ರೈತರಿಗೆ ಹಲವಾರು ನನ್ನ ಕೈಲಾದಷ್ಟು ಸೇವೆ ಸಲ್ಲಿಸುತ್ತ ಬಂದಿದ್ದೇನೆ. ಕುಕನೂರು, ಯಲಬುರ್ಗಾ ತಾಲೂಕಿನಾದ್ಯಂತ ಸಾಕಷ್ಟು ಸಮಾಜ ಸೇವೆ ಸಲ್ಲಿಸುವ ಕಾರ್ಯ ನನಗೆ ಮಹಾ ಸಂತೃಪ್ತಿ ತಂದಿದೆ ಎಂದು ಹೇಳಿದರು. ಜೂ.3ರಂದು ಕುಕನೂರ ಪಟ್ಟಣದಲ್ಲಿರುವ ಕಲ್ಲೇಶ್ವರ ನಗರದಲ್ಲಿ ಶರಣು ಎಂಬ ಹೆಸರಿನೊಂದಿಗೆ ನೂತನ ಕಚೇರಿಯನ್ನು ಕ್ಷೇತ್ರದ ಸಾರ್ವಜನಿಕರಿಗಾಗಿ ಉದ್ಘಾಟನಾ ಸಮಾರಂಭ ಬೆಳಿಗ್ಗೆ 10ಗಂಟೆಗೆ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದು ರಾಜಕೀಯೇತರ ಕಾರ್ಯಕ್ರಮವಾಗಿದೆ. ನಾಡಿನ ಎಲ್ಲಾ ಹರಗುರು ಚರ ಮೂರ್ತಿ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಕಾರ್ಯಕ್ರಮ ಜರಗಲಿದೆ. ಜಿಪಂ ಮಾಜಿ ಸದಸ್ಯ ವೀರಪ್ಪ ಕುಡಗುಂಟಿ ಮಾತನಾಡಿ, ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಕಳಕಪ್ಪ ಕಂಬಳಿರವರ ಕಾರ್ಯವನ್ನು ಶ್ಲಾಘೀಸಿದರು. ತಾಪಂ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ಫಕ್ಕೀರಪ್ಪ ತಳವಾರ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಷಣ್ಮುಖಪ್ಪ ರಾಂಪೂರು,ತಾಲೂಕಾ ಛಲವಾದಿ, ಮಹಾಸಭಾ ಅಧ್ಯಕ್ಷ ಅಂದಪ್ಪ ಹಾಳಕೇರಿ, ಸುರೇಶ ಮ್ಯಾಗೇರಿ, ಇಮಾಮಸಾಬ ಮಂಡಲಗೇರಿ, ನೀಲನಗೌಡ ಪಾಟೀಲ ಮತ್ತಿತರರು ಇದ್ದರು.

ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಾರ್ಯ ಶ್ಲಾಘನೀಯ

ಕುಷ್ಟಗಿ: ಪಟ್ಟಣದ ಭಾಗ್ಯದ ಹನಮಂತ ದೇವಸ್ಥಾನದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದು ದೇವಸ್ಥಾನಕ್ಕೆ ಬಂದ ಎಲ್ಲಾ ಭಕ್ತರು ಮೆಚ್ಚುವಂತದ್ದು ಇಂತಹ ಕಾರ್ಯವನ್ನು ಮಾಡಿದ್ದು ನಿಜಕ್ಕೂ ಶ್ಲಾಘನೀಯ ಎಂದು ಹಿರಿಯ ನ್ಯಾಯವಾದಿ ಫಕೀರಪ್ಪ ಚಳಗೇರಿ ಹೇಳಿದರು.

ಇಲ್ಲಿನ ಭಾಗ್ಯದ ಆಂಜನೇಯ ದೇವಸ್ಥಾನದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ದೇವಸ್ಥಾನದ ಅರ್ಚಕರಾದ ಶರಣಪ್ಪ ಜೇರ್ ಇವರು ಭಕ್ತರಿಗೆ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಮಾಡಿ ದೇವಸ್ಥಾನಕ್ಕೆ ಬಂದಂತ ಭಕ್ತರಿಗೆ ನೀರು ಕುಡಿಯಲು ಅನುಕೂಲ ಮಾಡಿಕೊಟ್ಟಿದ್ದಾರೆ ಇವರಿಗೆ ಭಕ್ತರು ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ನೀಡಿ ದಾನ ಧರ್ಮ ಮಾಡುವ ಮೂಲಕ ಭಾಗ್ಯದ ಹನುಮಂತನ ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸಬೇಕಾಗಿದೆ ಎಂದು ತಿಳಿಸಿದರು.



ನಂತರ ಸಿಹಿ ಹಂಚಿ ಭಾಗ್ಯದ ಹನುಮಂತ ದೇವರಿಗೆ ಮಹಾಮಂಗಳಾರತಿ ಮಾಡುವ ಮೂಲಕ ಹನುಮಂತ ದೇವರಿಗೆ ಪಾತ್ರರಾಗಿ ಭಕ್ತಿಯನ್ನು ಸಮರ್ಪಿಸಿದರು. ಭಾಗ್ಯದ ಹನಮಂತ ದೇವಸ್ಥಾನದ ಅರ್ಚಕರಾದ ಶರಣಪ್ಪ ಜೇರ್, ನೀರ್ಮಲಾ ಜೇರ್, ವಕೀಲರಾದ ಶರಣಪ್ಪ ವಿಠಲಾಪೂರ, ದೊಡ್ಡನಗೌಡ ಗೋತಗಿ, ದುರಗಪ್ಪ ಚೂರಿ ಇತರರಿದ್ದರು.

ಕ್ಯಾನ್ಸರ್ ರೋಗಿಗಳಿಗೆ ಹಣ್ಣು, ಬಿಸ್ಕತ್ ವಿತರಣೆ

ಕಲಬುರಗಿ: ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಬಿಜೆಪಿ ಯುವ ಮೋರ್ಚಾ ಕಲಬುರಗಿ ಗ್ರಾಮಾಂತರ ಜಿಲ್ಲಾ ಘಟಕದಿಂದ ನಗರದ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಗೆ ಭೇಟಿ ನೀಡಿ ಕ್ಯಾನ್ಸರ್ ರೋಗಿಗಳಿಗೆ ಹಣ್ಣು ಹಾಗೂ ಬಿಸ್ಕತ್‌ಗಳನ್ನು ವಿತರಿಸಲಾಯಿತು.



ಈ ವೇಳೆ ಮಾತನಾಡಿದ ಬಿಜೆಪಿ ಯುವ ಮೋರ್ಚಾ ಕಲಬುರಗಿ ಗ್ರಾಮಾಂತರ ಜಿಲ್ಲಾ ಅಧ್ಯಕ್ಷ ವೀರೇಂದ್ರ ಪಾಟೀಲ ರಾಯ್ಕೋಡ್, ದೇಶದ ಯುವಕರು ಆರೋಗ್ಯಕರ ಹಾಗೂ ಶಿಸ್ತುಬದ್ಧ ಜೀವನಶೈಲಿಯನ್ನು ಅಳವಡಿಸಿಕೊಂಡು ವ್ಯಸನ ಮುಕ್ತ ಭಾರತ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿ ಅವರ 'ನಶಾ ಮುಕ್ತ ಭಾರತ' ಅಭಿಯಾನದ ಅಂಗವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಯುವ ಮೋರ್ಚಾ ಕಾರ್ಯಕರ್ತರು ಕ್ಯಾನ್ಸರ್ ರೋಗಿಗಳೊಂದಿಗೆ ಸಂವಾದ ನಡೆಸಿ ಅವರ ಜೀವನ ಹೋರಾಟಗಳು ಹಾಗೂ ಅನುಭವಗಳನ್ನು ಆಲಿಸಿದರು.

ತಂಬಾಕು ಸೇವನೆ, ಗುಟ್ಕಾ ಅಗಿಯುವುದು, ಸಿಗರೇಟ್ ಸೇದುವುದು ಸೇರಿದಂತೆ ಆರೋಗ್ಯ, ಶಿಕ್ಷಣ ಮತ್ತು ಭವಿಷ್ಯದ ಅವಕಾಶಗಳನ್ನು ಹಾಳುಮಾಡುವ ಎಲ್ಲ ರೀತಿಯ ವ್ಯಸನಕಾರಿ ಚಟಗಳಿಂದ ಯುವಕರು ದೂರವಿರಬೇಕು ಎಂದು ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದ ವೇಳೆ ಕ್ಯಾನ್ಸರ್ ರೋಗಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡು ತಂಬಾಕು ಮತ್ತು ಮಾದಕ ದ್ರವ್ಯ ಸೇವನೆಯಿಂದ ಉಂಟಾಗುವ ವಿನಾಶಕಾರಿ ಪರಿಣಾಮಗಳ ಕುರಿತು ವಿವರಿಸಿದರು.

ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮನಸೂರೆಗೊಂಡ ಗಾನಲಹರಿ ಕಾರ್ಯಕ್ರಮ

ಕುಷ್ಟಗಿ: ಗುರು ಕುಮಾರೇಶ್ವರ ಸಾಂಸ್ಕೃತಿಕ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರ-ಕೊಪ್ಪಳ ಇವರ ಸಹಯೋಗದಲ್ಲಿ 2025-26ನೇ ಸಾಲಿನ ಸಂಘ ಸಂಸ್ಥೆಗಳ ಸಹಾಯಧನ ಯೋಜನೆಯಡಿಯಲ್ಲಿ ಗಾನಲಹರಿ ಕಾರ್ಯಕ್ರಮವನ್ನು ತಾಲೂಕಿನ ಬಿಜಕಲ್ಲ ಗ್ರಾಮದ ನಿರುಪಾದೇಶ್ವರ ದೇವಸ್ಥಾನದ ಆವರಣದಲ್ಲಿ ಜರುಗಿತು.



ದಿವ್ಯ ಸಾನಿಧ್ಯ ವಹಿಸಿದ್ದ ಮದ್ದಾನಿ ಹಿರೇಮಠದ ಕರಿಬಸವ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ಸಂಗೀತ ಎಂಬುದು ಕಠಿಣ ವಿದ್ಯೆಯಾಗಿದ್ದು ಅದು ಎಲ್ಲರನ್ನು ಮಂತ್ರಮುಗ್ಧರನ್ನಾಗಿಸುವ ಶಕ್ತಿ ಹೊಂದಿದೆ. ನಮಗಮು ಬದುಕಿನ ನೋವು ನಲಿವುಗಳನ್ನು ಮರೆತು ಸಂಗೀತ ಆಲಿಸಿದಾಗ ಮನಸ್ಸು ಹಗುರವಾಗುತ್ತದೆ. ಸಂಗೀತವು ಎಲ್ಲರಿಗೆ ಒಲಿಯುವುದಿಲ್ಲ. ಕೆಲವರಿಗೆ ಮಾತ್ರ ಅದು ಒಲಿಯುತ್ತದೆ. ಸಂಗೀತಕ್ಕೆ ಸಕಲ ಜೀವಿಗಳು ಮನಸೋಲುತ್ತವೆ ಸಂಗೀತಕ್ಕೆ ಅಂತಹ ಶಕ್ತಿ ಇದೆ ಎಂದರು.

ವಿವಿಧ ರೀತಿಯ ಸಂಗೀತ ಪ್ರಕಾರಗಳ ಕಾರ್ಯಕ್ರಮವನ್ನು ಕಲಾವಿದರಾದ ಹನಂತರಾವ ಯರೇಹಂಚಿನಾಳ, ಮೌನೇಶ ಲಿಂಗನಬಂಡಿ, ಮಹಾಂತೇಶ ಬಿಜಕಲ, ಪವಿತ್ರಾ ಮುಶಿಗೇರಿ, ಅಯ್ಯಪ್ಪ ಬಡಿಗೇರ ಪ್ರಸ್ತುತಪಡಿಸಿದರು.

ಗುರುಶಾಂತವೀರ ಮಹಾಸ್ವಾಮಿಗಳು ಮ್ಯಾಗೇರಿ, ರುದ್ರಯ್ಯ ಮಠಪತಿ, ಸಂಗಪ್ಪ ತೆಗ್ಗಿನಮನಿ, ಮಲ್ಲಯ್ಯ ಹಿರೇಮಠ, ಸಿದ್ದಯ್ಯ ಗುರುವಿನ, ರುದ್ರಯ್ಯ ಹಿರೇಮಠ, ಪ್ರತಾಪ ಹಿರೇಮಠ, ಮಾರುತಿ ಭೋವಿ ಸೇರಿದಂತೆ ಇತರರು ಇದ್ದರು.

ಯುವಾ ಬ್ರಿಗೇಡ್‌ನಿಂದ ಕಲ್ಯಾಣಿ ಸ್ವಚ್ಛತೆ

ಕಲಬುರಗಿ: ಯುವಾ ಬ್ರಿಗೇಡ್ ಕಲಬುರಗಿ ಘಟಕದ ವತಿಯಿಂದ ಜಿಲ್ಲೆಯ ಚಿಂಚೋಳಿ ತಾಲೂಕಿನ ಐತಿಹಾಸಿಕ 12ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದ ಶ್ರೀರಾಮಲಿಂಗೇಶ್ವರ ದೇವಸ್ಥಾನದ ಕಲ್ಯಾಣಿಯ ಮೊದಲ ಹಂತದ ಸ್ವಚ್ಛತಾ ಕಾರ್ಯವನ್ನು ಭಾನುವಾರ ಹಮ್ಮಿಕೊಳ್ಳಲಾಯಿತು.

ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವ ಹೊಂದಿರುವ ಕಲ್ಯಾಣಿಯ ಸಂರಕ್ಷಣೆ ಮತ್ತು ಸ್ವಚ್ಛತೆಯ ಉದ್ದೇಶದಿಂದ ನಡೆದ ಶ್ರಮದಾನ ಕಾರ್ಯಕ್ರಮದಲ್ಲಿ 25ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದರು. ಮುಂದಿನ ವಾರ ಎರಡನೇ ಹಂತದ ಸ್ವಚ್ಛತಾ ಕಾರ್ಯ ನಡೆಯಲಿದ್ದು, ದೇವಸ್ಥಾನ ಆವರಣದಲ್ಲಿ ಒಟ್ಟು ಮೂರು ಕಲ್ಯಾಣಿಗಳಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸುವಂತೆ ಯುವಾ ಬ್ರಿಗೇಡ್ ಮುಖಂಡರು ಮನವಿ ಮಾಡಿದ್ದಾರೆ.

ಯುವಾ ಬ್ರಿಗೇಡ್ ವಿಭಾಗ ಸಂಚಾಲಕ ಅನಿಲ್ ತಂಬಾಕೆ, ವಿಭಾಗ ಸಹ ಸಂಚಾಲಕ ಹರೀಶ್, ಜಿಲ್ಲಾ ಸಂಚಾಲಕ ಶೀವು ಭೀಮಳ್ಳಿ, ಜಿಲ್ಲಾ ಸಹ ಸಂಚಾಲಕ ಸಿದ್ದಲಿಂಗ ಸೇರಿದಂತೆ ಮೋಘಾ ಗ್ರಾಮದ ಮುಖಂಡರಾದ ಶಿವಶಂಕರ್ ಮತ್ತು ರೇವಣಸಿದ್ದಪ್ಪ ಉಪಸ್ಥಿತರಿದ್ದರು.

ಕಲಬುರಗಿ ನಗರ ಹಾಗೂ ಚಿಂಚೋಳಿ ತಾಲೂಕಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಕಾರ್ಯಕರ್ತರು ಶ್ರಮದಾನದಲ್ಲಿ ಭಾಗವಹಿಸಿ ಸ್ವಚ್ಛತಾ ಕಾರ್ಯಕ್ಕೆ ಕೈಜೋಡಿಸಿದರು.

ಐತಿಹಾಸಿಕ ಪರಂಪರೆಯ ಸಂರಕ್ಷಣೆಗಾಗಿ ಇಂತಹ ಜನಸಹಭಾಗಿತ್ವದ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು ಎಂದು ಭಾಗವಹಿಸಿದವರು ಅಭಿಪ್ರಾಯಪಟ್ಟರು.



ಕಿರುಸುದ್ದಿ

ನೂತನ ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ವಿತರಣೆ

ವಿಜಯನಗರ: ಶ್ರೀಶಿವಶರಣ ಮಾದರ ಚನ್ನಯ್ಯ ಸೇವಾ ಸಮಿತಿಯ ಜಿಲ್ಲಾಧ್ಯಕ್ಷ ಎಚ್.ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ನಗರದಲ್ಲಿ ಇತ್ತೀಚೆಗೆ ಜಿಲ್ಲಾ ಕಾಯಕಾರಣಿ ಸಭೆ ನಡೆಯಿತು. ಸಮಿತಿಯ ರಾಜ್ಯಾಧ್ಯಕ್ಷ ಹೂಡಿ ಮಂಜುನಾಥ್ ಮಾತನಾಡಿ, ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಶಿವಶರಣ ಮಾದರ ಚನ್ನಯ್ಯ ಸೇವಾ ಸಮಿತಿಯನ್ನು ಸಂಘಟಿಸಬೇಕಿದೆ. ಸಮುದಾಯವು ಸಂಘಟಿತವಾದರೆ ಸಮಾಜ ಅಭಿವೃದ್ಧಿ ಸಾಧ್ಯವಾಗುತ್ತದೆ. ಎಲ್ಲರೂ ಶ್ರೀಮಠದ ಸೇವೆಗೆ ಶ್ರಮಿಸಿ, ಮಠದ ಪರಂಪರೆಯಡಿ ಶಿಸ್ತು ಬದ್ಧ ಜೀವನ ರೂಪಿಸಿಕೊಳ್ಳುವ ಜತೆಗೆ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಪ್ರಗತಿಯತ್ತ ಹೆಜ್ಜೆ ಹಾಕಬೇಕು ಎಂಬ ಆಶಯ ವ್ಯಕ್ತಪಡಿಸಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧ್ಯಕ್ಷ ಎಚ್.ಶ್ರೀನಿವಾಸ್ ಸಮಿತಿಯ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ಪ್ರತಿಯನ್ನು ವಿತರಿಸಿದರು. ಸಭೆಯಲ್ಲಿ ಶಿವಶರಣ ಮಾದರ ಚೆನ್ನಯ್ಯ ಸೇವಾ ಸಮಿತಿ ವಿಭಾಗಿ ಉಸ್ತವಾರಿ ಪೂಜಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಕೊಂಡಪಲ್ಲಿ, ರಾಜ್ಯ ಕಾರ್ಯದರ್ಶಿ ರಾಜೇಶ್, ಮುಖಂಡರಾದ ಎಂ.ಸಿ.ವೀರಸ್ವಾಮಿ, ಬಲ್ಲಾಹುಣಸಿ ರಾಮಣ್ಣ, ಎಚ್ ಶೇಷು, ಪ್ರಧಾನ ಕಾರ್ಯದರ್ಶಿ ಭರತ್ ಕುಮಾರ್ ಸಿ.ಆರ್., ಎಚ್. ರವಿಕಿರಣ್ ಮತ್ತಿತರರು ಇದ್ದರು.

ಸಿರುಗುಪ್ಪ: ಇಂದು ವಿದ್ಯುತ್ ವ್ಯತ್ಯಯ

ಬಳ್ಳಾರಿ: ಸಿರಗುಪ್ಪ ಜೆಸ್ಕಾಂ ಉಪವಿಭಾಗದ ವ್ಯಾಪ್ತಿಗೆ ಒಳಪಡುವ 33/11 ಕೆವಿ ತೆಕ್ಕಲಕೋಟೆ ಮತ್ತು ಕರೂರು ಉಪಕೇಂದ್ರಗಳಲ್ಲಿ 33 ಕೆವಿ ಜಿ.ಒ.ಎಸ್ ಅಳವಡಿಸುವ ತುರ್ತು ಕಾಮಗಾರಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜೂ.1ರಂದು ಬೆಳಿಗ್ಗೆ 10 ರಿಂದ ಸಂಜೆ 5ರ ವರೆಗೆ ತೆಕ್ಕಲಕೋಟೆ ಹಾಗೂ ಕರೂರು 33/11 ಕೆವಿ ವಿದ್ಯುತ್ ಉಪಕೇಂದ್ರಗಳ ವ್ಯಾಪ್ತಿಯ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತಯವಾಗಲಿದೆ. ಸಾರ್ವಜನಿಕರು ಹಾಗೂ ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಿರುಗುಪ್ಪ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ಕುರುಬ ಸಮಾಜಕ್ಕೆ ಡಿಸಿಎಂ ಜೊತೆಗೆ ನಾಲ್ಕು ಸಚಿವ ಸ್ಥಾನ ನೀಡಿ

ಹಗರಿಬೊಮ್ಮನಹಳ್ಳಿ: ನಿಯೋಜಿತ ಸಿಎಂ ಡಿ.ಕೆ. ಶಿವಕುಮಾರ್ ಸಚಿವ ಸಂಪುಟದಲ್ಲಿ ಹಾಲುಮತ ಸಮಾಜದ ಶಾಸಕರೊಬ್ಬರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು. ಜೊತೆಗೆ ಹಾಲುಮತ ಸಮಾಜದ ನಾಲ್ಕು ಜನ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕುರುಬ ಸಮಾಜದ ರಾಜ್ಯ ನಿರ್ದೇಶಕ ಎಂ.ಮರಿ ರಾಮಣ್ಣ ತಿಳಿಸಿದರು.



ಪತ್ರಿಕೆಯೊಂದಿಗೆ ಮಾತನಾಡಿ, ಹಾಲು ಮತದ ಸಮಾಜದ ಸಿದ್ದರಾಮಯ್ಯ ಅವರು ಎಂಟು ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ಯಾವುದೇ ರೀತಿಯ ಭ್ರಷ್ಟಾಚಾರದ ಕಳಂಕವಿಲ್ಲದೆ ಗುಂಪುಗಾರಿಕೆಯೊಂದಿಗೆ ರೆಸಾರ್ಟ್ ರಾಜಕಾರಣ ಮಾಡದೆ ಆಡಳಿತದಲ್ಲಿ ಕಪ್ಪು ಚುಕ್ಕೆ ಇಲ್ಲದೆ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ವಿವಿಧ ಭಾಗ್ಯಗಳನ್ನು ಹಾಗೂ ಗ್ಯಾರಂಟಿಗಳನ್ನು ರಾಜ್ಯದ ಜನರಿಗೆ ನೀಡುವ ಮೂಲಕ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಗೊಳ್ಳವಂತೆ ಮಾಡಿದ ಸಿದ್ದರಾಮಯ್ಯನವರ ಆಡಳಿತ ದೇಶಕ್ಕೆ ಮಾದರಿಯಾಗಿತ್ತು. ಸಿದ್ದರಾಮಯ್ಯನವರ ದಕ್ಷ ಮತ್ತು ಪ್ರಾಮಾಣಿಕ ರಾಜಕಾರಣದಿಂದಾಗಿ ಹಾಲುಮತ ಸಮುದಾಯದ ಜನರು 2023 ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ 75ರಷ್ಟು ಜನರು ಕಾಂಗ್ರೆಸ್‌ಗೆ ಬೆಂಬಲಿಸಿದ ಕಾರಣದಿಂದ ರಾಜ್ಯದಲ್ಲಿ ಕಾಂಗ್ರೆಸ್ ದೊಡ್ಡ ಮಟ್ಟದ ಗೆಲುವಿಗೆ ಸಹಕಾರಿ ಆಯಿತು ಎಂದರು. ಹಾಲುಮತ ಸಮಾಜದ ಮಾಜಿ ತಾಲೂಕ ಅಧ್ಯಕ್ಷ ನೆಲ್ಕುದ್ರಿ ಚಂದ್ರಪ್ಪ, ಕುರಿ ನಾಗರಾಜ್ ಮಾಲವಿ ಚನ್ನಬಸಪ್ಪ, ವರದಾಪುರ ಕುಮಾರ್ ಮೇಟಿ ಮಂಜುನಾಥ್ ಓಬಳಾಪುರ ಮಾರುತಿ ಕಡ್ಲಬಾಳ ವೆಂಕಟೇಶ್ ಚೌಟಗಿ ಕರಿಯಪ್ಪ ದೇವಪ್ಪ ಉಲುವತ್ತಿ ರಾಘವೇಂದ್ರ ಪರಶುರಾಮ ಉಮಾಶಂಕರ್ ಇತರರು ಇದ್ದರು.

3 ದಿನ ಕಾಲಾವಕಾಶ

ಬಳ್ಳಾರಿ: ನಗರದ ಸರಕಾರಿ ಆದರ್ಶ ವಿದ್ಯಾಲಯದಲ್ಲಿ 2026-27ನೇ ಶೈಕ್ಷಣಿಕ ಸಾಲಿನ 6ನೇ ತರಗತಿ ಪ್ರವೇಶಕ್ಕೆ ಸಂಬಂಧಿಸಿದಂತೆ ಅರ್ಹ ವಿದ್ಯಾರ್ಥಿಗಳ ಪ್ರವರ್ಗವಾರು ಕಟ್ ಆಫ್ ಅಂಕಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಮಕ್ಕಳ ಪೋಷಕರಿಗೆ ಪ್ರವೇಶಾತಿ ಮಾಡಿಕೊಳ್ಳಲು ಕೇವಲ 3 ದಿನಗಳ ಕಾಲ ಮಾತ್ರ ಅವಕಾಶ ನೀಡಲಾಗಿದೆ. ಹಾಗಾಗಿ, ಪೋಷಕರು ಯಾವುದೇ ವಿಳಂಬ ಮಾಡದೆ ತಕ್ಷಣವೇ ಸರಕಾರಿ ಆದರ್ಶ ವಿದ್ಯಾಲಯಕ್ಕೆ ಭೇಟಿ ನೀಡಿ ಪ್ರವೇಶಾತಿ ಅರ್ಜಿಯನ್ನು ಪಡೆದುಕೊಳ್ಳಬೇಕು ಎಂದು ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕ ಸತ್ಯನಾರಾಯಣ ಎ.ಕೆ. ತಿಳಿಸಿದ್ದಾರೆ.



ವಿಜಯನಗರ: ಶ್ರೀಶಿವಶರಣ ಮಾದರ ಚನ್ನಯ್ಯ ಸೇವಾ ಸಮಿತಿಯ ಜಿಲ್ಲಾಧ್ಯಕ್ಷ ಎಚ್.ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ನಗರದಲ್ಲಿ ಇತ್ತೀಚೆಗೆ ಜಿಲ್ಲಾ ಕಾಯಕಾರಣಿ ಸಭೆ ನಡೆಯಿತು. ಸಮಿತಿಯ ರಾಜ್ಯಾಧ್ಯಕ್ಷ ಹೂಡಿ ಮಂಜುನಾಥ್, ಶಿವಶರಣ ಮಾದರ ಚೆನ್ನಯ್ಯ ಸೇವಾ ಸಮಿತಿ ವಿಭಾಗಿ ಉಸ್ತವಾರಿ ಪೂಜಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಕೊಂಡಪಲ್ಲಿ ಇತರರಿದ್ದರು.

ನಿಯೋಜಿತ ಸಿಎಂ ಡಿಕೆಶಿ: ವಿಶೇಷ ಪೂಜೆ

ವಿಜಯನಗರ: ಡಿ.ಕೆ.ಶಿವಕುಮಾರ್ ಅವರು ನೂತನ ಮುಖ್ಯಮಂತ್ರಿಯಾಗಿ ಅಧಿಕಾರದ ಚುಕ್ಕಾಣಿ ಹಿಡಿಯಲಿರುವ ಹಿನ್ನೆಲೆಯಲ್ಲಿ ಭಾನುವಾರ ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ಹಂಪಿ ವಿರೂಪಾಕ್ಷೇಶ್ವರ ಸನ್ನಿಧಿಯಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ಯುವ ಕಾಂಗ್ರೆಸ್ ಮುಖಂಡ ಭರತ್ ಕುಮಾರ್ ಸಿ.ಆರ್. ಮಾತನಾಡಿ, ರಾಜ್ಯದಲ್ಲಿ ಸಿದ್ದರಾಮಯ್ಯನವರ ಸರ್ಕಾರ 5 ಗ್ಯಾರೆಂಟಿಗಳನ್ನು ಜನರಿಗೆ ತಲುಪಿಸುವ ಮೂಲಕ ಯಶಸ್ವಿ ಆಡಳಿತ ನೀಡಿದ್ದಾರೆ. ಅದೇ ನಿಟ್ಟಿನಲ್ಲಿ ಡಿಕೆ ಶಿವಕುಮಾರ್ ಅವರು ರಾಜ್ಯದಲ್ಲಿ ಉತ್ತಮ ಆಡಳಿತ ನೀಡುವುದರ ಮೂಲಕ ರಾಜ್ಯದ ಅಭಿವೃದ್ಧಿಯ ಕನಸನ್ನು ಸಾಕಾರಗೊಳಿಸಬೇಕು. ರಾಜ್ಯದ ಬಡವರ, ರೈತರ, ಕಾರ್ಮಿಕರು, ಎಸ್ಸಿ, ಎಸ್ಟಿ, ಹಿಂದುಳಿದ ವರ್ಗದವರ, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲ ವರ್ಗದವರ ಅಭಿವೃದ್ಧಿಗೆ ಅಗತ್ಯ ಯೋಜನೆಗಳನ್ನು ರೂಪಿಸಬೇಕು. ಸಮಗ್ರ ಅಭಿವೃದ್ಧಿ ಮಾಡುಚ ಶಕ್ತಿ ನೀಡಲೆಂದು ದೇವರಲ್ಲಿ ಪ್ರಾರ್ಥಿಸಲಾಗಿದೆ ಎಂದು ತಿಳಿಸಿದರು. ಮತ್ತೋರ್ವ ಯುವ ಮುಖಂಡ ದಾದಾ ಕಲಂದರ್ ಮಾತನಾಡಿ, ರಾಜ್ಯದಲ್ಲಿ ಉತ್ತಮವಾದ ಮಳೆ ಬೆಳೆ ಸಮೃದ್ಧಿಯಾಗಲಿ. ಕಾಂಗ್ರೆಸ್ ಪಕ್ಷ ನಿರಂತರವಾಗಿ ಅಧಿಕಾರದಲ್ಲಿರಲಿ. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ದೀರ್ಘಕಾಲದ ವರೆಗೆ ಮುಂದುವರಿಯಬೇಕು ಎಂದು ಆಶಯ ವ್ಯಕ್ತಪಡಿಸಿದರು. ನಗರಸಭೆ ಸದಸ್ಯ ಮಂಜುನಾಥ್, ವೆಂಕಟೇಶ್, ಹುಲುಗಪ್ಪ, ಗೌಸ್, ಶೇಖರ್, ರಾಜು ಗುಜ್ಜಲ್, ಮಹಮ್ಮದ್ ಸುಹೇಲ್, ಆಕಾಶ್, ನವೀನ್ ಕುಮಾರ್ ಇತರರು ಇದ್ದರು.



ವಿಜಯನಗರ: ಡಿ.ಕೆ.ಶಿವಕುಮಾರ್ ಅವರು ನೂತನ ಮುಖ್ಯಮಂತ್ರಿಯಾಗಿ ಅಧಿಕಾರದ ಚುಕ್ಕಾಣಿ ಹಿಡಿಯಲಿರುವ ಹಿನ್ನೆಲೆಯಲ್ಲಿ ಭಾನುವಾರ ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ಹಂಪಿ ವಿರೂಪಾಕ್ಷೇಶ್ವರ ಸನ್ನಿಧಿಯಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು.

ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಬರುವ ಭಕ್ತರ ಪರದಾಟ

ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿ

ಕೊಟ್ಟೂರು: ನಾಡಿನ ಹೆಸರಾಂತ ದೇವಾಲಯಗಳಲ್ಲಿ ಒಂದಾಗಿರುವ ವಿಜಯನಗರ ಜಿಲ್ಲೆಯ ಕೊಟ್ಟೂರಿನ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನವು ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ಗ್ರೇಡ್-1 ದೇವಸ್ಥಾನವಾದರೂ ಪಾರ್ಕಿಂಗ್ ವ್ಯವಸ್ಥೆ ಇಲ್ಲದಿರುವುದು ಭಕ್ತಾದಿಗಳಿಗೆ ತುಂಬಾ ತೊಂದರೆಯನ್ನು ಉಂಟು ಮಾಡಿದೆ.

ಶ್ರೀಗುರು ಕೊಟ್ರೇಶ್ವರ ಸ್ವಾಮಿ ದೇವಸ್ಥಾನವು ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಟ್ಟು ಪ್ರತಿ ವರ್ಷ ಕೋಟ್ಯಂತರ ರೂಪಾಯಿಗಳ ಆದಾಯವನ್ನು ತರುತ್ತಿದ್ದರು ಸಹ ದೇವಸ್ಥಾನಕ್ಕೆ ಬರುವಂತಹ ಭಕ್ತಾದಿಗಳ ವಾಹನಗಳ ನಿಲುಗಡೆಗೆ ಸೂಕ್ತವಾದ ಪಾರ್ಕಿಂಗ್ ವ್ಯವಸ್ಥೆ ಇಲ್ಲದೆ ಬರುವಂತಹ ಭಕ್ತರು ವಾಹನಗಳನ್ನು ನಿಲ್ಲಿಸಲು ಪರದಾಡುವಂತಾಗಿದೆ.

ಗುರು ಕೊಟ್ಟೂರೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಬರುವಂತಹ ಭಕ್ತಾದಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಪ್ರತಿನಿತ್ಯ ಸಾವಿರಾರು ಭಕ್ತರು ಸ್ವಾಮಿಯ ದರ್ಶನಕ್ಕೆ ಬರುತ್ತಿದ್ದಾರೆ. ಹಾಗೆಯೇ ಪ್ರತಿ ಸೋಮವಾರ ಮತ್ತು ಗುರುವಾರದಂದು ಅಪಾರ ಸಂಖ್ಯೆಯ ಭಕ್ತರು ದೇವಸ್ಥಾನಕ್ಕೆ ಬೇಟಿ ನೀಡುತ್ತಿರುವುದರಿಂದ ದೇವಸ್ಥಾನಕ್ಕೆ ಆಗಮಿಸುವಂತಹ ಅನೇಕ ಭಕ್ತಾದಿಗಳು ದೂರದ ಊರುಗಳಿಂದ ತಮ್ಮ ಸ್ವಂತ ವಾಹನಗಳಲ್ಲಿ ಆಗಮಿಸಿ ಶ್ರೀಸ್ವಾಮಿಯ ದರ್ಶನ ಪಡೆಯುತ್ತಾರೆ. ಆದರೆ ಆಗಮಿಸಿದಂತಹ ಭಕ್ತಾದಿಗಳು ತಮ್ಮ ವಾಹನಗಳ ನಿಲುಗಡೆಗೆ ಸೂಕ್ತ ವ್ಯವಸ್ಥೆ ಇಲ್ಲದೆ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಎಲ್ಲೆಂದರಲ್ಲಿ ತಮ್ಮ ವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ ಪಾದಯಾತ್ರೆಗಳ ಮೂಲಕ ಬರುವ ಭಕ್ತಾದಿಗಳಿಗೆ ಹಾಗೂ ದ್ವಿಚಕ್ರ ವಾಹನದ ಮೂಲಕ ಬರುವ ಭಕ್ತಾದಿಗಳಿಗೆ ತುಂಬಾ ತೊಂದರೆಯಾಗುತ್ತಿದ್ದು ವಾಹನಗಳನ್ನು ಎಲ್ಲೆಂದರಲ್ಲಿ ಬೇಕಾಬಿಟ್ಟಿಯಾಗಿ ನಿಲ್ಲಿಸುತ್ತಿರುವುದರಿಂದ ವಯಸ್ಸಾದವರು ಮತ್ತು ವಿಕಲಾಂಗರು ದೇವಸ್ಥಾನಕ್ಕೆ ಹೋಗಲು ಪರದಾಡುವಂತಹ ಪರಿಸ್ಥಿತಿ ಎದುರಾಗಿದೆ. ಶ್ರೀಗುರುಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದ ದ್ವಾರ ಬಾಗಿಲ ಬಳಿಯಲ್ಲಿ ಮನೆಗಳ ಮುಂದೆಯೇ ಅಡ್ಡಾದಿಡ್ಡಿ ಆಗಿ ವಾಹನಗಳನ್ನು ನಿಲ್ಲಿಸುತ್ತಿರುವುದು. ವಾಹನಗಳಲ್ಲಿ ಬಂದಂತಹ ಭಕ್ತರು ಮನೆಗಳ ಮುಂದೆಯೇ ತಾವು ಊಟ ಮಾಡಿದ ಅಥವಾ ಟಿಫನ್ ಮಾಡಿದ ಎಲೆಗಳನ್ನು ಮನೆಗಳ ಮುಂದೆ ಬಿಸಾಡುತ್ತಿರುವುದರಿಂದ ಅಲ್ಲಿ ವಾಸಿಸುವ ಮನೆಗಳವರಿಗೂ ಕೂಡ ತುಂಬಾ ಕಿರಿಕಿರಿಯಾಗುತ್ತಿದೆ. ಮನೆಗಳ ಮುಂದೆ ಕೆಲವರು ಮಕ್ಕಳನ್ನು ಶೌಚಾಲಯಕ್ಕೆ ಕಳಿಸುತ್ತಿದ್ದು ಇದು ಕೂಡ ಇಲ್ಲಿನ ಮನೆಗಳವರಿಗೆ ತೊಂದರೆ ಉಂಟು ಮಾಡುತ್ತಿದೆ. ಆದ್ದರಿಂದ ಸರ್ಕಾರದವರು ಆದಷ್ಟು ಬೇಗ ಒಂದು ಸರ್ಕಾರಿ ಜಮೀನನ್ನು ಗುರುತಿಸಿ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕೆಂಬುದು ಭಕ್ತರ ಒತ್ತಾಯವಾಗಿದೆ. ಹಾಗೆಯೇ ದ್ವಾರ ಬಾಗಿಲ ಹೊರಗಡೆಯೇ ವಾಹನಗಳ ನಿಲುಗಡೆ ಮಾಡಬೇಕೆಂಬುದು ಇಲ್ಲಿನ ಮನೆಗಳವರ ಒತ್ತಾಯವಾಗಿದೆ.



> **ಗುರು ಕೊಟ್ರೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ದರ್ಶನಕ್ಕೆ ಬರುವ ಭಕ್ತಾದಿಗಳ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಸೂಕ್ತ ಸರ್ಕಾರಿ ಜಾಗವು ಲಭ್ಯವಿಲ್ಲದೆ ಇರುವುದರಿಂದ ಪಾರ್ಕಿಂಗ್ ವ್ಯವಸ್ಥೆಗೆ ತೊಂದರೆಯಾಗುತ್ತಿದ್ದು ಮುಂದಿನ ದಿನಗಳಲ್ಲಿ ಸೂಕ್ತ ಸರ್ಕಾರಿ ಜಮೀನನ್ನು ಗುರುತಿಸಿ ಭಕ್ತಾದಿಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು.**
> ■ **ಮಲ್ಲಪ್ಪ, ಕಾರ್ಯನಿರ್ವಹಣಾ ಅಧಿಕಾರಿ, ಗುರು ಕೊಟ್ರೇಶ್ವರ ಸ್ವಾಮಿ ದೇವಸ್ಥಾನ**

ಎಲ್ಲೆಂದರಲ್ಲಿ ಕಸ ಹಾಕದಂತೆ ಎಚ್ಚರ ವಹಿಸಿ

ಯಾದಗಿರಿ: ನಗರದ ಪ್ರಾದೇಶಿಕ ಸಾರಿಗೆ ಕಚೇರಿಗೆ ಕರ್ನಾಟಕದ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ದಿಢೀರ್ ಭೇಟಿ ದಾಖಲೆಗಳನ್ನು ಪರಿಶೀಲನೆ ನಡೆಸಿದರು.

ಕಚೇರಿ ಒಳಗಡೆ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳಿಂದ ಮಾಹಿತಿ ಕಲೆಹಾಕಿ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಿದರು. ಅಲ್ಲದೆ ಕೆಲವು ದಾಖಲೆಗಳನ್ನು ಪರಿಶೀಲಿಸಿ, ಸರ್ಕಾರಿ ನಿಯಮಗಳಂತೆ ಕಾರ್ಯ ನಿರ್ವಹಣೆ ಮಾಡಬೇಕು. ಕಚೇರಿಯ ಅಧಿಕಾರಿ, ಸಿಬ್ಬಂದಿಗಳ ಹಾಜರಾತಿಯನ್ನು ಪರಿಶೀಲನೆ ನಡೆಸಿದರು. ಅಲ್ಲದೆ ನೌಕರರು ಕಚೇರಿ ಕೆಲಸ ಪೂರ್ವದಲ್ಲಿ ಅವರ ಹತ್ತಿರ ಇರುವ ಹಣದ ಮಾಹಿತಿ ವಹಿ, ಗೃಹ ರಕ್ಷಕ ಸಿಬ್ಬಂದಿಗಳ ಹಾಜರಾತಿ, ಹೊರಗುತ್ತಿಗೆ ನೌಕರರ ಹಾಜರಾತಿಯನ್ನು ಉಪ ಲೋಕಾಯುಕ್ತರು ಪರಿಶೀಲನೆ ನಡೆಸಿದರು.

ನಂತರ ದಾಖಲೆ ಕೊಠಡಿಯಲ್ಲಿ ದಾಖಲೆಗಳನ್ನು ಪರಿಶೀಲನೆ ನಡೆಸಿದರು. ನಂತರ ಬಬಲಾದಿಯ ಘನತ್ಯಾಜ್ಯ ನಿರ್ವಹಣೆ ಘಟಕ್ಕೆ ಭೇಟಿ ನೀಡಿ, ಸಾರ್ವಜನಿಕರಿಗೆ ತೊಂದರೆಯಾಗದಂತೆ ತ್ಯಾಜ್ಯ ಸಂಸ್ಕರಿಸಬೇಕು. ಮತ್ತು ಸ್ಥಳೀಯ ಸಂಸ್ಥೆಗಳ ನಿರ್ಲಕ್ಷ್ಯ ವಹಿಸದಂತೆ ನೋಡಿಕೊಳ್ಳಬೇಕು. ನಿರ್ಲಕ್ಷ್ಯ ವಹಿಸಿದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

> **ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯುವುದನ್ನು ತಡೆಗಟ್ಟುವುದು ಮತ್ತು ಘಟಕಗಳಿಂದ ದುರ್ವಾಸನೆ ಹಾಗೂ ನೊಣಗಳ ಹಾವಳಿ ಉಂಟಾಗದಂತೆ ಎಚ್ಚರಿಕೆ ವಹಿಸಿ.**
> ■ **ಕೆ.ಎನ್.ಫಣೀಂದ್ರ, ಕರ್ನಾಟಕ ಉಪ ಲೋಕಾಯುಕ್ತ**

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ರಾಹುಲ್ ತುಕಾರಾಂ ಪಾಂಡ್ವೆ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಲವೀಶ್ ಒಡಿಯಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಲೋಕಾಯುಕ್ತ ಪೊಲೀಸ್ ಜಿಲ್ಲಾ ವರಿಷ್ಠಾಧಿಕಾರಿ ಸಿದ್ದರಾಜು, ಯಾದಗಿರಿ ಸಹಾಯಕ ಆಯುಕ್ತ ಶ್ರೀಧರ್, ಯಾದಗಿರಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಮಿಲಿಂದ ಕುಮಾರ್ ಎಸ್.ಎಸ್., ಯಾದಗಿರಿ ನಗರಸಭೆಯ ಪೌರಾಯುಕ್ತ ಉಮೇಶ್ ಚೌವ್ಹಾಣ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.



ತಾಪಂ, ಜಿಪಂ ಚುನಾವಣೆಗೆ ಸನ್ನದ್ಧರಾಗಿ: ತಾಯಣ್ಣ


ಬಳ್ಳಾರಿ: ಮುಂಬರುವ ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗೆ ಕಾರ್ಯಕರ್ತರು ಸನ್ನದ್ಧರಾಗಬೇಕು, ಪಕ್ಷವನ್ನು ಮತ್ತಷ್ಟು ತಳಮಟ್ಟದಿಂದ ಸಂಘಟಿಸಿ ಎಲ್ಲರೂ ಸೇರಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರೋಣ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರು ಕಾರ್ಯಕರ್ತರಿಗೆ ಕರೆ ನೀಡಿದರು.

ನಗರದ ಜೆಡಿಎಸ್ ಜಿಲ್ಲಾ ಕಚೇರಿಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬಳ್ಳಾರಿ ಗ್ರಾಮಾಂತರ ಹಾಗೂ ನಗರ ಅಧ್ಯಕ್ಷರ ಆಯ್ಕೆ ಹಾಗೂ ಜಿಲ್ಲಾ ವಿದ್ಯಾರ್ಥಿ ಘಟಕದ ಅಧ್ಯಕ್ಷರ ಆಯ್ಕೆ, ನೇಮಕಾತಿ ಆದೇಶ ಪತ್ರ ವಿತರಣೆ ಸಮಾರಂಭದಲ್ಲಿ ಮಾತನಾಡಿದರು. ವಿಸಿಟಿಂಗ್ ಕಾರ್ಡ್ ಅಧ್ಯಕ್ಷರು ಬೇಡ, ಪಕ್ಷದ ತತ್ವ ಸಿದ್ಧಾಂತಗಳನ್ನು ಪಾಲಿಸುವ, ಪಕ್ಷದ ಬಲವರ್ಧನೆಗೆ ಪ್ರಾಮಾಣಿಕವಾಗಿ ಶ್ರಮಿಸಲು ಮುಂದಾಗಬೇಕು, ಬರುವ ದಿನಗಳಲ್ಲಿ ಜೆಡಿಎಸ್ ಮತ್ತೆ ಅಧಿಕಾರಕ್ಕೆ ಬರುವುದು ಶತ ಸಿದ್ಧ, ಮತ್ತೆ ನಮ್ಮ ಕುಮಾರಣ್ಣನವರೇ ರಾಜ್ಯದ ಮುಖ್ಯಮಂತ್ರಿಯಾಗಲಿದ್ದಾರೆ ಇದರಲ್ಲಿ ಅನುಮಾನವೇ ಬೇಡ, ಕಾರ್ಯಕರ್ತರು, ಪದಾಧಿಕಾರಿಗಳು ಪಕ್ಷದ ಸಂಘಟನೆಗೆ ಸನ್ನದ್ಧರಾಗಬೇಕು, ನಮ್ಮ ಪಕ್ಷ ಅಧಿಕಾರಕ್ಕೆ ಬರುವರೆಗೂ ಎಲ್ಲರೂ ಶ್ರಮಿಸೋಣ ಎಂದರು.

ಬಳ್ಳಾರಿ ನಗರ ಜೆಡಿಎಸ್ ಅಧ್ಯಕ್ಷರಾಗಿ ಹೊನ್ನೂರು ಸ್ವಾಮಿ, ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಅಧ್ಯಕ್ಷರಾಗಿ ರಾಜಶೇಖರ್ ಗೌಡ, ಬಳ್ಳಾರಿ ಜಿಲ್ಲಾ ವಿದ್ಯಾರ್ಥಿ ಘಟಕದ ಜಿಲ್ಲಾಧ್ಯಕ್ಷರಾಗಿ ಆರ್.ರಾಕೇಶ್ ಅವರನ್ನೂ ನೇಮಕ ಮಾಡಿದ್ದು, ಎಲ್ಲರಿಗೂ ಜಿಲ್ಲಾಧ್ಯಕ್ಷರಾದ ಮೀನಳ್ಳಿ ತಾಯಣ್ಣ ಅವರು ನೇಮಕಾತಿ ಆದೇಶ ಪತ್ರವನ್ನು ವಿತರಿಸಿದರು.

ಪ್ರಥಮ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಮಿಲ್ಲರ್ ಪೇಟೆ ಮಾಧುರಿ ಎ. ಅವರು ಎಸ್ ಎಸ್ಎಲ್‌ಸಿ ಪರೀಕ್ಷೆಯಲ್ಲಿ ಶೇ.91ರಷ್ಟು ಅಂಕಗಳನ್ನು ಪಡೆದಿದ್ದು, ಈ ವಿದ್ಯಾರ್ಥಿಯನ್ನು ಜಿಲ್ಲಾಧ್ಯಕ್ಷರಾದ ಮೀನಳ್ಳಿ ತಾಯಣ್ಣ ಅವರು ಸನ್ಮಾನಿಸಿ, ಗೌರವಿಸಿ, ಧನಸಹಾಯ ಮಾಡಿ, ಪ್ರೋತ್ಸಾಹಿಸಿದರು.

ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಲ್ಲನಗೌಡ, ಉಪಾಧ್ಯಕ್ಷ ವಿಜಯಕುಮಾರ್ ಮದಿರೆ, ಚಾಗನೂರು ನಾಗರಾಜ್, ಬಸಪ್ಪ, ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ವಸಂತ ಕುಮಾರ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ, ಅಶೋಕ ಸಂಗನಕಲ, ವೀರೇಶ್, ಹೊನ್ನೂರು ಅಲಿ, ಜಮೀಲಾ, ಶಬಾನಾ, ರಹೆಮತ್, ಜಯಲಕ್ಷ್ಮೀ, ಶಮೀಮ್ ಬಾನು, ಲಕ್ಷ್ಮೀ ಇತರರಿದ್ದರು.



ಸಿಎಲ್‌ಪಿ ನಾಯಕರಾಗಿ ಡಿಕೆಶಿ ಆಯ್ಕೆ: ಸಂಭ್ರಮಾಚರಣೆ

ಬಳ್ಳಾರಿ: ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸಿಎಲ್‌ಪಿ ನಾಯಕರಾಗಿ ಅವಿರೋಧವಾಗಿ ಆಯ್ಕೆಯಾಗುತ್ತಿದ್ದಂತೆ ಇಲ್ಲಿನ ಕಾಂಗ್ರೆಸ್ ಕಾರ್ಯಕರ್ತರು ಕುಣಿದು, ಕುಪ್ಪಳಿಸಿ, ಪಟಾಕಿ ಸಿಡಿಸಿ, ಸಿಹಿ ಹಂಚಿ, ಸಂಭ್ರಮಿಸಿದರು.

ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು, ಡಿ.ಕೆ.ಶಿವಕುಮಾರ್ ಅಭಿಮಾನಿಗಳು ನಗರದಲ್ಲಿ ಸುಮಾರು 2 ಸಾವಿರ ಬೃಹತ್ ಬೈಕ್‌ಗಳ ಮೂಲಕ ಬೃಹತ್ ರಾಲಿ ನಡೆಸಿ, ಸಂಭ್ರಮಿಸಿದರು.

ಇದಕ್ಕೂ ಮುನ್ನ ನಗರದ ಅಧಿದೇವತೆ ಶ್ರೀಕನಕ ದುರ್ಗಮ್ಮ ದೇವಿ ದೇವಾಲಯದಲ್ಲಿ ಅಭಿಮಾನಿಗಳು, ಕಾರ್ಯಕರ್ತರು, ವಿಶೇಷ ಪೂಜೆ, ಅರ್ಚನೆ ಸಲ್ಲಿಸಿದರು. ನಂತರ ದೇಗುಲದ ಆವರಣದಲ್ಲಿ ಬೃಹತ್ ಕೇಕ್ ಕತ್ತರಿಸಿ, ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು. ನಂತರ ಪ್ರಸಾದ ವಿತರಣೆ ಮಾಡಲಾಯಿತು.

ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಪಿ.ಗಾದೆಪ್ಪ, ಕೆಪಿಸಿಸಿ ವಕ್ತಾರ ವೆಂಕಟೇಶ್ ಹೆಗಡೆ, ಡಿಸಿಸಿ ಕಾರ್ಯಾಧ್ಯಕ್ಷ ಬೋಯಪಾಟಿ ವಿಷ್ಣುವರ್ಧನ, ಉಪಾಧ್ಯಕ್ಷ ಕೆ.ಶ್ರೀನಿವಾಸಲು, ಪಾಲಿಗೆ ಸದಸ್ಯರಾದ ಕುಬೇರ, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಾದಿಕ್, ಮುಖಂಡರಾಧ ವೀರೇಂದ್ರ ಕುಮಾರ್, ವಿನಯ್ ಕುಮಾರ್ ರೆಡ್ಡಿ, ಶ್ರೀರಾಮರಾಜು, ಮುರಳಿ, ಕೌಶಿಕ್, ಭತ್ರಿ ಮಂಜು, ಚಲ್ಲಾ ರಮೇಶ್, ಚಲ್ಲಾ ವೆಂಕಟೇಶ್, ಮಲ್ಲಿಶ್ವರಿ, ಅಥಾವುಲ್ಲಾ, ಲಕ್ಷ್ಮೀನಾರಾಯಣ, ಆನಂದ ಚೌದರಿ, ಜೆ. ಎರಿಸ್ವಾಮಿ, ಜೆ. ಪವನ್, ಕಾರ್ತಿಕ್, ವಿಜಯ್, ರಾಜೀವಗಾಂಧಿ ನಗರ ನಾಗು ಸೇರಿದಂಗೆ ಪಕ್ಷದ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.



ನಾಳೆ ಡಿಸಿ ಕಚೇರಿಗೆ ಮುತ್ತಿಗೆಗೆ ಕಬ್ಬು ಬೆಳೆಗಾರರ ನಿರ್ಧಾರ

ಬೀದರ: ಜಿಲ್ಲೆಯ ಕಬ್ಬು ಬೆಳೆಗಾರ ರೈತರಿಗೆ ಬಾಕಿ ಇರುವ ಸುಮಾರು 45 ಕೋಟಿ ರೂ. ಕಬ್ಬಿನ ಹಣವನ್ನು ತಕ್ಷಣ ಪಾವತಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕವು ಜೂ.2ರಂದು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ನಿರ್ಧರಿಸಿದೆ.



ಜಿಲ್ಲೆಯ ವಿವಿಧ ಸಕ್ಕರೆ ಕಾರ್ಖಾನೆಗಳಿಗೆ ಕಳೆದ ಸುಮಾರು ಆರು ತಿಂಗಳಿನಿಂದ ಕಬ್ಬು ಸರಬರಾಜು ಮಾಡಿರುವ ರೈತರಿಗೆ ಸುಮಾರು 45 ಕೋಟಿ ರೂ. ಹಣ ಇನ್ನೂ ಪಾವತಿಯಾಗಿಲ್ಲ. ಈ ಹಿನ್ನೆಲೆಯಲ್ಲಿ ಮೇ 15ರಂದು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ರೈತರು ಮುಂದಾಗಿದ್ದರು. ಆಗ ಜಿಲ್ಲಾಧಿಕಾರಿಗಳು ಸ್ವತಃ ರೈತರನ್ನು ಭೇಟಿ ಮಾಡಿ ಮೇ 30ರೊಳಗೆ ರೈತರ ಕಬ್ಬಿನ ಬಾಕಿ ಹಣವನ್ನು ಸಂಪೂರ್ಣ ಪಾವತಿಸುವುದಾಗಿ ಭರವಸೆ ನೀಡಿದ್ದರು. ಜಿಲ್ಲಾಧಿಕಾರಿಗಳ ಭರವಸೆಯನ್ನು ನಂಬಿ ಅಂದು ರೈತರು ಪ್ರತಿಭಟನೆಯನ್ನು ಹಿಂಪಡೆದಿದ್ದರು.

ಆದರೆ ಜಿಲ್ಲಾಧಿಕಾರಿಗಳು ನೀಡಿದ್ದ ಭರವಸೆ ಈಡೇರಿಲ್ಲ ಎಂದು ರೈತ ಸಂಘದ ಮುಖಂಡರು ಆರೋಪಿಸಿದ್ದಾರೆ. ಮುಂಗಾರು ಬಿತ್ತನೆ ಸಮಯದಲ್ಲಿ ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ಹಣದ ಕೊರತೆ ಎದುರಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಜೂ.2ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಚೇರಿ ಸಮೀಪದ ಲಾವಣ್ಯ ಕಲ್ಯಾಣ ಮಂಟಪದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿ, ಬಳಿಕ ಕಚೇರಿಗೆ ಮುತ್ತಿಗೆ ಹಾಕಲಾಗುವುದು. ರೈತರ ಕಬ್ಬಿನ ಬಾಕಿ ಹಣ ಪಾವತಿಯಾಗುವವರೆಗೆ ಜಿಲ್ಲಾಧಿಕಾರಿ ಕಚೇರಿಯಿಂದ ತೆರಳುವುದಿಲ್ಲ ಎಂದು ಸಂಘದ ಮುಖಂಡರು ಎಚ್ಚರಿಕೆ ನೀಡಿದ್ದಾರೆ.

ಜಿಲ್ಲೆಯ ಎಲ್ಲ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದ ಜಿಲ್ಲಾಧ್ಯಕ್ಷ ಶ್ರೀಮಂತ ಬಿರಾದಾರ, ಜಿಲ್ಲಾ ಗೌರವಾಧ್ಯಕ್ಷ ಸಿದ್ರಾಮಪ್ಪಾ ಆಣದೂರೆ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಯಾನಂದ ಸ್ವಾಮಿ ಸಿರ್ಸಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಮಿಕರೊಂದಿಗೆ ಜನ್ಮದಿನ ಆಚರಿಸಿಕೊಂಡ ಐನಾಥರೆಡ್ಡಿ



ಬಳ್ಳಾರಿ: ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ, ಉದ್ಯಮಿ, ಜಿಐಆರ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ಗಣಪಾಲ ಐನಾಥರೆಡ್ಡಿ, ಅವರು ತಮ್ಮ ಹುಟ್ಟು ಹಬ್ಬವನ್ನು ನಗರದ ಅನಂತಪುರ ರಸ್ತೆಯ ವಿಜಯನಗರ ಫರ್ಟಿಲೈಜರ್ಸ್ ಪ್ರೈ.ಲಿ. ಕಚೇರಿಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಎಲ್ಲ ಸಿಬ್ಬಂದಿ ಹಾಗೂ ಕಾರ್ಮಿಕರೊಂದಿಗೆ ಜನ್ಮದಿನವನ್ನು ಸರಳವಾಗಿ, ಅರ್ಥಪೂರ್ಣವಾಗಿ ಆಚರಿಸಿಕೊಂಡರು.

ಶ್ರೀನಿವಾಸ ರೆಡ್ಡಿ ಎನ್.ಟಿ. ಮಾತನಾಡಿ, ಈ ಸುದಿನವನ್ನು ಮುಂದಿನ ವರ್ಷದಿಂದ ಜಿಐಆರ್ ಸಮೂಹ ಸಂಸ್ಥೆಗಳ 'ಸಂಸ್ಥಾಪನಾ ದಿನ ವನ್ನಾಗಿ' ಆಚರಿಸೋಣ ಎಂದು, ಜನ್ಮದಿನದ ಶುಭಾಶಯಗಳನ್ನು ತಿಳಿಸಿದರು. ನಂತರ ಗಣಪಾಲ ಐನಾಥರೆಡ್ಡಿ ಮಾತನಾಡಿ, ಈ ದಿನ ಜಿಐಆರ್ ಸಮೂಹ ಸಂಸ್ಥೆಗಳ 'ಸಂಸ್ಥಾಪನಾ ದಿನ' ಮಾತ್ರವಲ್ಲ, ನನ್ನ ಮತ್ತು ಸಂಸ್ಥೆಗಳ ಏಳಿಗೆಗೆ ಕಾರಣವಾದ ಎಲ್ಲ ಸಿಬ್ಬಂದಿಗಳ ಹಾಗೂ ಕಾರ್ಮಿಕರ ದಿನವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಜೂ. 1 ರಿಂದ ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಕಡ್ಡಾಯಗೊಳಿಸಿದ ಹಿನ್ನೆಲೆಯಲ್ಲಿ ಸಿಬ್ಬಂದಿ ಸುರಕ್ಷತೆಯ ಹಿತದೃಷ್ಟಿಯಿಂದ ಐನಾಥ್ ರೆಡ್ಡಿ ಅವರು ಹೆಲ್ಮೆಟ್‌ಗಳನ್ನು ವಿತರಣೆ ಮಾಡಿದರು. ನಂತರ ಎಲ್ಲ ಸಿಬ್ಬಂದಿ, ಕಾರ್ಮಿಕರು, ವಿವಿಧ ಫರ್ಟಿಲೈಜರ್ ಕಂಪನಿಗಳ ಪ್ರತಿನಿಧಿಗಳು ಕೇಕ್ ಕತ್ತರಿಸುವ ಮೂಲಕ ಶುಭ ಹಾರೈಸಿದರು. ಗಣಪಾಲ ತಿಮ್ಮಾರೆಡ್ಡಿ ಉಪಸ್ಥಿತರಿದ್ದರು.

ಭರ್ಜರಿ ಬೇಟೆ: 2.62 ಕೋಟಿ ರೂ. ಮೌಲ್ಯದ ಸ್ವತ್ತು ಹಸ್ತಾಂತರ

ಬಳ್ಳಾರಿ: ಜಿಲ್ಲಾ ಪೊಲೀಸರ ಭರ್ಜರಿ ಬೇಟೆ ಹಿನ್ನೆಲೆ, ಕಳೆದ 2025ರ ಅ.1ರಿಂದ ಮೇ ತಿಂಗಳವರೆಗೆ ದಾಖಲಾದ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿ ಒಟ್ಟು 2.62 ಕೋಟಿ ರೂ. ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಂಡು ಮಾಲೀಕರಿಗೆ ಹಸ್ತಾಂತರಿಸುವಲ್ಲಿ ಪೊಲೀಸ್ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಜಿಲ್ಲೆಯ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿ ಪೊಲೀಸರ ಭರ್ಜರಿ ಬೇಟೆಯಿಂದ ವಶಪಡಿಸಿಕೊಂಡ ಸ್ವತ್ತುಗಳನ್ನು ಸಂಬಂಧಿಸಿದ ಮಾಲೀಕರಿಗೆ ನಗರದ ಎಸ್ಪಿ ಕಚೇರಿ ಆವರಣದಲ್ಲಿ ಶನಿವಾರ ವಿತರಿಸಿ ಬಳ್ಳಾರಿ ವಲಯ ಐಜಿಪಿ ಡಾ.ಹರ್ಷಾ ಮಾತನಾಡಿ, ಜಿಲ್ಲೆಯಲ್ಲಿ ಕಳೆದ 2025ರ ಅ.1ರಿಂದ 2026ರ ಮೇ 27ರವರೆಗೆ ಪೊಲೀಸ್ ಠಾಣೆಗಳಲ್ಲಿ 294 ಕಳ್ಳತನ ಪ್ರಕರಣಗಳು ದಾಖಲಾಗಿದ್ದು, ಒಟ್ಟು 5,80,73,923 ರೂ. ಮೌಲ್ಯದ ಸ್ವತ್ತುಗಳು ಕಳವಾಗಿದ್ದವು. ಈ ಕಳ್ಳತನ ಪ್ರಕರಣಗಳನ್ನು ಬೇಧಿಸಲು ಎರಡು ತಿಂಗಳಿಂದ ವಿಶೇಷ ಕಾಳಜಿವಹಿಸಿ ತನಿಖೆಗಾಗಿ ಪ್ರತ್ಯೇಕ ತಂಡಗಳನ್ನು ರಚಿಸಲಾಗಿತ್ತು. ತಂಡದ ಸದಸ್ಯರು ಕಾರ್ಯಾಚರಣೆ ನಡೆಸಿದ್ದು, ಇದರ ಫಲವಾಗಿ ಈ ಪೈಕಿ 66 ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಬ್ಯಾಟರಿ, ನಗದು ಹಣ, ಚಿನ್ನ, ಬೆಳ್ಳಿ, ಬೈಕ್‌ಗಳು ಸೇರಿದಂತೆ ವಿವಿಧ ಸ್ವತ್ತುಗಳ ಒಟ್ಟು 2,62,45,351 ರೂ. ಮಾಲು ವಶಪಡಿಸಿಕೊಳ್ಳಲಾಗಿದೆ. ಶೇ.45ರಷ್ಟು ಪ್ರಕರಣಗಳನ್ನು ಬೇಧಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದರು.

ಹಗಲು ವೇಳೆ ನಡೆದ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿ ಒಟ್ಟು 13 ಪ್ರಕರಣಗಳು ದಾಖಲಾಗಿದ್ದವು. 4 ಪ್ರಕರಣಗಳು ಪತ್ತೆಯಾಗಿವೆ. ಒಟ್ಟು 28,54,600 ರೂ. ಸ್ವತ್ತು ಕಳವಾಗಿದ್ದು, ಅದರಲ್ಲಿ 4,68,301 ರೂ. ವಶಪಡಿಸಿಕೊಳ್ಳಲಾಗಿದೆ. ರಾತ್ರಿ ನಡೆದ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿ 57 ಪ್ರಕರಣಗಳಲ್ಲಿ 1.31,17,407 ರೂ. ಕಳವಾಗಿದ್ದು, ಅದರಲ್ಲಿ 7 ಪತ್ತೆಯಾಗಿವೆ, 13,43,600 ರೂ., ಮನೆ ಕಳ್ಳತನ, 16 ಪ್ರಕರಣಗಳು ದಾಖಲಾಗಿವೆ. ಮನೆಗಳ್ಳತನ 16 ಪ್ರಕರಣಗಳಲ್ಲಿ 3 ಪ್ರಕರಣಗಳನ್ನು ಪತ್ತೆ ಮಾಡಲಾಗಿದ್ದು, 13,97,500 ರೂ. ವಶಪಡಿಸಿಕೊಳ್ಳಲಾಗಿದೆ. ಸಾಮಾನ್ಯ ಕಳ್ಳತನ 189 ಪ್ರಕರಣಗಳು ದಾಖಲಾಗಿದ್ದು, 3,31,39,523 ರೂ. ಕಳವಾಗಿದ್ದು, 51 ಪ್ರಕರಣಗಳನ್ನು ಪತ್ತೆ ಹಚ್ಚಿ 2,30,35,950 ರೂ. ವಶಪಡಿಸಿಕೊಂಡಿದೆ. ಅದನ್ನು ಹೊರತುಪಡಿಸಿ ಡಕಾಯಿತಿ ಪ್ರಕರಣಗಳಿಗೆ ಸಂಬಂಧಿಸಿ 1 ಪ್ರಕರಣಗಳಲ್ಲಿ 31, 500ರೂ., ರಾಬರಿ 7ಪ್ರಕರಣಗಳಲ್ಲಿ 4,60, 000ರೂ., ಚೈನ್ ಸ್ನಾಚಿಂಗ್ 4 ಪ್ರಕರಣಗಳಲ್ಲಿ 16 ಲಕ್ಷ ಮೌಲ್ಯದ ಸ್ವತ್ತು ಕಳ್ಳತನವಾಗಿದೆ. ಜಾನುವಾರು ಕಳ್ಳತನ 7 ಪ್ರಕರಣಗಳನ್ನು ಬೇಧಿಸಲು ನಮ್ಮ ತಂಡ ಕಾರ್ಯಾಚರಣೆಗೆ ಇಳಿದಿದೆ ಎಂದರು. ಪೊಲೀಸ್ ಇಲಾಖೆ ಅಧಿಕಾರಿಗಳಿದ್ದರು.



ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ

ವಿಜಯನಗರ: ಮಾಸಿಕ 36 ಸಾವಿರ ರೂ. ಕನಿಷ್ಠ ವೇತನ ನಿಗದಿ, ಕಾರ್ಮಿಕ ಸಂಹಿತೆಗಳಿಗೆ ತಿದ್ದುಪಡಿ ಹಾಗೂ ಖಾಯಂಯೇತರ ಕಾರ್ಮಿಕರ ಖಾಯಂಗೆ ಶಾಸನಕ್ಕಾಗಿ ಒತ್ತಾಯಿಸಿ ಸಿಐಟಿಯು ನೇತೃತ್ವದಲ್ಲಿ ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯುನ ರಾಜ್ಯ ಉಪಾಧ್ಯಕ್ಷ ಆರ್. ಎಸ್. ಬಸವರಾಜ ಮಾತನಾಡಿ, ರಾಜ್ಯ ಸರ್ಕಾರ ಕನಿಷ್ಠ ವೇತ ನವನ್ನು ಏಪ್ರಿಲ್ 2025 ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ಅಧಿಸೂಚನೆ ಹೊರಡಿಸಬೇಕು. ಅಧಿಸೂಚನೆಯಿಂದ ಹೊರಗಿಟ್ಟಿರುವ 19 ಉದ್ದಿಮೆಗಳನ್ನು ಕನಿಷ್ಠ ವೇತನ ವ್ಯಾಪ್ತಿಗೆ ತಂದು ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಿದರು. ಸಿಐಟಿಯು ಮುಖಂಡರಾದ ಆರ್.ಭಾಸ್ಕರ್ ರೆಡ್ಡಿ, ಕೆ.ನಾಗರತ್ನಮ್ಮ ಮಾತನಾಡಿ, ಗ್ರಾಮ ಪಂಚಾಯತಿ ನೌಕರರು, ಅಂಗನ ವಾಡಿ ಸಿಬ್ಬಂದಿ, ಬಿಸಿಯೂಟ ಕಾರ್ಮಿಕರು ಹಾಗೂ ಸ್ವಚ್ಛತಾ ಕಾರ್ಮಿಕರಿಗೆ ಕನಿಷ್ಠ ವೇತನ ನಿಗಧಿ ಮಾಡುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ಎಂ. ಗೋಪಾಲ್, ಕೆ.ಎಂ.ಸಂತೋಷ್ ಸಭೆಯಲ್ಲಿ ಮಾತನಾಡಿದರು. ಕೆ.ಎಂ.ಸ್ವಪ್ನ, ನಾಗಭೂಷಣ ರೆಡ್ಡಿ ಸೇರಿದಂತೆ, ಅಂಗನವಾಡಿ ಕಾರ್ಯಕರ್ತರು, ಗ್ರಾಮ ಪಂಚಾಯತಿ ಸಿಬ್ಬಂದಿ, ಬಿಸಿಯೂಟ ಸಿಬ್ಬಂದಿ, ಕಟ್ಟಡ ಕಾರ್ಮಿಕರು, ಆಟೋ ಚಾಕರು, ಗುತ್ತಿಗೆ ಸ್ವಚ್ಛತಾ ಸಿಬ್ಬಂದಿ ತರರಿದ್ದರು.

